ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬದೋನಿ ಪ್ರದರ್ಶನ: ರಾಜ್ಯಕ್ಕೆ ಸೋಲು
ಗುರುವಾರ ನಡೆದ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಆಯುಷ್ ಬದೋನಿ ಅವರ ಆಲ್‌ರೌಂಡ್ ಆಟದ ನೆರವಿನಿಂದ ದೆಹಲಿ ತಂಡವು ಕರ್ನಾಟಕವನ್ನು 45 ರನ್‌ಗಳಿಂದ ಮಣಿಸಿತು.

ಅಧಿವೇಶನಕ್ಕೆ ಮುನ್ನವೇ ಕಾವು ಏರಿಸಿದ ಸಂಪುಟ ನಿರ್ಣಯ
ಸಾಮಾಜಿಕ ಬಹಿಷ್ಕಾರ ಶಿಕ್ಷಾರ್ಹ ಅಪರಾಧ: ವಿಧೇಯಕಕ್ಕೆ ಅಸ್ತು

ದ್ವೇಷ ಭಾಷಣಕ್ಕೆ ಕಡಿವಾಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದ್ವೇಷ ಭಾಷಣ ತಡೆ ವಿಧೇಯಕ, ಜಾನುವಾರು ಹತ್ಯೆ ತಡೆ ವಿಧೇಯಕ ತಿದ್ದುಪಡಿ ಸೇರಿದಂತೆ ಒಟ್ಟು 8 ವಿಧೇಯಕಗಳಿಗೆ ರಾಜ್ಯ ಸಚಿವ ಸಂಪುಟ ಗುರುವಾರ ಒಪ್ಪಿಗೆ ಸೂಚಿಸಿದ್ದು ಬೆಳಗಾವಿ ಅಧಿವೇಶನದಲ್ಲಿ ಮಂಡನೆ ಮಾಡಲು ಸರಕಾರ ಸಿದ್ಧತೆ ನಡೆಸಿದೆ. ದ್ವೇಷ ಭಾಷಣ ತಡೆ ವಿಧೇಯಕ ಸಂಬಂಧ ಆಡಳಿತ ಪಕ್ಷ ಮತ್ತು ಪ್ರತಿಪಕ್ಷ ಬಿಜೆಪಿ ಮಧ್ಯೆ ಸದನದಲ್ಲಿ ಕಾವೇರಿದ ಚರ್ಚೆ ನಡೆಯುವ ನಿರೀಕ್ಷೆ ಇದೆ.

ದ್ವೇಷ ಭಾಷಣ ಪ್ರತಿಬಂಧಕ ವಿಧೇಯಕ, ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣೆ ವಿಧೇಯಕ, ಸಾಮಾಜಿಕ ಬಹಿಷ್ಕಾರ ನಿಷೇಧ ವಿಧೇಯಕ, ಬಯಲುಸೀಮೆ ತಿದ್ದುಪಡಿ ವಿಧೇಯಕ, ಮಲೆನಾಡು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, ಧಾರ್ಮಿಕ ದತ್ತಿ ವಿಧೇಯಕ, ಘಾಟಿ ಸುಬ್ರಮಣ್ಯ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, ಚಾಮುಂಡೇಶ್ವರಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ಕಾನೂನುಗಳ (ತಿದ್ದುಪಡಿ) ವಿಧೇಯಕ ಹಾಗೂ ಕರ್ನಾಟಕ ರಾಜ್ಯ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕಕ್ಕೆ ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾಹಿತಿ ನೀಡಿದರು.

ದ್ವೇಷ ಭಾಷಣಕ್ಕೆ ಕಡಿವಾಣ: ರಾಜ್ಯದಲ್ಲಿ ದ್ವೇಷ ಭಾಷಣ ಹಾಗೂ ದ್ವೇಷ ಅಪರಾಧ ನಿಯಂತ್ರಣಕ್ಕೆ ಪ್ರತ್ಯೇಕ ಕಾಯ್ದೆ ಜಾರಿ ಮಾಡಲು ರಾಜ್ಯ ಸರಕಾರ ಮುಂದಾಗಿದೆ. ಈ ನಿಟ್ಟಿನಲ್ಲಿ ಸಚಿವ ಸಂಪುಟ ದ್ವೇಷ ಅಪರಾಧಗಳು ಮತ್ತು ದ್ವೇಷ (ಹೋರಾಟ, ತಡೆಯುವಿಕೆ) ವಿಧೇಯಕ- 2025ಕ್ಕೆ ಅನುಮೋದನೆ ನೀಡಿದೆ. ದ್ವೇಷ ಭಾಷಣ ಮಾಡುವ ಮೂಲಕ ಸಮಾಜದಲ್ಲಿ ಅಶಾಂತಿ, ಕೋಮು ಗಲಭೆ, ಕಾನೂನು ಸುವ್ಯವಸ್ಥೆ ಹದಗೆಡುವುದನ್ನು ತಡೆಯುವ ನಿಟ್ಟಿನಲ್ಲಿ ಈ ವಿಧೇಯಕ ತರಲು ತೀರ್ಮಾನಿಸಲಾಗಿದೆ. ಕಳೆದ ಜೂನ್‌ನಲ್ಲಿ ಈ

ವಿಧೇಯಕ ಸಚಿವ ಸಂಪುಟ ಸಭೆಯ ಮುಂದೆ ಬಂದಿತ್ತು. ಆದರೆ, ಕೆಲ ವಿಚಾರಗಳ ಬಗ್ಗೆ ಗೊಂದಲ, ಸ್ಪಷ್ಟನೆ ಬೇಕಿದ್ದರಿಂದ ತೀರ್ಮಾನ ಕೈಗೊಳ್ಳಲು ಸಾಧ್ಯವಾಗಿರಲಿಲ್ಲ ಎಂದು ಸಚಿವ ಎಚ್ಕೆ ಮಾಹಿತಿ ನೀಡಿದರು.

ಜನಾಂಗೀಯ ನಿಂದನೆ, ಭಾಷೆ, ಜನ್ಮಸ್ಥಳ, ಜಾತಿ, ಧರ್ಮ ಆಧರಿಸಿ ದ್ವೇಷದ ಅಪರಾಧ ಮತ್ತು ದ್ವೇಷ ಭಾಷಣ ಮಾಡುವುದು ಈ ವಿಧೇಯಕದಡಿ ಶಿಕ್ಷಾರ್ಹ ಅಪರಾಧವಾಗಿದೆ. ಪ್ರಸ್ತಾಪಿತ ಮಸೂದೆಯಲ್ಲಿ ಸಾಮಾಜಿಕ ಮಾಧ್ಯಮ ಕಂಪನಿಗಳು, ಸರ್ಚ್ ಇಂಜಿನ್‌ಗಳು, ಟೆಲಿಕಾಂ ಆಪರೇಟರ್‌ಗಳು, ಆನ್‌ಲೈನ್ ಮಾರುಕಟ್ಟೆ ಸ್ಥಳಗಳು ಮತ್ತು ಇಂಟರ್‌ನೆಟ್ ಸೇವಾ ಪೂರೈಕೆದಾರರು ಸೇರಿ ಡಿಜಿಟಲ್ ಮಧ್ಯವರ್ತಿಗಳು ಪೋಸ್ಟ್ ಮಾಡುವ ವಿಷಯಕ್ಕೆ ಹೊಣೆಗಾರರಾಗಿರುತ್ತಾರೆ. ಜಿಲ್ಲಾಧಿಕಾರಿಗಳಿಗೆ ಕೋಮುಗಲಭೆಯ ಅಪಾಯವಿರುವ ಪ್ರದೇಶಗಳಲ್ಲಿ ಪ್ರಚೋದನಕಾರಿ ಹೇಳಿಕೆ ತಡೆಗಟ್ಟುವ ಆದೇಶ ನೀಡಲು ಅಧಿಕಾರ ನೀಡಲಾಗುವುದು. ಜಿಲ್ಲಾಧಿಕಾರಿಗಳು ಆದೇಶದ ಮೂಲಕ ಸಭೆಗಳು, ಮೆರವಣಿಗೆಗಳು, ಧ್ವನಿವರ್ಧಕಗಳ ಬಳಕೆ ಅಥವಾ ಭಯ, ದ್ವೇಷ ಪ್ರಚೋದಿಸುವ ಯಾವುದೇ ಕ್ರಿಯೆ ನಿಷೇಧಿಸಬಹುದಾಗಿದೆ. ಈ ನಿರ್ಬಂಧಗಳನ್ನು ಮೊದಲಿಗೆ 30 ದಿನಗಳವರೆಗೆ ವಿಧಿಸಬಹುದು, ಅವಶ್ಯಕತೆಯ ಆಧಾರದ ಮೇಲೆ 60 ದಿನಗಳವರೆಗೆ ವಿಸ್ತರಿಸಬಹುದಾಗಿದೆ.

ಸಾಮಾಜಿಕ ಬಹಿಷ್ಕಾರ ತಡೆ: ಯಾವುದೇ ವ್ಯಕ್ತಿ, ಕುಟುಂಬ ಅಥವಾ ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದನ್ನು ಕಟ್ಟುನಿಟ್ಟಾಗಿ ತಡೆಯಲು ಮುಂದಾಗಿರುವ ರಾಜ್ಯ ಸರಕಾರ ಅಂತಹ ಕ್ರಮ ಎಸಗಿದವರಿಗೆ 1 ಲಕ್ಷ ರು. ದಂಡ ಹಾಗೂ ಮೂರು ವರ್ಷದವರೆಗೆ ಜೈಲು ಶಿಕ್ಷೆ ವಿಧಿಸುವ ಕರ್ನಾಟಕ ಸಾಮಾಜಿಕ ಬಹಿಷ್ಕಾರದಿಂದ ಜನರ ರಕ್ಷಣೆ (ತಡೆ, ನಿಷೇಧ ಮತ್ತು ಪರಿಹಾರ) ಮಸೂದೆ-2025ಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಕೇವಲ ಬಹಿಷ್ಕರಿಸುವ ತೀರ್ಮಾನ ತೆಗೆದುಕೊಂಡವರು ಮಾತ್ರವಲ್ಲದೆ ಬಹಿಷ್ಕಾರ ಹಾಕುವ ಬಗ್ಗೆ ಸಭೆ-ಪಂಚಾಯ್ತಿ ನಡೆಸಿದವರನ್ನು ಅಪರಾಧಿಗಳು ಎಂದು ಶಿಕ್ಷೆಗೆ ಗುರಿ ಮಾಡಲು ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ. ಜತೆಗೆ ಸಭೆಯಲ್ಲಿ ಹಾಜರಿಲ್ಲದಿದ್ದರೂ ಬಹಿಷ್ಕಾರಕ್ಕೆ ಒತ್ತಡ ಹೇರುವ ಮೂಲಕ ನಿರ್ಧಾರಕ್ಕೆ ಕಾರಣರಾದವರು, ಬಹಿಷ್ಕಾರದ ಪರವಾಗಿ ಮತ ಹಾಕಿದವರು ಅಥವಾ ಚರ್ಚೆಯಲ್ಲಿ ಪಾಲ್ಗೊಂಡವರನ್ನೂ ಅಪರಾಧಿಗಳೆಂದು ನಿರ್ಧರಿಸಲಾಗುವುದು. ಈ ಕುರಿತು ಸಭೆ, ಜಮಾವಣೆ, ಸಮಾವೇಶ ನಡೆಸುವುದು ಸಹ ಅಕ್ರಮ ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ.

3 ವರ್ಷ ಜೈಲು, 1 ಲಕ್ಷ ರು ದಂಡ: ಬಹಿಷ್ಕಾರಕ್ಕೆ ಸಹಾಯ, ಪ್ರಚೋದನೆಗೆ ಮೂರು ವರ್ಷಗಳವರೆಗೆ ಜೈಲು, ₹1 ಲಕ್ಷ ರು.ವರೆಗೆ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶ ಇದೆ.

ಬಹಿಷ್ಕಾರಕ್ಕೆ ಒಳಗಾಗುವವರು ಠಾಣೆ ಅಥವಾ ನ್ಯಾಯಾಧೀಶರಿಗೆ ನೇರವಾಗಿ ದೂರು ಸಲ್ಲಿಸಬಹುದು. ಪ್ರಥಮ ದರ್ಜೆ ನ್ಯಾಯಾಧೀಶರಿಗೆ ವಿಚಾರಣೆಯ ಅಧಿಕಾರ ನೀಡಲಾಗಿದೆ. ನೇರವಾಗಿ ಸಲ್ಲಿಕೆಯಾದ ದೂರಿನ ತನಿಖೆ ನಡೆಸುವಂತೆ ನ್ಯಾಯಾಧೀಶರುಅ ಆದೇಶಿಸಬಹುದು. ಬಹಿಷ್ಕಾರಕ್ಕೆ ಒಳಗಾದ ವ್ಯಕ್ತಿ ಅಥವಾ ಕುಟುಂಬಕ್ಕೆ ಸಹಾಯ ಒದಗಿಸಲು ಸೂಚಿಸಬಹುದು. ದಂಡದ ಮೊತ್ತವನ್ನು ಅವರಿಗೆ ಪರಿಹಾರವಾಗಿ ನೀಡಲು ನಿರ್ದೇಶನ ನೀಡಬಹುದು ಎಂದು ವಿಧೇಯಕದಲ್ಲಿ ತಿಳಿಸಲಾಗಿದೆ.

→ 4

ಜಾನುವಾರು ಸಂರಕ್ಷಣಾ ಕಾಯಿದೆ ತಿದ್ದುಪಡಿ

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕದಲ್ಲಿ ಸಡಿಲಿಕೆ ತರಲು ಸರಕಾರ ಮುಂದಾಗಿದ್ದು, ರಾಜ್ಯದಲ್ಲಿ ಅನಧಿಕೃತ ಜಾನುವಾರು ಸಾಗಾಣಿಕೆ ಸಮಯದಲ್ಲಿ ವಶಪಡಿಸಿಕೊಂಡ ವಾಹನಗಳನ್ನು ಬ್ಯಾಂಕ್ ಖಾತರಿ ಬದಲಿಗೆ ನಷ್ಟ ಭರ್ತಿ ಮುಚ್ಚಳಿಕೆ (ಇಂಡೆಮಿಟಿ ಬಾಂಡ್) ನೀಡಿ ಬಿಡಿಸಿಕೊಳ್ಳಲು ಅನುವಾಗುವಂತೆ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ-2020ಕ್ಕೆ ತಿದ್ದುಪಡಿ ತರಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ಈಗ ಇರುವ ನಿಯಮದ ಪ್ರಕಾರ ಜಾನುವಾರುಗಳ ಅನಧಿಕೃತ ಸಾಗಣಿಕೆ ವೇಳೆಯಲ್ಲಿ ಸಿಕ್ಕಿಬಿದ್ದ ವಾಹನಗಳನ್ನು ಬ್ಯಾಂಕ್ ಗ್ಯಾರಂಟಿ ನೀಡಿ ಬಿಡಿಸಿಕೊಳ್ಳಬೇಕು. 3 ರಿಂದ 5 ಲಕ್ಷ ರು. ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಬ್ಯಾಂಕ್ ಖಾತರಿ ನೀಡುವುದು ಕಡ್ಡಾಯವಾಗಿತ್ತು. ಇದರಿಂದ ಸಣ್ಣ ಪುಟ್ಟ ವಾಹನ ಮಾಲೀಕರಿಗೆ ಸಮಸ್ಯೆಯಾಗುತ್ತದೆ. ಅದರ ಬಾಡಿಗೆಯಿಂದಲೇ ನಡೆಯುತ್ತಿರುವ ಅವರ ಕುಟುಂಬಗಳಿಗೆ ಕಷ್ಟವಾಗುತ್ತದೆ ಎಂಬ ಕಾರಣ ನೀಡಿ ವಿಧೇಯಕಕ್ಕೆ ತಿದ್ದುಪಡಿ ತರಲು ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

ಹೈಕೋರ್ಟ್ 2022ರಲ್ಲಿ ಪ್ರಕರಣ ಒಂದರಲ್ಲಿ ಬ್ಯಾಂಕ್ ಗ್ಯಾರಂಟಿ ಬದಲು ಇಂಡೆಮ್ನಿಟಿ ಗ್ಯಾರಂಟಿ ನೀಡಿ ವಾಹನ ಬಿಡುಗಡೆ ಮಾಡಬಹುದು ಎಂದು ಹೇಳಿತ್ತು. ಹೀಗಾಗಿ ನಷ್ಟ ಪರಿಹಾರ ಅಥವಾ ನಷ್ಟ ಭರ್ತಿ ಮುಚ್ಚಳಿಕೆ (ಬಾಂಡ್) ನೀಡುವ ಮೂಲಕವೂ ವಾಹನವನ್ನು ಬಿಡಿಸಿಕೊಳ್ಳಬಹುದು. ಹೀಗಾಗಿ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ-2020ರಲ್ಲಿ 'ಬ್ಯಾಂಕ್ ಖಾತರಿ' ಎಂಬ ಪದವು ಎಲ್ಲೆಲ್ಲಿ ಬರುವುದೋ ಆ ಪದದ ನಂತರ ಅಥವಾ ನಷ್ಟ ಪರಿಹಾರ ಬಾಂಡ್ ಎಂದು ತಿದ್ದುಪಡಿ ತರಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಉಪಲೋಕಾಯುಕ್ತರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿ ಪೇಚಿಗೆ ಸಿಲುಕಿದ ಆರ್. ಅಶೋಕ್

ಬಿಜೆಪಿಗೆ ಮುಳುವಾದ ಪರ್ಸೆಂಟೇಜ್ ಹೇಳಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಉಪಲೋಕಾಯುಕ್ತ ಬಿ.ವೀರಪ್ಪ ಅವರು ರಾಜ್ಯದಲ್ಲಿನ ಭ್ರಷ್ಟಾಚಾರ ಕುರಿತು ಆಡಿದ ಆರೋಪವನ್ನು ಪರಿಶೀಲಿಸದೆ, ಕಾಂಗ್ರೆಸ್ ಸರಕಾರದ ವಿರುದ್ಧ ಮುಗಿ ಬಿದ್ದ ಬಿಜೆಪಿ ನಾಯಕರು ಪೇಚಿಗೆ ಸಿಲುಕಿದ್ದಾರೆ.

ಬುಧವಾರ ಕಾರ್ಯಕ್ರಮವೊಂದರಲ್ಲಿ ಉಪ ಲೋಕಾಯುಕ್ತ ಬಿ. ವೀರಪ್ಪ ಅವರು, ಕರ್ನಾಟಕದಲ್ಲಿ ಶೇ.63 ಭ್ರಷ್ಟಚಾರವಿದೆ ಎಂದು ಹೇಳಿದ್ದರು. ಆದರೆ ಅವರು 2019ರ ನವೆಂಬರ್‌ನಲ್ಲಿ ಕೊಟ್ಟಿರುವ ವರದಿಯ ಆಧಾರದಲ್ಲಿ ಮಾತನಾಡಿದ್ದರು. ಆದರೆ ಈ ವಿಷಯವನ್ನು ತಿಳಿಯದೆ, ಪ್ರತಿಪಕ್ಷ ನಾಯಕ ಆರ್. ಅಶೋಕ್, ಕಾಂಗ್ರೆಸ್ ಸರಕಾರದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಟ್ವೀಟ್ ಮಾಡಿದ್ದರು. 2019ರಲ್ಲಿ ಬಿಜೆಪಿ ಸರಕಾರವೇ ಅಧಿಕಾರದಲ್ಲಿತ್ತು ಎಂಬ ವಿಷಯ ಸ್ಪಷ್ಟತೆ ಪಡೆಯುತ್ತಿದ್ದಂತೆ ಬಿಜೆಪಿ ತೀವ್ರ ಮುಜುಗರಕ್ಕೆ ಸಿಲುಕಿದೆ.

ಈ ವಿಷಯವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಅಶೋಕ್ ತಮ್ಮ ಕಾಲಿನ ಮೇಲೆ ತಾವೇ ಚಪ್ಪಡಿಕಲ್ಲು ಎಳೆದುಕೊಳ್ಳುತ್ತಿದ್ದಾರೆ ಎಂದು ಟೀಕಿಸಿದ್ದಾರೆ. ಈ ಬಗ್ಗೆ ಸುದೀರ್ಘ ಎಕ್ಸ್ ಪೋಸ್ಟ್ ಮಾಡಿರುವ ಅವರು, "ಉಪಲೋಕಾಯುಕ್ತ ಬಿ.ವೀರಪ್ಪ ಅವರು 2019ರ ನವೆಂಬರ್‌ನಲ್ಲಿ ಕೊಟ್ಟ ವರದಿಯಲ್ಲಿ ರಾಜ್ಯದಲ್ಲಿ ಶೇ.63ರಷ್ಟು ಭ್ರಷ್ಟಾಚಾರವಿದೆ ಎಂಬುದಾಗಿತ್ತು. ಅದೇ ವರದಿಯನ್ನು ಆಧರಿಸಿ ಬಿ.ವೀರಪ್ಪನವರು ಮಾತನಾಡಿದ್ದಾರೆ. ಅವರು ವರದಿ ನೀಡುವ ವೇಳೆಯಲ್ಲಿ ರಾಜ್ಯದಲ್ಲಿ ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರಕಾರ ಆಡಳಿತದಲ್ಲಿ ಇತ್ತು.

→ 4

ಮುಜುಗರಕ್ಕೀಡಾದ ಬಿಜೆಪಿ

ಉಪಲೋಕಾಯುಕ್ತ ವೀರಪ್ಪ ಅವರ ಹೇಳಿಕೆಯನ್ನು ಸರಿಯಾಗಿ ಅರ್ಥೈಸಿಕೊಳ್ಳದೇ, ಯಾವ ಸಮಯದಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ವರದಿಯನ್ನು ಉಲ್ಲೇಖಿಸಿದ್ದಾರೆ ಎನ್ನುವ ಬಗ್ಗೆ ಪರಿಶೀಲಿಸದೇ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರು ಟ್ವೀಟ್ ಮಾಡಿರುವುದು ಪಕ್ಷಕ್ಕೆ ತೀವ್ರ ಮುಜುಗರ ತಂದಿದೆ. ಇದನ್ನೇ ಬಳಸಿಕೊಂಡು ಸಿಎಂ ಸಿದ್ದರಾಮಯ್ಯ ಬಿಜೆಪಿಗೆ ತಿರುಗೇಟು ನೀಡಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಅಶೋಕ್ ಅವರು, ಯಾವುದೇ ಪ್ರತಿಕ್ರಿಯೆ ನೀಡುವ ಮೊದಲು ಎಚ್ಚರವಹಿಸಬೇಕು ಎನ್ನುವ ಮಾತುಗಳು ಬಿಜೆಪಿ ವಲಯದಲಿಯೇ ಕೇಳಿಬರುತ್ತಿದೆ.

ವಿಮಾನ ನಿಲ್ದಾಣಕ್ಕೆ ತೆರಳಿ ಬರಮಾಡಿಕೊಂಡ ಮೋದಿ

ಪುಟಿನ್‌ಗೆ ವಿಶೇಷ ಆತಿಥ್ಯ

ಹೊಸದಿಲ್ಲಿ: ಭಾರತ-ರಷ್ಯಾದ 23ನೇ ವಾರ್ಷಿಕ ಶೃಂಗಸಭೆಗಾಗಿ ಆಗಮಿಸಿದ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಗುರುವಾರ ಖುದ್ದು ದೆಹಲಿ ವಿಮಾನ ನಿಲ್ದಾಣಕ್ಕೆ ತೆರಳಿ ಬರಮಾಡಿಕೊಳ್ಳುವ ಮೂಲಕ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಉಭಯ ರಾಷ್ಟ್ರಗಳ ಗಾಢ ಮೈತ್ರಿಯನ್ನು ಸಾರಿದ್ದಾರೆ.

ದೆಹಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಅವರೊಂದಿಗೆ ಉಭಯ ದೇಶಗಳ ರಾಜತಾಂತ್ರಿಕ ಅಧಿಕಾರಿಗಳು ಸಹ ಸ್ಥಳದಲ್ಲಿದ್ದರು. ಬಳಿಕ ಪುಟಿನ್ ಮತ್ತು ಪ್ರಧಾನಿ ಮೋದಿ ಅವರು ಒಂದೇ ಕಾರಿನಲ್ಲಿ ಪ್ರಧಾನಿ ನಿವಾಸದತ್ತ ಪ್ರಯಾಣಿಸಿದರು. ರಾತ್ರಿ ಮೋದಿ ಅವರ ನಿವಾಸದಲ್ಲಿ ಪುಟಿನ್ ಅವರಿಗೆ ಔತಣಕೂಟ ಏರ್ಪಡಿಸಲಾಗಿದೆ. ನಾಲ್ಕು ವರ್ಷಗಳ ಬಳಿಕ ಭಾರತಕ್ಕೆ ಭೇಟಿ ನೀಡಿದ ಪುಟಿನ್ ದೆಹಲಿಯ ಪಂಚತಾರಾ ಹೋಟೆಲ್ ಐಟಿಸಿ ಮೌರ್ಯದಲ್ಲಿ ಉಳಿದುಕೊಂಡಿದ್ದಾರೆ.

ಭದ್ರತೆ, ರಕ್ಷಣೆ ಬಗ್ಗೆ ಚರ್ಚೆ: ಡಿಸೆಂಬರ್ 5ರಂದು ಪುಟಿನ್ ಅವರಿಗೆ ರಾಷ್ಟ್ರಪತಿ ಭವನದಲ್ಲಿ ಸ್ವಾಗತ ಹಾಗೂ ಮೂರು ಪಡೆಗಳ ಗೌರವ ವಂದನೆ ಸಲ್ಲಿಸಲಾಗುತ್ತದೆ. ನಂತರ ಅವರು ರಾಜ್‌ಘಾಟ್‌ಗೆ ತೆರಳಿ ಮಹಾತ್ಮ ಗಾಂಧಿಯವರ ಸ್ಮಾರಕಕ್ಕೆ ನಮನ ಸಲ್ಲಿಸಲಿದ್ದಾರೆ. ಹೈದರಾಬಾದ್ ಹೌಸ್‌ನಲ್ಲಿ ಮೋದಿ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಿದ ನಂತರ, ಪ್ರಧಾನಿ ಮೋದಿ ಅವರೊಂದಿಗೆ ಪುಟಿನ್ ಜಂಟಿ ಸುದ್ದಿಗೋಷ್ಠಿ ಇರಲಿದೆ. ಆನಂತರ ಮಧ್ಯಾಹ್ನ ಭಾರತ ಮಂಟಪದಲ್ಲಿ ನಡೆಯುವ ಕಾರ್ಯಕ್ರಮವೊಂದರಲ್ಲಿ ಇಬ್ಬರು ಭಾಗಿಯಾಗಲಿದ್ದಾರೆ. ಡಿ.5ರ ರಾತ್ರಿ ರಾಷ್ಟ್ರಪತಿ ಭವನದಲ್ಲಿ ನಡೆಯುವ ಔತಣಕೂಟದಲ್ಲಿ ಪುಟಿನ್ ಭಾಗಿಯಾಗಲಿದ್ದಾರೆ.

ಪುಟಿನ್ ಅವರು ಮೋದಿ ಅವರೊಂದಿಗೆ ದ್ವಿಪಕ್ಷೀಯ ಬಾಂಧವ್ಯ ವೃದ್ಧಿ ವಿಚಾರ ಸೇರಿದಂತೆ ಜಾಗತಿಕ ವಿಷಯಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

→ 4

ಸೊಂಪಾದ ಪುಟಗಳು

ನಾವೇಕೆ ಭಯಾನಕ ಕ್ರೈಂ ಸ್ಟೋರಿಗಳನ್ನು ನೋಡಲು ಬಯಸುತ್ತೇವೆ?
ಶಿಶಿರಕಾಲ – ಶಿಶಿರ್ ಹೆಗಡೆ 6

ಐತಿಹ್ಯಗಳ ಸುರಂಗದಲ್ಲಿ ವಂಡಾರು ಕಂಬಳ ಕೊಡಿ ಹಬ್ಬ
ಶಶಾಂಕಣ – ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ನಿಮ್ಮ ಆಲೋಚನೆಗಳು ಅವೆಷ್ಟು ಪರಿಣಾಮಕಾರಿ ಮತ್ತು ಪ್ರಭಾವಯುತ ಎಂಬುದು ನಿಮಗೆ ಮನವರಿಕೆಯಾದರೆ, ನೀವು ಜೀವನದಲ್ಲಿ ಎಂದೆಂದೂ ನಕಾರಾತ್ಮಕವಾಗಿ ಯೋಚಿಸುವುದೇ ಇಲ್ಲ.

ವಕ್ರತುಂಡೋಕ್ತಿ



ಯೂಟ್ಯೂಬ್ ಜಾಹೀರಾತಿನ ಒಂದು ಸಮಸ್ಯೆ ಅಂದ್ರೆ, ವಿಡಿಯೋ ಶುರುವಾಗೋ ಮುಂಚೆ ಬರೋ ಎರಡು ಜಾಹೀರಾತು ನೋಡುವಷ್ಟರಲ್ಲಿ, ನಾವು ಯಾವ ವಿಡಿಯೋ ನೋಡೋಕೆ ಬಂದಿದ್ವಿ ಅನ್ನೋದೇ ಮರೆತು ಹೋಗಿರುತ್ತದೆ.

ರೇಣುಕಾ ಹತ್ಯೆ: ಪೋಷಕರಿಗೆ ಸಮನ್ಸ್

ಬೆಂಗಳೂರು: ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಮೃತನ ತಂದೆ ಶಿವಯೋಗಿ ಮತ್ತು ತಾಯಿ ರತ್ನಮ್ಮ ಅವರನ್ನು ಸಾಕ್ಷಿಯಾಗಿ ಪರಿಗಣಿಸಲಾಗಿದ್ದು, ಡಿ.17ರಿಂದ ಸಾಕ್ಷಿಗಳ ವಿಚಾರಣೆ ಆರಂಭಿಸಲು ಬೆಂಗಳೂರಿನ ಸೆಷನ್ಸ್ ನ್ಯಾಯಾಲಯವು ದಿನಾಂಕ ನಿಗದಿಪಡಿಸಿದೆ. ಮೊದಲ ಹಂತದ ಸಾಕ್ಷಿಗಳ ಪಟ್ಟಿಯಲ್ಲಿ ರೇಣುಕಾ ಪೋಷಕರಲ್ಲದೆ, ಮೃತದೇಹ ವನ್ನು ಮೊದಲು ಗುರುತಿಸಿದ ಬೆಂಗಳೂರಿನ ಶೆಡ್‌ನ ವಾಚ್ ಮ್ಯಾನ್ ಮಲ್ಲೇಶ್ ಇದ್ದು ಮೂವರಿಗೂ ಕೋರ್ಟ್ ಸಮನ್ಸ್ ಜಾರಿ ಮಾಡಿದೆ. ತಂದೆ-ತಾಯಿಯರ ಜತೆಗಿನ ಕೊನೆಯ ಸಂಭಾಷಣೆ, ಅವನು ಬೆಂಗ ಳೂರಿಗೆ ಏಕೆ ಬಂದಿದ್ದ, ಪವಿತ್ರಾ ಗೌಡ ಜತೆಗಿನ ವಿವಾದ ಎಲ್ಲವೂ ಸಾಕ್ಷಿಗಳ ವಿಚಾ ರಣೆ ವೇಳೆ ತೆರೆದುಕೊಳ್ಳಲಿದೆ. ನ್ಯಾಯಾಧೀಶರು ಡಿಸೆಂಬರ್ 4 ರಂದು ಉಳಿದ ಸಾಕ್ಷಿಗಳ ಪಟ್ಟಿಯನ್ನು ಪರಿಶೀಲಿಸಿ, ಯಾರಿಗೆಲ್ಲ ಸಮನ್ಸ್ ಜಾರಿಮಾಡಬೇಕು ಎಂಬುದನ್ನು ತೀರ್ಮಾನಿಸಲಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಸಂಸತ್ ಭವನಕ್ಕೆ ಸಾಕುನಾಯಿ ತಂದ ಕೈ ಸಂಸದೆ



ಮುರ್ಮುಗೆ ಡೀಪ್‌ಫೇಕ್ ಕಾಟ

ಬೆಂಗಳೂರು: ಉದ್ಯಮ ರಂಗದ ಗಣ್ಯರ ಹೆಸರಿನಲ್ಲಿ ಹೂಡಿಕೆ ಮಾಡಲು ಕರೆ ನೀಡುವ ಎಐ ಆಧಾರಿತ ನಕಲಿ ಜಾಹೀರಾತಿಗೆ ಈಗ ದೇಶದ ಮೊದಲ ಪ್ರಜೆ ದ್ರೌಪದಿ ಮುರ್ಮು ಮತ್ತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನೂ ಬಳಸಿ ಕೊಳ್ಳಲಾಗಿದೆ. ಮುರ್ಮು ಮತ್ತು ನಿರ್ಮಲಾ ಸೀತಾರಾಮನ್ ಅವರು ಹಣಕಾಸು ಹೂಡಿಕೆ ಯೋಜನೆ ಪ್ರಚಾರ ಮಾಡುತ್ತಿರುವು ದನ್ನು ಸುಳ್ಳಾಗಿ ತೋರಿಸುವ ಡೀಪ್‌ಫೇಕ್ ವಿಡಿಯೋ ಹರಿದಾಡುತ್ತಿದ್ದು, ಈ ಸಂಬಂಧ ಬೆಂಗಳೂರಿನ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮುಟ್ಟಿನ ರಜೆ ಘೋಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಗುರುವಾರ ಸರಕಾರಿ ಮಹಿಳಾ ನೌಕರರ ಸಂಘದಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಒಂದೇ ಹಾರ ಹಾಕಿ ಸನ್ಮಾನಿಸಲಾಯಿತು.

ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿ ಪರಿಶೀಲಿಸಿದ ಎನ್‌ಐಎ ಅಧಿಕಾರಿಗಳು

ದೆಹಲಿ ಸ್ಫೋಟಕ್ಕೆ ಅಗ್ರಹಾರದ ನಂಟು?

ಬೆಂಗಳೂರು: ಪರಪ್ಪನ ಅಗ್ರಹಾರದಲ್ಲಿ ಕೈದಿಗಳಿಗೆ ರಾಜಾತಿಥ್ಯ ನೀಡಿರುವ ವಿಡಿಯೋ ವೈರಲ್ ಆದ ಬೆನ್ನಲ್ಲೇ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತಂಡ ಹೈ ಅಲರ್ಟ್ ಆಗಿದೆ. ಮತ್ತೊಮ್ಮೆ ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿ ತನಿಖೆ ತೀವ್ರಗೊಳಿಸಿದೆ.

ದೆಹಲಿ ಸ್ಫೋಟದ ನಂತರ ಎನ್‌ಐಎ ಚುರುಕಿನ ಕಾರ್ಯಾಚರಣೆ ನಡೆಸುತ್ತಿದೆ. ಈ ಸ್ಫೋಟಕ್ಕೂ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಶಂಕಿತ ಉಗ್ರ ಮೊಬೈಲ್ ಬಳಕೆ ಮಾಡಿರುವುದಕ್ಕೂ ಸಂಬಂಧ ಇದೆಯಾ ಎಂಬ ಅನುಮಾನ ಮೂಡಿದೆ. ಈ ಬಗ್ಗೆ ಹೆಚ್ಚಿನ ತನಿಖೆ ನಡೆಸಲು ಮತ್ತೆ ಎನ್‌ಐಎ ಜೈಲಿಗೆ ಭೇಟಿ ನೀಡಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಶಂಕಿತ ಉಗ್ರರು ಹಾಗೂ ರೌಡಿಶೀಟರ್‌ಗಳು ಮೊಬೈಲ್ ಉಪಯೋಗಿಸುತ್ತಿದ್ದರು ಎಂಬ ವಿಡಿಯೋ ವೈರಲ್ ಆಗಿತ್ತು. ಜುಹಾದ್ ಹಮೀದ್ ಶಕೀಲ್ ಮನ್ನಾ ಕೈಯಲ್ಲಿ ಮೊಬೈಲ್ ಇರುವ ವಿಡಿಯೋ ವೈರಲ್ ಆಗುತ್ತಿದ್ದಂತೆ ಎನ್‌ಐಎ ಅಧಿಕಾರಿಗಳು ಬೆಂಗಳೂರು ಜೈಲಿಗೆ ಭೇಟಿ ನೀಡಿ ತನಿಖೆ ನಡೆಸಿದ್ದರು. ಶಂಕಿತ ಉಗ್ರನ ಕೈಯಲ್ಲಿ ಪತ್ತೆಯಾದ ಮೊಬೈಲ್ ಅನ್ನು ವಶಪಡಿಸಿಕೊಂಡು ಎನ್‌ಐಎ ತಂಡವು ಕೂಲಂಕಷವಾಗಿ ಪರಿಶೀಲನೆ ನಡೆಸಿದೆ.

ಜೈಲಿನಲ್ಲಿದ್ದುಕೊಂಡು ಈತ ಯಾರ್‍ಯಾರನ್ನು ಸಂಪರ್ಕಿಸಿದ್ದಾನೆ, ಯಾವೆಲ್ಲಾ ಮಾಹಿತಿಗಳನ್ನು ವಿನಿಮಯ ಮಾಡಿಕೊಂಡಿದ್ದಾನೆ ಎಂಬ ಬಗ್ಗೆ ಎನ್‌ಐಎ ಮಾಹಿತಿ ಕಲೆಹಾಕಿದೆ. ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೈದಿಗಳಿಗೆ ವಿಐಪಿ ಸೌಲಭ್ಯಗಳು ಸಿಗುತ್ತಿದೆ ಎಂಬ ಆರೋಪ ಕೂಡ ಬಂದಿತ್ತು. ಈ ಬೆನ್ನಲ್ಲೇ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ ಮೊಬೈಲ್ ಬಳಸಿರುವ ವಿಡಿಯೋ ವೈರಲ್ ಆಗಿತ್ತು. ಈತ ಯುವಕರನ್ನು ಐಸಿಸ್ ಉಗ್ರ ಸಂಘಟನೆಗೆ ನೇಮಕ ಮಾಡುತ್ತಿದ್ದ ಎಂಬ ಆರೋಪ ಇತ್ತು. ಜೈಲಿನೊಳಗೆ ಮೊಬೈಲ್ ಬಳಕೆ ಮತ್ತು ಇತರ ವಿಐಪಿ ಸೌಲಭ್ಯಗಳು ದೇಶದ ದೃಷ್ಟಿಯಿಂದ ಅಭದ್ರತೆಯನ್ನು ಸೃಷ್ಟಿಸುತ್ತವೆ.

ಜೈಶೆ ಉಗ್ರ ಕೃತ್ಯಕ್ಕೆ ಆನ್‌ಲೈನ್ ತರಬೇತಿ

ದೆಹಲಿ: ಪಾಕಿಸ್ತಾನ ಮೂಲದ ಜೈಶೆ ಮೊಹಮ್ಮದ್ ಉಗ್ರಗಾಮಿ ಸಂಘಟನೆ ಹೊಸದಾಗಿ ಪ್ರಾರಂಭಿಸಿದ ಜಮಾತ್ ಉಲ್ ಮೊಮಿನಾತ್‌ನಲ್ಲಿ 5,000 ಕ್ಕೂ ಹೆಚ್ಚು ಮಹಿಳೆಯರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಅವರನ್ನು ಆನ್‌ಲೈನ್ ತರಬೇತಿ ಮೂಲಕ ಭಯೋತ್ಪಾದಕ ಚಟುವಟಿಕೆಗಳಿಗೆ ಸಿದ್ಧಗೊಳಿಸಲಾಗುತ್ತಿದೆ ಎಂದು ಗುಪ್ತಚರ ಸಂಸ್ಥೆಗಳು ವರದಿ ನೀಡಿವೆ.

ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಜೈಶೆ ಮುಖ್ಯಸ್ಥ ಮಸೂದ್ ಅಜರ್ ಭಯೋತ್ಪಾದಕ ಸಂಘಟನೆಯ ಮಹಿಳಾ ವಿಭಾಗದಲ್ಲಿ ನೇಮಕಾತಿಗಳ ಸಂಖ್ಯೆ ಹೆಚ್ಚುತ್ತಿದೆ. ಈಗ ಜಿಲ್ಲಾ ಘಟಕಗಳನ್ನು ಸ್ಥಾಪಿಸುವ ಅವಶ್ಯಕತೆಯಿದೆ ಎಂದು ಹೇಳಿದ್ದಾನೆ. "ಕೆಲವೇ ವಾರಗಳಲ್ಲಿ, 5,000 ಕ್ಕೂ ಹೆಚ್ಚು ಮಹಿಳೆ ಯರು ಸೇರಿದ್ದಾರೆ ಎಂಬುದು ಅಲ್ಲಾಹನ ಕೃಪೆ.

→ 4

200ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದು, ತನಿಖೆಗೆ ಡಿಜಿಸಿಎ ಆದೇಶ

ಮೇಲಕ್ಕೇರದ ಇಂಡಿಗೋ: ಪ್ರಯಾಣಿಕರ ಆಕ್ರೋಶ

ಬೆಂಗಳೂರು/ದೆಹಲಿ: ದೇಶದ ಅತಿದೊಡ್ಡ ವಿಮಾನ ಯಾನ ಸಂಸ್ಥೆಯಾದ ಇಂಡಿಗೋದಲ್ಲಿ ಉಂಟಾಗಿ ರುವ ತಾಂತ್ರಿಕ ಅಡಚಣೆ ಮತ್ತು ಸಿಬ್ಬಂದಿ ಕೊರತೆ ಸಮಸ್ಯೆಗಳಿಂದ 3ನೇ ದಿನವೂ 200ಕ್ಕೂ ಹೆಚ್ಚು ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ. ಇವುಗಳಲ್ಲಿ ಬೆಂಗಳೂರು ಕೆಂಪೇಗೌಡ ವಿಮಾನ ನಿಲ್ದಾಣದಿಂದ ಹೊರಡಬೇಕಿದ್ದ 73 ಇಂಡಿಗೋ ವಿಮಾನಗಳೂ ಸೇರಿವೆ.

ಗುರುವಾರ ಬೆಂಗಳೂರು, ಮುಂಬೈ, ದೆಹಲಿ, ಮಂಗಳೂರು ಸೇರಿದಂತೆ ದೇಶದ ವಿವಿಧ ವಿಮಾನ ನಿಲ್ದಾಣಗಳಿಂದ ಇಂಡಿಗೋ ವಿಮಾನದಲ್ಲಿ ಪ್ರಯಾಣ ಬೆಳೆಸಬೇಕಿದ್ದ ಸಾವಿರಾರು ಪ್ರಯಾಣಿಕರು ಹಾರಾಟ ವ್ಯತ್ಯಯದಿಂದ ತೊಂದರೆ ಎದುರಿಸಿದರು.

→ 4

ವಿಮಾನ ರದ್ದು ಎಲ್ಲೆಲ್ಲಿ ಎಷ್ಟು?
ಬೆಂಗಳೂರು: 73, ಮುಂಬೈ: 51
ದೆಹಲಿ: 33, ಹೈದರಾಬಾದ್ 19

ನವಂಬರ್‌ನಲ್ಲಿ 1232 ವಿಮಾನ ರದ್ದು !

ಕಳೆದ ನವಂಬರ್ ತಿಂಗಳಿನಲ್ಲಿ ದೇಶದಲ್ಲಿ 1,232 ಇಂಡಿಗೋ ವಿಮಾನಗಳ ಸಂಚಾರ ರದ್ದಾಗಿದೆ. ಈ ಸಂಬಂಧ ಡಿಜಿಸಿಎ ತನಿಖೆ ಆರಂಭಿಸಿದೆ. ಇಂಡಿಗೋ ಏರ್ ಲೈನ್ಸ್‌ನ ಉನ್ನತ ಅಧಿಕಾರಿಗಳನ್ನು ಡಿಜಿಸಿಎ ಗುರುವಾರ ತನ್ನ ಕಚೇರಿಗೆ ಕರೆಸಿ ವಿವರಣೆ ನೀಡುವಂತೆ ಕೇಳಿದೆ. 1,232 ವಿಮಾನ ಸಂಚಾರ ರದ್ದಾಗಲು ಇಂಡಿಗೋ ಏರ್ ಲೈನ್ಸ್ ಬೇರೆ ಬೇರೆ ಕಾರಣ ನೀಡಿದೆ. ಸಿಬ್ಬಂದಿ ಕೊರತೆಯಿಂದ 755 ವಿಮಾನ ಸಂಚಾರ ರದ್ದಾಗಿದೆ. ಏರ್ ಟ್ರಾಫಿಕ್ ಕಂಟ್ರೋಲ್ ವೈಫಲ್ಯದಿಂದ 92 ವಿಮಾನ ಸಂಚಾರ ರದ್ದಾಗಿದೆ. ಏರ್‌ಪೋರ್ಟ್‌ಗಳ ನಿರ್ಬಂಧದಿಂದಾಗಿ 258 ವಿಮಾನ ಸಂಚಾರ ರದ್ದಾಗಿದೆ. 127 ವಿಮಾನಗಳು ಇನ್ನಿತರೆ ಕಾರಣದಿಂದ ರದ್ದಾಗಿವೆ ಎಂದು ಇಂಡಿಗೋ ಏರ್‌ಲೈನ್ಸ್ , ಡಿಜಿಸಿಎ ಗೆ ತಿಳಿಸಿದೆ. ಮುಂದಿನ 48 ಗಂಟೆಗಳಲ್ಲಿ ಪರಿಸ್ಥಿತಿ ಸುಧಾರಿಸುವ ಭರವಸೆ ನೀಡಿದೆ. ಅಡಚಣೆಗಾಗಿ ಪ್ರಯಾಣಿಕರಲ್ಲಿ ಕ್ಷಮೆಯಾಚಿಸಿದೆ.

ವಿಶ್ವೇಶ್ವರ ಭಟ್ಟರ
103
ಪುಸ್ತಕ

ವಿಶ್ವವಾಣಿ ಪುಸ್ತಕ
ವಿಶ್ವವಾಣಿ ಪುಸ್ತಕದಿಂದ
ಹೊಸ ಕೃತಿ

₹ 450/-

QR CODE ಸ್ಕ್ಯಾನ್ ಮಾಡಿ, ಫೋನ್ ಪೇ / ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್ ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ನಂಬರ್‌ಗೆ ಕಳುಹಿಸಿ.
ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.

63623 93966

ರಾಜ್ಯಮಟ್ಟದ ವಿಚಾರ ಸಂಕಿರಣ | ಪ್ರೊ. ಕೃಷ್ಣಪ್ಪ ಟ್ರಸ್ಟ್‌ನ ಟ್ರಸ್ಟಿ ರುದ್ರಪ್ಪ ಹನಗವಾಡಿ ಅಭಿಮತ

ಮಹಾತ್ಮ ಗಾಂಧೀಜಿ ಆತ್ಮಕಥೆ ಬದುಕಿಗೆ ಪ್ರೇರಣೆ

ದಾವಣಗೆರೆ: ಪ್ರತಿಯೊಬ್ಬರೂ ಅಹಿಂಸೆಯ ಪ್ರತೀಕವಾದ ಮಹಾತ್ಮ ಗಾಂಧಿ ಅವರ ಆತ್ಮಕಥೆಯನ್ನು ಓದಲೇ ಬೇಕು, ಇಲ್ಲವಾದಲ್ಲಿ ನಮ್ಮ ಬದುಕೇ ನಾಶವಾದಂತೆ ಎಂದು ಪ್ರೊ. ಕೃಷ್ಣಪ್ಪ ಟ್ರಸ್ಟ್‌ನ ಟ್ರಸ್ಟಿ ರುದ್ರಪ್ಪ ಹನಗವಾಡಿ ಅಭಿಪ್ರಾಯಪಟ್ಟರು.

ಗುರುವಾರ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರಿನ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದಿಂದ ಆಯೋಜಿಸಿದ್ದ ಗಾಂಧೀಜಿ ಅವರ ವಿಚಾರ ಪ್ರಸ್ತುತತೆ ಯುವ ಜನತೆಗೆ ವಿಷಯದ ಕುರಿತು ನಡೆದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಗಾಂಧೀಜಿ ಅವರು ಅಹಿಂಸೆಯ ಪ್ರತೀಕ. ಅವರು ನಮ್ಮಂತೆ ಸಾಮಾನ್ಯರಾಗಿದ್ದು ನಂತರ ಅಸಾಮಾನ್ಯರಾದರು. ಅದಕ್ಕೆ ಕಾರಣ, ಅವರು ಓದಿದ ಪುಸ್ತಕಗಳು ಜೀವನದ ಹಾದಿ ಬದಲಿಸಿದವು. ಆ ಸಾಲಿನಲ್ಲಿ ನಮ್ಮ ಬದುಕನ್ನು ಬದಲಿಸಲು ಗಾಂಧೀಜಿ ಅವರ ಆತ್ಮಕಥೆ ಒಂದು ಅತ್ಯುತ್ತಮ ಪುಸ್ತಕ. ಇದರಿಂದ ನಮ್ಮ ಚಿಂತನೆ ಬದಲಾಯಿಸಿಕೊಂಡು ಉತ್ತಮ ಬದುಕು ರೂಪಿಸಿಕೊಳ್ಳಬಹುದು ಎಂದು ಹೇಳಿದರು.

ಗುರುವಾರ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಗಾಂಧೀಜಿ ಅವರ ವಿಚಾರ ಪ್ರಸ್ತುತತೆ ಯುವ ಜನತೆಗೆ ವಿಷಯದ ಕುರಿತು ನಡೆದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಪ್ರೊ. ಕೃಷ್ಣಪ್ಪ ಟ್ರಸ್ಟ್‌ನ ಟ್ರಸ್ಟಿ ರುದ್ರಪ್ಪ ಹನಗವಾಡಿ ಉದ್ಘಾಟಿಸಿದರು.

ನಾವೇಕೆ ಗಾಂಧಿ ಅವರ ಆತ್ಮಕಥೆ ಪುಸ್ತಕವನ್ನು ಓದಬೇಕು, ಅದು ಲಕ್ಷಾಂತರ ಪುಸ್ತಕಗಳು ಇರುವಾಗ ಇದನ್ನೇ ಏಕೆ ಓದಬೇಕು ಎಂಬುವುದನ್ನು ಅಲೋಕನ ಮಾಡಿದಾಗ, ಗಾಂಧಿ ಆತ್ಮಕಥೆಯಲ್ಲಿ ಬದುಕು ಹಸನು ಮಾಡಿಕೊಳ್ಳುವುದರ ಜೊತೆಗೆ ದಿಕ್ಸೂಚಿಯಾಗಿದೆ. ಅದು ಒಮ್ಮೆ ಓದಿ ಮುಗಿಸಿದೆ ಅನ್ನುವ ಪುಸ್ತಕವಲ್ಲ. ಪ್ರತಿನಿತ್ಯ ಓದುತ್ತಾ ಜೀರ್ಣಿಸಿಕೊಂಡಂತೆ ಬದುಕುವ ದಿಕ್ಕನ್ನು ಬದಲಾಯಿಸಿಕೊಳ್ಳುತ್ತೇವೆ ಎಂದು ವಿವರಿಸಿದರು.

ಗಾಂಧೀಜಿ ಅವರು ತಮ್ಮ ಆತ್ಮಕಥೆ ಬರೆದು ನೂರು ವರ್ಷಗಳು ಸಂದಿವೆ. ಇದರಲ್ಲಿ ಗಾಂಧಿ ಅವರ ಸಿದ್ಧಾಂತ, ದೇಶ ಪ್ರೇಮ, ಹೋರಾಟಗಾರರನ್ನು ನಾವುಗಳು ಕಾಣಬಹುದು. ಆದರೆ, ಇತ್ತೀಚಿನ ದಿನಗಳಲ್ಲಿ ಯುವ ಜನತೆ ಗಾಂಧೀಜಿ ಅವರನ್ನು ತಿಳಿದುಕೊಳ್ಳುವಲ್ಲಿ ಎಡವುತ್ತಿದ್ದಾರೆ. ಅವರ ಮೇಲೆ ನಡೆಯುವ ಅನ್ಯ ವಿಚಾರಗಳಿಗೆ ಮನಸೋಲುತ್ತಿದ್ದಾರೆ. ಈ ರೀತಿಯ ತಪ್ಪು ಕಲ್ಪನೆ ಹೋಗಬೇಕಿದೆ. ಎಂದು ಹೇಳಿದರು.

ದೇವನೂರು ಮಹಾದೇವ ಅವರು ಹೇಳಿದಂತೆ ಗಾಂಧಿ ಮತ್ತು ಅಂಬೇಡ್ಕರ್‌ಅವರನ್ನು ಎರಡು ಧ್ರುವಗಳು. ಅದನ್ನು ಬೇರೆಬೇರೆಯಾಗಿ ನೋಡಬೇಡಿಒ ಎಂದು ಹೇಳಿದ್ದಾರೆ. ಗಾಂಧಿ ಮತ್ತು ಅಂಬೇಡ್ಕರ್ ಅವರಲ್ಲಿ ಚರ್ಚೆಗಳು ನಡೆದಿದ್ದವು ವಿನಹಃ ಪರಸ್ಪತ ಒಬ್ಬರನ್ನೊಬ್ಬರು ಗೌರವಿಸುತ್ತಿದ್ದರು. ಇದನ್ನು ಯುವ ಜನರು ಅರ್ಥ ಮಾಡಿಕೊಳ್ಳಬೇಕಿದೆ ಎಂದು ವಿವರಿಸಿದರು. ಸರಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜಿನ ಪ್ರಾಂಶುಪಾಲ ಡಾ. ನಾಗರಾಜ ತಳವಾರ್‌ಅಧ್ಯಕ್ಷತೆ ವಹಿಸಿದ್ದರು. ದಾವಿವಿಯ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಅಶೋಕ್ ಕುಮಾರ್‌ವಿ ಪಾಳೇದ, ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಡಾ.ಎ.ಬಿ. ರಾಮಚಂದ್ರಪ್ಪ, ಕರುಣಾ ಜೀವ ಕಲ್ಯಾಣ ಟ್ರಸ್ಟ್ನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮತ್ತಿತರರಿದ್ದರು.

ಗಾಂಧೀಜಿ ಮೇಲೆ ಇಲ್ಲಸಲ್ಲದ ಆರೋಪ

ಗಾಂಧೀಜಿ ಭಾರತವನ್ನು ಪ್ರಪಂಚಕ್ಕೆ ಪರಿಚಯಿಸಿದ ಮಹಾನ್ ಪ್ರತಿವಾದಕರಾಗಿದ್ದರು. ಅಂಥ ಗಾಂಧಿ ಅವರನ್ನು ಅರಿಯದ ಯುವ ಸಮೂಹ ಇವತ್ತು ಸಾಮಾಜಿಕ ಜಾಲತಾಣಗಳಲ್ಲಿ ಯಾರು ಹಾಕುವ ಅಭಿಪ್ರಾಯವನ್ನು ತಮ್ಮ ಅಭಿಪ್ರಾಯವೆಂಬಂತೆ ಬಿಂಬಿಸಿಕೊಂಡು ಗಾಂಧಿ ಅವರ ಮೇಲೆ ಇಲ್ಲ ಸಲ್ಲದು ಆರೋಪ ಮಾಡುತ್ತಿದ್ದಾರೆ. ಗಾಂಧೀಜಿ ಬಂದ ನಂತರ ಇಲ್ಲಿನ ಪ್ರಭುತ್ವವನ್ನೆಲ್ಲ ಒಂದಾಗಿಸಿಕೊಂಡು ನಾವು ಭಾರತೀಯರು ಎಂದು ತೋರಿಸಿಕೊಟ್ಟು, ವಿಶ್ವದಲ್ಲಿ ಮನ್ನಣೆ ದೊಡ್ಡ ಮಟ್ಟದಲ್ಲಿ ದೊರಕುವಂತೆ ಮಾಡಿದ್ದಾರೆ. ಪ್ರೊ. ವೆಂಕಟರಾವ್ ಎಂ. ಪಲಾಟೆ, ದಾವಣಗೆರೆ ವಿವಿ

> ಗಾಂಧಿ ಮತ್ತು ಅಂಬೇಡ್ಕರ್‌ಅವರದ್ದು ತಾಯಿ-ಮಗನ ಸಂಬಂಧ ಇದ್ದಂತೆ. ಈ ಇಬ್ಬರು ಮಹಾನೀಯರಲ್ಲಿ ಕೆಲವು ವಿಚಾರಗಳಲ್ಲಿ ಚರ್ಚೆಗಳು ನಡೆದಿವೆ. ಆದರೆ, ಈ ಚರ್ಚೆಯನ್ನು ಜಗಳವೆಂದು ಬಿಂಬಿಸುತ್ತಿರುವುದು ವಿಷಾಧನೀಯ.
>
> -ರುದ್ರಪ್ಪ ಹನಗವಾಡಿ, ಪ್ರೊ. ಕೃಷ್ಣಪ್ಪ ಟ್ರಸ್ಟ್‌ನ ಟ್ರಸ್ಟಿ

ಸಮಾಚಾರ ಸಣ್ಣದಲ್ಲ

ಲಾರಿ ಮಾಲೀಕರ ಅನಿರ್ದಿಷ್ಟಾವಧಿ ಧರಣಿ

ದಾವಣಗೆರೆ: ಕೇಂದ್ರ ಸರಕಾರದಿಂದ ಲಾರಿಗಳ ಎಫ್‌ಸಿ ಮತ್ತು ಆರ್‌ಆರ್‌ಸಿಗಳ ಶುಲ್ಕ 1400 ಇದ್ದ ಶುಲ್ಕ 28,000 ರವರೆಗೆ ವರೆಗೆ ಹೆಚ್ಚಿಸಿರುವುದನ್ನು ಖಂಡಿಸಿ, ದಾವಣಗೆರೆ ಲೋಕಲ್ ಮತ್ತು ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದಿಂದ ಡಿ.9 ರಿಂದ ಲಾರಿಗಳ ಸರಕು ಸಾಗಣೆ ನಿಲ್ಲಿಸಿ,ಪ್ರತಿಭಟನೆ ಮತ್ತು ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗಿದೆ. ಕೇಂದ್ರ ಸರಕಾರ ಲಾರಿಗಳ ಎಫ್‌ಸಿ ಮತ್ತು ಆರ್‌ಆರ್‌ಸಿ ಗಳ ಶುಲ್ಕವನ್ನು ಒಮ್ಮೆಲೆ ಹೆಚ್ಚಿಸಿದ್ದು, ಇದರಿಂದ ತೊಂದರೆ ಉಂಟಾಗಿದೆ. ನಮ್ಮಿಂದ ಅಷ್ಟು ಮೊತ್ತ ಭರಿಸಲು ಸಾಧ್ಯವಾಗುವುದಿಲ್ಲ, ರಾಷ್ಟ್ರಮಟ್ಟದ ಸರಕು ಸಾಗಣೆಗಳಿಗೆ ಸಂಬಂದಪಟ್ಟಂತೆ ಇಡೀ ದೇಶಾದ್ಯಂತ ಇರುವ ಲಾರಿ ಮಾಲೀಕರು ಹಗಲು ರಾತ್ರಿ ಎನ್ನದೇ ಹೆಚ್ಚಿನ ಶ್ರಮ ವಹಿಸಿ ದುಡಿಯುತ್ತಿದ್ದಾರೆ. ಆದ್ದರಿಂದ ಕೇಂದ್ರ ಸರಕಾರದಿಂದ ಲಾರಿಗಳ ಎಫ್.ಸಿ ಮತ್ತು ಆರ್‌ಆರ್‌ಸಿಗಳ ಶುಲ್ಕ ಹೆಚ್ಚಿಸಿರುವುದನ್ನು ರದ್ದುಗೊಳಿಸಿ ಈ ಹಿಂದೆ ಇದ್ದ ಶುಲ್ಕ ಮುಂದುವರೆಸಬೇಕೆಂದು ಸಂಘದ ಅಧ್ಯಕ್ಷ ಎಂ.ದಾದಾಪೀರ್ ಮನವಿ ಮಾಡಿದ್ದಾರೆ.

ಚೌಡೇಶ್ವರಿ ದೇವಿಯ ಕಾರ್ತಿಕೋತ್ಸವ ಇಂದು

ಹರಿಹರ: ನಗರದ ಅಮರಾವತಿಯ ಶ್ರೀ ನಾಗ ಚೌಡೇಶ್ವರಿ ದೇವಿ ಮತ್ತು ಶ್ರೀ ಬನ್ನಿ ಮಹಾಂಕಾಳಿ ದೇವಿಯ ಕಾರ್ತಿಕೋತ್ಸವ ಡಿ.5ರಂದು ಅವರಗೊಳ್ಳ ಪುರವರ್ಗ ಹಿರೇಮಠದ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ ಅಂದು ಶ್ರೀ ನಾಗಚೌಡೇಶ್ವರಿ ಅಮ್ಮನವರಿಗೆ ಫಲ ಪಂಚಾಮೃತ ಸಮೇತ ಮಹಾರುದ್ರಾಭಿಷೇಕ ವಿಶೇಷ ಅಲಂಕಾರ ಇರುತ್ತದೆ. ನಂತರ ಪ್ರತಿ ವರ್ಷದ ಪದ್ಧತಿಯಂತೆ ಬೆಳಿಗ್ಗೆ 9-30 ಗಂಟೆಗೆ ಅಮರಾವತಿಯ ಶ್ರೀ ಬೆಟ್ಟದ ಮಲ್ಲಿಕಾರ್ಜುನ ಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವರುಗಳ ಪಲ್ಲಕ್ಕಿ ಉತ್ಸವವು ಅಮರಾವತಿ ಗ್ರಾಮದಿಂದ ಕೆ.ಹೆಚ್.ಬಿ. ಕಾಲೋನಿಗೆ ಮಂಗಳ ವಾದ್ಯಗಳೊಂದಿಗೆ ಸದ್ಭಕ್ತರ ವೇದ ಘೋಷಗಳೊಂದಿಗೆ ಬರಮಾಡಿಕೊಳ್ಳುವುದು. ನಂತರ ವಿಶೇಷ ಮಹಾಮಂಗಳಾರತಿಯೊಂದಿಗೆ ಸಂಜೆ 6 ಗಂಟೆಗೆ ಶ್ರೀ ನಾಗಚೌಡೇಶ್ವರಿ ಅಮ್ಮನವರ ಕಾರ್ತಿಕ ದಿಪೋತ್ಸವವು ಅತಿ ವಿಜೃಂಭಣೆಯಿಂದ ಜರುಗುವುದು ನಂತರ ತೀರ್ಥ ಪ್ರಸಾದ ವಿನಿಯೋಗಿಸಲಾಗುವುದು.

ಇಂದು ವಿಶೇಷ ಔಷಧ ವಿತರಣೆ

ದಾವಣಗೆರೆ: ಸುಶ್ರುತ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ, ಶ್ರೀರಾಮನಗರ, ದಾವಣಗೆರೆಯಲ್ಲಿ ಅಲರ್ಜಿ ಮತ್ತು ಅಸ್ತಮಾ ರೋಗಿಗಳಿಗೆ ವಿಶೇಷ ಔಷಧ ವಿತರಣೆ ಮಾಡಲಾಗುತ್ತಿದೆ. ಚಳಿಗಾಲದಲ್ಲಿ ಕಾಣಿಸಿಕೊಳ್ಳುವ ನೆಗಡಿಯ ನಂತರ ಬಹಳಷ್ಟು ಜನರಲ್ಲಿ ಕಂಡು ಬರುವ ತೊಂದರೆ ಅಸ್ತಮಾ, ಕೆಮ್ಮು, ಕಷ್ಟಕರ ಉಸಿರಾಟ ಇತ್ಯಾದಿ, ಈ ತರಹದ ಸಮಸ್ಯೆಗಳ ಪರಿಹಾರವಾಗಿ ಆಯುರ್ವೇದಲ್ಲಿ ವಿಶಿಷ್ಟವಾದ ಔಷಧೋಪಚಾರ ವಿವರಿಸಲಾಗಿದೆ. ಆರೋಗ್ಯ ಆಕಾಂಕ್ಷಿ ಗಳು ಈ ಶಿಬಿರದ ಸದುಪಯೋಗ ಪಡೆಯಲು ತಮ್ಮ ಹೆಸರನ್ನು ಮೊ:9740380466, 08192- 272020 ಕರೆ ಮಾಡಿ ಹೆಸರು ನೋಂದಣಿ ಮಾಡಲು ತಿಳಿಸಲಾಗಿದೆ.

ದಂಡ ಪಾವತಿಸಿ ಲೆಕ್ಕಪತ್ರ ಸಲ್ಲಿಸಿ

ಚಿತ್ರದುರ್ಗ: 5 ವರ್ಷಕ್ಕೂ ಮೇಲ್ಪಟ್ಟು ಲೆಕ್ಕಪತ್ರ ಗಳನ್ನು ಸಲ್ಲಿಸಿ ದಾಖಲಿಸದ ಸಂಘ ಸಂಸ್ಥೆಗಳು ದಂಡ ಪಾವತಿಸಿ ಲೆಕ್ಕಪತ್ರ ಸಲ್ಲಿಸಲು ಸರಕಾರ ಅವಕಾಶ ಕಲ್ಪಿಸಿದೆ. ಕರ್ನಾಟಕ ಸಂಘಗಳ ನೋಂದಣಿ ಅಧಿನಿ ಯಮ 1960 ರನ್ವಯ ನೊಂದಣಿಯಾದ ಸಂಘ-ಸಂಸ್ಥೆಗಳು ಕಲಂ-13 ರನ್ವಯ ಪ್ರತಿ ವರ್ಷ ಜಿಲ್ಲಾ ನೊಂದಣಾಧಿಕಾರಿಗಳ ಕಚೇರಿಗೆ ಲೆಕ್ಕಪತ್ರಗಳನ್ನು ಸಲ್ಲಿಸಿ ದಾಖಲಿಸಿಕೊಳ್ಳಬೇಕು. ಎಂದು ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೊಂದಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗಲಿದ ಜೀವ

ಪಾರ್ವತಮ್ಮ

ದಾವಣಗೆರೆ: ನಗರದ ರಾಜೀವ್ ಗಾಂಧಿ ಬಡಾವಣೆ ವಾಸಿ ಪಾರ್ವತಮ್ಮ(70) ಬುಧವಾರ ನಿಧನರಾ ದರು. ಇವರಿಗೆ ಪತ್ರಿಕಾ ವಿತರಕ ಈ. ಮಂಜುನಾಥ್ ಸೇರಿದಂತೆ ಒಂದು ಗಂಡು, ಒಂದು ಹೆಣ್ಣು ಮಕ್ಕಳು, ಇದ್ದಾರೆ. ಅಂತ್ಯಕ್ರಿಯೆವು ಪಿ.ಬಿ ರಸ್ತೆಯಲ್ಲಿರುವ ವೈಕುಂಠ ದಾಮದಲ್ಲಿ ಮಧ್ಯಾಹ್ನ ಗಂಟೆಗೆ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

{ಸತೀಶ್ ಜಾರಕಿಹೊಳಿ} ಸಚಿವ

ಅಧಿಕಾರ ಶಾಶ್ವತ ಅಲ್ಲ. ಯಾವತ್ತಿದ್ದರೂ ಅಧಿಕಾರ ಬಿಡಬೇಕು. 10 ವರ್ಷದ ನಂತರವಾದರೂ ಬಿಡಬೇಕು. ಅದನ್ನು ಯಾವಾಗ ಬಿಟ್ಟುಕೊಡಬೇಕು ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ. ಈ ಅವಧಿಯಲ್ಲಿ ದಲಿತ ಮುಖ್ಯಮಂತ್ರಿ ಬಗ್ಗೆ ಯಾವುದೇ ಚರ್ಚೆ ಇಲ್ಲ. ಮುಖ್ಯಮಂತ್ರಿ ಬಗ್ಗೆ ಎಲ್ಲ ಮುಗಿದಿದೆ. ಈಗ ಮತ್ತೆ ಶುರು ಮಾಡುವುದು ಬೇಡ.

ಶ್ರೀ ಜುಂಜಪ್ಪ ಸ್ವಾಮಿ ಜಾತ್ರಾ ಮಹೋತ್ಸವ

ಹೊಳಲ್ಕೆರೆ ತಾಲೂಕಿನ ದುಮ್ಮಿ ಗೊಲ್ಲರಹಟ್ಟಿಯಲ್ಲಿ ಡಿ.8 ರಿಂದ ಆರಂಭ

ಹೊಳಲ್ಕೆರೆ: ದುಮ್ಮಿ ಗೊಲ್ಲರಹಟ್ಟಿಯ ಕಾಡುಗೊಲ್ಲರ ಸಂಸ್ಕೃತಿ ಹಿನ್ನೆಲೆ ಪವಾಡ ದೇವರು ಗೊಲ್ಲರ ಅರಾಧ್ಯ ದೈವ ಶ್ರೀ ಜುಂಜಪ್ಪ ಸ್ವಾಮಿ ಜಾತ್ರಾ ಮಹೋತ್ಸವ ಡಿ 8 ರಿಂದ 10 ತನಕ ಅದ್ದೂರಿಯಾಗಿ ಜರುಗಲಿದ್ದು, ನಾಡಿನ ನಾನಾ ಭಾಗ ದಿಂದ ಲಕ್ಷಾಂತರ ಭಕ್ತರು ಜಾತ್ರೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಹಿನ್ನೆಲೆಯಲ್ಲಿ ದುಮ್ಮಿ ಗೊಲ್ಲರಹಟ್ಟಿ ದೇವಸ್ಥಾನದ ಸುತ್ತ ಭರದಿಂದ ಸಿದ್ಧತೆಗಳನ್ನು ದೇವಸ್ಥಾನ ಸಮಿತಿ ಕೈಗೊಂಡಿದೆ.

ಜಾತ್ರೋತ್ಸವಕ್ಕೆ ಭರದ ಸಿದ್ದತೆ: ದುಮ್ಮಿಗೊಲ್ಲರಹಟ್ಟಿಯಲ್ಲಿ ನಡೆವ ಜುಂಜಪ್ಪಸ್ವಾಮಿ ಜಾತ್ರೆ ಅಂಗವಾಗಿ ದೇವಸ್ಥಾನದ ಸುಣ್ಣ ಬಣ್ಣ, ಸುತ್ತಲು ವಿದ್ಯುತ್ ದ್ವೀಪಾಲಂಕರಗೊಳಿಸಿದೆ. ಭಕ್ತರ ದರ್ಶನಕ್ಕೆ ಸಾಲು ಕಂಬ ಸ್ಥಾಪನೆ, ಸ್ವಚ್ಛತೆ, ರಸ್ತೆ ವ್ಯವಸ್ಥೆ, ಕುಡಿಯುವ ನೀರು, ಪೋಲಿಸ್ ಪಹರೆ ಇನ್ನಿತರೆ ಮೂಲಭೂತ ಸೌಕರ್ಯ ಕಲ್ಪಿಸಲು ಭರದಿಂದ ಸಿದ್ದತೆ ಕೈಗೊಂಡಿದೆ.

ಜಾತ್ರೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳಬೇಕೆಂದು ಶ್ರೀ ತಿರುಮಲ ಜುಂಜಪ್ಪ ಸ್ವಾಮಿ ಟ್ರಸ್ಟಿನ ಅಧ್ಯಕ್ಷ ಜಿ.ಕುಬೇಂದ್ರಪ್ಪ, ಉಪಾಧ್ಯಕ್ಷ ಚಿತ್ತಪ್ಪಯಾದವ್, ಕಾರ್ಯದರ್ಶಿ ಎನ್.ರವಿ, ಖಜಾಂಚಿ ಅಂಗಡಿಸಿದ್ದಪ್ಪ, ನಾಗರಾಜಪ್ಪ, ಓಂಕಾರಪ್ಪ, ಗೋವಿಂದಪ್ಪ, ಸಿದ್ದಪ್ಪ, ರೇವಣಸಿದ್ದಪ್ಪ, ಏಕಾಂತಪ್ಪ, ತಿಮ್ಮಪ್ಪ, ನರಿಸಿಂಹಪ್ಪ ಮತ್ತಿತರ ಪದಾಧಿಕಾರಿಗಳು ಜಾತ್ರಾ ಮಹೋತ್ಸವಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲು ಶ್ರಮಿಸುತ್ತಿದ್ದು ಭಕ್ತರು ಸಹಕರಿಸಬೇಕೆಂದು ಸಾರ್ವಜನಿಕರಲ್ಲಿ ಕೋರಿದ್ದಾರೆ.

ಗೊಲ್ಲರ ಅರಾಧ್ಯ ದೈವ ಶ್ರೀ ಜುಂಜಪ್ಪಸ್ವಾಮಿ

> ಜುಂಜಪ್ಪ ಸ್ವಾಮಿ ದರ್ಶನ ಪಡೆದರೇ ಹಾವು, ಚೇಳು ಕಣ್ಣಿಗೆ ಬೀಳುವುದಿಲ್ಲ, ಮಂಗಳ ಕರ್ಯ,ಸಂತಾನ, ಅರ್ಥಿಕ ಸಂಪತ್ತು ಕೊಡುತ್ತಾನೆ ಎನ್ನುವ ನಂಬಿಕೆ ಇದೆ. ಹಾಗಾಗಿ ಜಾತ್ರೋತ್ಸವಕ್ಕೆ ಲಕ್ಷಾಂತರ ಭಕ್ತರು ಬರುತ್ತಾರೆ. ಸರಕಾರವು ಇಲ್ಲಿಗೆ ಆಗಮಿಸುವ ಭಕ್ತರಿಗೆ ಅನುಕೂಲ ಕಲ್ಪಿಸಲು ಕಲ್ಯಾಣ ಮಂಟಪ, ರಸ್ತೆ, ನೀರು, ಕೊಠಡಿ ಸೌಲಭ್ಯಗಳ ಜತೆ ಜುಂಜಪ್ಪನ ಮಹಾದ್ವಾರ ನಿರ್ಮಿಸಬೇಕು.
>
> -ಎ.ಚಿತ್ತಪ್ಪ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ, ಅಧ್ಯಕ್ಷ, ಕಾಡುಗೊಲ್ಲ ಸಂಘ

ರಾಷ್ಟ್ರ ಮಟ್ಟದ ತಾಂತ್ರಿಕ ಮಹೋತ್ಸವಕ್ಕೆ ಚಾಲನೆ

ದಾವಣಗೆರೆ: ಜಿಎಂ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಮಟ್ಟದ ತಾಂತ್ರಿಕ ಮಹೋತ್ಸವ ಗುರುವಾರ ಅದ್ದೂರಿಯಾಗಿ ವಿಶೇಷತೆಗಳೊಂದಿಗೆ ಶುಭಾರಂ ಭವಾಯಿತು.

ಹೊಸತನ್ನು ಹುಡುಕುವ ಸೃಜನಶೀಲ ಮನಸ್ಸುಗಳಿಗೆ ಅವಕಾಶ ಒದಗಿಸುವ ಸಜೀವ ವೇದಿಕೆಯಾಗಿರುವ ಈ ಭವ್ಯ ತಾಂತ್ರಿಕ ಉತ್ಸವವನ್ನು ಬಲೂನ್ ಹಾರಿ ಬಿಡುವ ಮೂಲಕ ಹ್ಯೂಮನಟಿಕ್ಸ್ ಸಂಸ್ಥೆಯ ಲೀಡ್ ಸಿಇಓ ಇಂಜಿನಿಯರ್‌ರೇಣುಕ ಪ್ರಸಾದ್ ಜಿ.ಎಂ ಉದ್ಘಾಟಿಸಿದರು.

ಜಿಎಂ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ಆರ್. ಶಂಕಪಾಲ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಉಪಕುಲಪತಿ ಡಾ. ಎಚ್.ಡಿ. ಮಹೇಶಪ್ಪ, ಕುಲಸಚಿವ ಡಾ. ಸುನೀಲ್ ಕುಮಾರ್ ಬಿ.ಎಸ್, ವಿದ್ಯಾರ್ಥಿಗಳ ವ್ಯವಹಾರಗಳ ನಿರ್ದೇಶನಾಲಯದ ನಿರ್ದೇಶಕ ಡಾ. ಹೆಚ್.ಎಸ್. ಕಿರಣ್ ಕುಮಾರ್,ಅಸಿಸ್ಟೆಂಟ್ ಡೈರೆಕ್ಟರ್‌ಇಮ್ರಾನ್ ಖಾನ್ ಉಪಸ್ಥಿತರಿದ್ದರು. ''ಆರಂಭ'' ಹೆಸರಿನ ರೋಬೋಟ್ ಕಾರ್ಯಕ್ರಮವನ್ನು ಪ್ರತಿಬಿಂಬಿಸಿತು. ಇಸಿಇ ವಿಭಾಗದ ವಿದ್ಯಾರ್ಥಿ ಸಮರ್ಥ ಗೌಡ ಮತ್ತು ತಂಡದ ರೋಬೋ ನೃತ್ಯ ಆಕರ್ಷಿಸಿತು. ಮಹೋತ್ಸವದಲ್ಲಿ 23 ಸ್ಪರ್ಧೆಗಳು, 3 ಲಕ್ಷ ರು.ಗಳ ವಿಸ್ತೃತ ಪ್ರಶಸ್ತಿ ನಿಧಿ ಮತ್ತು ದೇಶದಾದ್ಯಂತದಿಂದ ಬಂದ 2000ಕ್ಕೂ ಹೆಚ್ಚು ನೋಂದಣಿಗೊಂಡಿವೆ. ಮೂರು ದಿನಗಳ ಈ ಉತ್ಸವ ತಂತ್ರಜ್ಞಾನ, ಕ್ರಿಯೇಟಿವಿಟಿ ಮತ್ತು ಸ್ಪರ್ಧಾತ್ಮಕತೆಯ ಸಂಯೋಜನೆಯೊಂದಿಗೆ ಸಾಗಲಿದ್ದು, 24 ಗಂಟೆಗಳ ಕೋಡ್ ರಶ್ ಹ್ಯಾಕಥಾನ್ ಗೆ 300ಕ್ಕೂ ಹೆಚ್ಚು ಐಡಿಯಾಗಳು ಸಲ್ಲಿಕೆಯಾ ಗಿದ್ದವು. 80 ತಂಡಗಳು ಆಫ್ಲೈನ್ ಸುತ್ತಿಗೆ ಆಯ್ಕೆಯಾಗಿದವು.

ಜಿಎಂ ವಿಶ್ವವಿದ್ಯಾಲಯದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ತಾಂತ್ರಿಕ ಮಹೋತ್ಸವಕ್ಕೆ ಹ್ಯೂಮನಟಿಕ್ಸ್‌ಸಂಸ್ಥೆಯ ಲೀಡ್ ಸಿಇಓ ಎಂಜಿನಿಯರ್‌ರೇಣುಕ ಪ್ರಸಾದ್ ಜಿ.ಎಂ ಚಾಲನೆ ನೀಡಿದರು.

ಬೀದಿ ನಾಯಿಗಳಿಂದ ಸಾರ್ವಜನಿಕರ ರಕ್ಷಣೆ ಅಗತ್ಯ

ಹರಿಹರ: ಇತ್ತೀಚಿನ ದಿನಗಳಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗುತ್ತಿದ್ದು ಮಕ್ಕಳು ಮತ್ತು ಸಾರ್ವಜನಿಕರನ್ನು ರಕ್ಷಿಸುವ ಕಾರ್ಯ ನಡೆಯಬೇಕಾಗಿದೆ ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಡಾ.ಎನ್.ಮಹಾಂತೇಶ್ ತಿಳಿಸಿದರು.

ಪ್ರಾಣಿ ಸಂತಾನ ನಿಯಂತ್ರಣ ಕಾಯ್ದೆ ಅನ್ವಯ ನಗರದಲ್ಲಿ ಬೀದಿ ನಾಯಿಗಳ ಹಾವಳಿ ಸುಧಾರಿಸುವ ಸಂಬಂಧವಾಗಿ ನಿವೇಶನ ಪರಿಶೀಲನೆಗೆ ಆಗಮಿಸಿದ ವೇಳೆ ಸುದ್ದಿಗಾರರ ಜತೆ ಮಾತನಾಡಿ, ಸರ್ವೋಚ್ಚ ನ್ಯಾಯಾಲಯದ ಸೂಚನೆ ಮೇರೆಗೆ ಪ್ರತಿ ನಗರಗಳಲ್ಲಿ ಬೀದಿ ನಾಯಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ಹರಿಹರ ನಗರದಲ್ಲಿ ಬೀದಿ ನಾಯಿಗಳ ನಿಯಂತ್ರಣಕ್ಕಾಗಿ ಶೆಡ್ಡು ನಿರ್ಮಾಣಕ್ಕೆ ಸ್ಥಳ ಪರಿಶೀಲನೆಗೆ ಆಗಮಿಸಿದ್ದೇನೆ.ನಗರದಲ್ಲಿನ ಎಪಿಎಂಸಿ ಆವರಣದಲ್ಲಿರುವ ಗೋಡೌನ್ ಮತ್ತು ನಗರದ ಹೊರ ವಲಯದ ಘನ ತ್ಯಾಜ್ಯ ವಿಲೇವಾರಿ ಘಟಕದ ಬಳಿಯ ನಿವೇಶನಗಳನ್ನು ಪರಿಶೀಲನೆ ಮಾಡಿದ್ದೇವೆ ಮುಂದಿನ ಕ್ರಮಕ್ಕಾಗಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಲಿದ್ದೇವೆ ಎಂದರು.

ಮಕ್ಕಳಿಗೆ, ಸಾರ್ವಜನಿಕರಿಗೆ ಯಾರಿಗಾಗಲಿ ಬೀದಿ ನಾಯಿಗಳು ಅಕಸ್ಮಾತ್ ಕಚ್ಚಿದಾಗ ಕೂಡಲೇ ಪೋಷಕರ ಅಥವಾ ಶಿಕ್ಷಕರ ಗಮನಕ್ಕೆ ತಂದು ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವ ಕೆಲಸವನ್ನು ಸಾರ್ವಜನಿಕರಾದಿಯಾಗಿ ಎಲ್ಲರೂ ಮಾಡಬೇಕಾದ ಅನಿವಾರ್ಯತೆ ಪ್ರಸ್ತುತ ದಲ್ಲಿ ಇದೆ ಎಂದು ಹೇಳಿದರು.

ಪಶು ಸಂಗೋಪನ ಮತ್ತು ಪಶು ಪಾಲನಾ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಡಾ.ಎಚ್.ಎಂ.ಮಹೇಶ್, ಪೌರಾಯುಕ್ತ ಎಂ.ಪಿ.ನಾಗಣ್ಣ, ಜಿಲ್ಲಾ ನಗರಾಭಿವೃದ್ಧಿ ಕೋಶದ ಕಚೇರಿ ವ್ಯವಸ್ಥಾಪಕ ಬಿ.ಏಕನಾಥ್ ಉಪಸ್ಥಿತರಿದ್ದರು.

ಪ್ರಾಣಿ ಸಂತಾನ ನಿಯಂತ್ರಣ ಕಾಯ್ದೆ ಅನ್ವಯ ನಗರದಲ್ಲಿ ಬೀದಿ ನಾಯಿಗಳ ಹಾವಳಿ ಸುಧಾರಿಸುವ ಸಂಬಂಧವಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಡಾ.ಎನ್.ಮಹಾಂತೇಶ್ ನಿವೇಶನ ಪರಿಶೀಲಿಸಿದರು.

1.46 ಲಕ್ಷ ಮಕ್ಕಳಿಗೆ ಪೋಲಿಯೋ ಲಸಿಕೆ

ಡಿ.21ರಿಂದ 24ರ ವರೆಗೆ ಐದು ವರ್ಷದೊಳಗಿನ ಮಕ್ಕಳಿಗೆ ಲಸಿಕೆ: ಡಿಸಿ

ದಾವಣಗೆರೆ: ರಾಷ್ಟೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದಡಿ ಡಿ.21 ರಿಂದ 24 ರವರೆಗೆರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಂಡಿದ್ದು,. ಜಿಲ್ಲೆಯಲ್ಲಿ 5 ವರ್ಷದೊಳಗಿನ 1,46,126 ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಗುರಿ ಹೊಂದಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಗ್ರಾಮೀಣ ಮತ್ತು ನಗರ ಪ್ರದೇಶದ ಎಲ್ಲಾ ಮಕ್ಕಳಿಗೆ ಪೋಲಿಯೋ ಲಸಿಕಾ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಜಿಲ್ಲೆಯಲ್ಲಿನ 0-5 ವರ್ಷದೊಳಗಿನ ಯಾವುದೇ ಮಗು ಲಸಿಕೆಯಿಂದ ಹೊರಗುಳಿಯಬಾರದು. ವಿವಿಧ ರಾಜ್ಯಗಳಿಂದ ಉದ್ಯೋಗ ಹರಸಿ ಬಂದಂತಹ ಕಾರ್ಮಿಕ ಕುಟುಂಬ ಮಕ್ಕಳನ್ನೂ ಗುರುತಿಸಿ ಲಸಿಕೆ ಹಾಕಬೇಕು ಎಂದು ತಿಳಿಸಿದ ಅವರು, ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಯ ವಾಹನಗಳನ್ನು ನಿಗಧಿತ ಸಮ ಯಕ್ಕೆ ನಿಯೋಜಿಸಬೇಕು. ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಾಹನಗಳ ಪೂರೈಸಬೇಕು. ಬೆಸ್ಕಾಂ ಇಲಾಖೆ ನಿರಂತರ ವಿದ್ಯುತ್ ಪೂರೈಕೆಗೆ ಕ್ರಮವಹಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ನಾಗೇಂದ್ರಪ್ಪ, ಪೌರಾಯುಕ್ತೆ ರೇಣುಕಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಷಣ್ಮುಖಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಜನಾಯ್ಕ, ಆರ್‌ಎಚ್ ಅಧಿಕಾರಿ ಡಾ. ರೇಣುಕಾರಾಧ್ಯ ಇದ್ದರು.

ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಪೂರ್ವ ಸಿದ್ದತಾ ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮಾತನಾಡಿದರು.

> ಜಿಲ್ಲೆಯಲ್ಲಿನ ಯಾವುದೇ ಒಬ್ಬ ಮಗು ಸಹ ಲಸಿಕೆಯಿಂದ ಹೊರಗುಳಿಯಬಾರದು. ವಿಶೇಷವಾಗಿ ಗ್ರಾಮೀಣ ಮತ್ತು ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಕ್ಕಳನ್ನು ಗಮನ ಹರಿಸಿ ಅವರಿಗೂ ಕೂಡ ಲಸಿಕೆ ನೀಡಬೇಕು. ಅದರಲ್ಲೂ ಚನ್ನಗಿರಿ ವಲಯದಲ್ಲಿ ಹೆಚ್ಚಾಗಿ ಅರಣ್ಯ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅಡಿಕೆ ಕೆಲಸಕ್ಕೆ ತೆರಳುವ ಕಾರ್ಮಿಕರು ತಮ್ಮ ಮಕ್ಕಳನ್ನು ಕೆಲಸದ ಸ್ಥಳಗಳಲ್ಲಿ ಕಾಣ ಸಿಗುತ್ತಾರೆ. ಅವರನ್ನು ಗುರುತಿಸಿ ಪ್ರತಿಯೊಂದು ಮಗುವಿಗೂ ಲಸಿಕೆ ನೀಡಬೇಕು.
>
> -ಗಿತ್ತೆ ಮಾಧವ ವಿಠಲ ರಾವ್, ಜಿ.ಪಂ, ಸಿಇಓ

ದೇವತಾ ಮೂರ್ತಿಗಳಿಗೆ ರುದ್ರಾಭಿಷೇಕ, ಕಾರ್ತಿಕೋತ್ಸವ

ಹರಿಹರ: ನಗರದ ಶ್ರೀ ರೇಣುಕಾ ಮಂದಿ ರದಲ್ಲಿ ವಿವಿಧ ದೇವತಾ ಮೂರ್ತಿ ಗಳಿಗೆ ರುದ್ರಾಭಿಷೇಕ ಹಾಗೂ ಕಾರ್ತಿಕೋತ್ಸವ ಸಂಜೆ ನೆರವೇರಿ ಸಲಾಯಿತು.ಬೆಳಗ್ಗೆ ಶ್ರೀ ಜಗದ್ಗುರು ರೇಣು ಕಾಚಾರ್ಯ,ಶ್ರೀ ಬಸವೇಶ್ವರ ಮತ್ತು ಶ್ರೀ ವೀರಭದ್ರೇಶ್ವರ ಹಾಗೂ ಸೋಮೇಶ್ವರ ಲಿಂಗೇಶ್ವರ ಪೂಜಾ ಮೂರ್ತಿ ಗಳಿಗೆ ರುದ್ರಾ ಭಿಷೇಕ ಹಾಗೂ ಕಾರ್ತಿಕ ಮಾಸದ ವಿಶೇಷ ಪೂಜೆಯನ್ನು ಸಲ್ಲಿಸಲಾ ಯಿತು ಸಂಜೆ ವಿಶೇಷ ಪೂಜೆ ನಂತರ ಮಹಾ ಮಂಗಳಾರತಿ ಹತ್ತಿ ಬೀಜದ ದೀಪಗಳನ್ನು ಹಚ್ಚುವ ಮೂಲಕ ಸಡಗರ ಸಂಭ್ರಮದಿಂದ ಕಾರ್ತಿಕೋತ್ಸವ ನೆರವೇರಿಸಿ ಪ್ರಸಾದ ವಿತ ರಣೆ ಮಾಡಲಾಯಿತು. ಇದೆ ವೇಳೆ ಆಗಮಿ ಸಿದ್ದ ಭಕ್ತರ ಸಮ್ಮು ಖದಲ್ಲಿ ರಂಭಾಪುರಿ ಪೀಠದ, 2026 ಸಾಲಿನ ಹೊಸ ವರ್ಷದ ಕ್ಯಾಲೆಂಡರ್‌ಬಿಡುಗಡೆ ಮಾಡಲಾಯಿತು. ಪೂಜಾ ಕಾರ್ಯ ಕ್ರಮ ವನ್ನು ಅರ್ಚಕರಾದ ರೇವಣಸಿದ್ದಯ್ಯ ನೆರ ವೇರಿಸಿದರು. ಈ ವೇಳೆ ದೇವಸ್ಥಾನ ಸಮಿ ತಿಯ ಉಪಾ ಧ್ಯಕ್ಷರಾದ ಗಜಾಪುರ ವೀರ ಯ್ಯ, ಕಾರ್ಯ ದರ್ಶಿ ಕೊಂಡಜ್ಜಿ ಪಂಚಾಕ್ಷರಿ , ವಜ್ರೇಶ್ ಕೆ.ಕೆ, ಮೋಹನ್ ಹಂಸ ಬಾವಿ.ಚಂದ್ರ ಶೇಖ ರಪ್ಪ, ಟಿ.ಜೆ ಮುರುಗೇಶಪ್ಪ, ಶೇಖರಗೌಡ ಪಾಟೀಲ್, ರಾಚಪ್ಪ, ಶಿವ ಯೋಗಿ ಸ್ವಾಮಿ, ಜಗದೀಶ್, ಲಿಂಗ ರಾಜ ಸ್ವಾಮಿ, ಕಂಚಿಕೇರಿ ಶಿವಕು ಮಾರ್,ಸೇರಿದಂತೆ ಇತರರಿದ್ದರು.

ನಗರದಲ್ಲಿ ನೋಂದಣಿ ಆಟೋಗಳು ಸಂಚರಿಸಲಿ

ಚಳ್ಳಕೆರೆ: ನಗರದಲ್ಲಿ ಸಾರ್ವಜನಿಕರ ಹಾಗೂ ಮಹಿಳೆಯರು ಇತದೃಷ್ಟಿಯಿಂದ ಸಂಚಾರಿ ಆಟೋಗಳಿಗೆ ಚಳ್ಳಕೆರೆ ನಗರ ಪೋಲೀಸ್ ಠಾಣೆಯಿಂದ ನೋಂದಾಯಿತ ಸಂಖ್ಯೆಯ ಆಟೋಗಳು ಸಂಚರಿಸಬೇಕು ಎಂದು ಪಿಎಸ್‌ಐ ಈರೇಶ್ ಹೇಳಿದರು.ಅವರು ನಗರದ ಪೊಲೀಸ್ ಠಾಣೆ ಮುಂಬಾಗ ನಗರದ ಸಂಚಾರಿ ಆಟೋಗಳಿಗೆ ಪೊಲೀಸ್ ಠಾಣೆಯಿಂದ ನೀಡಿದ ಕ್ರಮ ಸಂಖ್ಯೆಯಲ್ಲಿ ಆಟೋಗಳ ಚಲನವಲನಗಳನ್ನು ಪತ್ತೆಹಚ್ಚಲು ಸಹಕಾರಿಯಾಗುತ್ತದೆ, ಇನ್ನೂ ಎಲ್ಲಾ ನೋಂದಾಯಿತ ಆಟೋಗಳ ಸರಿಯಾದ ದಾಖಲೆಗಳು ಪತ್ತೆಹಚ್ಚಲು ಅನುಕೂಲವಾಗುತ್ತದೆ ಎಂದರು.

ಹಿರಿಯೂರು : ಬೆಳೆ ವಿಮೆ ನೋಂದಣಿ ಪ್ರಾರಂಭ

ಚಿತ್ರದುರ್ಗ: ಹಿರಿಯೂರು ತಾಲೂಕಿನಲ್ಲಿ 2025-26ನೇ ಸಾಲಿನ ಹಿಂಗಾರು ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯನ್ನು ಜಾರಿಗೊಳಿಸಿ ಅಧಿಸೂಚಿಸಲಾಗಿದ್ದು, ಬೆಳೆ ವಿಮೆ ನೋಂದಣಿ ಪ್ರಾರಂಭವಾಗಿದೆ.

ಭತ್ತ (ನೀರಾವರಿ), ಕಡಲೆ (ಮಳೆ ಆಶ್ರಿತ), ಗೋಧಿ (ನೀರಾವರಿ), ಮುಸುಕಿನಜೋಳ (ಮಳೆ ಆಶ್ರಿತ), ಮುಸುಕಿನಜೋಳ (ನೀರಾವರಿ) ಬೆಳೆಗಳಿಗೆ ವಿಮಾ ನೊಂದಣಿಗೆ 2025ರ ಡಿಸೆಂಬರ್15 ಕೊನೆಯ ದಿನವಾಗಿದೆ. ತಮ್ಮ ಹೋಬಳಿ ಮಟ್ಟದ ಬೆಳೆಯ ವಿವರವನ್ನು ಸಂಬಂಧಪಟ್ಟ ಕೃಷಿ ಅಧಿಕಾರಿಗಳು, ರೈತ ಸಂಪರ್ಕ ಕೇಂದ್ರ ಅಥವಾ ತಾಲೂಕು ಸಹಾಯಕ ಕೃಷಿ ನಿರ್ದೇಶಕರನ್ನು ಸಂಪರ್ಕಿಸಬಹುದಾಗಿದೆ.

ಬ್ಯಾಂಕಿನಲ್ಲಿ ಬೆಳೆಸಾಲ ಮಂಜೂರಾದ ಎಲ್ಲಾ ರೈತರನ್ನು ಕಡ್ಡಾಯವಾಗಿ ಈ ಯೋಜನೆಯಡಿಯಲ್ಲಿ ಒಳಪಡಿಸಲಾಗುವುದು. ತದನಂತರ ಬೆಳೆಸಾಲ ಪಡೆದ ರೈತರು ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸದಿದ್ದಲ್ಲಿ, ಈ ಕುರಿತು ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕಿಂತ 7 ದಿನಗಳು ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದ್ದಲ್ಲಿ ಅಂತಹ ರೈತರನ್ನು ಬೆಳೆವಿಮೆ ಯೋಜನೆಯಿಂದ ಕೈ ಬಿಡಲಾಗುವುದು. ಆಸಕ್ತ ರೈತರು ನಿಗದಿತ ದಿನಾಂಕದೊಳಗೆ ಬೆಳೆ ವಿಮೆಗೆ ನೊಂದಣಿ ಮಾಡಲು ಕೋರಿದೆ. ಅಂತಿಮ ಸಮಯದಲ್ಲಿ ಜನದಟ್ಟಣೆಯಿಂದಾಗಿ ನೊಂದಣಿಯಲ್ಲಿ ತಪ್ಪುಗಳು ಆಗುವ ಸಂಭವವಿರುತ್ತದೆ. ಆದ್ದರಿಂದ ಸಕಾಲದಲ್ಲಿ ನೋಂದಣಿ ಮಾಡಿಕೊಳ್ಳುವಂತೆ ಹಿರಿಯೂರು ಸಹಾಯಕ ಕೃಷಿ ನಿರ್ದೇಶಕ ಜೆ.ಅಶೋಕ್ ಮನವಿ ಮಾಡಿದ್ದಾರೆ.

ಹಾಡು ಹೇಳುವ ಹಂಡಿ ಜೋಗಿಗಳು ಕಣ್ಮರೆ

ಹೊಸ ಜೀವನ ಪದ್ಧತಿಗೆ ಮುಖ ಮಾಡಿದ ಜೋಗಿಗಳು | ಹಳ್ಳಿಗಳ ಕಡೆ ಮುಖ ಮಾಡದ ಜೋಗಿಗಳು

ರವಿಚಂದ್ರ, ನೇರ್ಲಹಳ್ಳಿ ಚಿತ್ರದುರ್ಗ: ಅನಾದಿ ಕಾಲದಿಂದ ತಮ್ಮ ಪೂರ್ವಿಕರ ತಲೆ ತಲಾಂತರದ ತಲೆಮಾರಿನಿಂದ ಬಂದ ಜಾನಪದೀಯ, ಧಾರ್ಮಿಕ ವೃತ್ತಿ ಕಲಾ ಪ್ರಕಾರಗಳು ಬದಲಾದ, ಹೊಸತನದ ಈ ಕಾಲಮಾನದಲ್ಲಿ ನಶಿಸುವ ಅಂಚಿನಲ್ಲಿವೆ.

ಜಿಲ್ಲೆಯ ಹಂಡಿ ಜೋಗಿಗಳ ಕುಟುಂಬಗಳು ಹೆಚ್ಚು ಮನೆಗಳು ಇದ್ದು ಅನಾದಿ ಕಾಲದಿಂದ ಜೋಗಪ್ಪನವರು ಹಳ್ಳಿಗಳಲ್ಲಿ ಕಲೆ ವೃತ್ತಿ ಪ್ರದರ್ಶಿಸುತ್ತಿದ್ದರು ಆದರೆ ಇತ್ತೀಚಿನ ದಿನಗಳಲ್ಲಿ ಇಲ್ಲಿನ ಜೋಗಪ್ಪನವರು ಹಳ್ಳಿಗಳ ಕಡೆ ಮುಖ ಮಾಡುತ್ತಿಲ್ಲ ನೂರಕ್ಕೂ ಹೆಚ್ಚು ಮಂದಿಗಳು ಈ ಆಚರಣೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆದರೆ ಇದೀಗ 5 ರಿಂದ 10 ಮಂದಿ ಕಾಣಸಿಗುತ್ತಾರೆ. ಕಲಾ ಪ್ರೋತ್ಸಾಹಕರ ಕೊರತೆ, ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಶರವೇಗದಲ್ಲಿ ಕಂಡ ಬೆಳವಣಿಗೆಗಳು ಜನಪದೀಯ ಬಹು ಪ್ರಭೇಧಗಳ ಕಲೆಗಳ ಅವನತಿಗೆ ಕಾರಣ ಎಂಬುದು ಇಲ್ಲಿನ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ.

ತಲೆಗೆ ರುಮಾಲು ಸುತ್ತಿ, ಬಣ್ಣದ ನಿಲುವಂಗಿ ತೊಟ್ಟು, ಕೊರಳಿಗೆ ಮಣಿ ಸರ ಧರಿಸಿ, ಹಣೆಗೆ ವಿಭೂತಿ-ಹೆಗಲಿಗೊಂದು ಜೋಳಿಗೆ, ಕೈಯಲ್ಲಿ ಕೋಲು ಕಿನ್ನರಿ ಹಿಡಿದು ಹಾಡುಗಳನ್ನ ಹಾಡುತ್ತ ಮನೆಗೆ ಭೇಟಿಕೊಡುವ ಕಿನ್ನರಿ ಜೋಗಿ ಬಗ್ಗೆ ಎಲ್ಲರಿಗೂ ತಿಳಿದಿದೆ. ಈ ಭಾಗದ ಹಂಡಿ ಜೋಗಿಗಳು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕು ಶ್ರೀ ಗುರು ಗೋರಕ್ಷನಾಥ ಮಠ ಗುರುಗಳಿಂದ ದೀಕ್ಷ ಪಡೆಯುತ್ತಾರೆ.

ಇಲ್ಲಿ ದೀಕ್ಷೆ ಪಡೆದ ನಂತರ ಹಳ್ಳಿಗೆ ಪ್ರವೇಶಿಸುತ್ತಾರೆ ದೀಕ್ಷ ಪಡೆಯದೆ ಹಳ್ಳಿಗಳಿಗೆ ಪ್ರವೇಶಸುವುದಿಲ್ಲ. ಇವರ ಈ ಆಚರಣೆಯ ಹಿಂದೆ ಒಂದಷ್ಟು ವಿಶೇಷತೆ ಇದ್ದು, ಮುಂಗಾರು ಬೆಳೆ ಕಟಾವು ಮುಗಿದು, ಧವಸ ಧಾನ್ಯಗಳು ಮನೆಯ ದಾಸ್ತನು ಗ್ರಹ ಸೇರಿದ ತರುವಾಯ ರೈತಾಪಿ ವರ್ಗದವರು ಸ್ವಲ್ಪ ಮಟ್ಟಿಗೆ ವಿಶ್ರಾಂತರಾಗಿರುತ್ತಾರೆ.

ಆ ಸಂದರ್ಭದಲ್ಲಿಯೇ ಮನೆ ಮನೆಗೆ ಕಿನ್ನರಿ ಜೋಗಿಗಳು ವೃತ್ತಿ ಕಲೆಯನ್ನು ಮನೆ ಅಂಗಳದಲ್ಲಿ ಪ್ರದರ್ಶನ ಮಾಡುತ್ತಾರೆ. ಆಗಿನ ಕಾಲದಲ್ಲಿ ಜೋಗಿಗಳ ಹೆಗಲ ಜೋಳಿಗೆಗೆ ಧಾನ್ಯಗಳ ಹಾಕಿ, ಮನೆ ಹೊರ ಜಗುಲಿಯ ಮೇಲೆ ಕುಳ್ಳಿರಿಸಿ ತಾಂಬೂಲ ಗೌರವ ಆಥಿತ್ಯಗಳ ನೀಡಿ ಮುಂದಿನ ಮನೆಗೆ ಬಿಳ್ಕೋಡುತ್ತಿದ್ದರು.

ಜೋಗಿಗಳ ಆಗಮನವೆ ಮನೆ ಮಂದಿಗೆ ಹಬ್ಬವಾಗಿತ್ತು. ಈಗ ಹಂಡಿ ಜೋಗಿ ಸಮಾಜ ಅಲೆಮಾರಿ ಬದುಕಿಗೆ ಹಾಗೂ ಕಲಾವೃತ್ತಿಗೆ ತಿಲಾಂಜಲಿ ಇಟ್ಟು, ಒಂದೆಡೆ ನೆಲೆಯೂರಿ ಕೃಷಿಯತ್ತ ಮುಖ ಮಾಡಿ, ಹೊಸ ಜೀವನ ಪದ್ಧತಿ ಪ್ರಾರಂಭಿಸಿದೆ.



ಮಹಾಭಾರತದ ಸನ್ನಿವೇಶಗಳ ವರ್ಣನೆ

ಪಾಂಡವರ ವಂಶಸ್ಥರು ಎಂದು ಕರೆದು ಕೊಳ್ಳುವ ಇವರು ಮಹಾಭಾರತದ ವನವಾಸ, ಜೂಜಾಟ, ವಸ್ತ್ರಾಪಹರಣ ಸನ್ನಿವೇಶಗಳನ್ನು ಹಾಡಿನ ರೂಪದಲ್ಲಿ ಕಟ್ಟಿಕೊಡುತ್ತಾರೆ. ಇವರಲ್ಲಿ ಕೆಲವರು ಮಹಾಭಾರತದ ಹತ್ತು- ಹದಿಮೂರು ಪರ್ವ ಗಳನ್ನು ಬಾಯಿಪಾಠ ಮಾಡಿ ಹಾಡುವ ಗಟ್ಟಿಗರಿದ್ದಾರೆ.

> ನಾನು ಸುಮಾರು ವರ್ಷದಿಂದ ಈ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದೇನೆ. ವರ್ಷದಲ್ಲಿ ಒಂದು ಬಾರಿ ನಾವು ಇದನ್ನು ಕಡ್ಡಾಯವಾಗಿ ಆಚರಣೆ ಮಾಡಬೇಕು. ಹಿಂದೆ ನಮ್ಮೂರಿನಲ್ಲಿ ಹೆಚ್ಚು ಮಂದಿ ಈ ಆಚರಣೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆದರೆ ಇದೀಗ 5 ರಿಂದ 10 ಮಂದಿ ಕಾಣಸಿಗುತ್ತಾರೆ. ಈಗಿನ ಯುವಕರು ಕಲೆಯನ್ನು ಮುಂದುವರಿಸುವುದಕ್ಕೆ ಸಂಕೋಚ ಪಡುತ್ತಿದ್ದಾರೆ. ಹಾಡು ಹೇಳಿ ಮನೆಯವರು ಕೊಟ್ಟ ಹಣವನ್ನು ಸ್ವೀಕರಿಸಿ ಒಳ್ಳೆದಾಗಲಿ ಎಂದು ಹರಸಿ ಕುಲದೇವರಿಗೆ ಕಾಣಿಕೆ ಸಲ್ಲಿಸುತ್ತೇವೆ.
>
> -ಕೃಷ್ಣಪ್ಪ, ಹಂಡಿ ಜೋಗಿ ದೇವರಹಳ್ಳಿ

ಸಮಾಚಾರ ಸಣ್ಣದಲ್ಲ

ಆಟೋ ಚಾಲಕ ರಾಘವೇಂದ್ರ ಆತ್ಮಹತ್ಯೆ

ಹೊಸನಗರ: ಹೊಸನಗರದಮಾವಿನಕೊಪ್ಪ ನಿವಾಸಿ ರಾಘವೇಂದ್ರ (41) ಮಾವಿನಕೊಪ್ಪದ ಸಾಗರ ರಸ್ತೆಯ ಕೊನೆಯಲ್ಲಿಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರು ಆಟೋ ಮಾಲೀಕರು ಚಾಲಕರಾಗಿ ಓಮಿನಿ ಮಾಲೀಕ ಚಾಲಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಈತನಿಗೆ ಪತ್ನಿ, ಒಬ್ಬ ಪುತ್ರಿ ಇದ್ದಾರೆ. ಹೊಸನಗರದ ಸರ್ಕಲ್ ಇನ್ ಸ್ಪೆಕ್ಟರ್‌ಗೌಡಪ್ಪಗೌಡರ್ ಮಾರ್ಗದರ್ಶ ನದಲ್ಲಿ ಸಬ್ ಇನ್‌ಸ್ಪೆಕ್ಟರ್ ಶಂಕರಗೌಡ ಪಾಟೀಲ್ ಆತ್ಮಹತ್ಯೆಗೆ ನಿಖರ ಕಾರಣದ ತನಿಖೆ ಕಾರ್ಯ ಕೈಗೊಂಡಿದ್ದಾರೆ.

ಹುಣ್ಣಿಮೆ: ದೇವಿ ದರ್ಶನಕ್ಕೆ ಭಕ್ತರ ದಂಡು

ಚಂದ್ರಗುತ್ತಿ: ಮಲೆನಾಡಿನ ಹಾಗೂ ಬಯಲುಸೀಮೆ ಭಕ್ತರ ಶಕ್ತಿ ದೇವತೆ ಪುರಾಣ ಪ್ರಸಿದ್ಧ ಚಂದ್ರಗುತ್ತಿ ಶ್ರೀ ರೇಣುಕಾಂಬ ದೇವಸ್ಥಾನಕ್ಕೆ ಹೊಸ್ತಿಲು ಹುಣ್ಣಿಮೆ ನಿಮಿತ್ತ ಗುರುವಾರ ಭಕ್ತಾದಿಗಳು ಆಗಮಿಸಿ ಶ್ರೀ ದೇವಿಯ ದರ್ಶನ ಪಡೆದುಉಧೋ.ಉಧೋಎಂದು ಭಕ್ತಿ ಸಮರ್ಪಿಸಿದರು. ತಾಲ್ಲೂಕು ಸೇರಿದಂತೆ ಬ್ಯಾಡಗಿ, ರಾಣೆಬೆನ್ನೂರು, ಹರಿಹರ, ಶಿಕಾರಿಪುರ, ಹಾನಗಲ್, ವಿಜಯಪುರ , ಚಿತ್ರದುರ್ಗ,ಶಿವಮೊಗ್ಗ, ಬೆಳಗಾವಿ, ಹಾವೇರಿ ಸೇರಿದಂತೆಉತ್ತರಕರ್ನಾಟಕ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು. ಭಕ್ತರು ಶ್ರೀ ರೇಣುಕಾದೇವಿಯದರ್ಶನ ಪಡೆದು. ದೇವಿಯ ಹೆಸರಿನಲ್ಲಿ ವಿವಿಧಧಾರ್ಮಿಕ ಆಚರಣೆಗಳನ್ನು ನಡೆಸಿದರು. ಹುಣ್ಣಿಮೆ ಅಂಗವಾಗಿ ದೇವಸ್ಥಾನದ ಆವರಣದಲ್ಲಿರುವ ಪರಿವಾರ ದೇವರುಗಳಾದ ಕಾಲಭೈರವ, ನಾಗದೇವತೆ, ಮಾತಂಗಿ, ಪರಶುರಾಮ, ತ್ರಿಶೂಲದ ಬೈರಪ್ಪ ದೇವರುಗಳಿಗೆ ಮತ್ತುತೊಟ್ಟಿಲು ಬಾವಿಗೆ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು. ಇನ್ನು ಕೆಲ ಭಕ್ತರು ಖಾದ್ಯಗಳನ್ನು ತಯಾರಿಸಿಕೊಂಡು ಬಂದು ನೈವೇದ್ಯ ಅರ್ಪಿಸಿ ಬಂಧು ಬಳಗದವರ ಜೊತೆ ಸಹ ಭೋಜನ ಮಾಡಿದರು. ಗ್ರಾಮದಲ್ಲಿ ಶ್ರೀ ರೇಣುಕಾಂಬ ದೇವಿ ಪಲ್ಲಕ್ಕಿ ಉತ್ಸವ ಜರುಗಿತು. ದೇವಸ್ಥಾನದ ಸಿಇಒ ಕಾರಿ ಪ್ರಮೀಳಾ ಕುಮಾರಿ ಪೂಜಾ ಕೈಂಕರ್ಯಗಳ ಸಮ್ಮುಖ ವಹಿಸಿದ್ದರು.

ನುಷ್ಠಾನಕ್ಕೆ ಎಲ್ಲರ ಸಹಭಾಗಿತ್ವ ಮುಖ್ಯ

ಸೊರಬ: ಸರಕಾರವು ಗ್ಯಾರಂಟಿ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಲು ಜಾಗೃತಿ ಅಭಿಯಾನಗಳನ್ನು ನಡೆಸುತ್ತಿದೆ ಮತ್ತು ತಾಲೂಕು ಮಟ್ಟದ ಸಮನ್ವಯ ಸಮಿತಿಗಳನ್ನು ರಚಿಸಿದೆ. ಈ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರ ಸಹಭಾಗಿತ್ವ ಮುಖ್ಯ ಎಂದು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಜಯಶೀಲ ಗೌಡ ಅಂಕರವಳ್ಳಿ ಹೇಳಿದರು. ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಕರೆಯಲಾಗಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆ ಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸರ್ಕಾರ ಬಡವರ ದೀನ ದಲಿತರ ಹಿಂದುಳಿದವರ ಶ್ರೇಯೋಭಿವೃದ್ಧಿಗಾಗಿ ಅವರ ಆರ್ಥಿಕ ಕಲ್ಯಾಣಕ್ಕಾಗಿ ವಿವಿಧ ಜನಪರವಾದ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ ಗೃಹ ಲಕ್ಷ್ಮಿ, ಯುವ ನಿಧಿ, ಶಕ್ತಿಯೋಜನೆ, ಅನ್ನಭಾಗ್ಯ, ಗೃಹ ಜ್ಯೋತಿ ಯೋಜನೆಗೆ ತಿಂಗಳ ಒಟ್ಟು ವೆಚ್ಚವಾಗಿ 15.60.72.987 ರು. ವೆಚ್ಚ ಮಾಡಲಾಗಿದೆ, ಈ ಎಲ್ಲಾ ಯೋಜನೆಗಳಿಗೆ ಇಲ್ಲಿಯವರೆಗೆ 3.24.78.63.997 ರು. ವೆಚ್ಚ ಮಾಡಲಾಗಿದೆ. ಗ್ಯಾರಂಟಿ ಯೋಜನೆಗಳು ಸದುಪಯೋಗವಾಗಬೇಕಾದರೆ ಅವುಗಳನ್ನು ಪ್ರಾಮಾಣಿಕವಾಗಿ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಮಾಡಬೇಕು ಎಂದರು. ಈ ಸಂದರ್ಭದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಕೆ.ಜಿ ಶಶಿಧರ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಪ್ರವೀಣ್ ಶಾಂತಗೇರಿ,ಆರ್.ಟಿ.ಮಂಜುನಾಥ್, ಸಂತೋಷ್ ಕೋರಕೋಡು,ಮುಕ್ತಿಯಾರ್‌ಭಾಷಾ ಇದ್ದರು.

ಭಜರಂಗ ದಳದಿಂದ ಮಾಲಾ ಅಭಿಯಾನ

ಸೊರಬ: ದತ್ತ ಭಕ್ತರು ದತ್ತ ಮಾಲೆ ಧರಿಸುವ ಮೂಲಕ ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗ ದಳ ವತಿಯಿಂದ ಹಮ್ಮಿಕೊಂಡಿರುವ ದತ್ತ ಜಯಂತಿ ಕಾರ್ಯಕ್ರಮ ನಿಮಿತ್ತ ದತ್ತ ಪಾದುಕೆಗಳ ದರ್ಶನಕ್ಕೆ ಗುರುವಾರ ದತ್ತ ಪೀಠಕ್ಕೆ ತೆರಳಿದರು. ದತ್ತ ಮಾಲಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಸಮಾಜ ಸೇವಕ ಹಾಗೂ ಜಿಜೆಪಿ ಯುವ ಮುಖಂಡ ಡಾ. ಎಚ್.ಇ. ಜ್ಞಾನೇಶ್ ಮಾತನಾಡಿ, ಕರ್ನಾಟಕದ ಅಯೋಧ್ಯೆ ಎಂದೇ ಕರೆಸಿಕೊಳ್ಳುವ ದತ್ತಪೀಠ ಹಿಂದೂಗಳಿಗೆ ಸಲ್ಲಬೇಕು. ಕಳೆದ ಐದು ದಶಕಗಳಿಂದ ನಿರಂತರ ಹೋರಾಟ ನಡೆಯುತ್ತಿದೆ. ದತ್ತಪೀಠಕ್ಕೆ ಪೌರಾಣಿಕ ಇತಿಹಾಸ ಹಾಗೂ ದಾಖಲೆಗಳ ಆಧಾರವಿದೆ. ಇಷ್ಟಿದ್ದರೂ ಹೋರಾಟ ಮಾಡಿ ತೆಗೆದುಕೊಳ್ಳುವ ಪರಿಸ್ಥಿತಿ ಬಂದಿರುವುದು ದುರ್ದೈವದ ಸಂಗತಿ ಎಂದರು.

{ ಎನ್. ಚೆಲುವರಾಯಸ್ವಾಮಿ } ಕೃಷಿ ಸಚಿವ

ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದ ವಿರೋಧ ಪಕ್ಷಗಳ ಮುಖಂಡರು ನಮ್ಮದೇ ಯೋಜನೆಗಳನ್ನು ರಾಷ್ಟ್ರಮಟ್ಟದಲ್ಲಿ ಘೋಷಣೆ ಮಾಡಿವೆ ಯಾರೂ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಂಡ ಹಾಗೆ ಬೇರೆ ರಾಜ್ಯಗಳಲ್ಲಿ ಆಗಿಲ್ಲ. ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲೂ ನಮ್ಮ ಪಕ್ಷ ಪಂಚ ಗ್ಯಾರಂಟಿ ಯಳನ್ನು ಮತ್ತೆ ಚಾಲ್ತಿಗೊಳಿಸಲಿದೆ.

ಸಂಸದ ಬಿ.ವೈ.ರಾಘವೇಂದ್ರ ಸಂಸತ್ತಿನ ಕಲಾಪದಲ್ಲಿ ಪ್ರಸ್ತಾಪ| ಸರಕಾರಕ್ಕೆ ಮನವಿ

ಅಡಕೆಗೆ ವಿಶೇಷ ಪ್ಯಾಕೇಜ್ ಘೋಷಿಸಿ

ಶಿವಮೊಗ್ಗ: ತೀವ್ರ ಬೆಳೆ ನಷ್ಟದಿಂದ ಬಳಲುತ್ತಿರುವ ಕರ್ನಾಟಕದ ಅಡಕೆ ಬೆಳೆಗಾರರಿಗೆ, ಅದರಲ್ಲೂ ವಿಶೇಷವಾಗಿ, ಮಲೆನಾಡು ಪ್ರದೇಶದ ಅಡಕೆ ಬೆಳೆಗಾರರ ನೆರವಿಗಾಗಿ ಕೇಂದ್ರ ಸರಕಾರ ತುರ್ತಾಗಿ ಮಧ್ಯ ಪ್ರವೇಶಿಸಬೇಕು ಎಂದು ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಲೋಕಸಭೆಯಲ್ಲಿ ಒತ್ತಾಯಿಸಿದರು.

ಲೋಕಸಭಾ ಕಲಾಪದಲ್ಲಿಇಂದು ಶೂನ್ಯ ವೇಳೆ ಪ್ರಸ್ತಾವದ ಮೂಲಕ ವಿಷಯ ಪ್ರಸ್ತಾಪಿಸಿದ ಸಂಸದ ರಾಘವೇಂದ್ರ, ವಿಶೇಷವಾಗಿ ಕರ್ನಾಟಕದ, ಅದರಲ್ಲೂ ಮಲೆನಾಡು ಪ್ರದೇಶದ ಬೆಳೆಗಾರರು, ಹಳದಿ ಎಲೆ ರೋಗ ಮತ್ತು ಎಲೆ ಚುಕ್ಕೆ ರೋಗ ಹರಡುವಿಕೆಯಿಂದ ಭಾರಿ ಇಳುವರಿ ನಷ್ಟವನ್ನು ಎದುರಿಸುತ್ತಿದ್ದಾರೆ, ಈ ರೋಗಗಳು ಇಡೀ ತೋಟವನ್ನೇ ನಾಶಮಾಡುತ್ತಿವೆ.

ಈ ವರ್ಷದ ಮೇ ತಿಂಗಳಿನಿಂದ ನಿರಂತರ ಮಳೆಯಿಂದಾಗಿ ಹೆಚ್ಚಿರುವ ಈ ರೋಗದ ಪರಿಣಾಮದಿಂದಾಗಿ, ಬೆಳೆ ಬಹುತೇಕ ಸಂಪೂರ್ಣ ನಾಶವಾಗಿದೆ. ಇದರಿಂದಾಗಿ ಜಿಲ್ಲೆಯಲ್ಲಿ ಉತ್ಪಾದನೆ ತೀವ್ರವಾಗಿ ಕುಸಿದಿದ್ದು, ತಮ್ಮ ಕ್ಷೇತ್ರದ ರೈತರ ಆರ್ಥಿಕ ಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್ ನಂತಹ ತಕ್ಷಣದ ಪರಿಹಾರ ನೀಡುವ ಸಾಧ್ಯತೆಯ ಬಗ್ಗೆ ಪರಿಶೀಲಿಸಬೇಕು ಮತ್ತು ಆವಶ್ಯಕ ರೋಗ ನಿಯಂತ್ರಣ ಕ್ರಮಗಳನ್ನು ಕೂಡಲೇ ಜಾರಿಗೆ ತರಲು ರಾಘವೇಂದ್ರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಗಂಭೀರ ನ್ಯೂನತೆಗಳ ಬಗ್ಗೆಯೂ ಸಂಸದ ರಾಘವೇಂದ್ರ ಸರ್ಕಾರದ ಗಮನ ಸೆಳೆದರು. 2024 25ರ ಖಾರಿಫ್ ಬೆಳೆ ನಷ್ಟಕ್ಕೆ ಜಿಲ್ಲೆಯ ರೈತರಿಗೆ ಸರಿಯಾದ ಪರಿಹಾರ ಸಿಕ್ಕಿಲ್ಲ. ಕೇಂದ್ರ ಕೃಷಿ ಸಚಿವಾಲಯ ತುರ್ತಾಗಿ ಮಧ್ಯಪ್ರವೇಶಿಸಿ, ಹತ್ತಿರದ ಮತ್ತು ಹವಾಮಾನಕ್ಕೆ ಅನುಗುಣವಾಗಿ ನಿಖರವಾದ ಹವಾಮಾನ ಕೇಂದ್ರಗಳ ಡೇಟಾವನ್ನು ಆಧರಿಸಿ ಪರಿಹಾರವನ್ನು ಮರು ಲೆಕ್ಕಾಚಾರ ಮಾಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕೆಂದು ರಾಘವೇಂದ್ರ ಒತ್ತಾಯಿಸಿದರು.

ದೈನಂದಿನ ಮಳೆ ಮುನ್ನೆಚ್ಚರಿಕೆ ಸೇವೆಯನ್ನು ಕೂಡ ಮರುಸ್ಥಾಪಿಸಬೇಕು ಎಂದು ಸಂಸದರು ವಿನಂತಿಸಿ ಕೊಂಡರು. ತೀವ್ರ ಸಂಕಷ್ಟದಲ್ಲಿರುವ ರಾಜ್ಯದ ಅಡಕೆ ಬೆಳೆಗಾರರಿಗೆ ನೆರವಾಗಲು, ತುರ್ತು ವಿಶೇಷ ಸಹಾಯ ಪ್ಯಾಕೇಜ್ ನೀಡುವ ಕುರಿತು ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಸರಕಾರದ ಈ ಅತ್ಯುತ್ತಮ ರೈತ ಕೇಂದ್ರಿತ ಯೋಜನೆಯನ್ನು, ಅತ್ಯಂತ ಸಮರ್ಪಕವಾಗಿ ನಮ್ಮ ರೈತರಿಗೆ ನ್ಯಾಯಯುತವಾಗಿ ರಕ್ಷಣೆ ಮತ್ತು ನೆರವು ದೊರೆಯುವಂತೆ ನೋಡಿಕೊಳ್ಳಬೇಕಾಗಿದೆ ಎಂದು ಸಂಸದ ರಾಘವೇಂದ್ರ ಹೇಳಿದರು.

ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಲೋಕಸಭಾ ಕಲಾಪದ ಶೂನ್ಯ ವೇಳೆ ಮಾತನಾಡಿದರು.

ಜಿಲ್ಲೆಯ ಶೇ.50 ಮಳೆ ಮಾಪಕ ಕಾರ್ಯ ಸ್ಥಗಿತ

ಶಿವಮೊಗ್ಗ ಜಿಲ್ಲೆಯ ಮಳೆ ಮಾಪಕಗಳಲ್ಲಿ ಶೇ.50ರಷ್ಟು ಕಾರ್ಯನಿರ್ವಹಿಸುತ್ತಿಲ್ಲ. ರಾಜ್ಯ ಸರಕಾರ ಘೋಷಿಸಿದ ಬ್ಯಾಕಪ್ ಹವಾಮಾನ ಕೇಂದ್ರಗಳನ್ನು ತಡವಾಗಿ ಗುರುತು ಮಾಡಲಾಗಿದೆ ಮತ್ತು ಸಂಪೂರ್ಣ,ವಿಭಿನ್ನ ಮಳೆ ಮಾದರಿ ಹೊಂದಿರುವ ಪ್ರದೇಶಗಳಲ್ಲಿ, 20ರಿಂದ45 ಕಿ.ಮೀ ದೂರದಲ್ಲಿ ಗುರುತು ಮಾಡಲಾಗಿದ್ದು, ಇದರಿಂದ ವಿಮೆಯ ಲೆಕ್ಕಾಚಾರದಲ್ಲಿ ತಾಂತ್ರಿಕ ದೋಷಗಳು ಉಂಟಾಗಿ ಜಿಲ್ಲೆಯ ರೈತರಿಗೆ ಅನ್ಯಾಯವಾಗಿದೆ ಎಂದು ರಾಘವೇಂದ್ರ ಹೇಳಿದರು.

ಬೂತ್ ಮಟ್ಟಕ್ಕೆ ಇಬ್ಬರು ಬಿಎಲ್‌ಒ

ಸೊರಬ: ದೇಶದಲ್ಲಿ ನಡೆಯುತ್ತಿರುವ ಮತಗಳ್ಳತನ ನಿಯಂತ್ರಿಸಲು ಲೋಕಸಭೆ ವಿಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಜನಾಂದೋಲನ ಭಾಗವಾಗಿ ಎಐಸಿಸಿಯಿಂದ ಬೂತ್ ಮಟ್ಟದಲ್ಲಿ ಇಬ್ಬರು ಬಿಎಲ್‌ಒಗಳನ್ನು ನೇಮಕ ಮಾಡುವಂತೆ ಸೂಚಿಸಲಾಗಿದೆ ಎಂದು ತಾಲೂಕು ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಅಣ್ಣಪ್ಪ ಹಾಲಘಟ್ಟ ಆರೋಪಿಸಿದರು.

ಬಂಗಾರ ಧಾಮದಲ್ಲಿ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಮತಗಳ್ಳತನ ವಿರೋಧಿಸಿ 15ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಸಹಿ ಸಂಗ್ರಹ ಮಾಡಲಾಗಿದೆ. ಮತಗಳ್ಳತನ ಹೇಗೆ ನಡೆಯುತ್ತದೆ ಎಂದು ಪರಿಶೀಲಿಸಿದಾಗ ಬೂತ್ ವ್ಯಾಪ್ತಿಯಲ್ಲಿ ಬಿಎಲ್‌ಒಗಳು ನಿಷ್ಕ್ರಿಯಗೊಂಡಾಗ ಎದುರಾಳಿ ಪಕ್ಷದವರು ಮತಗಳ್ಳತನಕ್ಕೆ ಮುಂದಾಗಿರುವುದನ್ನು ಕಂಡು ಬಂದಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ಐತಿಹಾಸಿಕವಾಗಿ ಅನುಷ್ಠಾನಗೊಳಿಸಿದ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದ್ದ ಬಿಜೆಪಿ ವರಿಷ್ಠರು ಬಿಹಾರ ಮತ್ತು ಇತರೆ ರಾಜ್ಯಗಳಲ್ಲಿ ನಡೆದ ಚುನಾವಣೆಗಳಲ್ಲಿ ನಮ್ಮ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿದ್ದಾರೆ ಎಂದು ಲೇವಡಿ ಮಾಡಿದರು. ಹಾಲಪ್ಪ ಅವರು ಯಾವ ವಿಶ್ವವಿದ್ಯಾಲಯದಲ್ಲಿ ಪಿಎಚ್ ಡಿ ಮಾಡಿದ್ದಾರೊ ಗೊತ್ತಿಲ್ಲ. ಆದರೆ ಅವರನ್ನು ಸಾಗರ, ಸೊರಬದಲ್ಲಿ ಜನರು ಏಕೆ ಗಡಿಪಾರು ಮಾಡಿದ್ದಾರೆ ಎಂದು ಪ್ರಶ್ನಿಸಿದ ಅವರು, ಮುಂದಿನ ದಿನಗಳಲ್ಲಿ ಮತದಾರರೇ ನಿಮಗೆ ಉತ್ತರ ನೀಡಲಿದ್ದಾರೆ ಎಂದರು.

ಬಗರ್‌ಹುಕುಂ ಸಮಿತಿ ಅಧ್ಯಕ್ಷ ಎಂ.ಡಿ.ಶೇಖರ್‌ಮಾತನಾಡಿ, ಸಚಿವ ಮಧು ಬಂಗಾರಪ್ಪ ಅವರನ್ನು ಟೀಕಿಸುವ ಬಿಜೆಪಿ ಮುಖಂಡರ ವರ್ತನೆಯನ್ನು ಖಂಡಿಸುತ್ತೇವೆ. ಕೆರೆಹಳ್ಳಿ, ತಾಳಗುಪ್ಪ ಗ್ರಾಮದ ಬಗರ್‌ಹುಕುಂ ರೈತರ ಪರವಾಗಿ ಹೋರಾಟ ಮಾಡಿದ್ದಾರೆ. ತಾಲೂಕಿನ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ತರುವಲ್ಲಿ ಮುಂದಾಗಿದ್ದಾರೆ ಎಂದು ತಿಳಿಸಿದರು. ಸಭೆಯಲ್ಲಿ ಹಿರಿಯ ಮುಖಂಡ ತಬಲಿ ಬಂಗಾರಪ್ಪ,ಮತ್ತು ಕಲ್ಲಂಬಿ ಹಿರಿಯಣ್ಣ, ಸುರೇಶ್ ಬಿಳವಾಣಿ, ನೆಹರೂ ಕೊಡಕಣಿ, ನಾಗರಾಜ್ ಚಿಕ್ಕಸವಿ, ಮೆಹಬೂಬ್, ಬಸವೇಶ್ವರ, ಪ್ರಶಾಂತ್ ಮೇಸ್ತ್ರಿ,ಮಹಮದ್ ಇದ್ದರು.

ಬಂಗಾರ ಧಾಮದಲ್ಲಿ ನಡೆದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಬ್ಲಾಕ್ ಅಧ್ಯಕ್ಷ ಅಣ್ಣಪ್ಪ ಹಾಲಘಟ್ಟ ಮಾತನಾಡಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ಆಯ್ಕೆ

ಸೊರಬ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಜಿ.ಎಂ ತೋಟಪ್ಪ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ರಾಘವೇಂದ್ರ ಬಾಪಟ್ ಅವರನ್ನು ಅಭಿನಂದಿಸಲಾಯಿತು.

ಸೊರಬ: ಸೊರಬ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಜಿ.ಎಂ ತೋಟಪ್ಪ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ರಾಘವೇಂದ್ರ ಬಾಪಟ್ ಅವರನ್ನು ನೇಮಕ ಮಾಡಲಾಯಿತು.

ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಗುರುವಾರನಡೆದ . ಈ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶಿವಮೊಗ್ಗ ಟೈಮ್ಸ್ ಪತ್ರಿಕೆಯ ಜಿಎಂ ತೋಟಪ್ಪ ಹಾಗೂ ನುಡಿಗಿಡದ ರಾಘವೇಂದ್ರ ಬಾಪಟ್ ಸ್ಪರ್ಧೆ ಮಾಡಿದ್ದರು. ಚುನಾವಣೆಯಲ್ಲಿ ಇಬ್ಬರಿಗೂ ತಲಾ 7 ಮತಗಳು ಚಲಾವಣೆಯಾಗಿತ್ತು.

ಶಿವಮೊಗ್ಗ ಜಿಲ್ಲಾ ಸಮಿತಿಯ ಅಧ್ಯಕ್ಷ ವೈದ್ಯ, ಉಪಾಧ್ಯಕ್ಷ ಹುಚ್ಚರಾಯಪ್ಪ, ಪ್ರಧಾನ ಕಾರ್ಯದರ್ಶಿ ಹಾಲಸ್ವಾಮಿ, ಕೋಶಾಧ್ಯಕ್ಷ ರೋಹಿತ್, ರಾಜ್ಯ ಚುನಾವಣಾಧಿಕಾರಿ ರವಿಕುಮಾರ್‌ಟೆಲೆಕ್ಸ್, ಜಿಲ್ಲಾ ಕಾರ್ಯದರ್ಶಿ ದೀಪಕ್ ಸಾಗರ್‌ಅವರು ಇಬ್ಬರನ್ನು ಮನವೊಲಿಸಿದ ಬಳಿಕ ಹಿರಿತನದಲ್ಲಿ ಜಿ.ಎಂ.ತೋಟಪ್ಪ ಅವರನ್ನು ಅಧ್ಯಕ್ಷರನ್ನಾಗಿ, ರಾಘವೇಂದ್ರ ಬಾಪಟ್ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷ ವೈದ್ಯ ಹಿಂದಿನ ಯಾವುದೇ ಕಹಿ ಘಟನೆಗಳಿದ್ದರೆ ಅವಗಳನ್ನು ಮರೆತು ಸಂಘವನ್ನು ಒಟ್ಟಾಗಿ ಮುನ್ನಡೆಸಿಕೊಂಡು ಹೋಗೊಣ. ಎಲ್ಲಾ ಕೆಲಸಗಳಲ್ಲೂ ಒಕ್ಕೊರಲಿನಿಂದ ಭಾಗಿಯಾಗಿಣ ಎಂದರು. ಎಲ್ಲಾ ತಾಲೂಕು ಸಂಘದ ಪದಾಧಿಕಾರಿಗಳ ನೇಮಕಾತಿಯ ನಂತರ ಜಿಲ್ಲಾ ಸಂಘದ ಅಧಿಕಾರ ಸ್ವೀಕಾರ ಕಾರ್ಯಕ್ರಮ ನಡೆಯಲಿದೆ. ಅದರ ಭಾಗವಾಗಿ ಸೊರಬ ತಾಲೂಕು ಕೆಯುಡಬ್ ಲ್ಯೂಜೆ ಸಂಘಕ್ಕೆ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದರು.

ಕಸ ತ್ಯಾಜ್ಯಗಳ ಆಗರ, ಸ್ವಚ್ಛ ಸಾಗರ ಆಗೋದು ಯಾವಾಗ ?

ಶಾಸಕ ಬೇಳುರು ಗೋಪಾಲಕೃಷ್ಣರ ಕಾಳಜಿ ಒಕೆ, ಅಧಿಕಾರಿಗಳು ಹೀಗ್ಯಾಕೆ..?

ರಮೇಶ್ ಹೆಗಡೆ ಗುಂಡೂಮನೆ, ಸಾಗರ

ಇತ್ತೀಚಿನ ವರ್ಷಗಳಲ್ಲಿ ಸಾಗರ ಪ್ರವಾಸಿಗರ ಊರು ಎನಿಸಿಕೊಳ್ಳುತ್ತಿದೆ. ಅತ್ತ ಜೋಗ , ಇತ್ತ ಸಿಗಂದೂರು, ನಡುವೆ ವರದಹಳ್ಳಿಯೂ ಸೇರಿದಂತೆ ಮಲೆನಾಡ ಸುಂದರ ಊರಿನ ಪ್ರವಾಸಕ್ಕಾಗಿ ರಾಜ್ಯ ಮತ್ತು ಹೊರ ರಾಜ್ಯದಿಂದ ಬರುವ ಜನರು ವಸತಿಯೂ ಸೇರಿದಂತೆ ವಾಹನ ಸಂಪರ್ಕಕ್ಕೆ ಪೂರಕವಾಗಿರುವ ಸಾಗರ ನಗರವನ್ನು ಕೇಂದ್ರವಾಗಿ ಆಶ್ರಯಿಸುವುದು ಎಲ್ಲರಿಗೂ ತಿಳಿದ ವಿಷಯ.

ಈ ಕಾರಣಕ್ಕಾಗಿಯೇ ಸಾಗರ ನಗರವನ್ನು ಸ್ವಚ್ಛ ಸುಂದರವಾಗಿಸಿ ಸದಾ ಇಡುವ ಕನಸು ಹೊತ್ತು ಇಲ್ಲಿಯ ಶಾಸಕರು ಕೆಲಸ ಮಾಡುತ್ತಲೇ ಇದ್ದಾರೆ. ಆದರೆ ಶಾಸಕರ ನಿಜವಾದ ಕಾಳಜಿಯನ್ನು ಅರ್ಥ ಮಾಡಿಕೊಳ್ಳದ ಇಲ್ಲಿಯ ನಗರ ಸಭೆಯ ಅಧಿಕಾರಿಗಳು ಮಾತ್ರ ಎಮ್ಮೆಯ ಮೇಲೆ ಮಳೆ ಸುರಿದಂತೆ ಪ್ರತಿ ಬಾರಿಯೂ ಹಾಗೆ ಹೇಳುವುದನ್ನು ಹೀಗೆ ಕೇಳಿಸಿಕೊಂಡು ಸುಮ್ಮನಾಗುತ್ತಿರುವುದು ವ್ಯವಸ್ಥೆಗೆ ಹಿಡಿದ ಕನ್ನಡಿ.

ಪ್ರೇಕ್ಷಣೀಯ ಸ್ಥಳ ಮತ್ತು ಧಾರ್ಮಿಕ ಸ್ಥಳಕ್ಕೆ ಪ್ರವಾಸಿಗರು ಆಗಮಿಸುವುದು ಮಾತ್ರವಲ್ಲ, ಸಾಗರದ ಗೋಪಾಲಗೌಡ ಕ್ರೀಡಾಂಗಣ ಕೂಡ ರಾಜ್ಯದಲ್ಲಿ ಹೆಸರು ಮಾಡಿದ ಕ್ರೀಡಾಂಗಣ, ಇಲ್ಲಿ ಬೇಸಿಗೆಯ ಬಹುತೇಕ ಎಲ್ಲ ಶನಿವಾರ ಭಾನುವಾರಗಳು ಕ್ರಿಕೆಟ್ ಪಂದ್ಯ ನಡೆಯುತ್ತಲೇ ಇರುತ್ತದೆ. ಇದಕ್ಕಾಗಿ ಪ್ರಸಿದ್ಧ ಆಟಗಾರರೂ ಸೇರಿದಂತೆ ರಾಜ್ಯದ ಬೇರೆ ಬೇರೆ ಭಾಗದಿಂದ ಪ್ರತಿ ವಾರ ಯುವ ಆಟಗಾರರು ಈ ಕ್ರೀಡಾಂಗಣಕ್ಕೆ ಬರುತ್ತಾರೆ. ಆದರೆ ಅವರಿಗ್ಯಾರಿಗೂ ಸಾಗರ ನಗರ ಎಂದರೆ ಅದು ಸ್ವಚ್ಛ ಊರು ಎನಿಸುವುದೇ ಇಲ್ಲ ಕಾರಣ ಈ ಕ್ರೀಡಾಂಗಣಕ್ಕೆ ಹೋಗುವ ದಾರಿಯಲ್ಲಿಯೇ ಕಸದ ರಾಶಿ ಸದಾ ರಾರಾಜಿಸುತ್ತಿರುತ್ತದೆ. ಎಷ್ಟು ವಿಚಿತ್ರ ಎಂದರೆ ಬರೀ ಕಸದ ರಾಶಿ ಅಲ್ಲ, ಇದುವೆ ಕಸ ಸುರಿಯುವ ತ್ಯಾಜ್ಯದ ಘಟಕ ಎನ್ನುವ ರೀತಿಯಲ್ಲಿ ಈ ರಸ್ತೆ ಕಸದಿಂದ ತುಂಬಿ ಹೋಗಿದೆ. ಇದನ್ನು ನೋಡಿದ ಮೇಲೆ ಸಾಗರ ಎಷ್ಟು ಸ್ವಚ್ಛ ಎಂದು ಮತ್ತೆ ಹೇಳ ಬೇಕಿಲ್ಲ, ಕಾರಣ ಪಟ್ಟಣದ ಹೃದಯ ಭಾಗದಲ್ಲಿರುವ ಇಲ್ಲಿಯ ಸ್ಥಿತಿಯೇ ಹೀಗಿರುವಾಗ ಉಳಿದ ಕಡೆಯ ಸ್ಥಿತಿ ಇನ್ನು ಹೇಗಿರಬೇಡ...!

ಪಾಪ ಶಾಸಕ ಬೇಳೂರು ಗೋಪಾಲಕೃಷ್ಣನವರಿಗೆ ಸಾಗರ ತಾಲೂಕು ಪ್ರವಾಸಿಗರ ಕಣ್ಣಲ್ಲಿ ಸ್ವಚ್ಛ ಸುಂದರ ಸಾಗರವಾಗಬೇಕು ಎನ್ನುವ ಆಶಯ. ಆದರೆ ಇಲ್ಲಿಯ ಕೆಲ ಪ್ರಮುಖ ರಸ್ತೆ ಗಮನಿಸಿದರೆ ಅದರಲ್ಲಿಯೂ ನಿತ್ಯ ನೂರಾರು ಯುವ ಜನತೆ ಆಡಿ ಕುಣಿದು ಹೋಗುವ ಕ್ರೀಡಾಂಗಣದ ಪ್ರಮುಖ ದ್ವಾರದ ರಸ್ತೆಯ ಕತೆಯೇ ಹೀಗಾದರೆ ವ್ಯವಸ್ಥೆಯನ್ನು ಸರಿಪಡಿಸುವವರ್ಯಾರು.

ಸಾಗರ ನಗರ ಮಧ್ಯದೊಳಿರುವ ಗೋಪಾಲಗೌಡ ಕ್ರೀಡಾಂಗಣದ ರಸ್ತೆ ತ್ಯಾಜ್ಯದ ಘಟಕವಾದಂತಿದೆ.

ನಗರ ಸಭೆ ದಂಡ ಹಾಕಲಿ

ಇಲ್ಲಿನ ಕ್ರೀಡಾಂಗಣವೂ ಸೇರಿದಂತೆ ನಗರದ ಕೆಲ ಭಾಗದಲ್ಲಿ 365 ದಿನವೂ ಕಸ ತಂದು ಸುರಿಯುವುದು ಕೆಲವರಿಗೆ ಕಾಯಕ. ಹೀಗೆ ಎಲ್ಲೆಲ್ಲಿ ಕಸ ಎಸೆಯುವುದಕ್ಕೆ ಜನರ ಬರಲಿದ್ದಾರೋ ಅವರನ್ನು ಗುರುತಿಸಿ ದಂಡ ಹಾಕುವಂತಾದರೆ ಮಾತ್ರ ಪರಿಸ್ಥಿತಿ ಬದಲಾದೀತು ಇಲ್ಲವಾದರೆ ಸ್ವಚ್ಛತೆಯ ಭಾಷಣಕ್ಕೆ ಅರ್ಥವೇ ಇಲ್ಲ ಎನ್ನುತ್ತಾರೆ ಸಾಗರದ ಸಾರ್ವಜನಿಕರು.

ವೈದ್ಯರಲ್ಲಿ ತಗ್ಗಿದ ಸೇವಾ ಮನೋಭಾವ

ಉಚಿತ ಆರೋಗ್ಯ ತಪಾಸಣಾ ಶಿಬಿರ | ಜಿಲ್ಲಾ ವಾರ್ತಾಧಿಕಾರಿ ಮಾರುತಿ ಚಾಲನೆ

ಶಿವಮೊಗ್ಗ : ಆಸ್ಪತ್ರೆಗಳು ಪ್ರಸ್ತುತ ದಿನಮಾನಗಳಲ್ಲಿ ವಾಣಿಜ್ಯ ಕೇಂದ್ರಗಳಾಗಿ ಮಾರ್ಪಟ್ಟಿದ್ದು, ವೈದ್ಯರುಗಳಲ್ಲಿ ಸೇವಾ ಮನೋಭಾವನೆ ಕಡಿಮೆಯಾಗಿದೆ ಎಂದು ಜಿಲ್ಲಾ ವಾರ್ತಾಧಿಕಾರಿ ಆರ್‌ಮಾರುತಿ ತಿಳಿಸಿದರು.

ಶಿವಮೊಗ್ಗ ಪ್ರೆಸ್ ಟ್ರಸ್ಟ್ ಹಾಗೂ ತೃಪ್ತಿ ಹಾಸ್ಪಿಟಲ್ ಸಂಯುಕ್ತ ಆಶ್ರಯದಲ್ಲಿ ತೃಪ್ತಿ ಆಸ್ಪತ್ರೆಯಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ತೃಪ್ತಿ ಆಸ್ಪತ್ರೆಯ ವೈದ್ಯ ಡಾ.ಚಂದ್ರಶೇಖರ್ ಅವರು ಸೇವಾ ಮನೋಭಾವದಿಂದ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸುತ್ತಿರವುದು ಸಮಾಜಕ್ಕೆ ನೀಡುತ್ತಿರುವು ಬಹುದೊಡ್ಡ ಕೊಡುಗೆಯಾಗಿದೆ ಎಂದರು. ಸೇವಾ ಮನೋಭಾವ ಮತ್ತು ಸಾಮಾಜಿಕ ಕಳಕಳಿ ಇರುವವರಿಗೆ ಮಾತ್ರ ಇಂತಹ ಕಾರ್ಯಗಳನ್ನು ನಡೆಸಲು ಸಮಯ ಸಿಗುತ್ತದೆ ಎಂದು ಹೇಳಿದರು.

ಶಿವಮೊಗ್ಗ ನಗರದಲ್ಲಿ ಇಂತಹ ಕಾರ್ಯ ನಡೆಯುತ್ತಿರುವುದು ಶ್ಲಾಘನೀಯವಾಗಿದ್ದು, ಆರೋಗ್ಯದ ಬಗ್ಗೆ ಪ್ರಸ್ತುತ ದಿನಮಾನಗಳಲ್ಲಿ ಪ್ರತಿಯೊಬ್ಬರು ಕಾಳಜಿ ವಹಿಸಬೇಕು ಎಂದ ಅವರು, ದೇಹದ ಭಾಗಗಳಲ್ಲಿ ಮುಖ್ಯವಾಗಿರುವ ಮೂತ್ರಕೋಶ, ಲಿವರ್,ಹೃದಯ ಇವುಗಳ ತಪಾಸಣೆಗೆ ಇತರೆ ಆಸ್ಪತ್ರೆಗಳಲ್ಲಿ ಸಾಕಷ್ಟು ಹಣ ಪಾವತಿ ಮಾಡಬೇಕಾಗುತ್ತದೆ. ಆದರೆ ತೃಪ್ತಿ ಆಸ್ಪತ್ರೆ ಇವುಗಳ ತಪಾಸಣೆಯನ್ನು ಉಚಿತವಾಗಿ ನಡೆಸುತ್ತಿರುವುದು ಅತ್ಯಂತ ಸ್ವಾಗತಾರ್ಹ ಎಂದು ಹೇಳಿದರು.

ಆಸ್ಪತ್ರೆಯ ವೈದ್ಯ ಡಾ.ಚಂದ್ರಶೇಖರ್ ಮಾತನಾಡಿ, ಪ್ರತಿಯೊಬ್ಬರಿಗೂ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಕನಸಾಗಿದೆ. ಈ ನಿಟ್ಟಿನಲ್ಲಿ ಉಚಿತ ತಪಾಸಣಾ ಶಿಬಿರಗಳನ್ನು ಹಮ್ಮಿಕೊಂಡಿದ್ದೇನೆ. ಪ್ರತಿಯೊಬ್ಬರಿಗೂ ಆರೋಗ್ಯವೇ ಭಾಗ್ಯ. ಆದ್ದರಿಂದ ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ದೊರಕಿಸಿ ಕೊಡುವುದು ನನ್ನ ಮೊದಲ ಆದ್ಯತೆಯಾಗಿದೆ. ಕಿಡ್ನಿ, ಲಿವರ್‌ಹಾಗೂ ಹೃದಯದ ಆರೋಗ್ಯ ಉತ್ತಮವಾಗಿದ್ದರೆ ಮನುಷ್ಯ ಆರೋಗ್ಯವಾಗಿರುತ್ತಾನೆ. ಇವುಗಳು ಉತ್ತಮವಾಗಿರಬೇಕಾದರೆ ಮಿತವಾದ ಆಹಾರ, ವ್ಯಾಯಾಮ ಮತ್ತು ನಡಿಗೆಯನ್ನು ಮಾಡಲೇಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೆಸ್ಟ್ರಸ್ಟ್ ಅಧ್ಯಕ್ಷ ಎನ್. ಮಂಜುನಾಥ್, ಕಾರ್ಯದರ್ಶಿ ನಾಗರಾಜ್ ನೇರಿಗೆ, ಹೊನ್ನಾಳಿ ಚಂದ್ರಶೇಖರ್,ಗೋ.ವಾ.ಮೋಹನಕೃಷ್ಣ ಮತ್ತಿತರರಿದ್ದರು.

ಶಿವಮೊಗ್ಗ ಪ್ರೆಸ್ ಟ್ರಸ್ಟ್ ವತಿಯಿಂದ ನಡೆದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಜಿಲ್ಲಾ ವಾರ್ತಾಧಿಕಾರಿ ಆರ್. ಮಾರುತಿ ಅವರನ್ನು ಸನ್ಮಾನಿಸಲಾಯಿತು.

ಶ್ರೀ ದತ್ತಾತ್ರೇಯರ ಪಲ್ಲಕ್ಕಿ ಉತ್ಸವ

ಶಿಕಾರಿಪುರ: ಪಟ್ಟಣದ ಶ್ರೀ ಹುಚ್ಚುರಾಯ ಸ್ವಾಮಿ ಕೆರೆ ದಡದಲ್ಲಿನ ಶ್ರೀ ದತ್ತ ಕೇವಲಾನಂದಾಶ್ರಮದಲ್ಲಿ ಸತತ ವಾರದ ಕಾಲ ನಡೆದ ಶ್ರೀ ದತ್ತ ಜಯಂತಿ ಮಹೋತ್ಸವ ಗುರುವಾರ ಶ್ರೀ ದತ್ತಾತ್ರೇಯರ ಪಲ್ಲಕ್ಕಿ ಉತ್ಸವ ಪಟ್ಟಣದ ಪ್ರಮುಖ ಬೀದಿಯಲ್ಲಿ ನಡೆಯಿತು. ನಂತರದಲ್ಲಿ ಸಾರ್ವಜನಿಕ ಅನ್ನ ಸಂತರ್ಪಣೆ ನಡೆಯಿತು.

ಪಟ್ಟಣದ ಪ್ರಸಿದ್ಧ ಶ್ರೀ ಹುಚ್ಚುರಾಯ ಸ್ವಾಮಿ ಕೆರೆ ದಡದಲ್ಲಿ ಶ್ರೀ ಕೇವಲಾನಂದ ಅವಧೂತರು ಸಂಸ್ಥಾಪಿಸಿದ ಶ್ರೀ ದತ್ತ ಕೇವಲಾನಂದಾಶ್ರಮದಲ್ಲಿ ಭಕ್ತ ಸಮೂಹಕ್ಕೆ ಉಪನಿಷತ್ತು,ಭಕ್ತಿ,ಜ್ಞಾನ,ವೈರಾಗ್ಯಗಳ ವೇದ ವೇದಾಂತವನ್ನು ನಿತ್ಯ ಬೋಧಿಸಿ ಶ್ರೀ ಕ್ಷೇತ್ರವನ್ನು ದತ್ತ ಉಪಾಸನಾ ಕ್ಷೇತ್ರವನ್ನಾಗಿಸಿದ್ದು ಶೃಂಗೇರಿಯ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು. ಇಲ್ಲಿ ಶ್ರೀ ಶಂಕರಾಚಾರ್ಯ,ಶ್ರೀ ದತ್ತಾತ್ರೇಯ,ಶ್ರೀ ಶಾರದಾ ಪರಮೇಶ್ವರಿ ಅಮ್ಮನವರ ದಿವ್ಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಕುಂಬಾಬಿಷೇಕ ನೆರವೇರಿಸಿದ ಈ ಪವಿತ್ರವಾದ ಕ್ಷೇತ್ರದಲ್ಲಿ ಪ್ರತಿವರ್ಷ ವಿಶೇಷವಾಗಿ ಶ್ರೀ ದತ್ತ ಜಯಂತಿ ಸತತ ವಾರದ ಕಾಲ ನಡೆಯುತ್ತಿದೆ.

ಸುಮಂಗಲಿಯರಿಂದ ಕಾಕಡಾರತಿ ನಂತರ ನವಗ್ರಹ ಪೂರ್ವಕ ಗಣಹೋಮ,ಶ್ರೀ ರಾಮತಾರಕ ಹೋಮ,ಶ್ರೀ ಸೂಕ್ತ ಹೋಮ ಹಸಿಬಿಕ್ಷಾ, ಶ್ರೀ ದುರ್ಗಾ ಹೋಮ ಲಲಿತ ಸಮಸ್ರನಾಮ ಕುಂಕುಮಾರ್ಚನೆ,ಶ್ರೀ ರುದ್ರಹೋಮ ಡೋಲೋತ್ಸವ, ಶ್ರೀ ದತ್ತ ಹೋಮ ನಡೆದ ನಂತರ ಪಟ್ಟಣದ ಪ್ರಮುಖ ಬೀದಿಯಲ್ಲಿ ಶ್ರೀ ದತ್ತಾತ್ರೇಯರ ಪಲ್ಲಕ್ಕಿ ಉತ್ಸವ ಶಾಸ್ತ್ರೋಕ್ತವಾಗಿ ನೆರವೇರಿತು.

ಶ್ರೀ ದತ್ತ ಕೇವಲಾನಂದ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ವಿಜೃಂಭಣೆಯ ದತ್ತ ಜಯಂತಿ ಮಹೋತ್ಸದಲ್ಲಿ ನಿತ್ಯ ನೂರಾರು ಭಕ್ತರು ಶ್ರದ್ಧಾ ಭಕ್ತಿಯಿಂದ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಂಡು ಪುನೀತರಾದರು. ವಿಪ್ರ ಸಮಾಜದ ನ್ಯಾಯವಾದಿ ವಸಂತಮಾಧವ,ನರಸಿಂಹರಾವ್ ದೂಪದಹಳ್ಳಿ, ದಿವಾಕರ ದೀಕ್ಷಿತ್,ಶಾಲಾಸ್ತ್ರಿ ತಮ್ಮಯ್ಯ,ಪುರೋಹಿತರಾದ ಗಣಪತಿಭಟ್,ನರಸಿಂಹಜೋಯ್ಸ್,ಹರೀಶ್ ಜೋಯ್ಸ್, ಶಿವರಾಂ ಭಟ್,ಪ್ರದೀಪ ಕುಲಕರ್ಣಿ,ಗೋಪಿ ಚಕ್ರವರ್ತಿ, ಪ್ರಕಾಶ್ ಹೋತನಕಟ್ಟೆ, ಪ್ರದೀಪ್ ದೀಕ್ಷಿತ್, ರಮೇಶ್ ನಾಡಿಗ್ ಸಂಡ, ಬಾಲಕೃಷ್ಣ ಜೋಯ್ಸ್,ಗಜಾನನ ಜೋಷಿ,ಆನಂದರಾವ್ ನಾಡಿಗ್, ರಾಘವ, ಸಂಜೀವ ಸಹಿತ ಮಹಿಳಾ ಪ್ರಮುಖರಾದ ರಮಾ ದೀಕ್ಷಿತ್,ರೂಪ ವೆಂಕಟೇಶ್, ವಿಜಯಮ್ಮ, ಗೀತಮ್ಮ, ಜಯಲಕ್ಷ್ಮಿ, ಗೌರಿ,ಪಲ್ಲವಿ,ದಿವ್ಯ, ಪದ್ಮಜಾ, ಅನ್ನಪೂರ್ಣ, ಪಲ್ಲವಿ,ಸುಷ್ಮಾ ದೀಕ್ಷಿತ್, ಸುಕನ್ಯಾನೇತೃತ್ವ ವಹಿಸಿ ಯಶಸ್ವಿಗೊಳಿಸಿದರು.

ಶಿಕಾರಿಪುರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀ ದತ್ತಾತ್ರೇಯರ ಭವ್ಯ ಉತ್ಸವದ ಮೆರವಣಿಗೆ ನಡೆಯಿತು.

ರೋಗಿಗಳು ಗುಣಮುಖರಾಗಿ ಹಿಂತಿರುಗಲಿ

ಹೊಸನಗರ: ಹೊಸನಗರದ ಸರಕಾರಿ ಸಾರ್ವಜನಿಕ ಆಸ್ಪತ್ರಗೆ ಬರುವ ರೋಗಿಗಳು ಗುಣಮುಖರಾಗಿ ಆರೋಗ್ಯವಂತರಾಗಿ ಮನೆಗೆ ಹಿಂತಿರುಗಲಿ ಎಂದು ಹೊಸನಗರ-ಸಾಗರ ಕ್ಷೇತ್ರದ ಶಾಸಕ ಬೇಳೂರು ಗೋಪಾಕೃಷ್ಣ ದೇವರಲ್ಲಿ ಪ್ರಾರ್ಥಿಸಿದರು.

ಹೊಸನಗರದ ಸಾರ್ವಜನಿಕಆಸ್ಪತ್ರೆಯ ಮುಂಭಾಗ ಸುಮಾರು ಗಣಪತಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದ್ದು ಈ ಗಣಪತಿ ವಿಗ್ರಹಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಪಟ್ಟಣದಲ್ಲಿ ಯಾವುದೇ ಪ್ರಸಿದ್ಧ ಖಾಸಗಿ ಕ್ಲಿನಿಕ್ಗಳಿಲ್ಲ ಸುತ್ತ-ಮುತ್ತಲಿನ ಗ್ರಾಮದಜನರು ಹೊಸನಗರದ ಸಾರ್ವಜನಿಕ ಆಸ್ಪತ್ರೆಗೆ ಬರಬೇಕು. ಬಂದ ರೋಗಿಗಳನ್ನು ಉತ್ತಮ ರೀತಿಯಲ್ಲಿಚಿಕಿತ್ಸೆ ನೀಡುವುದು ಆಸ್ಪತ್ರೆಯ ಸಿಬ್ಬಂದಿ ಕರ್ತವ್ಯ. ರೋಗಿಗಳು ದೇವರ ದಯೆಯಿಂದ ಗುಣಮುಖರಾಗಿ ಮನೆಗೆ ತೆರಳಲಿ ಎಂದು ಹಾರೈಸಿದರು.

ಗಣಪತಿ ವಿಗ್ರಹ ದಾನಿ :

ಸುಮಾರು 60 ಸಾವಿರ ರೂಪಾಯಿ ವೆಚ್ಚದಲ್ಲಿಗಣಪತಿ ವಿಗ್ರಹಕ್ಕಾಗಿ ಊರೂರು ಅಲೆದು ಅವರಿಗೆ ಇಷ್ಟವಾಗುವ ರೀತಿ ವಿಗ್ರಹವನ್ನು ತಂದು ಹೊಸನಗರ ಸಾರ್ವಜನಿಕ ಆಸ್ಪತ್ರೆಗೆ ನೀಡಿದವರು ಯಾರು ಎಂಬದು ಸಾರ್ವಜನಿಕರ ಪ್ರಶ್ನೆ. ಶಾಲಾ ಮಕ್ಕಳಿಗೆ ಪೆನ್ನು ರಬ್ಬರ್‌ನೀಡಿ ಪ್ರಚಾರ ಪಡೆಯುವ ಈ ಕಾಲದಲ್ಲಿ ಯಾವ ಪ್ರಚಾರವೂ ಬೇಡ ಎನ್ನುವ ಹೊಸನಗರದ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಅರುಣ್ಕುಮಾರ್‌ಈ ವಿಗ್ರಹ ದಾನ ನೀಡಿದ್ದಾರೆ ಎನ್ನಲಾಗಿದೆ.

ಈ ಸಂದರ್ಭದಲ್ಲಿ ಡಾ.ಲಿಂಗರಾಜ್, ಡಾ.ಹೇಮಾಂತ್, ಡಾ.ಆತ್ಮ, ಡಾ. ಶಾಂತರಾಜ್, ಪ್ರವೀಣ್ಕುಮಾರ್,ಗಜೇಂದ್ರ, ಎಂ.ಪಿ ಸುರೇಶ್, ದುಮ್ಮ ವಿನಯ್ಕುಮಾರ್,ನಾಸೀರ್ ,ಜಯನಗರ ಗೋಪಿನಾಥ್, ಸಣ್ಣಕ್ಕಿ ಮಂಜು ಉಪಸ್ಥಿತರಿದ್ದರು.

ಹೊಸನಗರ ಸಾರ್ವಜನಿಕ ಆಸ್ಪತ್ರೆಯ ಮುಂಭಾಗದಲ್ಲಿ ಗಣಪತಿ ವಿಗ್ರಹವನ್ನು ಪ್ರತಿಷ್ಠಾಪಿಸಿರುವುದು.

ರೈತ ವಿರೋಧಿ ನೀತಿ: ಬಿಜೆಪಿ ಪ್ರತಿಭಟನೆ

ಶಿಕಾರಿಪುರ: ಹೊಟ್ಟೆಪಾಡಿಗಾಗಿ ಕೆಲ ಕಾಂಗ್ರೆಸ್ ಪುಡಾರಿ ರಾಜಕಾರಣಿಗಳು ಸರಕಾರಿ ಕಚೇರಿಗೆ ತೆರಳಿ ಅಧಿಕಾರಿಗಳಿಗೆ ಬೆದರಿಕೆ ಹಾಕಿ ದ್ದು, ಪ್ರಥಮ ಬಾರಿಗೆ ಶಾಸಕನಾಗಿರುವ ಹಿನ್ನಲೆಯಲ್ಲಿ ಎಲ್ಲರಿಗೂ ಗೌರವ ನೀಡುತ್ತಿದ್ದೇನೆ. ಅದನ್ನು ದೌರ್ಬಲ್ಯ ಎಂದು ಭಾವಿಸದೆ ತಿದ್ದಿಕೊಳ್ಳಿ ಎಂದು ಕ್ಷೇತ್ರದ ಶಾಸಕ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಖಡಕ್ ಎಚ್ಚರಿಕೆ ನೀಡಿದರು.

ಗುರುವಾರ ರೈತ ವಿರೋಧಿ ನೀತಿ ಖಂಡಿಸಿ,ಭತ್ತ ಮೆಕ್ಕೆಜೋಳಕ್ಕೆ ಬೆಂಬಲ ನೀಡುವಂತೆ ಹಾಗೂ ಖರೀದಿ ಕೇಂದ್ರ ಶೀಘ್ರ ತೆರೆಯುವಂತೆ ಆಗ್ರಹಿಸಿ ತಾ.ಬಿಜೆಪಿ ರೈತ ಮೋರ್ಚಾ ಹಾಗೂ ಮಂಡಲ ಬಿಜೆಪಿ ವತಿಯಿಂದ ತಾಲೂಕು ಕಚೇರಿ ಮುಂಭಾಗ ನಡೆದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು. ರೈತ ಹೋರಾಟದ ಮೂಲಕ ತಾಲೂಕಿನಿಂದ ಹಬ್ಬಿದ ಕಿಚ್ಚು ರಾಜ್ಯಾದ್ಯಂತ ಹರಡಲಿದ್ದು,ಈ ಹಿಂದೆ ಯಡಿಯೂರಪ್ಪ ನವರ ರೈತ ಪರ ಹೋರಾಟ ದಿಂದ ಕಾಂಗ್ರೆಸ್ ಸರ್ಕಾರ ಕಿತ್ತುಹಾಕುವಲ್ಲಿ ಯಶಸ್ವಿಯಾಗಿದೆ ಇದೀಗ ಪುನಃ ಹೋರಾಟ ವನ್ನು ತಾಲೂಕಿನ ಮೂಲಕ ಆರಂಭಿಸಲಾಗಿದ್ದು ಚಳಿಗಾಲದ ಅಧಿವೇಶನದಲ್ಲಿ ರೈತರ ಪರವಾಗಿ ದ್ವನಿ ಮೊಳಗಲಿದೆ ಎಂದ ಅವರು ಅತಿವೃಷ್ಟಿಯಿಂದಾಗಿ ರೈತರು ಸಂಕಷ್ಟದಲ್ಲಿದ್ದು ಸ್ಪಂದಿಸಬೇಕಾದ ಮುಖ್ಯಮಂತ್ರಿ,ಸಚಿವರು ಕುರ್ಚಿಗಾಗಿ ಹಗ್ಗ ಜಗ್ಗಾಟದಲ್ಲಿ ತೊಡಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿ ಕೆಲ ಪುಡಾರಿಗಳು ಹೊಟ್ಟೆಪಾಡಿಗಾಗಿ ಪೊಲೀಸ್ ಠಾಣೆ, ಆಸ್ಪತ್ರೆ, ತಾಲೂಕು ಕಚೇರಿಗೆ ಅಲೆದಾ ಡುತ್ತಿದ್ದು ಅಧಿಕಾರಿಗಳಿಗೆ ಕಿರುಕುಳ ಹೆಚ್ಚು ದಿನ ನಡೆಯೊಲ್ಲ ಎಂದು ಎಚ್ಚರಿಸಿದರು. ಪ್ರಮುಖ ಬೀದಿಯಲ್ಲಿ ನಡೆದ ಮೆರವಣಿಗೆಯಲ್ಲಿ ಶಾಸಕ ವಿಜಯೇಂದ್ರ ಎತ್ತಿನ ಗಾಡಿಯಲ್ಲಿ ಸಂಚರಿಸಿ ಗಮನ ಸೆಳೆದರು. ನಂತರದಲ್ಲಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು. ತಾ.ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಯೋಗೇಶಪ್ಪ,ಜಿಲ್ಲಾಧ್ಯಕ್ಷ ಸಿದ್ದಲಿಂಗಪ್ಪ,ತಾ.ಅಧ್ಯಕ್ಷ ಹನುಮಂತಪ್ಪ, ರೇವಣಪ್ಪ, ,ಮಹೇಶ್ ಹುಲ್ಮಾರ್ ,ಗಾಯತ್ರಿದೇವಿ, ನಿವೇದಿತಾ ರಾಜು, ರೂಪ, ರೇಖಾ, ಸುನಂದಾ ಇದ್ದರು.

ಶಿಕಾರಿಪುರದಲ್ಲಿ ಗುರುವಾರ ನಡೆದ ಪ್ರತಿಭಟನಾ ಸಭೆ ಯಲ್ಲಿ ಶಾಸಕ ವಿಜಯೇಂದ್ರ ಎತ್ತಿನಗಾಡಿಯ ಮೆರವಣಿಗೆಯಲ್ಲಿ ಸಂಚರಿಸಿದರು.

ವರ್ತುಲ ರಸ್ತೆ: ಭೂಪರಿಹಾರಕ್ಕೆ ಆಗ್ರಹ

ದೆಹಲಿ: ಬೆಂಗಳೂರು ನಗರದ ವಾಹನ ದಟ್ಟಣೆಯನ್ನು ಗಣನೀಯ ತಗ್ಗಿಸುವ ಉಪ ನಗರ ವರ್ತುಲ ರಸ್ತೆ ಯೋಜನೆಯಿಂದ (ಎಸ್‌ಟಿಆರ್‌ಆರ್) ಭೂಮಿ ಕಳೆದುಕೊಂಡವರಿಗೆ ಇನ್ನೂ ಪರಿಹಾರ ನೀಡಿಲ್ಲ ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ದೂರಿದರು. ಲೋಕಸಭೆಯಲ್ಲಿ ಗುರುವಾರ ಶೂನ್ಯವೇಳೆಯಲ್ಲಿ ಮಾತನಾಡಿದ ಅವರು, 2021 ರಲ್ಲಿ ಈ ಯೋಜನೆಗಾಗಿ ಸುಮಾರು 2,200 ಎಕರೆ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಲಾಗಿತ್ತು. ಆದಾಗ್ಯೂ, ಇಲ್ಲಿಯವರೆಗೆ ರೈತರಿಗೆ ಯಾವುದೇ ಪರಿಹಾರ ಬಿಡುಗಡೆ ಮಾಡಿಲ್ಲ. ಇದರಿಂದಾಗಿ, ಅವರು ತೀವ್ರ ಸಂಕಷ್ಟದಲ್ಲಿದ್ದಾರೆ ಎಂದರು. ದೀರ್ಘಕಾಲದಿಂದ ಬಾಕಿ ಇರುವ ಈ ಸಮಸ್ಯೆಯನ್ನು ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯ ಹಾಗೂ ಪ್ರಧಾನಿ ಸಚಿವಾಲಯವು ಆದಷ್ಟು ಬೇಗ ಪರಿಹರಿಸಬೇಕು ಎಜಂದು ಅವರು ಒತ್ತಾಯಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009
ಸಂ: ಕಾ.ಪಾ.ಅ/ಪಂರಾಇಂವಿ/ಬೆಂ.ಗ್ರಾಂ/ಟೆಂ–11/ತಾಂ.ಶಾ/2025–26 ದಿನಾಂಕ: 01.12.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 11/2025–26
(ಕೆ.ಪಿ.ಪಿ ಪೋರ್ಟಲ್ ಮುಖಾಂತರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10–12–2025 ಸಂಜೆ 5.00 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ವಿವರಗಳನ್ನು https:// kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು
DIPR/CP/4213/SPAN/2025-26

ಕರ್ನಾಟಕ ಸರ್ಕಾರ
ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ನಿರ್ದೇಶನಾಲಯ,
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂ : 080–22864681/4604, ಫ್ಯಾಕ್ಸ್:080–22864619, ಇ–ಮೇಲ್:dof-blr-ka@nic.in
ಟೆಂಡರ್ ಪ್ರಕಟಣೆ ಸಂಖ್ಯೆ: DOF-TECHO INL/46/2025 ದಿನಾಂಕ: 04.12.2025
ಇ–ಟೆಂಡರ್ ಪ್ರಕಟಣೆ
2025–26ನೇ ಸಾಲಿನ ರಾಜ್ಯವಲಯದ **ಅಳಿವೆ ಪ್ರದೇಶಗಳಲ್ಲಿ ವಿವಿಧ ತಳಿಗಳ ಮರಿಗಳನ್ನು ದಾಸ್ತಾನು** ಯೋಜನೆಯನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ Sea Bass ಮತ್ತು pearl spot ತಳಿಯ ಬಲಿತ ಬಿತ್ತನೆ ಮರಿಗಳ ಸರಬರಾಜಿಗಾಗಿ ಅಧಿಕೃತ ಸಂಸ್ಥೆ/ಏಜೆನ್ಸಿಗಳಿಂದ/ಸರಬರಾಜುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ದ್ವಿಲಕೋಟ್ (TWO COVERS SYSTEM) ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ:15.12.2025 ಸಂಜೆ 5.00 ಗಂಟೆಯವರೆಗೆ.**
ಸಹಿ/–
ಮೀನುಗಾರಿಕೆ ನಿರ್ದೇಶಕರು
ವಾಸಾಸಂಇ/ವಾ.ಪ್ರ/4194/ಶಿರಡಿ ಸಾಯಿ/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂಖ್ಯೆ: ಬಿಡಿಎ/ಇಇ/ಐಡಿ/ಟೆಂಡರ್/117/2025–26 ದಿನಾಂಕ: 02.12.2025
ಟೆಂಡರ್‌ಗಳಿಗೆ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ)
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ಬಿಡಿಎ ಡೆಮಾಲಿಷನ್ ಸ್ಕ್ವಾಡ್‌ಗೆ ಒಂದು ವರ್ಷದ (12 ತಿಂಗಳು) ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸುವ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ (ಇಂಡೆಂಟ್ ನಂ. BDA/2025-26/SE0070).
ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ: (1) ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ: **06.12.2025, 16.30 ಗಂಟೆ. (2)** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **13.12.2025, 16.30 ಗಂಟೆ. (3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **15.12.2025, 16.30 ಗಂಟೆ. (4)** ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **18.12.2025, 16.30 ಗಂಟೆ.**
ಆಸಕ್ತಿಯುಳ್ಳ ಗುತ್ತಿಗೆದಾರರು ಇತರೆ ವಿವರಗಳನ್ನು https://kppp.karnataka.gov.in ರಲ್ಲಿ ಪರಿವೀಕ್ಷಿಸಬಹುದು ಮತ್ತು ಹೆಚ್ಚಿನ ವಿವರಗಳಿಗೆ ಬಿಡಿಎಯ ಮೂಲಸೌಕರ್ಯ ವಿಭಾಗವನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಮೂಲಸೌಕರ್ಯ ವಿಭಾಗ,
ಬಿಡಿಎ, ಬೆಂಗಳೂರು.

ಪೊಲೀಸ್ ಇಲಾಖೆ
ಪೊಲೀಸ್ ಅಧೀಕ್ಷಕರು, ವೈರ್‌ಲೆಸ್ ರವರ ಕಛೇರಿ
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು. 560001
ದೂರವಾಣಿ: 080–22942324, ಇ–ಮೇಲ್: spwireless@ksp.gov.in
ಸಂಖ್ಯೆ: KSP/2025-26/IND0443 ದಿನಾಂಕ: 03/12/2025
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ.ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು ರವರಿಂದ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿವಿಧ ಘಟಕಗಳಿಗೆ ಅವಶ್ಯವಿರುವ
1) ಡಿಜಿಟಲ್ ವಿ.ಎಚ್.ಎಫ್ ರಿಪೀಟರ್ ಹಾಗೂ ವಾಕಿ–ಟಾಕಿಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ. 69.60 ಲಕ್ಷಗಳು. ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 10/12/2025 ಸಮಯ ಬೆಳಿಗ್ಗೆ 11.00 ಗಂಟೆ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02/01/2026 ಸಮಯ ಸಂಜೆ 17.00 ಗಂಟೆಗಳು. ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಂಖ್ಯೆ: KSP/2025-26/IND0444 ದಿನಾಂಕ: 03/12/2025
2) ಡಿಜಿಟಲ್ ವಿ.ಎಚ್.ಎಫ್/ ಯು.ಎಚ್.ಎಫ್ ರಿಪೀಟರ್‌ಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ. 27.00 ಲಕ್ಷಗಳು. ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 10/12/2025 ಸಮಯ ಬೆಳಿಗ್ಗೆ 11.00 ಗಂಟೆ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02/01/2026 ಸಮಯ ಸಂಜೆ 17.00 ಗಂಟೆಗಳು. ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು
DIPR/CP/4217/NR/2025-26

ಕರ್ನಾಟಕ ಸರ್ಕಾರ ತೋಟಗಾರಿಕೆ ಇಲಾಖೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ ಕಚೇರಿ, ಹಾಸನ
email:sadhsshsn@gmail.com Ph: 08172-269995
ಸಂ:ಹಿಸತೋನಿ:ರಾವ:ಹಾ:ತಾಸ:07:2025–26 ದಿನಾಂಕ:03–12–2025
ಇ–ಟೆಂಡರ್ ಪ್ರಕಟಣೆ
2025–26 ನೇ ಸಾಲಿನ S-09 ಯೋಜನೆಯಡಿ ಹಾಸನ ಜಿಲ್ಲೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಹಾಸನ ರವರ ಕಛೇರಿಯಿಂದ ಬೇಲೂರು ತಾಲೂಕಿನ ಕೊನ್ನೇರಲು ತೋಟಗಾರಿಕೆ ಕ್ಷೇತ್ರದಲ್ಲಿ 1056 ಚ.ಮೀ ವಿಸ್ತೀರ್ಣದ Naturally ventilated polyhouse with Tubular Structure ಪಾಲಿಹೌಸ್ ನಿರ್ಮಾಣ ಮಾಡಲು ಅನುಮೋದಿತ (Empanelment /Eligible) ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KPPP) 1999 ಮತ್ತು ನಿಯಮಗಳು 2000 ರ ಪ್ರಕಾರ KPP Portal ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಕ ದಿನಾಂಕ: 03–12–2025. ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ:13–12–2025 ರ ಸಂಜೆ 5.15 ಗಂಟೆ. ಟೆಂಡರ್ ನಿಬಂಧನೆ, ನಿಯಮಾವಳಿ ಹಾಗೂ ಹೆಚ್ಚಿನ ವಿವರಗಳಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ರಾಜ್ಯವಲಯ, ಹಾಸನ ಕಛೇರಿ ಅಥವಾ ದೂರವಾಣಿ ಸಂಖ್ಯೆ 9742084849 ನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/–ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ರಾಜ್ಯವಲಯ, ಹಾಸನ.
ವಾಸಾಸಂಇ/ಹಿಸನಿ/ಹಾಸನ/820/ಕೆಎಸ್‌ಎಂಪಿಎ/2025–26

ಮಹಿಳೆಯರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಲಿ | ಸೆ.13 ರಂದು ಮಹಿಳಾ ನೌಕರರ ದಿನಾಚರಣೆ | ಸಿದ್ದರಾಮಯ್ಯ ಭರವಸೆ

ವೇತನ ಸಹಿತ ಮುಟ್ಟಿನ ರಜೆ ನೀಡಲು ನಿರ್ಧಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸರಕಾರದ ಆಡಳಿತ ಯಂತ್ರದಲ್ಲಿ ಕೊಡುಗೆ ನೀಡುತ್ತಿರುವ ಮಹಿಳಾ ನೌಕರರಿಗಾಗಿ ಸೆಪ್ಟೆಂಬರ್ 13ರಂದು ಮಹಿಳಾ ನೌಕರರ ದಿನಾಚರಣೆಯಾಗಿ ಘೋಷಣೆ ಮಾಡುವ ಭರವಸೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದರು.

ಅಖಿಲ ಕರ್ನಾಟಕ ರಾಜ್ಯ ಸರಕಾರಿ ಮಹಿಳಾ ನೌಕರರ ಸಂಘ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಸಮ್ಮೇಳನದಲ್ಲಿ ಮಾತನಾಡಿ, ಮಹಿಳಾ ನೌಕರರಿಗೆ ಋತುಚಕ್ರ ರಜೆಯನ್ನು ತಿಂಗಳಿಗೆ ಒಂದು ದಿನ ವೇತನ ಸಹಿತ ರಜೆಯನ್ನು ಮಂಜೂರು ಮಾಡಲು ಸರಕಾರ ನಿರ್ಧರಿಸಿದೆ. ಸಂಘದ ಕಚೇರಿಯ ಕಾರ್ಯಚಟುವಟಿಕೆಗಳಿಗೆ ಬಾಲಭವನದಲ್ಲಿ ಸ್ಥಳಾವಕಾಶ ನೀಡಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರೊಂದಿಗೆ ಚರ್ಚಿಸಲಾಗಿದೆ. ಸೆಪ್ಟೆಂಬರ್ 13 ರಂದು ಮಹಿಳಾ ನೌಕರರ ದಿನಾಚರಣೆಯಾಗಿ ಘೋಷಣೆ ಮಾಡಲಾಗುವುದು ಎಂದರು.

ರಾಜ್ಯ ಸರಕಾರಿ ಮಹಿಳಾ ನೌಕರರ ಸಂಘ ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ನೌಕರರ ಸಮ್ಮೇಳನದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಚ್.ಕೆ.ಪಾಟೀಲ್, ಲಕ್ಷ್ಮಿ ಹೆಬ್ಬಾಳ್ಕರ್ ಇದ್ದರು.

ಸರಕಾರದ ಆಡಳಿತ ಯಂತ್ರದಲ್ಲಿ ಗಣನೀಯ ಕೊಡುಗೆ ನೀಡುತ್ತಿರುವ ಮಹಿಳಾ ನೌಕರರು ಪುರುಷರಿಗೆ ಸರಿಸಮನಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯದಲ್ಲಿ ಲಿಂಗತಾರತಮ್ಯ ಹೋಗಲಾಡಿಸಲು ಸರ್ಕಾರ ಬದ್ಧವಾಗಿದೆ. ಎಲ್ಲರನ್ನೂ ಸಮಾನವಾಗಿ ಕಾಣುವ ಬದ್ಧತೆ ನಮ್ಮ ಸರಕಾರದ್ದಾಗಿದೆ. ಹಿಂದಿನ ಕಾಲದಲ್ಲಿ ಮಹಿಳೆಯರು ಅಕ್ಷರ ಸಂಸ್ಕೃತಿ ವಂಚಿತರಾಗಿದ್ದರು. ಸಂವಿಧಾನ ಜಾರಿಯ ನಂತರ ಎಲ್ಲರಿಗೂ ಶಿಕ್ಷಣ ಸೇರಿದಂತೆ ಸಮಾನ ಹಕ್ಕುಗಳನ್ನು ನೀಡಲಾಯಿತು. ಸ್ವಾತಂತ್ರ್ಯ ಬಂದಾಗ ದೇಶದಲ್ಲಿ ಸಾಕ್ಷರತೆಯ ಪ್ರಮಾಣ 10 ರಿಂದ ಶೇ.12 ರಷ್ಟಿತ್ತು. ಇಂದು ಈ ಪ್ರತಿಶತ ಸುಮಾರು ಶೇ.78 ಕ್ಕೆ ಏರಿದೆ ಎಂದರು.

ಮಹಿಳೆಯರು ತಮ್ಮ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಅವರಲ್ಲಿ ವೈಚಾರಿಕತೆ ಹಾಗೂ ವೈಜ್ಞಾನಿಕತೆಯನ್ನು ಬೆಳೆಸಬೇಕು. ಸಮಾಜದಲ್ಲಿ ಮೂಢನಂಬಿಕೆ ಹಾಗೂ ಅಂಧಶ್ರದ್ಧೆಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಸಾಧ್ಯವಾದ ಮಟ್ಟಿಗೆ ಮೂಢ ನಂಬಿಕೆಗಳು ಮತ್ತು ಅಂಧ ಶ್ರದ್ಧೆಗಳನ್ನು ದೂರ ಮಾಡುವಂಥ ಕೆಲಸ ಮಾಡಬೇಕು. ಮಕ್ಕಳಿಗೂ ಇದನ್ನು ಹೇಳಿ ಕೊಡಿ. ಆಗ ಮಾತ್ರ ಆರೋಗ್ಯಕರ, ಸಮಾನತೆಯ ಸಮಾಜ ನಿರ್ಮಾಣ ಸಾಧ್ಯ. ಸಂವಿಧಾನವೂ ಇದನ್ನೇ ಹೇಳುತ್ತದೆ. ಈ ಬಾರಿ ನಾನು ಮುಖ್ಯ ಮಂತ್ರಿಯಾದ ಬಳಿಕ ಎಲ್ಲಾ ಶಾಲಾ ಕಾಲೇಜು ಗಳಲ್ಲಿ ಸಂವಿಧಾನ ಪೀಠಿಕೆ ಓದಿಸಲಾಗುತ್ತಿದೆ. ನಮ್ಮ ಸಮಾಜದಲ್ಲಿ ಅನೇಕ ಜಾತಿ, ಧರ್ಮಗಳಿವೆ. ಯಾವುದೇ ಕಾರಣಕ್ಕೂ ಮಕ್ಕಳಿಗೆ ಜಾತಿ ಮುಂದಿಟ್ಟುಕೊಂಡು ಜಾತೀಯತೆ ತುಂಬುವ ಕೆಲಸ ಮಾಡಬಾರದು. ಶಿಕ್ಷಣ ನೀಡುವುದು ಜಾತಿ ವ್ಯವಸ್ಥೆ ಹೋಗಬೇಕೆನ್ನುವ ಕಾರಣಕ್ಕೆ. ಅದರ ಉದ್ದೇಶ ಸಫಲವಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯ ಮಹಿಳಾ ಸರಕಾರಿ ನೌಕರರ ಸಂಘ ವಿಧಾನಸೌಧದಲ್ಲಿ ಹಮ್ಮಿಕೊಂಡ ಮಹಿಳಾ ನೌಕರರ ಸಮ್ಮೇಳನ ದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಪಾಲ್ಗೊಂಡಿದ್ದರು. ಈ ವೇಳೆ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಚ್.ಕೆ.ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್ ಇದ್ದರು.

ಮಹಿಳೆಯರು ಸಬಲರಾಗಬೇಕು

ಮಹಿಳೆಯರ ಸಬಲೀಕರಣವಾಗಬೇಕು ಎಂಬ ಉದ್ದೇಶದಿಂದ 3.5 ಕೋಟಿ ಮಹಿಳೆಯರಿಗೆ ಶಕ್ತಿ ಯೋಜನೆಯಡಿ ಉಚಿತವಾಗಿ ಓಡಾಡುತ್ತಿದ್ದಾರೆ. ಇದನ್ನು ಸಾಮಾಜಿಕ ಬಂಡವಾಳ ಎಂದು ಕರೆಯುತ್ತೇವೆ. ಉಳಿತಾಯವಾಗುವ ಹಣವನ್ನು ಮಕ್ಕಳ ಶಿಕ್ಷಣ ಮುಂತಾದವುಕ್ಕೆ ಬಳಸಿಕೊಳ್ಳಲಾಗುತ್ತದೆ. ಆರನೇ ಮತ್ತು ಏಳನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಿದ್ದು ನಮ್ಮ ಸರಕಾರವೇ. ಮಹಿಳೆಯರು ಆರ್ಥಿಕವಾಗಿ ಸಾಮಾಜಿಕವಾಗಿ ಸಬಲರಾಗಬೇಕು. ಸ್ವಾತಂತ್ರ್ಯ ದೊರಕಿದ್ದು ಯಶಸ್ವಿಯಾಗಲು ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರಾಗಬೇಕು ಎಂದು ಡಾ. ಬಿ.ಆರ್.ಅಂಬೇಡ್ಕರ್ ಹೇಳಿದ್ದರು. ಸರಕಾರದ ಕೆಲಸಗಳಲ್ಲಿ ದಕ್ಷತೆ ಹೆಚ್ಚಾಗಲಿ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ವೈದ್ಯರು, ವಿಜ್ಞಾನಿಗಳೂ ಸೇರಿದಂತೆ ವಿದ್ಯಾವಂತರು ಕೂಡ ಮೂಢನಂಬಿಕೆಗಳನ್ನು ಉಳ್ಳವರಾಗಿದ್ದಾರೆ. ಮಕ್ಕಳನ್ನು ಮೂಢನಂಬಿಕೆಗಳಿಂದ ದೂರ ಇಡಬೇಕು ಹಾಗೂ ಮಹಿಳೆಯರು ಹಾಗೂ ಮಕ್ಕಳು ಜಾತ್ಯತೀತವಾಗಿರಬೇಕು.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೇಲಕ್ಕೇರದ ಇಂಡಿಗೋ: ಪ್ರಯಾಣಿಕರ ಆಕ್ರೋಶ

← ಮೊದಲಪುಟದಿಂದ

ಕನೆಕ್ಟಿಂಗ್ ವಿಮಾನದ ಮೂಲಕ ವಿದೇಶಕ್ಕೆ ಹೋಗಬೇಕಿದ್ದ ಪ್ರಯಾಣಿಕರೂ ತಮ್ಮ ಯಾನ ರದ್ದುಗೊಳಿಸ ಬೇಕಾಯಿತು. ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 42 ದೇಶೀಯ ವಿಮಾನಗಳು 22 ಆಗಮನ, 20 ನಿರ್ಗಮನ ವಿಮಾನಗಳು ರದ್ದಾಗಿವೆ. ದೆಹಲಿಯ ಇಂದಿರಾ ಗಾಂಧಿ ಅಂತಾ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕನಿಷ್ಠ 33 ವಿಮಾನಗಳು ರದ್ದಾಗಿದೆ. ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ವಿಮಾನ ನಿಲ್ದಾಣದಲ್ಲಿ 51ಕ್ಕೂ ಹೆಚ್ಚು ವಿಮಾನಗಳು ನಿಂತಿವೆ. ಹೈದರಾಬಾದ್‌ನಲ್ಲಿ 19 ಇಂಡಿಗೋ ವಿಮಾನಗಳು ರದ್ದಾಗಿದೆ. ಬೆಂಗಳೂರಿನಿಂದ ದೆಹಲಿ, ಮುಂಬೈ, ಚೆನ್ನೈ, ಹೈದರಾಬಾದ್, ಗೋವಾ, ಕೋಲ್ಕತ್ತಾ ಮತ್ತು ಲಕ್ನೋ ಸಂಪರ್ಕಿಸುವ ವಿಮಾನಗಳು ಸಹ ಈ ಅಡಚಣೆಗಳಿಗೆ ಸಾಕ್ಷಿಯಾದವು.

ಪ್ರಯಾಣಿಕರ ಆಕ್ರೋಶ: ತಾಂತ್ರಿಕ ದೋಷವನ್ನು ಉಲ್ಲೇಖಿಸಿದ ವಿಮಾನಯಾನ ಸಂಸ್ಥೆ, ಹೆಚ್ಚಿನ ವಿವರಗಳನ್ನು ನೀಡದೆ ಪ್ರಯಾಣಿಕರನ್ನು ಗೊಂದಲಕ್ಕೆ ಸಿಲುಕಿಸಿದ ಆರೋಪಕ್ಕೆ ಗುರಿಯಾಗಿದೆ. ಗುರುವಾರ ಬೆಳಗಿನ ವೇಳೆಯಿಂದಲೇ ಪ್ರಯಾಣಿಕರಿಗೆ ಯಾವುದೇ ಮುನ್ನೆಚ್ಚರಿಕೆ ಸಂದೇಶ ಬಾರದ ಹಿನ್ನೆಲೆ, ಸಾವಿರಾರು ಮಂದಿ ತಮ್ಮ ಗಮ್ಯಸ್ಥಾನಕ್ಕೆ ತಲುಪುವುದಕ್ಕಾಗಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಆದರೆ ಕೌಂಟರ್‌ಗಳ ಬಳಿ 'ತಡ'ಹಾಗೂ 'ರದ್ದು' ಸೂಚನೆಯ ಬೋರ್ಡ್‌ಗಳು ಮಾತ್ರ ಎದುರಾಗಿತ್ತು. ಹಲವರು ಮನೆಬಿಟ್ಟು ಹೊರಟಿರುವಾಗಲೇ ವಿಮಾನ ರದ್ದುಪಡುವ ಬಗ್ಗೆ ಮಾಹಿತಿ ಬಂದಿರಲಿಲ್ಲ. ಕೆಲವು ಪ್ರಯಾಣಿಕರು ರಾತ್ರಿ ವೇಳೆಗೂ ವಿಮಾನ ನಿಲ್ದಾಣದಲ್ಲಿ ಕಾಯುವಂತಾಗಿತ್ತು. ಕುಟುಂಬ ಸಮೇತ ಬಂದಿದ್ದೇವೆ. ಯಾವುದೇ ಪರ್ಯಾಯ ವ್ಯವಸ್ಥೆ, ರಿಫಂಡ್ ಅಥವಾ ಸ್ಥಳಾಂತರಿಸುವ ಬಗ್ಗೆ ಸೂಕ್ತ ಮಾಹಿತಿ ನೀಡಿಲ್ಲ, ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದರು.

ದ್ವೇಷ ಭಾಷಣಕ್ಕೆ 3 ವರ್ಷ ಜೈಲು

← ಮೊದಲಪುಟದಿಂದ

ಬಹಿಷ್ಕಾರ ತಡೆ ಅಧಿಕಾರಿ ನೇಮಕ: ಸಾಮಾಜಿಕ ಬಹಿಷ್ಕಾರದಂತಹ ನಿರ್ಧಾರ ತೆಗೆದುಕೊಳ್ಳಲು ನಡೆಸುವ ಸಭೆಗಳ ಕುರಿತು ಮಾಹಿತಿ ಬಂದರೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ನಿಷೇಧಿಸುವ ಆದೇಶ ಹೊರಡಿಸಬಹುದು. ಗ್ರೂಪ್ ಎ ಅಧಿಕಾರಿಗಳನ್ನು ಸಾಮಾಜಿಕ ಬಹಿಷ್ಕಾರ ತಡೆ ಅಧಿಕಾರಿಗಳನ್ನಾಗಿ ನಿಯೋಜಿಸಬಹುದು. ಈ ಅಧಿಕಾರಿಗಳು ಕಾಯ್ದೆಯ ಜಾರಿ, ಪ್ರಕರಣ ಪತ್ತೆ ಮತ್ತು ನ್ಯಾಯಾಲಯದ ವಿಚಾರಣೆಗೆ ಸಹಕಾರ ನೀಡುವ ಹೊಣೆಗಾರಿಕೆ ನಿಭಾಯಿಸಲಿದ್ದಾರೆ. ಪರಿಸ್ಥಿತಿಗೆ ಅನುಗುಣವಾಗಿ ಪೊಲೀಸರಿಗೆ ಸಲಹೆ, ಸೂಚನೆ ನೀಡಲಿದ್ದಾರೆ. ರಾಜ್ಯದ ವಿವಿಧ ಭಾಗಗಳಲ್ಲಿ ಸಾಮಾಜಿಕ ಬಹಿಷ್ಕಾರದ ಅಮಾನುಷ ಪದ್ಧತಿ ಇನ್ನೂ ಮುಂದುವರಿದಿದೆ. ಅದರ ನಿರ್ಮೂಲನೆಗೆ ಮಸೂದೆ ಸಿದ್ಧಪಡಿಸಲಾಗಿದೆ. ಈಗಾಗಲೇ ಮಹಾರಾಷ್ಟ್ರ ರಾಜ್ಯದಲ್ಲಿ ಕಾಯಿದೆ ಜಾರಿಯಲ್ಲಿದ್ದು, ಅದೇ ರೀತಿ ರಾಜ್ಯದಲ್ಲಿ ಜಾರಿಗೆ ತರಲಾಗುತ್ತಿದೆ ಎಂದು ತಿಳಿದುಬಂದಿದೆ.

ಅಂತರ್ಜಾತಿ ವಿವಾಹಕ್ಕೆ ಬಹಿಷ್ಕಾರದ ತಿರುಗೇಟು: 2017ರಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಅಧಿನಿಯಮ ಜಾರಿಗೆ ತರಲಾಗಿದೆ. ಆದರೆ ಇದರಿಂದ ಸಾಮಾಜಿಕ ಬಹಿಷ್ಕಾರ ಸಮರ್ಥವಾಗಿ ತಡೆಯಲು ಸಾಧ್ಯವಾಗುತ್ತಿಲ್ಲ. ಸಾಮಾನ್ಯವಾಗಿ ಸಾಮಾಜಿಕ ಬಹಿಷ್ಕಾರ ಪ್ರಕರಣಗಳು ಅಂತರ್ಜಾತಿ ವಿವಾಹಗಳ ಪ್ರಕರಣಗಳಲ್ಲಿ ಹೆಚ್ಚಾಗಿ ವರದಿಯಾಗುತ್ತಿವೆ ಎಂದು ಸಭೆಯಲ್ಲಿ ಚರ್ಚಿಸಲಾಗಿದೆ.

ಬಿಜೆಪಿಗೆ ಮುಳುವಾದ ಪರ್ಸೆಂಟೇಜ್ ಹೇಳಿಕೆ

← ಮೊದಲಪುಟದಿಂದ

ಆದರೆ ಈ ವಿಷಯವನ್ನು ಅರ್ಥಮಾಡಿಕೊಳ್ಳದೇ ಪ್ರತಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿಯ ಪಾಪದ ಗಂಟನ್ನು ನಮ್ಮ ತಲೆಗೆ ಕಟ್ಟಲು ಹೋಗಿ ತಮ್ಮ ಕಾಲ ಮೇಲೆ ತಾವೇ ಚಪ್ಪಡಿ ಎಳೆದುಕೊಂಡಿದ್ದಾರೆ'' ಎಂದು ವ್ಯಂಗ್ಯವಾಡಿದ್ದಾರೆ.

ಬಿಜೆಪಿ ಕರ್ನಾಟಕದಲ್ಲಿ ಅಧಿಕಾರ ನಡೆಸಿದ ಸಮಯದಲ್ಲಿ ನಡೆಸಿರುವ ಹಗರಣಗಳು ಒಂದೇ ಎರಡೇ? ಕರೋನಾ ಕಾಲದಲ್ಲಿ ಜನ ಹಾದಿಬೀದಿ ಯಲ್ಲಿ ಸಾಯುವಾಗಲೂ ವೆಂಟಿಲೇಟರ್, ಮಾಸ್ಕ್, ಸ್ಯಾನಿಟೈಸರ್, ಐಸಿಯು ಖರೀದಿ ಎನ್ನದೆ ಎಲ್ಲದರಲ್ಲಿಯೂ ನಿರ್ಲಜ್ಜರಾಗಿ ಲೂಟಿ ಮಾಡಲಾಗಿತ್ತು. ಪ್ರತಿ ಇಲಾಖೆಯಲ್ಲಿ ಕನಿಷ್ಠ ಶೇ.40ರಷ್ಟು ಕಮಿಷನ್ ಚಾಲ್ತಿಯಲ್ಲಿತ್ತು. ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಾಟೀಲ್ ಎಂಬುವವರು ಅಂದಿನ ಸಚಿವ ಈಶ್ವರಪ್ಪನವರ ಕಾಟಕ್ಕೆ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದರು. ನೀರಾವರಿ ಇಲಾಖೆಯ ಭದ್ರಾ ಮೇಲ್ದಂಡೆ ಹಾಗೂ ಕಾವೇರಿ ನೀರಾವರಿ ನಿಗಮದಲ್ಲಿ ಭಾರೀ ಅಕ್ರಮ ನಡೆದಿದ್ದು, ಸುಮಾರು 20,000 ಕೋಟಿ ಮೊತ್ತದ ಭ್ರಷ್ಟಾಚಾರ ನಡೆದಿದೆ ಎಂದು ಸ್ವತಃ ಬಿಜೆಪಿಯ ವಿಧಾನ ಪರಿಷತ್ ಸದಸ್ಯರಾದ ಎಚ್.ವಿಶ್ವನಾಥ್ ಅವರು ನಿಮ್ಮ ಪಕ್ಷದ ರಾಜ್ಯಾಧ್ಯಕ್ಷರಾಗಿರುವ ವಿಜಯೇಂದ್ರ ವಿರುದ್ಧ ನೇರಾನೇರ ಆರೋಪ ಮಾಡಿದ್ದರು. ಪಿಎಸ್‌ಐ ನೇಮಕಾತಿಯಲ್ಲಿ ಹಗರಣ ಮಾಡಿ ನಿಮ್ಮ ಹಲವು ಬಂಧು ಮಿತ್ರರು ಜೈಲು ಸೇರಿ ಬಂದಿದ್ದಾರೆ. ಇವೆಲ್ಲಾ ಮರೆತು ಹೋಯಿತೇ? ಹೀಗೆ ಬಿಜೆಪಿ ಕಾಲದ ಹಗರಣಗಳನ್ನು ಪಟ್ಟಿಮಾಡುತ್ತಾ ಹೋದರೆ ಒಂದು ಮಹಾಗ್ರಂಥವನ್ನೇ ಬರೆಯಬಹುದು ಎಂದು ಸಿಎಂ ಕಿಡಿಕಾರಿದ್ದಾರೆ. ಇಂದು ನ ಖಾವೂಂಗಾ, ನ ಖಾನೆದೂಂಗ ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಲ್ಲಿ ಭಾರತ ಭ್ರಷ್ಟಾಚಾರದಲ್ಲೇ ಮುಳುಗೇಳುತ್ತಿದೆ. ಇದಕ್ಕೆ ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ನವರು ಬಿಡುಗಡೆ ಮಾಡಿರುವ ಜಾಗತಿಕ ಭ್ರಷ್ಟಾಚಾರಯುಕ್ತ ದೇಶಗಳ ಪಟ್ಟಿಯಲ್ಲಿ ಭಾರತ 96ನೇ ಸ್ಥಾನದಲ್ಲಿ ಇರುವುದು ಸಾಕ್ಷಿ. ಮೊದಲು ಆರ್. ಅಶೋಕ್ ಅವರು ತಮ್ಮ ಪ್ರಧಾನ ಸೇವಕರ ಬಳಿ ಭಾರತದ ಈ ದಯನೀಯ ಸ್ಥಿತಿಗೆ ಕಾರಣವೇನು ಎಂಬ ಪ್ರಶ್ನೆಯನ್ನೆತ್ತಲಿ. ಗೌರವಾನ್ವಿತ ಬಿ.ವೀರಪ್ಪನವರ ಮಾತುಗಳನ್ನು ನಮ್ಮ ಸರಕಾರಕ್ಕೆ ಅನ್ವಯಿಸಿ ಹೇಳುವ ಆರ್.ಅಶೋಕ್ ಅವರ ಮತಿಗೇಡಿತನಕ್ಕೆ ಏನೆನ್ನಬೇಕು? ನಮ್ಮ ಸರಕಾರದಲ್ಲಿ ನೇಮಕಾತಿಯಿಂದ ಹಿಡಿದು ವರ್ಗಾವಣೆಯವರೆಗೆ ಎಲ್ಲವನ್ನೂ ಪಾರದರ್ಶಕವಾಗಿಸುವ, ಯಾವುದೇ ರೀತಿಯ ಹಣ, ಅಧಿಕಾರದ ದುರ್ಬಳಕೆಯಾಗದಂತೆ ತಡೆಯುವ ಪ್ರಯತ್ನ ಜಾರಿಯಲ್ಲಿದೆ. ಆರ್. ಅಶೋಕ್ ಅವರೇ, ನೀವು ಮಾಡಿರುವ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಎರಡೂವರೆ ವರ್ಷದಲ್ಲಿ ಸ್ವಚ್ಛ ಮಾಡುವುದು ಅಸಾಧ್ಯ. ಸ್ವಲ್ಪ ಸಮಯ ಕೊಡಿ ಎಲ್ಲವನ್ನೂ ಸರಿಪಡಿಸುತ್ತೇವೆ.

ಪುಟಿನ್‌ಗೆ ವಿಶೇಷ ಆತಿಥ್ಯ

← ಮೊದಲಪುಟದಿಂದ

ರಕ್ಷಣೆ, ಇಂಧನ, ಸಹಕಾರ, ಬಾಹ್ಯಾಕಾಶ, ಕೃಷಿ, ಕೈಗಾರಿಕೆ, ಆರ್ಥಿಕ ವಿಚಾರ ಸೇರಿದಂತೆ ವಿವಿಧ ವಲಯಗಳಲ್ಲಿ ಜಂಟಿ ಪಾಲುದಾರಿಕೆ ಸಂಬಂಧ ಹಲವು ಒಪ್ಪಂದಗಳಿಗೆ ಮೋದಿ–ಪುಟಿನ್ ಸಹಿ ಹಾಕುವ ನಿರೀಕ್ಷೆಯಿದೆ. ಉಭಯ ದೇಶಗಳ ನಡುವಿನ ಕಾರ್ಯತಂತ್ರ ಸಂಬಂಧ ಮತ್ತಷ್ಟು ಬಲಗೊಳಿಸಲು ಮಾತುಕತೆ ನಡೆಯಲಿದೆ ಎನ್ನಲಾಗುತ್ತಿದೆ.

ರಾಜನಾಥ್ ಸಿಂಗ್ - ಆಂಡ್ರೆ ಬೆಲ್‌ಸೌವ್ ಜೊತೆ ಚರ್ಚೆ: ಭಾರತ–ರಷ್ಯಾ ನಡುವಿನ ಭದ್ರತೆ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಸಂಬಂಧ ಮತ್ತಷ್ಟು ಬಲಪಡಿಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ರಷ್ಯಾ ರಕ್ಷಣಾ ಸಚಿವ ಆಂಡ್ರೆ ಬೆಲ್‌ಸೌವ್ ಅವರು ಗುರುವಾರ ರಾತ್ರಿ ಮಾತುಕತೆ ನಡೆಸಿದರು. ಎಸ್–400 ವಾಯುರಕ್ಷಣಾ ವ್ಯವಸ್ಥೆಯ ಸುಧಾರಿತ ಆವೃತ್ತಿ, ಸುಖೋಯ್–30 ಫೈಟರ್ ಜೆಟ್ ವಿಮಾನಗಳ ನವೀಕರಣ, ಸೂಕ್ಷ್ಮ ಹಾಗೂ ನಿರ್ಣಾಯಕ ಸೇನಾ ತಂತ್ರಜ್ಞಾನ ಹಂಚಿಕೆ, ಬಿಡಿ ಭಾಗಗಳ ಪೂರೈಕೆ ಸಂಬಂಧ ಉಭಯ ದೇಶಗಳ ರಕ್ಷಣಾ ಸಚಿವರ ನಡುವೆ ಮಾತುಕತೆ ನಡೆಯಿತು.

ಉಗ್ರ ಕೃತ್ಯಕ್ಕೆ ಆನ್‌ಲೈನ್ ತರಬೇತಿ

← ಮೊದಲಪುಟದಿಂದ

ಅನೇಕ ಸಹೋದರಿಯರು ನೇಮಕಗೊಂಡ ತಕ್ಷಣ ಅವರ ಮನಸ್ಥಿತಿ ಬದಲಾಯಿತು. ಅವರು ಜೀವನದ ಗುರಿಯನ್ನು ಅರಿತುಕೊಂಡರು ಎಂದು ಮಸೂದ್ ಹೇಳಿದ್ದಾನೆ. ಮೂಲಗಳ ಪ್ರಕಾರ, ಜಮಾತ್ ಉಲ್ ಮೊಮಿನಾತ್‌ಗಾಗಿ ನೇಮಕಾತಿ ಅಭಿಯಾನ ಅ. 8 ರಂದು ಜೈಶೆ ಪ್ರಧಾನ ಕಚೇರಿಯಾದ ಮರ್ಕಜ್ ಉಸ್ಮಾನ್–ಒ–ಅಲಿಯಲ್ಲಿ ಪ್ರಾರಂಭ ವಾಯಿತು. ಈ ಅಭಿಯಾನದ ಭಾಗವಾಗಿ, ಪಾಕಿಸ್ತಾನದ ಬಹಾವಲ್ಪುರ್, ಮುಲ್ತಾನ್, ಸಿಯಾಲ್ ಕೋಟ್, ಕರಾಚಿ, ಮುಜಫರಾಬಾದ್ ಮತ್ತು ಕೋಟ್ಲಿ ಯಿಂದ ಮಹಿಳೆಯರನ್ನು ಭಯೋತ್ಪಾದಕ ಸಂಘಟನೆಗೆ ಸೇರಿಸಿಕೊಳ್ಳಲಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಘಟಕಗಳನ್ನು ರಚಿಸಲಾಗುವುದು, ಪ್ರತಿ ಜಿಲ್ಲೆಗೆ ಮುಂಟಜಿಮಾ (ವ್ಯವಸ್ಥಾಪಕ) ಇರುತ್ತಾರೆ ಎಂದು ಅಜರ್ ತನ್ನ ಪೋಸ್ಟ್‌ನಲ್ಲಿ ತಿಳಿಸಿದ್ದಾನೆ. ಮಸೂದ್ ಅಜರ್ ಸಹೋದರಿ ಸಾದಿಯಾ ಜಮಾತ್ ಉಲ್ ಮೊಮಿನಾತ್ ಅನ್ನು ಮುನ್ನಡೆಸುತ್ತಿ ದ್ದಾಳೆ. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಭಾರತ ನಡೆಸಿದ ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ ಸಾದಿಯಾ ಪತಿ ಯೂಸುಫ್ ಅಜರ್ ಸಾವಿಗೀಡಾಗಿದ್ದ.

500 ರು. ಶುಲ್ಕ, ನಿಯಮ ಕಟ್ಟುನಿಟ್ಟು: ಆನ್‌ಲೈನ್ ತರಗತಿಗಳು 40 ನಿಮಿಷಗಳದ್ದಾಗಿದ್ದು, ಪ್ರತಿ ಮಹಿಳೆಗೆ 500 ರೂ.ಗಳ ಶುಲ್ಕ ನಿಗದಿ ಮಾಡಲಾಗಿದೆ. ಇವರಿಗೆ ಅಜರ್ ಕಟ್ಟುನಿಟ್ಟಿನ ನಿಯಮಗಳನ್ನು ವಿಧಿಸಿದ್ದು, ಗಂಡ ಅಥವಾ ಕುಟುಂಬದ ನಿಕಟ ಸದಸ್ಯರನ್ನು ಹೊರತುಪಡಿಸಿ, ಫೋನ್ ಅಥವಾ ಮೆಸೆಂಜರ್ ಮೂಲಕ ಯಾವುದೇ ಪುರುಷರ ಜತೆ ಮಾತನಾಡುವುದನ್ನು ನಿರ್ಬಂಧಿಸಲಾಗಿದೆ. ಇವರನ್ನು ಮೂಲಭೂತವಾದಿಗಳನ್ನಾಗಿ ಮಾಡಿ ಐಸಿಸ್, ಹಮಾಸ್ ಮತ್ತು ಎಲ್‌ಇಟಿಯಂತಹ ಸಂಘಟನೆಗಳ ಪರವಾಗಿ ಆತ್ಮಹತ್ಯೆ ದಾಳಿಗೆ ಬಳಸಿಕೊಳ್ಳಲು ಜೈಷೆ ಸಂಚು ರೂಪಿಸಿದೆ ಎನ್ನಲಾಗಿದೆ.

ಕೌಶಲ್ಯಾಧಾರಿತ ಪ್ರಯೋಗಾಲಯಗಳ ಸ್ಥಾಪನೆಗೆ 457 ಕೋಟಿ ಅಂದಾಜು ವೆಚ್ಚಕ್ಕೆ ಅನುಮೋದನೆ

ಹಿಂದೂ ಧಾರ್ಮಿಕ ಸಂಸ್ಥೆಗಳ ತಿದ್ದುಪಡಿ ವಿಧೇಯಕಕ್ಕೆ ಅಸ್ತು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, 2025ಕ್ಕೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಕುಷ್ಠರೋಗದಿಂದ ಬಾಧಿತರಾದ ವ್ಯಕ್ತಿಗಳ ವಿರುದ್ಧ ಇರುವ ತಾರತಮ್ಯ ನಿವಾರಿಸಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಲಂ 25(4)(ಜಿಜಿ)ನ್ನು ತಿದ್ದುಪಡಿ ಮಾಡುವ ಕರಡು ತಿದ್ದುಪಡಿ ವಿಧೇಯಕ ಮುಂಬರುವ ವಿಧಾನ ಮಂಡಲದ ಅಧಿವೇಶನದಲ್ಲಿ ಮಂಡಿಸಲು ಅನುಮೋದನೆ ನೀಡಲಾಗಿದೆ.

ಕುಷ್ಟರೋಗದಿಂದ ಬಾಧಿತರಾದ ವ್ಯಕ್ತಿಗಳ ವಿರುದ್ಧ ಇರುವ ತಾರತಮ್ಯ ನಿವಾರಿಸಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ ಕಲಂ 25(4)(ಜಿ)ನ್ನು ತಿದ್ದುಪಡಿ ಮಾಡಲು ತೀರ್ಮಾನಿಸಲಾಗಿದೆ. ಅದರಂತೆ ಕಿವುಡ ಅಥವಾ ಮೂಕನಾಗಿದ್ದರೆ ಅಥವಾ ಕುಷ್ಟ ಎಂಬ ಪದಗಳನ್ನು ಕೈಬಿಡಲು ಪ್ರಸ್ತಾಪಿಸಲಾಗಿದೆ. ಕರ್ನಾಟಕ ಹಿಂದೂ ಧಾರ್ಮಿಕ ದತ್ತಿ ಇಲಾಖೆಯಡಿ ರಚಿಸಿರುವ ಪ್ರಾಧಿಕಾರಗಳ ಕಾರ್ಯದರ್ಶಿಗಳ ಹುದ್ದೆಗೆ ನೇಮಕಾತಿಗೆ ಸಂಬಂಧಿಸಿದಂತೆ, ಧಾರ್ಮಿಕ ದತ್ತಿ ಇಲಾಖೆಯ ಹಿರಿಯ ಶ್ರೇಣಿ ಅಧಿಕಾರಿಗಳಿಂದ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಮುಜರಾಯೇತರ ಇಲಾಖೆಗಳಿಂದ ಬಂದಿರುವ ಅಧಿಕಾರಿಗಳು ದೇವಸ್ಥಾನಗಳ ಸಮಗ್ರ ಅಭಿವೃದ್ಧಿಗೆ ಪರಿಣಾಮಕಾರಿಯಾಗಿ ಸ್ಪಂದಿಸದಿರುವುದು ಕಂಡುಬಂದಿರುವುದರಿಂದ ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳನ್ನು ಪ್ರಾಧಿಕಾರದ ಕಾರ್ಯದರ್ಶಿಗಳನ್ನಾಗಿ ನೇಮಿಸಲು ಅಧಿನಿಯಮಕ್ಕೆ ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ. ಇಲಾಖೆಯ ಗ್ರೂಪ್–ಎ ಹಿರಿಯ ಶ್ರೇಣಿ ಅಧಿಕಾರಿಗಳು ಹೆಚ್ಚು ಅನುಭವ ಹೊಂದಿರುವುದರಿಂದ, ಸಂಬಂಧಪಟ್ಟ ಪ್ರಾಧಿಕಾರದ ಕಾರ್ಯದರ್ಶಿ ಹುದ್ದೆಗೆ ನೇಮಿಸಲು ಈ ಅಧಿಕಾರಿಗಳಿಗೆ ಅವಕಾಶ ಕಲ್ಪಿಸಲು ತಿದ್ದುಪಡಿ ತರಲಾಗುತ್ತಿದೆ. ಈ ಸಂಬಂಧ ಶ್ರೀ ಘಾಟಿ ಸುಬ್ರಮಣ್ಯ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025, ಶ್ರೀ ಚಾಮುಂಡೇಶ್ವರಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ಕಾನೂನುಗಳ (ತಿದ್ದುಪಡಿ) ವಿಧೇಯಕ 2025ಗೆ ಸಂಪುಟ ಸಭೆ ಅಸ್ತು ನೀಡಿದೆ.

ವಿವಿಧ ವಿಧೇಯಕಗಳಿಗೆ ಒಪ್ಪಿಗೆ: ಬಯಲು ಸೀಮೆ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳ ವ್ಯಾಪ್ತಿಯಲ್ಲಿ, ನಿರ್ದಿಷ್ಟ ಕ್ಷೇತ್ರ ಹೊಂದಿರದ ವಿಧಾನ ಪರಿಷತ್ ಸದಸ್ಯರಿಗೂ ಪ್ರಾತಿನಿಧ್ಯ ನೀಡಲು ನಿರ್ಧರಿಸಲಾಗಿದೆ. ಇದಕ್ಕಾಗಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ತಿದ್ದುಪಡಿ ವಿಧೇಯಕ – 2025, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ತಿದ್ದುಪಡಿ ವಿಧೇಯಕ – 2025ಕ್ಕೆ ಅಂಗೀಕಾರ ಪಡೆಯಲಾಗಿದೆ. ಇದರೊಂದಿಗೆ ಕರ್ನಾಟಕ ರಾಜ್ಯ ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ವಿಧೇಯಕ – 2025 ಹಾಗೂ ಕರ್ನಾಟಕ ಒಳನಾಡು ನೌಕೆ ನಿಯಮಗಳು –2025 ವಿಧೇಯಕಗಳಿಗೆ ಸಂಪುಟ ಅನುಮೋದನೆ ನೀಡಿದೆ.

1777 ಎಕರೆ ಡಿನೋಟಿಫೈಗೆ ಒಪ್ಪಿಗೆ

ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ ರೈತರ ಹೋರಾಟಕ್ಕೆ ಮಣಿದ ರಾಜ್ಯ ಸರಕಾರ 1777 ಎಕರೆ ಡಿನೋಟಿಫೈ ಮಾಡಲು ಸಂಪುಟ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಗಿದೆ. 2025 ಜುಲೈ 15ರಂದು ರೈತರೊಂದಿಗೆ ನಡೆದ ಸಭೆಯಲ್ಲಿ ಕೆಐಎಡಿಬಿ ಅಂತಿಮ ಅಧಿಸೂಚನೆ ರದ್ದು ಮಾಡುವುದಾಗಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ತಿಳಿಸಿದ್ದರು. ಸಚಿವ ಸಂಪುಟ ಸಭೆ ಯಲ್ಲಿ ರೈತರ 1777ಎಕರೆ ಡಿನೋಟಿಫೈಗೆ ಒಪ್ಪಿಗೆ ನೀಡಲಾಗಿದೆ. ಹೆಬ್ಬಾಳದಿಂದ ಮೇಖ್ರಿ ಸರ್ಕಲ್ ವರೆಗೆ ಅವಳಿ ಸುರಂಗ ರಸ್ತೆ ನಿರ್ಮಾ ಣಕ್ಕೆ ಪೂರಕವಾಗಿ ಎಲಿವೇಟೆಡ್ ಕಾಮಗಾರಿಗಳ ನಿರ್ಮಾಣ ಮಾಡಲು 2215 ಕೋಟಿ ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ. ಇನ್ನು ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದ ಜಾಗತಿಕ ಬಂಡವಾಳ ಹೂಡಿಕೆ ದಾರರ ಸಮಾವೇಶ ಇನ್ವೆಸ್ಟ್ ಕರ್ನಾಟಕ 20253ದ ಪರಿಷ್ಕೃತ ವೆಚ್ಚ ರೂ.100.70 ಕೋಟಿಗಳಿಗೆ ಘಟನೋತ್ತರ ಅನುಮೋದನೆ ನೀಡಲಾಗಿದೆ.

ಪ್ರಮುಖಾಂಶ

- ಗದಗ,ಕಲಬುರಗಿ,ದಾವಣಗೆರೆ, ಕೆಂಗೇರಿಯಲ್ಲಿ ಕೌಶಲ್ಯಾಧಾರಿತ ಪ್ರಯೋಗಾಲಯಗಳ ಸ್ಥಾಪನೆಗೆ 457 ಕೋಟಿ ಅಂದಾಜು ಮೊತ್ತಕ್ಕೆ ಒಪ್ಪಿಗೆ
- ಕೊಪ್ಪಳ ಜಿಲ್ಲಾಸ್ಪತ್ರೆ ಆವರಣದಲ್ಲಿ ಕಾಮಗಾರಿಗಳಿಗಾಗಿ 28 ಕೋಟಿ ವೆಚ್ಚಕ್ಕೆ ಅನುಮೋದನೆ
- 19 ಮೊರಾರ್ಜಿ ದೇಸಾಯಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ 304 ಕೋಟಿ ವೆಚ್ಚ
- ಹೆಬ್ಬಾಳದಲ್ಲಿ ಪಶುವೈದ್ಯಕೀಯ ವಿವಿಗೆ ಅವಕಾಶ ನೀಡಲು 27 ಕೋಟಿ ವೆಚ್ಚಕ್ಕೆ ಸಂಪುಟ ಅನುಮೋದನೆ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಾಮಗಾರಿ ವಿಭಾಗ ಕಲಬುರಗಿ
ಎಂ.ಎಸ್.ಕೆ.ಮಿಲ್ ರಸ್ತೆ ಜೇವರ್ಗಿ ಕ್ರಾಸ್, ಕಲಬುರಗಿ
ಸಂ.ಕಕರಸಾ/ಕಾನಿಅ/ಡಿಬಿ/ಟೆ/784/2025–26 ದಿನಾಂಕ:04.12.2025
ಟೆಂಡರ್ ನೋಟಿಫಿಕೇಶನ್ ಪ್ರಕಟಣೆ ಸಂಖ್ಯೆ : 12/2025–26
Through GOK e-procurement platform www.kppp.karnataka.gov.in
1) **ಕಾಮಗಾರಿಯ ವಿವರ : ಇಂಡಿ ಹಳೆಯ ಬಸ್ ಘಟಕದ ನಿವೇಶನದಲ್ಲಿ ಬಸ್ ನಿಲ್ದಾಣವನ್ನು ಪ್ರಯಾಣಿಕರ ಮೂಲಭೂತ ಸೌಕರ್ಯಗಳೊಂದಿಗೆ ವಿಸ್ತರಿಸುವ ಕಾಮಗಾರಿ.** 2) ಲೆಕ್ಕ ಶೀರ್ಷಿಕೆ : ಶಾಸಕರ ಅನುದಾನ ಅಡಿಯಲ್ಲಿ, 3) ಟೆಂಡರಿಗಿಟ್ಟ ಮೊತ್ತ : **ಕನಿಷ್ಠ : ರೂ.700.00 ಲಕ್ಷ, ಗರಿಷ್ಠ ರೂ. 700.00** ಲಕ್ಷ, 4) ಗುತ್ತಿಗೆದಾರರ ಅರ್ಹತೆ: ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 5) ಟೆಂಡರ್‌ನ ಸ್ಪಷ್ಟೀಕರಣದ ಅಂತಿಮ **ದಿನಾಂಕ : 29–12–2025 ಸಾಯಂಕಾಲ 5:00 ಗಂಟೆಯವರೆಗೆ,** 6) ಟೆಂಟರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : **02–01–2026 ಸಾಯಂಕಾಲ 17.00 ಗಂಟೆಯವರೆಗೆ,** 8) ಟೆಂಡರ್ ಬಿಡ್ ತೆರೆಯುವ **ದಿನಾಂಕ: 05.01.2026 ಮುಂಜಾನೆ 11:00** ಗಂಟೆಯವರೆಗೆ, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಕಲಬುರಗಿ, ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ. ಮೋ. ನಂ 7760992033 / 08472–220663, 10) ಅಂತರಜಾಲ ತಾಣದ ವಿಳಾಸ : ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ ಈ ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ನೋಡಬಹುದಾಗಿದೆ WWW.kppp.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಕ.ಕ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಕಲಬುರಗಿ
ವಾ.ಸಾ.ಸಂ.ಇ./ಕಲಬುರಗಿ/810/ದೇಶಪಾಂಡೆ ಪಬ್ಲಿಸಿಟಿ/2025–26

ಮಂಗಳೂರು ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಂದ ಕಿಡಿ

ಪದೇಪದೆ ಮುಂಬಯಿ ವಿಮಾನ ವಿಳಂಬ

ಮಂಗಳೂರು: ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಲವೊಂದು ಏರ್‌ಲೈನ್ಸ್‌ಗಳು ಪದೇ ಪದೇ ತಾಂತ್ರಿಕ ಕಾರಣವನ್ನು ನೀಡಿ ಪ್ರಯಾಣವನ್ನು ವಿಳಂಬ ಮಾಡುವುದು, ಮುಂದೂಡುವುದು, ರದ್ದು ಮಾಡುವುದು ಮುಂದುವರಿದಿದೆ. ಇಂಡಿಗೋ ವಿಮಾನ ಮಂಗಳೂರಿನಿಂದ ಮುಂಬಯಿಗೆ ಮಂಗಳವಾರ ರಾತ್ರಿ 9.40ಕ್ಕೆ ತೆರಳಬೇಕಿತ್ತು. ಈ ವಿಮಾನದಲ್ಲಿ ಒಟ್ಟು 175 ಮಂದಿ ಪ್ರಯಾಣಿಸುವವರಿದ್ದರು. ಆದರೆ ಈ ವಿಮಾನ ತಾಂತ್ರಿಕ ಕಾರಣದಿಂದ 10.55ಕ್ಕೆ ಹೊರಡಲಿದೆ ಎಂದು ಏರ್‌ಲೈನ್ಸ್ ಸಿಬ್ಬಂದಿ ಸೂಚನೆ ನೀಡಿದ್ದಾರೆ. ಆದರೂ ಮರುನಿಗದಿ ಸಮಯ ಆಗಮಿಸಿದರೂ ವಿಮಾನ ಮಾತ್ರ ಹೊರಡಲೇ ಇಲ್ಲ. ಇದಾದ ಬಳಿಕ ಪದೇ ಪದೇ 11.15, 11.45, 12.00, 1.15, 2.00ಗಂಟೆ ಸೇರಿದಂತೆ ಸಮಯ ಬದಲಾವಣೆ ಸಂದೇಶ ಹಾಕಿದರು. ವಿಮಾನ ವಿಳಂಬ, ಸಿಬ್ಬಂದಿ ಬೇಜವಾಬ್ದಾರಿಯಿಂದ ಬೇಸತ್ತ ಪ್ರಯಾಣಿಕರು ಏರ್‌ಲೈನ್ಸ್ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದು, ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು. ಇದಾದ ಬಳಿಕ ಬದಲಿ ವಿಮಾನಕ್ಕಾಗಿ ವ್ಯವಸ್ಥೆ ಮಾಡಲಾಯಿತು. ಮಂಗಳವಾರ ವಿಮಾನ 9.45ಕ್ಕೆ ಹೊರಡುವುದಾದರೂ ಪ್ರಯಾಣಿಕರು ಒಂದು ಗಂಟೆ ಮುಂಚಿತವಾಗಿ 8.45ಕ್ಕೆ ವಿಮಾನ ನಿಲ್ದಾಣ ತಲುಪಿದ್ದಾರೆ.

ಮಂಗಳೂರು ವಿಮಾನ ನಿಲ್ದಾಣದಲ್ಲಿ ತಾಂತ್ರಿಕ ಸಮಸ್ಯೆ ಸೇರಿದಂತೆ ಇನ್ನಿತರ ಕಾರಣದಿಂದ ದೇಶ–ವಿದೇಶಕ್ಕೆ ತೆರಳುವ ವಿಮಾನ ವಿಳಂಬವಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಲೇ ಇದೆ. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಹಿರಿಯ ಅಧಿಕಾರಿಗಳ ಜತೆ ಮಾತುಕತೆ ನಡೆಸುತ್ತೇನೆ.
ಕ್ಯಾ.ಬ್ರಿಜೇಶ್ ಚೌಟ, ಸಂಸದ

ಸಮಾಚಾರ ಸಣ್ಣದಲ್ಲ

ಅಪೆಕ್ಸ್ ಬ್ಯಾಂಕ್‌ಗೆ ರಾಹುಲ್ ನಿರ್ದೇಶಕ

ಬೆಳಗಾವಿ: ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಮಾಜಿ ಡಿಸಿಎಂ ಲಕ್ಷ್ಮಣ ಸವದಿಗೆ ನಿರಾಸೆಯಾಗಿದೆ. ಬೆಳಗಾವಿ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಪುತ್ರ ರಾಹುಲ್ ಜಾರಕಿಹೊಳಿ ಬಿಡಿಸಿಸಿಯಿಂದ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಈ ಮೂಲಕ ಮತ್ತೊಮ್ಮೆ ಸವದಿ ವಿರುದ್ಧ ಜಾರಕಿಹೊಳಿ ಕುಟುಂಬ ಮೇಲುಗೈ ಸಾಧಿಸಿದೆ. ಬಿಜೆಪಿ ತೊರೆದು ಕಾಂಗ್ರೆಸ್ ಸೇರಿ ಶಾಸಕ ಲಕ್ಷ್ಮಣ ಸವದಿ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದರು. ಈ ಮಧ್ಯೆ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಇವರನ್ನು ವ್ಯವಸ್ಥಿತವಾಗಿ ಕೆಳಗಿಳಿಸುವಲ್ಲಿ ಜಾರಕಿಹೊಳಿ ಸಹೋದರರು ಯಶಸ್ವಿಯಾಗಿದ್ದಾರೆ. ಕಳೆದ ಕೆಲ ದಿನಗಳ ಹಿಂದೆ ನಡೆದಿದ್ದ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಬೆಳಗಾವಿ ತಾಲೂಕಿನಿಂದ ರಾಹುಲ್ ಜಾರಕಿಹೊಳಿ ಅವಿರೋಧ ಆಯ್ಕೆಯಾಗಿದ್ದರು. ಈ ಕುರಿತು ಪ್ರತಿಕ್ರಿಯೆ ನೀಡಿದ ಶಾಸಕ ಬಾಲಚಂದ್ರ ಜಾರಕಿಹೊಳಿ. ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೆಬ್ ಜೊಲ್ಲೆ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸರ್ವಾನುಮತದಿಂದ ರಾಹುಲ್ ಜಾರಕಿಹೊಳಿ ಅವರನ್ನು ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಆಯ್ಕೆ ಮಾಡಿದ್ದು ಇದರಿಂದ ಬಿಡಿಸಿಸಿ ಬ್ಯಾಂಕ್ ಅಭಿವೃದ್ಧಿಗೆ ಸಹಾಯವಾಗಲಿದೆ ಎಂದರು.

ನೌಕಾ ನೆಲೆಯಲ್ಲಿ ಚಿರತೆ ಪ್ರತ್ಯಕ್ಷ



ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಕಾರವಾರ ಬಳಿಯ ಕದಂಬ ನೌಕಾನೆಲೆ ಬಳಿ ಚಿರತೆಯೊಂದು ಪ್ರತ್ಯಕ್ಷವಾಗಿದ್ದು, ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ನೌಕಾನೆಲೆ ವಸತಿ ಗೃಹದ ಬಳಿಕ ಚಿರತೆ ಕಾಣಿಸಿಕೊಂಡಿದ್ದು, ಈ ಕುರಿತ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ನಿವಾಸಿಗಳನ್ನು ಮನೆಯೊಳಗೆ ಇರುವಂತೆ ಎಚ್ಚರಿಕೆ ನೀಡಲಾಗಿದೆ. ವಿಡಿಯೊದಲ್ಲಿ ಅರ್ಗಾದಲ್ಲಿರುವ ನೌಕಾಪಡೆ ಸಿಬ್ಬಂದಿ ವಸತಿ ನಿಲಯದ ಬಳಿ ಚಿರತೆ ನಡೆದುಕೊಂಡು ಹೋಗುತ್ತಿರುವುದು ಕಂಡುಬಂದಿದೆ. ಈ ಹಿಂದೆ ಕೂಡ ಇದೇ ಪ್ರದೇಶದಲ್ಲಿ ಚಿರತೆ ಕಾಣಿಸಿಕೊಂಡಿತ್ತು.

ಚಿರತೆ ಸೆರೆ: ನಿಟ್ಟುಸಿರು ಬಿಟ್ಟ ಸ್ಥಳೀಯರು



ಹಾವೇರಿ: ಕಳೆದ ಒಂದು ತಿಂಗಳಿನಿಂದ ರೈತರ ನಿದ್ದೆಗೆಡಿಸಿದ್ದ ಚಿರತೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲೂಕಿನ ಕಡೂರು ಗ್ರಾಮದ ಗುಡ್ಡದ ಸಮೀಪದ ರೈತರ ಜಮೀನಿನಲ್ಲಿ ಚಿರತೆ ಸೆರೆಯಾಗಿದೆ. ಕಳೆದ 1 ತಿಂಗಳಿನಿಂದ ನಿರಂತರವಾಗಿ ಚಿರತೆ ಕಾಣಿಸಿಕೊಂಡಿದ್ದು ಜನರ ಆತಂಕಕ್ಕೆ ಕಾರಣವಾಗಿತ್ತು. ಚಿರತೆ ಭಯದಿಂದ ಜನರು ಕೃಷಿ ಕೆಲಸಕ್ಕೆ ಹೋಗಲು ಹಿಂದೇಟು ಹಾಕುತ್ತಿದ್ದರು. ಒಂದು ವಾರದ ಹಿಂದೆ ತೋಟದ ಮನೆಯ ಸಿಸಿಟಿವಿಯಲ್ಲಿ ಚಿರತೆಯ ದೃಶ್ಯ ಸೆರೆಯಾಗಿತ್ತು. ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಚಿರತೆ ಬಿದ್ದಿದೆ.

ಸುಪ್ರೀಂ ಆದೇಶ: 47 ಮನೆಗಳು ನೆಲಸಮ

ಹುಬ್ಬಳ್ಳಿ: ಸುಪ್ರೀಂಕೋರ್ಟ್ ಆದೇಶ ಹಿನ್ನೆಲೆ ಅಕ್ರಮವಾಗಿ ಕಟ್ಟಿದ್ದ 47 ಮನೆಗಳನ್ನು ತೆರವು ಮಾಡಲಾಗಿದೆ. ಮೂಲ ದಾಖಲಾತಿ ನೋಡದೆ ಮೋಸ ಹೋಗಿ, ಮನೆ ಮನೆ ಕಟ್ಟಿಕೊಂಡವರು ಬದುಕು ಬೀದಿಗೆ ಬಂದಿದೆ. ಹುಬ್ಬಳ್ಳಿ ನಗರದ ಉದಯ ನಗರದಲ್ಲಿ ಮನೆಗಳ ತೆರವು ಕಾರ್ಯ ನಡೆದಿದೆ. ಮೂಲತಃ ರಾಮರಾವ್ ಸಬನಿಸ್ ಎನ್ನುವವರಿಗೆ ಸೇರಿದ್ದ ನಿವಾಸಿಗಳನ್ನು ಸಿಕಂದರ್ ಎನ್ನುವ ವ್ಯಕ್ತಿ ತನ್ನ ಭೂಮಿ ಎಂದು ಸುಳ್ಳು ಹೇಳಿ ಜನರಿಗೆ ಮಾರಾಟ ಮಾಡಿದ್ದ. ಕಡಿಮೆ ಬೆಲೆಗೆ ನಿವೇಶನ ಪಡೆದವರು ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದರು. ಹೀಗಾಗಿ ರಾಮರಾವ್ ಕೋರ್ಟ್ ಮೆಟ್ಟಿಲು ಹತ್ತಿದ್ದರು. ಈ ಬಗ್ಗೆ ಸುದೀರ್ಘ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ರಾಮರಾವ್ ಪರ ತೀರ್ಪು ನೀಡಿದೆ. ಈ ಮನೆಗಳ ತೆರವು ಕಾರ್ಯ ನಡೆದಿದೆ.

ವಿಶ್ವವಾಣಿ ಕ್ಲಬ್ ಹೌಸ್
05.12.2025
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ ಪಿ.ಕೆ.ನಂದೀಶ
ವಿಷಯ
ಅರವಿಂದರ ಸಾವಿತ್ರಿ-6

vishwavani.news

ಬೆಳಗಾವಿ ಅಧಿವೇಶನಕ್ಕೆ ಸುವರ್ಣಸೌಧದಲ್ಲಿ ಸಕಲ ಸಿದ್ಧತೆ | 6 ಸಾವಿರಕ್ಕೂ ಅಧಿಕ ಪೊಲೀಸರ ನಿಯೋಜನೆ

ಪ್ರತಿಭಟನೆಗೆ 50 ಸಂಘಟನೆಗಳು ಸಜ್ಜು: ಕಟ್ಟೆಚ್ಚರ

ವಿನಾಯಕ ಮಠಪತಿ ಬೆಳಗಾವಿ

ಬೆಳಗಾವಿ ಸುವರ್ಣಸೌಧದಲ್ಲಿ ಡಿ.8 ರಿಂದ 19ರ ರವರೆಗೆ ನಡೆಯಲಿರುವ ಚಳಿಗಾಲ ಅಧಿವೇಶನ ವೇಳೆ ಸಾಲು, ಸಾಲು ಪ್ರತಿಭಟನೆಗಳು ನಡೆಯಲಿವೆ. ಈಗಾಗಲೇ ಸುಮಾರು 50ಕ್ಕೂ ಅಧಿಕ ಸಂಘಟನೆಗಳು ಪ್ರತಿಭಟನೆಗೆ ಅನುಮತಿ ಕೋರಿ ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಹೆಸರು ನೊಂದಾಯಿಸಿದ್ದು, ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾಡಳಿತ ಕಟ್ಟೆಚ್ಚರ ವಹಿಸಿದೆ.

ಕಳೆದ ಚಳಿಗಾಲ ಅಧಿವೇಶನ ಸಂದರ್ಭದಲ್ಲಿ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ ನಡೆದ ಪ್ರತಿಭಟನೆ ವೇಳೆ ಉಂಟಾದ ಘರ್ಷಣೆಯಲ್ಲಿ ಲಾಠಿಚಾರ್ಜ್ ಮಾಡುವ ಅನಿವಾರ್ಯತೆ ಸೃಷ್ಟಿಯಾಗಿತ್ತು. ಈ ರೀತಿಯ ಘಟನೆ ಮರುಕಳಿಸದಂತೆ ಪೊಲೀಸ್ ಇಲಾಖೆ ಮುತುವರ್ಜಿ ವಹಿಸಿದ್ದು ಪ್ರತಿಭಟನೆ ನಡೆಸುವ ಸಂಘಟನೆಗಳಿಗೆ ಕಡಿಮೆ ಜನರನ್ನು ಕರೆದುಕೊಂಡು ಬರುವಂತೆ ಮೊದಲೇ ನಿರ್ದೇಶನ ನೀಡಲಾಗುತ್ತಿದೆ.

ಅಧಿವೇಶನ ಸಂದರ್ಭದಲ್ಲಿ ರೈತರ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಬಿಜೆಪಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆಗೆ ಮುಂದಾಗಿದೆ. ಇನ್ನೂ ಕಬ್ಬು ಬೆಳೆಗಾರರ ಸಮಸ್ಯೆ ಕುರಿತು ರಾಜ್ಯ ರೈತ ಸಂಘ ಹೋರಾಟಕ್ಕೆ ಕರೆ ನೀಡಿದೆ. ಅಷ್ಟೇ ಅಲ್ಲದೆ ರಾಜ್ಯದ ವಿವಿಧ ಭಾಗಗ ಳಿಂದ ಜನ ಪ್ರತಿಭಟನೆಗೆ ಆಗಮಿಸುತ್ತಿರುವ ಹಿನ್ನೆಲೆ ಯಲ್ಲಿ ಭದ್ರತೆ ದೃಷ್ಟಿಯಿಂದ ಈ ಬಾರಿ 6 ಸಾವಿರಕ್ಕೂ ಅಧಿಕ ಪೊಲೀಸರನ್ನು ನಿಯೋಜನೆ ಮಾಡಲಾಗುತ್ತಿದೆ.

ಅಧಿವೇಶನದ ಹಿನ್ನೆಲೆ ಬೆಳಗಾವಿ ಸುವರ್ಣಸೌಧಕ್ಕೆ ಜಿಲ್ಲಾಧಿಕಾರಿ ಮೊಹ್ಮದ್ ರೋಷನ್, ನಗರ ಪೊಲೀಸ್ ಆಯುಕ್ತ ಭೂಷನ್ ಗುಲಾಬರಾವ್ ಭೋರಸೆ ಭೇಟಿ ನೀಡಿ ಸಿದ್ಧತೆ ಪರಿಶೀಲನೆ ನಡೆಸಿದರು.

ಬಿಜೆಪಿ ಬೃಹತ್ ಪ್ರತಿಭಟನೆಗೆ ಸನ್ನದ್ಧ: ರೈತರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ನೇತೃತ್ವದಲ್ಲಿ ಸುಮಾರು 20 ಸಾವಿರಕ್ಕೂ ಅಧಿಕ ರೈತರನ್ನು ಸೇರಿಸಿ ಸರಕಾರದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲು ಬಿಜೆಪಿ ಸಜ್ಜಾಗಿದೆ. ಡಿ.9 ರಂದು ಪ್ರತಿಭಟನೆ ದಿನಾಂಕ ನಿಗದಿಯಾಗಿದ್ದು, ಈ ಸಂದರ್ಭದಲ್ಲಿ ಬಿಜೆಪಿ ನಾಯಕರು ಉಪಸ್ಥಿತರಿರುವರು. ಅಷ್ಟೇ ಅಲ್ಲದೆ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಬಿಜೆಪಿ ನಾಯಕರು ಗ್ರಾಮ ವಾಸ್ತವ್ಯಕ್ಕೆ ಸಿದ್ಧತೆ ನಡೆಸಿದ್ದಾರೆ. ಅಧಿವೇಶನ ವೇಳೆ ಬೆಳಗಾವಿ ಜಿಲ್ಲೆಯ ವಿವಿಧ ತಾಲೂಕಿನ ಆಯ್ದ ಗ್ರಾಮಗಳಲ್ಲಿ ಬಿಜೆಪಿಯಿಂದ ತಲಾ ಒಬ್ಬ ನಾಯಕ ಗ್ರಾಮ ವಾಸ್ತವ್ಯ ಮಾಡಲಿದ್ದು ಜನರ ಸಮಸ್ಯೆಗೆ ಧ್ವನಿಯಾಗುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸುವ ಚಿಂತನೆ ನಡೆಸಿದೆ.

ರಾಜ್ಯದ ರೈತರ ಸಮಸ್ಯೆ ಗಳಿಗೆ ಸರಕಾರ ತಕ್ಷಣ ಪರಿಹಾರ ನೀಡಬೇಕು, ಹಾಗೆಯೇ ಬೆಳೆಗಳಿಗೆ ಬೆಂಬಲ ಬೆಲೆ ನೀಡುವಂತೆ ಆಗ್ರಹಿಸಿ ಡಿ.9 ರಂದು ಬೃಹತ್ ಪ್ರತಿಭಟನೆ ಆಯೋಜಿಸಲಾಗುತ್ತಿದೆ. ಈ ವೇಳೆ ಜಿಲ್ಲೆಯಾದ್ಯಂತ 20 ಸಾವಿ ರಕ್ಕೂ ಅಧಿಕ ಜನ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

- **ಬಾಲಚಂದ್ರ ಜಾರಕಿಹೊಳಿ** ಮಾಜಿ ಸಚಿವ

6 ಸಾವಿರ ಪೊಲೀಸ್ ಸಿಬ್ಬಂದಿ ನಿಯೋಜನೆ: ಬೆಳಗಾವಿ ಚಳಿಗಾಲ ಅಧಿವೇಶನ ವೇಳೆ ನಡೆಯುವ ಸಾಲು, ಸಾಲು ಪ್ರತಿಭಟನೆಗೆಂದು ಸಾವಿರಾರು ಸಂಖ್ಯೆಯಲ್ಲಿ ಜನ ಸೇರುತ್ತಾರೆ. ಈ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಠಿಣ ಕ್ರಮಕ್ಕೆ ಜಿಲ್ಲಾಡಳಿತ ಮುಂದಾಗಿದೆ. ಈ ವರ್ಷ 6 ಸಾವಿರಕ್ಕೂ ಅಧಿಕ ಪೊಲೀಸ್ ಸಿಬ್ಬಂದಿಗಳನ್ನು ಭದ್ರತೆಗೆಂದು ನಿಯೋಜಿಸಲಾಗಿದೆ. 6 ಐಪಿಎಸ್ ಅಧಿಕಾರಿಗಳು ಸೇರಿ 16 ಅಧಿಕಾರಿಗಳು ಭದ್ರತೆ ಮೇಲುಸ್ತುವಾರಿ ವಹಿಸಲಿದ್ದಾರೆ. ಜತೆಗೆ ಸೂಕ್ಷ್ಮ ಪ್ರದೇಶಗಳಲ್ಲಿ ಡ್ರೋಣ್ ಕಣ್ಗಾವಲು ಇರಲಿದೆ.

ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಸೂಕ್ತ ಭದ್ರತೆ ಆಯೋಜಿಸಲಾಗಿದೆ. ಬಾಂಬ್ ಸ್ಫೋಟ ಪ್ರಕರ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಪೊಲೀಸ್ ಇಲಾಖೆ ಹೆಚ್ಚಿನ ಕಟ್ಟೆಚ್ಚರ ಕೈಗೊಂಡಿದ್ದು ಸುವರ್ಣಸೌಧದ ಸುತ್ತಲೂ 3 ಕಿ.ಮೀ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

- **ಭೂಷನ್ ಭೋರಸೆ** ನಗರ ಪೊಲೀಸ್ ಆಯುಕ್ತ

2012ರಿಂದ ಈವರೆಗೂ ದಾಖಲಾದ ಪ್ರಕರಣ: ಸುವರ್ಣಸೌಧದಲ್ಲಿ ಈವರೆಗೆ 11 ಬಾರಿ ಅಧಿವೇಶನ ನಡೆದಿವೆ. ಈವರೆಗೆ ನಡೆದಿರುವ ಹಿಂಸಾತ್ಮಕ ಪ್ರತಿಭಟನೆ ಸೇರಿ 27 ಪ್ರಕರಣಗಳು ದಾಖಲಾಗಿವೆ. 21 ಸಾರ್ವಜನಿಕರು ಹಾಗೆಯೇ 71 ಪೊಲೀಸ್ ಸಿಬ್ಬಂದಿಗೆ ಗಾಯಗಳಾಗಿವೆ. ಕಳೆದ ವರ್ಷ ನಡೆದ ಪಂಚಮಸಾಲಿ ಪ್ರತಿಭಟನೆ ಪ್ರಕರಣ ಸಧ್ಯ ನ್ಯಾಯಾಲಯದಲ್ಲಿದೆ. ಇನ್ನೂ ಅಧಿವೇಶನ ವೇಳೆ ಎಂಇಎಸ್ ಮಹಾಮೇಳಾವ್ ನಡೆಸುವ ಸಾಧ್ಯತೆ ಇದ್ದು ಇದಕ್ಕೆ ಜಿಲ್ಲಾಡಳಿತ ಅನುಮತಿ ನಿರಾಕರಣೆ ಮಾಡಿದೆ.

ಮುಖ್ಯಮಂತ್ರಿ ಬದಲಾವಣೆ ಚರ್ಚೆ ಕುರಿತು ಪಿಜಿಆರ್ ಸಿಂಧ್ಯ ಅಭಿಪ್ರಾಯ

ಬೆಂಕಿ ಇಲ್ಲದೆ ಹೊಗೆ ಬರಲು ಸಾಧ್ಯವಿಲ್ಲ



ರಾಮನಗರ: ಆತ್ಮೀಯ ಸ್ನೇಹಿತ ಹಾಗೂ ನನ್ನ ತಾಲೂಕಿನವರಾದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೂ ಸಿಎಂ ಆಗಲು ಒಮ್ಮೆ ಅವಕಾಶ ಸಿಗಬೇಕು ಎಂಬುದು ನನ್ನ ಹಾಗೂ ಇಡೀ ಜಿಲ್ಲೆಯ ಜನರ ಆಸೆಯಾಗಿದೆ. ಸಿಎಂ ಆಗಿ ಎರಡೂವರೆ ವರ್ಷ ಪೂರೈಸಿರುವ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರಿಸಬೇಕೇ ಅಥವಾ ಮುಂದುವರಿಯಬೇಕೇ ಎಂಬುದನ್ನು ಪಕ್ಷದ ನಾಯಕರು ನಿರ್ಧರಿಸಬೇಕು ಎಂದು ಮಾಜಿ ಸಚಿವ ಹಾಗೂ ಕಾಂಗ್ರೆಸ್ ನಾಯಕ ಪಿಜಿಆರ್ ಸಿಂಧ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಕಿ ಇಲ್ಲದೆ ಹೊಗೆ ಬರಲು ಸಾಧ್ಯವಿಲ್ಲ. ಹೊಗೆ ಬಂದಿದೆ. ಮುಂದೇನಾಗುತ್ತದೊ ನೋಡೋಣ. ಆದರೆ, ಸಿಎಂ ಯಾರಾಗಬೇಕು ಎಂಬುದು ಪಕ್ಷದ ಆಂತರಿಕ ವಿಚಾರ. ಅದು ಪಕ್ಷದ ವೇದಿಕೆ ಯಲ್ಲಿ ಬಗೆಹರಿಯಬೇಕೇ ವಿನಾ ಬೇರೆ ವೇದಿಕೆಗಳ ದುರುಪಯೋಗ ಆಗಬಾರದು. ಇವೆಲ್ಲದರ ನಡುವೆ ಸಿಎಂ ಮತ್ತು ಡಿಸಿಎಂ ಒಟ್ಟಿಗೆ ಉಪಾಹಾರ ಸೇವಿಸಿ, ನಾವಿಬ್ಬರೂ ಒಗ್ಗಟ್ಟಿನಿಂದ ಹೋಗಬೇಕು ಎಂಬ ನಿರ್ಧಾರಕ್ಕೆ ಬಂದಿರುವುದು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಎಂದರು. ರಾಜ್ಯದ ಜನ ನಮಗೆ ಬಹುಮತ ಕೊಟ್ಟಿದ್ದಾರೆ. ಅದನ್ನು ಉಳಿಸಿಕೊಂಡು ಗೊಂದಲಕ್ಕೆ ಅವಕಾಶವಿಲ್ಲದಂತೆ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಆಡಳಿತ ನಡೆಸುವುದು ಆದ್ಯತೆಯಾಗಬೇಕು ಎಂದು ಹೇಳಿದರು.

ರಾಜಕಾರಣವೆಂದರೆ ಹಗ್ಗಜಗ್ಗಾಟ ಸಾಮಾನ್ಯ. ಕೆಂಗಲ್ ಹನುಮಂತಯ್ಯ, ಎಸ್.ನಿಜಲಿಂಗಪ್ಪ, ರಾಮಕೃಷ್ಣ ಹೆಗಡೆ ಸೇರಿದಂತೆ ಎಲ್ಲರ ಕಾಲದಲ್ಲೂ ಅಧಿಕಾರದ ಹಗ್ಗಜಗ್ಗಾಟವಿತ್ತು. ಸದ್ಯ ಮುಖ್ಯಮಂತ್ರಿ ವಿಷಯ ಕುರಿತು ಪಕ್ಷದೊಳಗೆ ಗೊಂದಲವಿರುವುದು ನಿಜ. ಡಿ.ಕೆ.ಶಿವಕುಮಾರ್ ಅವರು ಮೇಕೆದಾಟು ಅಣೆಕಟ್ಟೆ ವಿಷಯದಲ್ಲಿ ತಮಿಳುನಾಡು ವಿರುದ್ಧ ಕೋರ್ಟ್‌ನಲ್ಲಿ ಹೋರಾಡಿ ಗೆದ್ದಿದ್ದಾರೆ. ಈ ಕಾರಣಕ್ಕೆ ಅವರಿಗೆ ನಾವೆಲ್ಲರೂ ಅಭಿನಂದನೆ ಸಲ್ಲಿಸಬೇಕು.

-**ಪಿಜಿಆರ್ ಸಿಂಧ್ಯ** ಮಾಜಿ ಸಚಿವ

ರಾಜ್ಯ ಸರಕಾರದ ವಿರುದ್ಧ ಹೋರಾಡುವಲ್ಲಿ ಪ್ರತಿಪಕ್ಷಗಳೂ ವಿಫಲ: ಈಶ್ವರಪ್ಪ

ಬಂಡತನ ತೋರಿಸುತ್ತಿರುವ ಸಿದ್ದರಾಮಯ್ಯ, ಡಿಕೆಶಿ

ಕೊಪ್ಪಳ: ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಇಬ್ಬರೂ ಬಂಡತನ ಪ್ರದರ್ಶಿಸುತ್ತಿದ್ದಾರೆ. ಇಂಥ ಆಡಳಿತ ಪಕ್ಷದ ಜನವಿರೋಧಿ ನಿಲುವುಗಳ ಬಗ್ಗೆ ಹೋರಾಟ ರೂಪಿಸುವಲ್ಲಿ ರಾಜ್ಯದಲ್ಲಿನ ಪ್ರತಿಪಕ್ಷಗಳೂ ವಿಫಲವಾಗಿವೆ. ಏನೇ ಆಗಲಿ ಸಿದ್ದರಾಮಯ್ಯ ಸರಕಾರ ನೆಗೆದು ಬೀಳಲಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಭವಿಷ್ಯ ನುಡಿದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಇಷ್ಟೊಂದು ಹೊಲಸು ರಾಜಕಾರಣ ನಡೆದಿದ್ದು ಎಂದೂ ನೋಡಿರಲಿಲ್ಲ. ಯಾರು ಬೇಕಾದರೂ ಸಿಎಂ ಆಗಲಿ. ಆದರೆ, ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಆಗಬೇಕಿದೆ. ಸಿದ್ದರಾಮಯ್ಯ - ಡಿ.ಕೆ.ಶಿವಕುಮಾರ್ ಬ್ರೇಕ್‌ಫಾಸ್ಟ್ ಮಾಡಿ ಹೊರಗೆ ಬಂದಾಗ ಒಂದು ಗುಂಪು ಸಿದ್ದು.. ಸಿದ್ದು ಎಂದು ಕೂಗಿದರೆ, ಮತ್ತೊಂದು ಗುಂಪು ಡಿಕೆಶಿ ಎಂದು ಕೂಗುತ್ತಿದೆ. ಇದು ತೀರಾ ಅಸಹ್ಯ ಅನ್ನಿಸುತ್ತಿದೆ ಎಂದರು.

ನನ್ನ ಹೃದಯದ ಪ್ರತಿ ಕಣಕಣವೂ ಬಿಜೆಪಿ

ಬಿಜೆಪಿ ಒಂದು ಕುಟುಂಬದ ಹಿಡಿತದಿಂದ ಹೊರಗೆ ಬರಬೇಕು. ಬಿಜೆಪಿಗೆ ಹಿಂದುತ್ವದ ಕಾಳಜಿ ಕಡಿಮೆ ಆಗಿದೆ. ನನ್ನ ಹೊರಗೆ ಕಳುಹಿಸಿದ್ದು ತಾತ್ಕಾಲಿಕ. ನಾನು ಇಡೀ ರಾಜ್ಯದ ಕಾರ್ಯಕರ್ತರ ಭಾವನೆ ತಿಳಿದುಕೊಂಡು ಮಾತನಾಡಿದ್ದೇನೆ. ಆದರೆ, ನನ್ನ ಹೃದಯದ ಪ್ರತಿ ಕಣಕಣವೂ ಬಿಜೆಪಿಯೇ ಆಗಿದೆ ಎಂದು ಈಶ್ವರಪ್ಪ ಹೇಳಿದರು.

ಭರವಸೆ ಕೊಡುವುದರಲ್ಲಿ ಇನ್ನೊಂದು ಹೆಸರೇ ಸಿದ್ದರಾಮಯ್ಯ. ಆದರೆ, ಕೊಟ್ಟ ಭರವಸೆ ಈಡೇರಿಸಿಲ್ಲ. ಎಲ್ಲರ ಮೂಗಿಗೆ ತುಪ್ಪ ಹಚ್ಚುತ್ತಾರೆ. ಮುಸ್ಲಿಂರಿಗೆ ಜೇನು ತುಪ್ಪ ಹಚ್ಚುತ್ತಾರೆ. ಮಲ್ಲಿಕಾರ್ಜುನ ಖರ್ಗೆ ಕೇವಲ ರಬ್ಬರ್ ಸ್ಟಾಂಪ್. ದಲಿತ ಸಿಎಂ ಎಂಬುದೂ ಒಂದು ನಾಟಕ.

-**ಕೆ.ಎಸ್.ಈಶ್ವರಪ್ಪ**, ಮಾಜಿ ಡಿಸಿಎಂ

ಬಿಜೆಪಿ ಪಕ್ಷವು ಅಧಿಕಾರಕ್ಕೆ ಏರುವುದು ಹಗಲುಗನಸು

ಬಾಗಲಕೋಟೆ: ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ಇದೆಲ್ಲ ಹಗಲುಗನಸು. ಇವರೆಲ್ಲಾ ಹಗಲು ಹೊತ್ತಿ ನಲ್ಲಿ ಕನಸು ಕಾಣುತ್ತಲೇ ಹೊರಟಿದ್ದಾರೆ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಆರ್.ಅಶೋಕ ಸೇರಿ ಇತರ ಲೀಡರ್‌ಗಳ ಮಧ್ಯೆ ಹೊಂದಾಣಿಕೆ ಇಲ್ಲ. ಇವರ ಪಕ್ಷದಲ್ಲಿ ಒಗ್ಗಟ್ಟು ಎಲ್ಲಿದೆ? ಯಡಿಯೂರಪ್ಪ ಅತ್ಲಾಗ, ಇನ್ನೊಬ್ಬ ಇತ್ಲಾಗ. ರೆಬೆಲ್ ಎಷ್ಟು ಜನ ಇದ್ದಾರೆ ಅವರಲ್ಲಿ ಎಂದು ವ್ಯಂಗ್ಯವಾಡಿದರು. ನಾಟಿ ಕೋಳಿ ಸಂಧಾನ ಏನಾಗುತ್ತದೆ ಎನ್ನುವ ವಿಚಾರ ಬಗ್ಗೆ ಮಾತನಾಡಿದ ಅವರು, ನಮ್ಮಲ್ಲಿ ಏನೂ ಆಗಲ್ಲ. 5 ವರ್ಷ ಈ ಸರಕಾರ ಏನೂ ಮಾಡೋಕೆ ಆಗಲ್ಲ. ನಮ್ಮದೇ ಸಿಎಂ ಇರ್ತಾರೆ, ನಮ್ಮದೇ ಆಡಳಿತ ಇರುತ್ತದೆ. 2028ಕ್ಕೂ ನಾವೇ ಮತ್ತೆ ಅಧಿಕಾರಕ್ಕೆ ಬಂದೇ ಬರ್ತಿವಿ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮಾಜಿ ಶಾಸಕ ದೊಡ್ಡನಗೌಡ ತಮ್ಮ ಅವಧಿಯಲ್ಲಿ ಏನೆಲ್ಲಾ ಅಕ್ರಮ ಹಾಗೂ ಹಫ್ತಾ ವಸೂಲಿ ಮಾಡುತ್ತಿದ್ದರು ಎಂದು ಬಹಿರಂಗ ಚರ್ಚೆಗೆ ಬಂದರೆ ದಾಖಲೆ ಸಮೇತ ಮಾಹಿತಿ ನೀಡುತ್ತೇನೆ ಎಂದು ಸವಾಲು ಹಾಕಿದರು.

ಸಂಕುಚಿತ ಮನೋಭಾವ ಇದ್ದವರು ಬದಲಾಗಲಿ

ಚಿಕ್ಕಮಗಳೂರು: ಮುಸ್ಲಿಮರು ಎಲ್ಲೂ ಈಶ್ವರ ಅಲ್ಲಾ ತೇರೇ ನಾಮ್ ಅಂತ ಹೇಳಿಲ್ಲ, ನಾನಂತೂ ಹೇಳಿದ್ದನ್ನು ಕೇಳಿಲ್ಲ. ಮಸೀದಿಗಳಲ್ಲೂ ಹೇಳಿಕೊಟ್ಟಿಲ್ಲ. ಮದರಸಾಗಳಲ್ಲಿ ಹೇಳಿಕೊಟ್ಟಿದ್ದರೆ ಭಯೋತ್ಪಾದಕರೇ ಇರುತ್ತಿರಲಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಹಿಂದೂಗಳು ರಾಮ್ ರಹೀಮ್ ಒಂದೇ ಎಂದು ಹೇಳ್ತಿದ್ದೀವಿ, ಮುಸ್ಲಿಮರು ಹೇಳ್ತಿಲ್ಲ. ರಾಮ್ ರಹೀಮ್ ಒಂದೇ ಎಂದು ಅವರು ಹೇಳಿಕೊಟ್ಟಿದ್ದರೆ ಜಗಳಗಳು ಆಗ್ತಿರಲಿಲ್ಲ. ನಾವು ಅಲ್ಲಾ ದೇವರು ಅನ್ನೋಕೆ ತೊಂದರೆ ಇಲ್ಲ. ನಮ್ಮ ಪರಂಪರೆ ಅದಕ್ಕೆ ಅವಕಾಶ ಕೊಡುತ್ತದೆ. ಸಂಕುಚಿತ ಮನೋಭಾವದವರು ಬದಲಾಗಬೇಕು ಎಂದರು.

ಇಸ್ಲಾಂ ಹೆಸರಲ್ಲಿ ಅನ್ಯ ಧಾರ್ಮಿಕ ಕ್ಷೇತ್ರ ಕಬಳಿಸುವುದು ಅನಾಗರಿಕತೆ, ಅಧರ್ಮ. ನಾಶ ಮಾಡುವುದು ಧರ್ಮ ಆಗಲು ಸಾಧ್ಯವಿಲ್ಲ. ಸನಾತನ ಧರ್ಮದಲ್ಲಿ ಭಾರತೀಯ ಸ್ತ್ರೀಯರನ್ನು ಗೌರವಿಸುವ ಸಂಸ್ಕೃತಿ ಇದೆ. ಆದರೆ ಪರಸ್ತ್ರೀ ಮೇಲೆ ಅತ್ಯಾಚಾರ ಮಾಡು ಅನ್ನೋದು ಧರ್ಮ ಆಗಲು ಸಾಧ್ಯವಿಲ್ಲ. ಇಸ್ಲಾಂ ಹೆಸರಲ್ಲಿ ಬಲಾತ್ಕಾರ, ಲೂಟಿ, ಮತಾಂತರ ಮಾಡಿದ್ದಾರೆ. ಇದನ್ನು ಭಾರತೀಯ ನಿದರ್ಶನಗಳು ಧರ್ಮ ಅನ್ನಲ್ಲ ಎಂದು ವಾಗ್ದಾಳಿ ನಡೆಸಿದರು.

ಪ್ರಭಾಕರ ಭಟ್ ಅರ್ಜಿ ವಿಚಾರಣೆ ಮುಂದೂಡಿಕೆ



ಪುತ್ತೂರು: ಕೋಮು ದ್ವೇಷ ಪ್ರಚೋದಿಸುವ, ಮಹಿಳೆಯರ ಘನತೆಗೆ ಧಕ್ಕೆ ಉಂಟು ಮಾಡುವ ಭಾಷಣ ಮಾಡಿದ ಆರೋಪದಲ್ಲಿ ತನ್ನ ವಿರುದ್ಧ ಸಂಪ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ನಿರೀಕ್ಷಣಾ ಜಾಮೀನು ಕೋರಿ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಡಾ.ಪ್ರಭಾಕರ ಭಟ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಮಂಗಳವಾರ ನಡೆಯಿತು.

ಅರ್ಜಿಯ ವಿಚಾರಣೆ ನಡೆಸಿದ ಪುತ್ತೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು, ಪ್ರಾಸಿಕ್ಯೂಶನ್ ಜತೆ ಸೇರಿ ವಾದ ಮಂಡನೆಗೆ ಅವಕಾಶ ಕಲ್ಪಿಸಿ, ವಿಚಾರಣೆಯನ್ನು ಡಿ.5ಕ್ಕೆ ಮುಂದೂಡಿದೆ. ಡಾ.ಪ್ರಭಾಕರ ಭಟ್ ಅವರಿಗೆ ಈಗಾಗಲೇ ನ್ಯಾಯಾಲಯ ನೀಡಿರುವ ಮಧ್ಯಂತರ ಜಾಮೀನು ಅವಧಿ ವಿಸ್ತರಣೆಯಾಗಿದ್ದು, ನಿರೀಕ್ಷಣಾ ಜಾಮೀನು ನೀಡುವುದಕ್ಕೆ ಸರಕಾರಿ ಅಭಿಯೋಜಕರು ಈಗಾಗಲೇ ಆಕ್ಷೇಪಣೆ ಸಲ್ಲಿಸಿದ್ದಾರೆ. ತಾಲೂಕಿನ ಇರ್ದೆ ಗ್ರಾಮದ ಉಪ್ಪಳಿಗೆಯಲ್ಲಿ ಅ.20 ರಂದು ನಡೆದ ದೀಪೋತ್ಸವ ಕಾರ್ಯಕ್ರಮದಲ್ಲಿ ಕೋಮು ದ್ವೇಷ ಪ್ರಚೋದಿಸುವ, ಮಹಿಳೆಯರ ಘನತೆಗೆ ಧಕ್ಕೆ ಉಂಟು ಮಾಡುವ ಭಾಷಣ ಮಾಡಿದ ಆರೋಪದಲ್ಲಿ ಕಲ್ಲಡ್ಕಪ್ರಭಾಕರ ಭಟ್ ವಿರುದ್ಧ ಸಂಪ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿನ್ನಯ್ಯನಿಗೆ ಜಾಮೀನು ಸಿಕ್ಕರೂ ಬಿಡುಗಡೆ ಇಲ್ಲ

ಶಿವಮೊಗ್ಗ: ಧರ್ಮಸ್ಥಳ ಬುರುಡೆ ಪ್ರಕರಣದ ಮಾಸ್ಕ್‌ಮ್ಯಾನ್ ಚಿನ್ನಯ್ಯನಿಗೆ ಜಾಮೀನು ಮಂಜೂರಾದರೂ ಇನ್ನು ಬಿಡುಗಡೆಯ ಭಾಗ್ಯ ಸಿಕ್ಕಿಲ್ಲ. ಆ.23ರಂದು ಸುದೀರ್ಘ ವಿಚಾರಣೆ ಬಳಿಕ ಬುರುಡೆ ಕೇಸ್‌ನಲ್ಲಿ ಅನಾಮಿಕ ದೂರುದಾರ ಚಿನ್ನಯ್ಯನನ್ನು ಬಂಧಿಸಲಾಗಿತ್ತು. ಸೆ.6ರಂದು ಕೋರ್ಟ್ ನ್ಯಾಯಾಂಗ ಬಂಧನ ವಿಧಿಸಿದ್ದರಿಂದ ಶಿವಮೊಗ್ಗ ಜೈಲಿಗೆ ಚಿನ್ನಯ್ಯನನ್ನು ಕರೆತರಲಾಗಿತ್ತು. ಬಳಿಕ ವಿಶೇಷ ತನಿಖಾ ತಂಡವು ತನಿಖಾ ವರದಿಯನ್ನು ಬೆಳ್ತಂಗಡಿ ನ್ಯಾಯಾಲಯಕ್ಕೆ ಸಲ್ಲಿಕೆ ಮಾಡಿತ್ತು. ಅದರ ಬೆನ್ನಲ್ಲೇ ಚಿನ್ನಯ್ಯ ಜಾಮೀನಿಗೆ ಅರ್ಜಿ ಸಲ್ಲಿಸಿದ್ದ. ಅರ್ಜಿಯನ್ನು ಪುರಸ್ಕರಿಸಿದ ಮಂಗಳೂರಿನಲ್ಲಿರುವ ಜಿಲ್ಲಾ ನ್ಯಾಯಾಲಯ 1 ಲಕ್ಷ ರು. ಬಾಂಡ್ ಸೇರಿ 12 ಷರತ್ತುಗಳನ್ನು ವಿಧಿಸಿ ನ.25ರಂದು ಜಾಮೀನು ಮಂಜೂರು ಮಾಡಿತ್ತು. ಜಾಮೀನು ನೀಡಿ 9 ದಿನ ಕಳೆದರೂ ಶ್ಯೂರಿಟಿ ನೀಡಲು ಯಾರೂ ಮುಂದೆ ಬಾರದ ಕಾರಣ ಶಿವಮೊಗ್ಗ ಜಿಲ್ಲಾ ಕಾರಾಗೃಹದಲ್ಲೇ ಚಿನ್ನಯ್ಯ ದಿನ ಕಳೆಯುತ್ತಿದ್ದಾನೆ. ಧರ್ಮಸ್ಥಳ ಪ್ರಕರಣದಲ್ಲಿ ಚಿನ್ನಯ್ಯನನ್ನು ಬಳಸಿಕೊಂಡು ಬುರುಡೆ ಗ್ಯಾಂಗ್ ದೂರು ನೀಡಿತ್ತು. ಆದರೆ ಯಾವಾಗ ಬುರುಡೆ ಗ್ಯಾಂಗ್ ವಿರುದ್ಧವೇ ಚಿನ್ನಯ್ಯ ತಿರುಗಿ ಬಿದ್ದನೋ ಅಲ್ಲಿಂದ ಗ್ಯಾಂಗ್ ಸದಸ್ಯರು ಚಿನ್ನಯ್ಯನ ವಿರುದ್ಧವೇ ಮಾತನಾಡುತ್ತಿದ್ದಾರೆ.

ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಆರೋಪ

ಸಿಎಂಗೆ ಲಿಂಗಾಯತರನ್ನು ಒಡೆಯುವ ಉದ್ದೇಶ

ಚಿಕ್ಕೋಡಿ: ಸಿಎಂ ಸಿದ್ದರಾಮಯ್ಯ ಅವರಿಗೆ ಲಿಂಗಾಯತ ಸಮಾಜ ಒಡೆಯಬೇಕಿದೆ ಹಾಗೂ ಸಂಘಟಿತರಾಗಿರಬಾರದು ಎಂಬ ಉದ್ದೇಶವಿದೆ ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಗಂಭೀರ ಆರೋಪ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ದೊಡ್ಡದಾದ ಲಿಂಗಾಯತ ಸಮಾಜವನ್ನು ಒಡೆದು ಐದನೇ ಸ್ಥಾನಕ್ಕೆ ತರಬೇಕು. ಸರಕಾರದ ಸೌಲಭ್ಯಗಳು ಈ ಸಮಾಜಕ್ಕೆ ಸಿಗದಂತೆ ಮಾಡುತ್ತಿದ್ದಾರೆ. ವೈಯಕ್ತಿಕವಾಗಿ ಕೆಲವೊಂದು ರಾಜಕೀಯ ಶಕ್ತಿಗಳು ನನ್ನನ್ನು ಟಾರ್ಗೆಟ್ ಮಾಡುತ್ತಿವೆ. ರೌಡಿಶೀಟರ್‌ಗಳ ರೀತಿ ನನ್ನನ್ನು ಬ್ಯಾನ್ ಮಾಡಲಾಗುತ್ತಿದೆ. ಚೀಫ್ ಸೆಕ್ರೆಟರಿಗಳಿಂದ ನನ್ನನ್ನು ಬ್ಯಾನ್ ಮಾಡಿಸುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಎಂ.ಬಿ.ಪಾಟೀಲ್ ನನ್ನನ್ನು ಟಾರ್ಗೆಟ್ ಮಾಡಿದ್ದಾರೆ. ಬಸವ ತತ್ವ ಹಿಂದೂತ್ವವನ್ನು ಬಿಟ್ಟಿಲ್ಲ. ನಾಲ್ಕು ವಚನ ತೆಗೆದುಕೊಂಡು ಲಿಂಗಾಯತರನ್ನು ಹಿಂದೂ ಧರ್ಮದಿಂದ ಬೇರ್ಪಡಿಸುವ ಹುನ್ನಾರ ತಾಲಿಬಾನಿಗಳು ನಡೆಸಿದ್ದಾರೆ. ಹಿಂದೂ ಧರ್ಮ ವನ್ನು ಸಣ್ಣ ಸಣ್ಣ ತುಣುಕು ಮಾಡುತ್ತಾ ಹೋದರೇ ಈ ದೇಶದಲ್ಲಿ ಹಿಂದೂಗಳೇ ಅಲ್ಪಸಂಖ್ಯಾತರಾಗಬೇಕಾಗುತ್ತದೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಅಂದು ಮೌನ ಪಥಸಂಚಲನ: ಬಸವಜಯ ಮೃತ್ಯುಂಜಯ ಶ್ರೀ

ಡಿ.10 ದೌರ್ಜನ್ಯ ದಿನವಾಗಿ ಆಚರಣೆ



ಚಿಕ್ಕೋಡಿ: ಕಳೆದ ಅಧಿವೇಶನದ ಸಂದರ್ಭದಲ್ಲಿ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಒತ್ತಾಯಿಸಿ ಹೋರಾಟ ನಡೆಸಿದವರ ಮೇಲಿನ ಹಲ್ಲೆ ಮಾಡಿದ್ದನ್ನು ಖಂಡಿಸಿ ಡಿ.10 ರಂದು ದೌರ್ಜನ್ಯ ದಿನವೆಂದು ಆಚರಿಸುತ್ತೇವೆ ಎಂದು ಪಂಚಮಸಾಲಿ ಪೀಠದ ಜಗದ್ಗುರು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬೆಳಗಾವಿ ಸುವರ್ಣ ವಿಧಾನಸೌಧದ ಮುಂಭಾಗದಲ್ಲಿ ನಾವೆ ಲ್ಲರೂ ಶಾಂತಿಯುತ ಚಳವಳಿ ಮಾಡುತ್ತಿದ್ದೆವು. ಆ ಚಳವಳಿಯನ್ನು ಹತ್ತಿಕ್ಕುವ ದೃಷ್ಟಿಯಿಂದ ಅಮಾ ಯಕ ಪೊಲೀಸರಿಗೆ ಕುಮ್ಮಕ್ಕು ಕೊಟ್ಟು ಕಾನೂನು ಬಾಹಿರವಾಗಿ ಸರಕಾರ ನಮ್ಮ ಮೇಲೆ ಮಾರಣಾಂತಿಕ ಹಲ್ಲೆ ಮಾಡಿಸಿತು. ಆ ಸಂದರ್ಭದಲ್ಲಿ ಸಮಾಜದ ಗಣ್ಯ ವ್ಯಕ್ತಿಗಳು, ವಕೀಲರು, ಶಾಸಕರು, ರೈತರು, ಕೂಲಿ ಕಾರ್ಮಿಕರು ಸಹಸ್ರಾರು ಸಂಖ್ಯೆ ಯಲ್ಲಿ ಭಾಗವಹಿಸಿದ್ದರು. ನಾವು ಅವತ್ತೇ ಹಲ್ಲೆ ನಡೆಸಿದ ಪೊಲೀಸ ರನ್ನು ಅಮಾನತು ಮಾಡಬೇಕು. ನಮ್ಮ ಸಮಾಜದವರ ಬಳಿ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದ್ದೆವು. ಆದರೆ, ಸರಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಹಾಗಾಗಿ ಡಿಸೆಂಬರ್ 10ನೇ ತಾರೀಖನ್ನು ಲಿಂಗಾಯತರ ಮೇಲಿನ ದೌರ್ಜನ್ಯ ದಿನವೆಂದು ಆಚರಿಸುತ್ತೇವೆ. ಅಂದು ಬೆಳಗಾವಿಯ ಗಾಂಧಿ ಭವನದಿಂದ ಪಂಚಮ ಸಾಲಿಗಳು ಮೌನ ಪಥಸಂಚಲನ ನಡೆಸುತ್ತೇವೆ ಎಂದರು.

ರೇಣುಕಾಸ್ವಾಮಿ ಕೊಲೆ ಆರೋಪಿಗೆ 4 ದಿನ ಬೇಲ್

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ 14ನೇ ಆರೋಪಿ ಪ್ರದೋಷ್‌ಗೆ 4 ದಿನಗಳ ಕಾಲ ಜಾಮೀನು ನೀಡಲಾಗಿದೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ ಇರುವ ದರ್ಶನ್ ಸಹಚರ ಪ್ರದೋಶ್ ತಂದೆ ಕಳೆದ ತಿಂಗಳು ನಿಧನರಾಗಿದ್ದರು. ಕಳೆದ ವರ್ಷ ಜುಲೈನಲ್ಲಿ ಪ್ರದೋಶ್ ಅಜ್ಜಿ ತೀರಿಕೊಂಡಿದ್ದರು. ಈ ಹಿಂದೆ ಅಂತ್ಯ ಸಂಸ್ಕಾರ ಹಾಗೂ ಇತರ ಕಾರ್ಯಗಳನ್ನು ಮುಗಿಸಲು 20 ದಿನ ಮಧ್ಯಾಂತರ ಜಾಮೀನು ಸಿಕ್ಕಿತ್ತು. ಇದೀಗ ಮತ್ತೆ 4 ದಿನಗಳ ಕಾಲ ತಿಂಗಳ ತಿಥಿ ಕಾರ್ಯಕ್ಕೆ ಜಾಮೀನು ಮಂಜೂರು ಮಾಡಲಾಗಿದೆ.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿಕೆಗೆ ಎ.ಟಿ.ರಾಮಸ್ವಾಮಿ ಆಕ್ಷೇಪ

ಮಠಾಧೀಶರು ಒಂದು ಜಾತಿ, ಒಬ್ಬ ವ್ಯಕ್ತಿ ಪರ ನಿಲ್ಲಬಾರದು

ಹಾಸನ: ಕೆಲವು ಮಠಾಧೀಶರು ಒಂದು ಜಾತಿ, ವ್ಯಕ್ತಿ, ಪಕ್ಷದ ಪರವಾಗಿ ನಿಲ್ಲುವುದು ಸರಿಯಲ್ಲ ಎಂದು ಪರಿಸರಕ್ಕಾಗಿ ನಾವು ಸಂಘಟನೆ ಸಂಸ್ಥಾಪಕ ಎ.ಟಿ. ರಾಮಸ್ವಾಮಿ ಹೇಳಿದರು.

ಇತ್ತೀಚೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಪರ ಆದಿಚುಂಚನ ಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿರುವ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಧರ್ಮ ಗುರುಗಳ ಹೇಳಿಕೆಗಳು ಎಲ್ಲರನ್ನೂ ಘಾಸಿಗೊಳಿಸುತ್ತವೆ. ಅತ್ಯಂತ ನೋವಿನಿಂದ ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮದು ಸಂಪದ್ಭರಿತ ರಾಜ್ಯವಾಗಿತ್ತು. ಲೂಟಿಕೋರರು ರಾಜ್ಯದ ಸಂಪತ್ತನ್ನು ಲೂಟಿ ಮಾಡಿದರು. ಈಗ ಅತಿಭ್ರಷ್ಟ ರಾಜ್ಯ ಎಂದು ಹೆಸರು ಬಂದಿದೆ. ಅಸಂಸ್ಕೃತರು ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದಾರೆ. ಅದಕ್ಕಾಗಿ ರಾಜ್ಯದ ಪರಿಸ್ಥಿತಿ ಈ ರೀತಿ ಇದೆ. ಅಭಿಪ್ರಾಯ ಹೇಳುವಾಗ ಮುಚ್ಚುಮರೆ ಇರಬಾರದು. ಧರ್ಮ ಗುರುಗಳು ಸರ್ವೇ ಜನ ಸುಖಿನೋ ಭವಂತು ಎಂದು ಎಲ್ಲೆಡೆ ಹೇಳಬೇಕಿದೆ ಎಂದರು. ಮಠಾಧೀಶರು ಇಡೀ ಸಮಾಜವನ್ನು ಧರ್ಮ, ನ್ಯಾಯ, ಸತ್ಯದ ಹಾದಿಯಲ್ಲಿ ನಡೆಸಲು ಮಾರ್ಗದರ್ಶನ ಮಾಡಬೇಕು. ಆದರೆ ಕೆಲ ಮಠಾಧೀಶರು ಒಂದು ಜಾತಿ, ವ್ಯಕ್ತಿ ಪರವಾಗಿ ನಿಲ್ಲುತ್ತಿರುವುದು ಸರಿಯಲ್ಲ. ಅವರಿಗೇಕೆ ಅದರ ಗೊಡವೇ? ಎಂದು ಪ್ರಶ್ನಿಸಿದರು. ನಮ್ಮ ರಾಜ್ಯದ ರಾಜಕಾರಣ ತುಂಬಾ ಕೊಳಕಾಗಿದೆ. ಆ ಕೊಳಕು, ಅಂಕು-ಡೊಂಕು ಗಳನ್ನು ತಿದ್ದಲು ಮಾರ್ಗ ದರ್ಶನ ಮಾಡಬೇಕಿರುವುದು ಧರ್ಮಗುರುಗಳ ಕರ್ತವ್ಯ. ನಮ್ಮದು ಧರ್ಮ ನಿರಪೇಕ್ಷಿತ ರಾಷ್ಟ್ರ. ನುಡಿಯಲ್ಲಿ ಅಲ್ಲ, ನಡೆಯಲ್ಲಿ ಮಾರ್ಗದರ್ಶನ ಇರಬೇಕು. ಅದನ್ನು ಜನರು ಹೆಚ್ಚಾಗಿ ಬಯಸುತ್ತಾರೆ. ಸಮಾಜದ ವಿವಿಧ ಜಾತಿ, ಧರ್ಮವನ್ನು ಬೆಸೆಯುವುದು ಧರ್ಮ ಗುರುಗಳ ಕೆಲಸ. ಜಾತಿ ಕೇಂದ್ರೀತವಾಗಿ ಮಾತನಾಡುತ್ತಿರುವುದನ್ನು ನೋಡಿದರೆ, ದುಃಖ ಆಗುತ್ತಿದೆ. ಭಿನ್ನ ಭೇದಗಳಿಗೆ ಮದ್ದು, ಮುಲಾಮು ಹಚ್ಚುವ ಕೆಲಸ ಅವರು ಮಾಡಬೇಕಿತ್ತು. ಇದು ನನ್ನ ವಿನಮ್ರ ಮನವಿ ಎಂದರು. ಸಾಮಾಜಿಕ ಹೋರಾಟಗಾರ ಆರ್.ಪಿ. ವೆಂಕಟೇಶ ಮೂರ್ತಿ, ಸಾಹಿತಿ ರೂಪಾ ಹಾಸನ, ಗಿರಿಜಾಂಬಿಕಾ, ಪರಶುರಾಮೇಗೌಡ, ಹೇಮಂತ್ ಕುಮಾರ್ ಇದ್ದರು.

ಪರಿಸರ ರಕ್ಷಣೆ ಕುರಿತು ಸಮಾವೇಶ ಮಾಡಲಿ

ಒಂದು ಜಾತಿ, ಪಕ್ಷ, ಒಬ್ಬ ವ್ಯಕ್ತಿಯ ಪರ ಮಠಾಧೀಶರು ಮಾತನಾಡುವ ಬದಲು, ಪರಿಸರ ರಕ್ಷಣೆ ಕುರಿತು ಸಮಾವೇಶ ಮಾಡಲಿ. ಇದರಿಂದ ಜನರಲ್ಲಿ ಪರಿಸರ ರಕ್ಷಣೆ ಕುರಿತು ಜಾಗೃತಿ ಮೂಡುತ್ತದೆ. ಜಗತ್ತಿನಾದ್ಯಂತ ವ್ಯಾಪಕವಾಗಿ ಚಂಡಮಾರುತ, ಅಕಾಲಿಕ ಮಳೆ, ಮೇಘ ಸ್ಫೋಟ, ಭೂಕುಸಿತ, ಭೂಕಂಪ ಸೇರಿದಂತೆ ಅನೇಕ ಪ್ರಾಕೃತಿಕ ವಿಕೋಪ ಕಾಣುತ್ತಿದ್ದೇವೆ. ಆದ್ದರಿಂದ ಜನರಲ್ಲಿ ಈ ಬಗ್ಗೆ ಹೆಚ್ಚು ಜಾಗೃತಿ ಅಗತ್ಯ ಎಂದು ಎ.ಟಿ.ರಾಮಸ್ವಾಮಿ ಹೇಳಿದರು.

ಒಲೆ ಹತ್ತಿ ಉರಿದರೆ ನಿಲ್ಲಿಸಬಹುದು. ಧರೆ ಹತ್ತಿ ಉರಿದರೆ ಆರಿಸಲು ಸಾಧ್ಯವಾಗುವುದಿಲ್ಲ. ಅವರವರ ಸಮುದಾಯ, ಜಾತಿ ಪರ ನಿಂತರೆ ಗತಿ ಏನಾಗುತ್ತದೆ? ಧರ್ಮರಕ್ಷಕರೇ ಅಧರ್ಮವನ್ನು ಪೋಷಿಸಿದಂತಾಗುತ್ತದೆ. ಆ ಕೆಲಸವನ್ನು ಧರ್ಮ ಗುರುಗಳು ಮಾಡುವುದು ಬೇಡ. ಬದಲಿಗೆ ಒಂದುಗೂಡಿಸುವ ಕೆಲಸ ಮಾಡಬೇಕು.

-**ಎ.ಟಿ.ರಾಮಸ್ವಾಮಿ,** ಪರಿಸರಕ್ಕಾಗಿ ನಾವು ಸಂಘಟನೆ ಸಂಸ್ಥಾಪಕ

ಬ್ರೇಕ್‌ಫಾಸ್ಟ್‌ನಿಂದ ಬಿಜೆಪಿ, ಜೆಡಿಎಸ್‌ಗೆ ಕಪಾಳಮೋಕ್ಷ

ಬೀದರ್: ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಒಟ್ಟಿಗೆ ಬ್ರೇಕ್‌ಫಾಸ್ಟ್ ಮಾಡಿದ್ದು ಬಿಜೆಪಿ ಹಾಗೂ ಜೆಡಿಎಸ್‌ಗೆ ಕಪಾಳಮೋಕ್ಷ ಮಾಡಿ ದಂತಾಗಿದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರ ಬೀಳುತ್ತದೆ ಎಂದು ಬಿಜೆಪಿ, ಜೆಡಿಎಸ್ ಪಕ್ಷದವರು ಹೇಳಿದರು. ಆದರೆ ಯಾವುದೂ ಬೀಳಲ್ಲ. ನಮ್ಮದು ಹೈಕಮಾಂಡ್ ಪಕ್ಷ. ನಮ್ಮಲ್ಲಿರುವ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಲು ಹೈಕಮಾಂಡ್ ಇದೆ. ಬಿಜೆಪಿಯವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡಬಾರದು ಎಂದು ಕಿಡಿಕಾರಿದರು. ಡಿ.ಕೆ.ಶಿವಕುಮಾರ್ ಹಾಗೂ ಸಿದ್ದ ರಾಮಯ್ಯ ರಾಮ ಲಕ್ಷ್ಮಣ ಇದ್ದಂತೆ. ನಾವು ಬ್ರೇಕ್‌ಫಾಸ್ಟ್ ಆದ್ರೂ ಮಾಡ್ತೀವಿ, ಡಿನ್ನರ್ ಆದ್ರೂ ಮಾಡ್ತೀವಿ ಬಿಜೆಪಿಯವರಿಗೆ ಏನು ತೊಂದರೆ? ಎಂದು ಪ್ರಶ್ನಿಸಿದರು. ಸರಕಾರದ ಲ್ಲಿರುವ ಒಳ್ಳೆಯ ಕಾರ್ಯಕ್ರಮಕ್ಕೆ ಸ್ಪಂದಿಸಿ, ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ, ನಾವೆ ಲ್ಲರೂ ಒಗ್ಗಟ್ಟಾಗಿದ್ದೇವೆ, ಕಾಂಗ್ರೆಸ್ ಪಕ್ಷದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದೆ. ಮಾತನಾಡುವ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಆದರೆ, ಮೋದಿ ಒಂದು ಬಾರಿ ಹೇಳಿದ್ರೆ, ಬಿಜೆಪಿಯವರು ಬಾಯಿಗೆ ಟೇಪ್ ಹಾಕಿ ಕೊಂಡು ಕೂರಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಶ್ವವಾಣಿ

ಸಂಪಾದಕೀಯ

ನಂಬಿಕೆಗಳಿಗೆ ಘಾಸಿಯಾಗದಿರಲಿ

ವೇದಿಕೆಯೇರಿದಾಗಿನ ಕೆಲ ಸಂದರ್ಭಗಳಲ್ಲಿ ಕೆಲವೊಬ್ಬರು ಬಾಯಿಗೆ ಬಂದಂತೆ ಮಾತನಾಡುವುದಿದೆ. 'ಫಿಲ್ಟರ್' ಇಲ್ಲದೆ ಹೀಗೆ ಮಾತನಾಡಿಬಿಡುವುದಕ್ಕೆ ಕಾರಣ ಹುಮ್ಮಸ್ಸೋ, ಹುಂಬತನವೋ ಅಥವಾ ತಮಗಿರುವ ಸ್ಥಾನಮಾನ/ಗಣ್ಯತೆಯಿಂದಾಗಿ ಏನನ್ನು ಮಾತಾಡಿಯೂ ದಕ್ಕಿಸಿಕೊಂಡುಬಿಡಬಹುದು ಎಂಬ ಧಾರ್ಷ್ಟ್ಯವೋ ಎಂಬುದನ್ನು ಅಂಥವರೇ ಹೇಳಬೇಕು. ಹೀಗೆ ದುಡುಕಿನಲ್ಲಿ ಆಡಿದ ತುಟಿ ಮೀರಿದ ಮಾತುಗಳಿಗೆ ತರುವಾಯದಲ್ಲಿ ದುಬಾರಿ ಬೆಲೆಯನ್ನು ತೆತ್ತವರ ನಿದರ್ಶನಗಳು ಸಾಕಷ್ಟಿದ್ದರೂ, ಇಂಥವರು ಅವನ್ನು ಪಾಠವಾಗಿಯೋ, ಪೂರ್ವನಿದರ್ಶನವಾಗಿಯೋ ಪರಿಗಣಿಸುವುದಿಲ್ಲ. ಗೋವಾದಲ್ಲಿ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಬಾಲಿವುಡ್ ನಟರೊಬ್ಬರು ಮಾತನಾಡುತ್ತಾ, 'ಕಾಂತಾರ' ಚಲನಚಿತ್ರದಲ್ಲಿನ ದೈವವನ್ನು 'ಭೂತ್' ಎಂದು ಕರೆದದ್ದು ಈಗ ವಿವಾದವಾಗಿದೆ ಮತ್ತು ಅವರ ವಿರುದ್ಧ ಕೆಲವಷ್ಟು ಶ್ರದ್ಧಾವಂತರು ದೂರು ನೀಡುವುದಕ್ಕೂ ಅದು ಕಾರಣವಾಗಿದೆ. ವಿವಿಧ ಭಾಷೆ, ಬಣ್ಣ, ಜನಾಂಗ, ಸಂಸ್ಕೃತಿ, ಧಾರ್ಮಿಕ ಆಚರಣೆಗಳ ತವರುನೆಲೆಯಾಗಿರುವ ಭಾರತದಲ್ಲಿ, ಪ್ರತಿಯೊಂದು ಜನಸಮುದಾಯಕ್ಕೂ ಅದರದ್ದೇ ಆದ ನಂಬಿಕೆ ಇರುತ್ತದೆ ಮತ್ತು ಆ ನಂಬಿಕೆಗೆ ಘಾಸಿಯಾಗುವಂಥ ಮಾತಾಗಲೀ ವರ್ತನೆಯಾಗಲೀ ಹೊಮ್ಮಬಾರದು ಎಂಬುದು ಪ್ರತಿಯೊಬ್ಬ ನಾಗರಿಕನೂ ಅರಿಯಬೇಕಾದ ಸತ್ಯ. ಆದರೆ, ಸದರಿ ನಟರು ವೇದಿಕೆಯಲ್ಲಿ ಕೊಂಚ ವಿಲಕ್ಷಣ ರೀತಿಯಲ್ಲೇ, ಹಾವಭಾವದಲ್ಲೇ ಹೀಗೆ ಮಾತನಾಡಿಬಿಟ್ಟಿದ್ದಾರೆ. ಇದು ತರವಲ್ಲ. ಏಕೆಂದರೆ, ಬದಲಾದ ಕಾಲಘಟ್ಟದಲ್ಲಿ ನಮ್ಮ ಸಮಾಜದಲ್ಲಿ ಒಂದಿಷ್ಟು ಅಸ್ತವ್ಯಸ್ತತೆ ಉಂಟಾಗುವುದಕ್ಕೆ ಒಂದು ಸಣ್ಣ ಕದಲಿಕೆಯೇ ಸಾಕು; ಅಂಥ ಅಸ್ತವ್ಯಸ್ತತೆಯನ್ನು ತೀವ್ರಗೊಳಿಸುವುದಕ್ಕೆ ಬಾಹ್ಯಶಕ್ತಿಗಳು ಸದಾ ಸನ್ನದ್ಧವಾಗಿರುತ್ತವೆ ಎಂಬುದು ಅಪ್ರಿಯ ಸತ್ಯ. ಧಾರ್ಮಿಕ ನಂಬಿಕೆಗಳಿಗೆ ಘಾಸಿಯುಂಟುಮಾಡುವಂಥ ಪರಿಪಾಠಗಳು ಇನ್ನಾದರೂ ನಿಲ್ಲಲಿ...

ಸೊಂಪಾದಕೀಯ

ನಾವೇನ್ ಅಪ್ಲಿಕೇಶನ್ ಹಾಕಿದ್ವಾ?

ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರಕಾರ ಬಂದಾಗಿನಿಂದ ಜನರ ಮೇಲೆ ಅದೂ ಇದೂ ಅಂತ ನಿಯಮಗಳನ್ನು ಹೇರುತ್ತಾ ಇರೋದು ಹೊಸದೇನೂ ಅಲ್ಲ. ನೋಟು ಬ್ಯಾನ್‌ನಂಥ ದೊಡ್ಡ ವಿಷಯದಿಂದ ಹಿಡಿದು ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಅಂತ ಯಾವ್ಯಾವೋ ದಾಖಲೆಗಳನ್ನು ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಲಿಂಕ್ ಮಾಡಿಸಲೇಬೇಕು ಅಂತ ಜನರ ಮೇಲೆ ಒತ್ತಡ ಹಾಕಿದ್ದು ಎಲ್ಲರಿಗೂ ಗೊತ್ತು. ಆದರೆ ಅದರಿಂದ ಆದ ಅನುಕೂಲಗಳ ಬಗ್ಗೆ ಯಾರಿಗೂ ಗೊತ್ತಿಲ್ಲ ಬಿಡಿ. ನೋಟು ಬ್ಯಾನ್ ಅಂತೂ ದೊಡ್ಡ ಜೋಕ್ ಆಗಿ ಪರಿಣಮಿಸಿತ್ತು. ಅದರಿಂದ ಯಾವ ಲಾಭವೂ ಆಗಲಿಲ್ಲ. ಯಾವ ಭ್ರಷ್ಟಾಚಾರ, ಭಯೋತ್ಪಾದಕ ಕೃತ್ಯವೂ ಕಡಿಮೆ ಆಗಲಿಲ್ಲ. ಈಗ ಮೋದಿ ಸರಕಾರದ ಇನ್ನೊಂದು ವರಸೆ ಆರಂಭ ಆಗಿದೆ. ಅದು ಸಂಚಾರ್ ಸಾಥಿ ಎಂಬ ಆಪ್‌ನದ್ದು. ಸ್ಮಾರ್ಟ್ ಫೋನ್‌ಗಳು ತಮ್ಮ ಸಾಫ್ಟ್‌ವೇರ್ ಮೂಲಕ ಸೆಕ್ಯುರಿಟಿ ಕಾರಣಕ್ಕಾಗಿ ಅನೇಕ ಸೆಕ್ಯುರಿಟಿ ಅಪ್ಡೇಟ್‌ಗಳನ್ನು ನೀಡುತ್ತವೆ. ಆದರೆ ಹಣಕಾಸು ವ್ಯವಹಾರದ ಡಿಜಿಟಲೀಕರಣ ಅನ್ನೋ ಮೋದಿ ಸರಕಾರದ ಇನ್ನೊಂದು ನೀತಿಯಿಂದಾಗಿ ಡಿಜಿಟಲ್ ಫ್ರಾಡ್ ಅನ್ನೋ ಕರ್ಮಕಾಂಡ ಹೆಚ್ಚುತ್ತಲೇ ಇದೆ. ಪ್ರತಿದಿನ ಹೊಸದೊಂದು ಸ್ಕ್ಯಾಮ್ ಮೂಲಕ ಸ್ಕ್ಯಾಮರ್‌ಗಳು ಜನರ ದುಡ್ಡು ದೋಚುತ್ತಲಿದ್ದಾರೆ. ಈಗ ಸ್ಮಾರ್ಟ್‌ಫೋನ್‌ಗಳ ಸೇಫ್ಟಿಗಾಗಿ ಅನ್ನೋ ಹೆಸರಲ್ಲಿ ಸಂಚಾರ್ ಸಾಥಿ ಅನ್ನೋ ಇನ್ನೊಂದು ಆಪ್ ಅನ್ನು ಎಲ್ಲರೂ ತಮ್ಮ ತಮ್ಮ ಮೊಬೈಲ್‌ಗಳಲ್ಲಿ ಅಪ್‌ಡೇಟ್ ಮಾಡಿಕೊಳ್ಳಬೇಕು. ಸ್ಮಾರ್ಟ್‌ಫೋನ್ ಕಂಪನಿಗಳು ತಮ್ಮ ಹೊಸ ಮೊಬೈಲ್‌ಗಳಲ್ಲಿ ಇದನ್ನು ಇನ್‌ಸ್ಟಾಲ್ ಮಾಡಿರಬೇಕು, ಹಳೆಯ ಫೋನ್ ಯೂಸ್ ಮಾಡುವ ಜನರಿಗೆ ಸಾಫ್ಟ್‌ವೇರ್ ಅಪ್ಡೇಟ್ ಮೂಲಕ ತಲುಪಿಸಬೇಕು, ಮತ್ತು ಇದನ್ನು ಯಾರೂ ಡಿಲೀಟ್ ಮಾಡೋಕೆ ಆಗಬಾರದು ಅಂತ ನಿಯಮ ಮಾಡಿದೆ. ಈಗ ಅದಕ್ಕೆ ಎಲ್ಲೆಡೆ ವಿರೋಧ ವ್ಯಕ್ತ ಆದಮೇಲೆ ಸಂಬಂಧಪಟ್ಟವರು ಇದು ಕಂಪಲ್ಸರಿ ಅಲ್ಲ ರಾಗ ತೆಗೆದಿದ್ದಾರೆ. ಹಾಗಾಗಿ ನಾವೇನು ಈ ಅಪ್ಲಿಕೇಶನ್ ಬೇಕು ಅಂತ ಅಪ್ಲಿಕೇಶನ್ ಹಾಕಿದ್ವಾ ಅಂತ ಗೊಣಗುತ್ತಿದ್ದ ಜನಸಾಮಾನ್ಯ ಸರಿ ಬಿಡು ಅಂತ ಸದ್ಯಕ್ಕೆ ಸುಮ್ಮನಾಗಿದ್ದಾನೆ.

ಸಂಪಾದಕರ ಸದ್ಯಶೋಧನೆ

ವಿಮಾನಗಳು ಎತ್ತರದಲ್ಲಿ ಹಾರುವುದೇಕೆ?

ವಿಮಾನ ಟೇಕಾಫ್ ಆದ ಸ್ವಲ್ಪ ಸಮಯದ ನಂತರ ಪೈಲಟ್, ''ಪ್ರಯಾಣಿಕರೇ, ನಾವೀಗ ಸಮುದ್ರ ಮಟ್ಟದಿಂದ ಮೂವತ್ತೈದು ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿದ್ದೇವೆ'' ಎಂದು ಹೇಳುವುದನ್ನು ಕೇಳಿರಬಹುದು. ಬಹುತೇಕ ವಾಣಿಜ್ಯ ವಿಮಾನಗಳು ಇದೇ ಎತ್ತರದಲ್ಲಿ ಹಾರುವುದನ್ನು ನೀವು ಗಮನಿಸಿರಬಹುದು. ಇದು ಕೇವಲ ಕಾಕತಾಳೀಯ ಅಥವಾ ಪೈಲಟ್‌ಗಳಿಗಿಷ್ಟ ಬಂದ ಸಂಖ್ಯೆಯಲ್ಲ. ಈ ಎತ್ತರವನ್ನು ಆಯ್ಕೆ ಮಾಡಿಕೊಳ್ಳುವ ಹಿಂದೆ ದೊಡ್ಡ ಮಟ್ಟದ ಎಂಜಿನಿಯರಿಂಗ್ ತರ್ಕ, ಭೌತಶಾಸ್ತ್ರ, ಆರ್ಥಿಕ ಲಾಭ ಮತ್ತು ಪ್ರಯಾಣಿಕರ ಸುರಕ್ಷತೆಯ ಲೆಕ್ಕಾಚಾರಗಳಿವೆ. ವಿಮಾನಯಾನ ಪರಿಭಾಷೆಯಲ್ಲಿ ಈ ಎತ್ತರವನ್ನು 'ಕ್ರೂಸಿಂಗ್ ಆಲ್ಟಿಟ್ಯೂಡ್' ಎಂದು ಕರೆಯುತ್ತಾರೆ. ವಿಮಾನವೊಂದು ನೆಲದ ಮೇಲೆ ಅಥವಾ ಕಡಿಮೆ ಎತ್ತರದಲ್ಲಿ ಹಾರುವುದಕ್ಕೂ, 35,000 ಅಡಿ ಎತ್ತರದಲ್ಲಿ ಹಾರುವುದಕ್ಕೂ ಬಹಳ ವ್ಯತ್ಯಾಸವಿದೆ. ಭೂಮಿಯ ಮೇಲ್ಮೈಗೆ ಹತ್ತಿರವಿದ್ದಷ್ಟೂ ಗಾಳಿಯ ಸಾಂದ್ರತೆ ಹೆಚ್ಚಿರುತ್ತದೆ. ಸರಳವಾಗಿ ಹೇಳಬೇಕೆಂದರೆ, ಕೆಳಗಿನ ಗಾಳಿ ದಪ್ಪವಾಗಿರುತ್ತದೆ. ಇಂಥ ದಪ್ಪ ಗಾಳಿಯಲ್ಲಿ ವಿಮಾನ ಮುನ್ನುಗ್ಗಬೇಕಾದರೆ, ಅದು ಹೆಚ್ಚಿನ 'ಡ್ರ್ಯಾಗ್' ಅಥವಾ ವಾಯು ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ. ನೀರಿನಲ್ಲಿ ನಡೆಯುವುದು ಕಷ್ಟ, ಆದರೆ ಗಾಳಿಯಲ್ಲಿ ನಡೆಯುವುದು ಸುಲಭವಲ್ಲವೇ? ಅದೇ ತರ್ಕ ಇಲ್ಲೂ ಅನ್ವಯಿಸುತ್ತದೆ. ಆದರೆ, ಮೂವತ್ತೈದು ಸಾವಿರ ಅಡಿ ಎತ್ತರದಲ್ಲಿ ಗಾಳಿ ತುಂಬಾ ತೆಳುವಾಗಿರುತ್ತದೆ. ಗಾಳಿ ತೆಳುವಾಗಿದ್ದಾಗ, ವಿಮಾನದ ಬಾಡಿಯ ಮೇಲೆ ಉಂಟಾಗುವ ಘರ್ಷಣೆ ಕಡಿಮೆಯಾಗುತ್ತದೆ. ಇದರಿಂದ ವಿಮಾನವು ಕಡಿಮೆ ಶ್ರಮದಲ್ಲಿ ಸುಲಭವಾಗಿ ಮುನ್ನುಗ್ಗಬಲ್ಲದು. ವಿಮಾನಯಾನ ಸಂಸ್ಥೆಗಳಿಗೆ ಅತಿ ದೊಡ್ಡ ಖರ್ಚೆಂದರೆ ಅದು ಇಂಧನ. ವಿಮಾನವು ಕಡಿಮೆ ಎತ್ತರದಲ್ಲಿ ಹಾರಿದರೆ, ದಪ್ಪ ಗಾಳಿಯನ್ನು ಸೀಳಿಕೊಂಡು ಹೋಗಲು ಎಂಜಿನ್ ಹೆಚ್ಚು ಕೆಲಸ ಮಾಡಬೇಕು, ಆಗ ಹೆಚ್ಚು ಇಂಧನ ಖರ್ಚಾಗುತ್ತದೆ. ಅದೇ ಎತ್ತರದಲ್ಲಿ ಹಾರಿದಾಗ, ಕಡಿಮೆ ಇಂಧನದಲ್ಲಿ ಹೆಚ್ಚು ವೇಗವಾಗಿ ಮತ್ತು ದೂರ ಕ್ರಮಿಸಬಹುದು. ಹಾಗೆಂದು ವಿಮಾನಗಳು ಬಾಹ್ಯಾಕಾಶಕ್ಕೆ ಹೋಗುವಷ್ಟು ಎತ್ತರಕ್ಕೆ ಹಾರಲಾಗುವುದಿಲ್ಲ! ಏಕೆಂದರೆ, ವಿಮಾನದ ರೆಕ್ಕೆಗಳು (Wings) ವಿಮಾನವನ್ನು ಮೇಲೆತ್ತಿ ಹಿಡಿಯಲು (Lift) ಸ್ವಲ್ಪ ಮಟ್ಟಿಗಿನ ಗಾಳಿಯ ಅಗತ್ಯವಿರುತ್ತದೆ. ಜತೆಗೆ ಎಂಜಿನ್‌ಗಳಲ್ಲಿ ಬೆಂಕಿ ಉರಿಯಲು ಆಮ್ಲಜನಕ ಬೇಕು. ಮೂವತ್ತೈದು ಸಾವಿರ ಅಡಿ ಎತ್ತರವು ಈ ಎರಡರ ನಡುವಿನ 'ಸ್ವೀಟ್ ಸ್ಪಾಟ್' ಆಗಿದೆ. ಇಲ್ಲಿ ಗಾಳಿ ತೀರಾ ದಪ್ಪವೂ ಅಲ್ಲ, ತೀರಾ ವಿರಳವೂ ಅಲ್ಲ. ಭೂಮಿಯ ವಾತಾವರಣವನ್ನು ಹಲವು ಪದರಗಳಾಗಿ ವಿಂಗಡಿಸಲಾಗಿದೆ. ನಾವು ವಾಸಿಸುವ ಮತ್ತು ಮಳೆ, ಗಾಳಿ, ಮೋಡಗಳು ಉಂಟಾಗುವ ಪದರವನ್ನು 'ಟ್ರೋಪೋಸ್ಫಿಯರ್' ಎಂದು ಕರೆಯುತ್ತಾರೆ. ಇದು ಸಾಮಾನ್ಯವಾಗಿ ಭೂಮಿಯಿಂದ ಸುಮಾರು ಮೂವತ್ತಾರು ಸಾವಿರ ಅಡಿಗಳವರೆಗೆ ಇರುತ್ತದೆ (ಧ್ರುವ ಪ್ರದೇಶಗಳಲ್ಲಿ ಮತ್ತು ಸಮಭಾಜಕ ವೃತ್ತದಲ್ಲಿ ಇದು ಬದಲಾಗುತ್ತದೆ). ವಿಮಾನಗಳು ಮೂವತ್ತೈದು ಸಾವಿರ ಅಡಿ ಅಥವಾ ಅದಕ್ಕಿಂತ ಎತ್ತರಕ್ಕೆ ಏರಿದಾಗ, ಅವು 'ಟ್ರೋಪೋಸ್ಫಿಯರ್‌ನ ಮೇಲ್ಭಾಗದಲ್ಲಿ ಅಥವಾ 'ಸ್ಟ್ರಾಟೋಸ್ಫಿಯರ್'ನ ಆರಂಭಿಕ ಹಂತದಲ್ಲಿ ಹಾರುತ್ತವೆ. ಇಲ್ಲಿ ಮೋಡಗಳಿರುವುದಿಲ್ಲ. ನೀವು ವಿಮಾನದ ಕಿಟಕಿ ಇಣುಕಿದಾಗ ಮೋಡಗಳು ನಿಮ್ಮ ಕೆಳಗೆ ಹಾಸಿಗೆಯಂತೆ ಕಾಣಲು ಇದೇ ಕಾರಣ. ಮಳೆ, ಬಿರುಗಾಳಿ ಮತ್ತು ಗಾಳಿಯ ಸುಳಿಗಳು ಕೆಳಮಟ್ಟದಲ್ಲಿ ಹೆಚ್ಚು. ಎತ್ತರದಲ್ಲಿ ಹಾರುವುದರಿಂದ ವಿಮಾನಗಳು ಈ 'ಡ್ರಾಮಾ ಜೋನ್'ನಿಂದ ತಪ್ಪಿಸಿಕೊಳ್ಳುತ್ತವೆ. ಇದರಿಂದ ಪ್ರಯಾಣಿಕರಿಗೆ ಯಾವುದೇ ಕುಲುಕಾಟವಿಲ್ಲದ ಹಾರಾಟದ ಅನುಭವ ಸಿಗುತ್ತದೆ. ಆಶ್ಚರ್ಯವೆನಿಸಬಹುದು, ಆದರೆ ಆಧುನಿಕ ಜೆಟ್ ಎಂಜಿನ್‌ಗಳು ವಿಪರೀತ ಚಳಿಯನ್ನು ಇಷ್ಟಪಡುತ್ತವೆ! ಮೂವತ್ತೈದು ಸಾವಿರ ಅಡಿ ಎತ್ತರದಲ್ಲಿ ಹೊರಗಿನ ತಾಪಮಾನ ಮೈನಸ್ 40ರಿಂದ ಮೈನಸ್ 55 ಡಿಗ್ರಿ ಸೆಲ್ಸಿಯಸ್ ವರೆಗೆ ಇರುತ್ತದೆ. ಜೆಟ್ ಎಂಜಿನ್‌ಗಳು ಕೆಲಸ ಮಾಡುವುದು ಉಷ್ಣತೆಯ ವ್ಯತ್ಯಾಸದ ಮೇಲೆ. ಹೊರಗಿನ ಗಾಳಿ ತಂಪಾಗಿದ್ದಷ್ಟು ಮತ್ತು ಎಂಜಿನ್ ಒಳಗಿನ ದಹನಕ್ರಿಯೆ ಬಿಸಿಯಾಗಿದ್ದಷ್ಟು, ಎಂಜಿನ್‌ನ ಕಾರ್ಯಕ್ಷಮತೆ ಹೆಚ್ಚುತ್ತದೆ. ಈ ಎತ್ತರದಲ್ಲಿ ಸಿಗುವ ತಂಪಾದ ಗಾಳಿಯು ಎಂಜಿನ್‌ಗಳು ಬಿಸಿಯಾಗದಂತೆ ನೋಡಿಕೊಳ್ಳಲು ಮತ್ತು ಇಂಧನವನ್ನು ಹೆಚ್ಚು ಪರಿಣಾಮಕಾರಿಯಾಗಿ ದಹಿಸಲು ಸಹಾಯ ಮಾಡುತ್ತದೆ.

ನಾವೇಕೆ ಭಯಾನಕ ಕ್ರೈಂ ಸ್ಟೋರಿಗಳನ್ನು ನೋಡಲು ಬಯಸುತ್ತೇವೆ?

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಯಾವಾಗ ಮನುಷ್ಯ ಪ್ರಾಣಿಯಂತಾಗುತ್ತಾನೋ, ಆಗ ಆತ ಯಾವುದೇ ಪ್ರಾಣಿಗಿಂತ ಭಯಾನಕ ಮತ್ತು ಕ್ರೂರಿಯಾಗಿಬಿಡುತ್ತಾನೆ!

ಅಮೆರಿಕದ ವಿಸ್ಕಾನ್ಸಿನ್ ರಾಜ್ಯದ ಪ್ಲೇನ್ ಫೀಲ್ಡ್ ಎಂಬ ಒಂದು ಹಳ್ಳಿ. ಎಲ್ಲೆಂದರಲ್ಲಿ ಕಣ್ಣು ಕಂತುವವರೆಗೂ ಜೋಳ ಮತ್ತು ಸೋಯಾಬೀನ್ ಗದ್ದೆ- ಬಯಲು. ಹಾಗಾಗಿಯೇ ಹೆಸರು ಪ್ಲೇನ್ ಫೀಲ್ಡ್- ಸಮತಟ್ಟಾದ ಬಯಲು. ನಡುನಡುವೆ ಮೈಲುಗಳ ಅಂತರದಲ್ಲಿ ಒಂದಿಷ್ಟು ಮನೆಗಳ ಕೇರಿ. ಇನ್ನೊಂದಿಷ್ಟು ಒಂಟಿಮನೆಗಳು. ಅಲ್ಲೊಂದು ಪೇಟೆ, ಅಲ್ಲೊಂದಿಷ್ಟು ದಿನಸಿ- ಅದು ಇದು ಅಂಗಡಿಗಳು. ಕಥೆಯ ಇಸವಿ 1957. ಘೋರ, ನೀರೆಲ್ಲ ಘನವಾಗುವ ಚಳಿಗಾಲ. ಕೆಲ ದಿನಗಳ ಹಿಂದಷ್ಟೇ ಮೊಣಕಾಲಷ್ಟು ಹಿಮಪಾತವಾಗಿತ್ತು. ಉತ್ತರ ಧ್ರುವದಿಂದ, ಕೆನಡಾದಿಂದ ಬೀಸಿ ಬರುತ್ತಿದ್ದ ಚಳಿಗಾಳಿ ಯಾವತ್ತೂ ಈ ಊರಿನ ಚಳಿಯನ್ನು ಇನ್ನಷ್ಟು ಅಸಹನೀಯ ಮಾಡುತ್ತಿತ್ತು. ಆದರೆ ಅದೊಂದು ದಿನ ಊರವರಿಗೆಲ್ಲ ನಡುಕ ಹುಟ್ಟಿಸಿದ್ದು ಹಿಮಪಾತವಾಗಿರಲಿಲ್ಲ, ಬೀಸುಗಾಳಿಯಾಗಿರಲಿಲ್ಲ. ಇಡೀ ಊರಿಗೆ ಊರೇ ಕಂಪಿಸಿದ್ದು ಬೇರೆ ಕಾರಣಕ್ಕೆ.

ಆ ದಿನ ಊರಿನ ಪೇಟೆಯಲ್ಲಿ ಹಾರ್ಡ್‌ವೇರ್ ಅಂಗಡಿ ನಡೆಸುತ್ತಿದ್ದ ಮಹಿಳೆ ಇದ್ದಕಿದ್ದಂತೆ ಮಾಯವಾಗಿಬಿಟ್ಟಿದ್ದಳು. ಅಂಗಡಿ, ಹಣದ ಪೆಟ್ಟಿಗೆ ಎಲ್ಲವೂ ತೆಗೆದೇ ಇತ್ತು- ಆದರೆ ಅವಳು ಮಾತ್ರ ಅಲ್ಲಿರಲಿಲ್ಲ. ಅವಳ ಮಗನೇ ಆ ಊರಿನಲ್ಲಿ ಪೊಲೀಸನಾಗಿದ್ದ. ಅವನು ಅಂಗಡಿಯೊಳಗೆ ಬಂದು ನೋಡುವಾಗ ಗಲ್ಲಾಪೆಟ್ಟಿಗೆಯ ಆಚೀಚೆ ರಕ್ತ ಸೀರಿತ್ತು. ಅಲ್ಲಿಯೇ ಪಕ್ಕದಲ್ಲಿ ರಶೀದಿ ಪುಸ್ತಕವಿತ್ತು. ಅದರಲ್ಲಿ ಗ್ರಾಹಕರಿಗೆ ಬರೆದುಕೊಟ್ಟ ರಶೀದಿಯ ನಕಲು ಪ್ರತಿಗಳಿದ್ದವು. ಅವಳ ರಶೀದಿ ಪುಸ್ತಕದಲ್ಲಿದ್ದ ಕೊನೆಯ ಗ್ರಾಹಕ 'ಎಡ್ವರ್ಡ್ ಗೀನ್'. ಎಡ್ ಆ ಊರಿನಲ್ಲಿ ಬಡಗಿ ಕೆಲಸ, ಗದ್ದೆಗಳಿಗೆ ಬೇಲಿ ಹಾಕುವುದು, ಅದು ಇದು ಸಾಮಾನುಗಳನ್ನು ಕೃಷಿಕರಿಗೆ ತಂದುಕೊಡುವುದು ಮಾಡಿಕೊಂಡಿದ್ದವ. ಎಲ್ಲರಿಗೂ ಬೇಕಾದವ, ಎಲ್ಲರ ಜತೆಯೂ ಬೆರೆಯುವ ಜನಸಾಮಾನ್ಯ. ಪೊಲೀಸರಿಗೇಕೋ ಅವನ ಮೇಲೆ ಅನುಮಾನ ಬಂದು, ಯಾವುದಕ್ಕೂ ಇರಲಿ ಎಂದು ಬಂಧಿಸಿದರು. ಮತ್ತು ಹೆಚ್ಚಿನ ಪತ್ತೆಗೆ ವಾರಂಟ್ ಪಡೆದು ಅವನ ಒಂಟಿ ತೋಟದಮನೆಗೆ ಹೋದರು.

(ನಿಮ್ಮದು ಸಂವೇದನಾಶೀಲ, ಸೂಕ್ಷ್ಮ ಮನಸ್ಸಾಗಿದ್ದರೆ ದಯವಿಟ್ಟು ಈ ಮುಂದಿನ ಪ್ಯಾರಾ ಬಿಟ್ಟು ಮುಂದೆ ಓದಿಕೊಳ್ಳಿ). ಮನೆಯ ಹೊರಗಿನಿಂದಲೇ ಅದೇನೋ ಕಮಟು ವಾಸನೆ. ಒಳಹೊಕ್ಕು, ಬ್ಯಾಟರಿ ಬಿಡುತ್ತಿದ್ದಂತೆ ಅವರೆಲ್ಲ ಥರಗುಟ್ಟಿ ನಡುಗಿಹೋದರು. ಅವರು ಯಾರೂ ಊಹೆ ಮಾಡಲಾಗದ ದೃಶ್ಯ ಅವರೆದುರಿಗೆ ಸಂಭವಿಸಿತ್ತು. ಆ ಮಹಿಳೆಯ ದೇಹದ ಕಾಲಿಗೆ ಬಳ್ಳಿ ಕಟ್ಟಿ ನೇತುಹಾಕಲಾಗಿತ್ತು. ರುಂಡವಿರದ ಮುಂಡ ಮಾತ್ರ. ಮಾಂಸದಂಗಡಿಯಲ್ಲಿ ಆಡನ್ನು ತಲೆ ಕತ್ತರಿಸಿ, ಚರ್ಮ ಸುಲಿದು ನೇತುಹಾಕುತ್ತಾರಲ್ಲ ಅಕ್ಷರಶಃ ಹಾಗೆ. ಅಲ್ಲಲ್ಲಿ ಅವಳ ದೇಹದ ಆಂತರಿಕ ಅಂಗಾಂಗಗಳು ಹರಡಿ ಬಿದ್ದಿದ್ದವು. ಅಷ್ಟೇ ಆಗಿದ್ದರೆ ಏನೋ ಒಂದು ಕೊಲೆ ಎಂದಾಗುತ್ತಿತ್ತು. ಆದರೆ ಅವನ ಮನೆಯಲ್ಲಿ! ಎಲ್ಲೆಂದರಲ್ಲಿ ಮನುಷ್ಯನ ಮೂಳೆಗಳನ್ನೇ ಹೇಗೆ ಹೇಗೋ ಜೋಡಿಸಿ ಆಕೃತಿಗಳನ್ನು ನಿರ್ಮಿಸಲಾಗಿತ್ತು. ಕುರ್ಚಿಗಳಿಗೆ ಪ್ರಾಣಿಗಳ ಚರ್ಮದ ಬದಲಿಗೆ ಮನುಷ್ಯ ಚರ್ಮಗಳನ್ನು ಹಾಕಲಾಗಿತ್ತು. ಮನುಷ್ಯನ ಬುರುಡೆಯನ್ನು ಬೌಲ್ (ಗುಂಡಿ ಪಾತ್ರೆ) ರೀತಿಯಲ್ಲಿ ಬಳಸಲಾಗಿತ್ತು. ಹೀಗೆ. ಅವನೆಂಥಾ ಮನುಷ್ಯ ಎಂದರೆ ಊರಿನ ಸ್ಮಶಾನಕ್ಕೆ ಹೋಗಿ, ಆಗಷ್ಟೇ ಹುಗಿದ ಹೆಣದ ಅಂಗಾಂಗ, ಚರ್ಮ, ತಲೆಬುರುಡೆ ಎಲ್ಲ ಮನೆಗೆ ತರುತ್ತಿದ್ದ. ಆದಿಮಾನವರು ಪ್ರಾಣಿಗಳ ಚರ್ಮ, ಮೂಳೆ ಬಳಸುವಂತೆ ಬಳಸುತ್ತಿದ್ದ. ಮನುಷ್ಯರ ಮುಖದ ಚರ್ಮವನ್ನು ಕಿತ್ತು ಅದರ ಮುಖವಾಡ ಮಾಡಿಟ್ಟಿದ್ದ. ಆ ದಿನ ಪೊಲೀಸರ ಬ್ಯಾಟರಿ ಬೆಳಕಿಗೆ ಅನಾವರಣವಾದದ್ದು ಕೇವಲ 'ಎಡ್ವರ್ಡ್ ಗೀನ್' ಎಂಬ ಯಾವುದೋ ಒಬ್ಬ ಕೊಲೆಗಾರನ ಕರಾಳತೆ ಮಾತ್ರವಲ್ಲ. ಕೆಲವೇ ಘಟನೆಗಳಲ್ಲಿ ಮನುಷ್ಯನ ಕ್ರೌರ್ಯ ಸಾಧ್ಯತೆಯ ಪರಮಾವಧಿ ಎದುರಿಗೆ ಬಂದುಬಿಡುತ್ತದೆ.

ಈ ಕೊಲೆ ಮತ್ತು ಕ್ರೌರ್ಯ ಕೇವಲ ಒಂದು ಕಥೆಯಾಗಿ ಉಳಿಯಲಿಲ್ಲ. ಇದು ಅದೆಷ್ಟೋ ಸಿನಿಮಾಗಳಿಗೆ ಮಾದರಿ ಕಥೆಯಾಯಿತು. ಇದೇ ಘಟನೆ ಆಧರಿಸಿ ಕಾದಂಬರಿಗಳು ಬಂದವು, ಅವನ ಮನೆಯೊಳಗಿನ ಹೋಲಿಕೆಯಿರುವ ದೃಶ್ಯಗಳು ಭೂತಪ್ರೇತದ (Horror) ಸಿನಿಮಾಗಳಲ್ಲಿ ಬಳಕೆಯಾದವು.



ಇದೆಲ್ಲ ವಿಷಯ ಈಗೇಕೆ ಎಂದು ಕೇಳಿದಿರಾ? ಇತ್ತೀಚೆ ನೆಟ್‌ಫ್ಲಿಕ್ಸ್‌ನಲ್ಲಿ Netflix's Monster: The Ed Gein Story ಎಂಬ ಎಂಟು ಕಂತಿನ ವೆಬ್ ಸೀರೀಸ್ ಬಿಡುಗಡೆಯಾಯಿತು. ಕೋಟ್ಯಂತರ ಜನರು ಇದನ್ನು ನೋಡಿದರು. ಅಷ್ಟೇ ಅಲ್ಲ, ಈಗೀಗ ಯಾರೂ ಹೆಚ್ಚಾಗಿ ಬಳಸದ ವಿಕಿಪೀಡಿಯಾದಲ್ಲಿ ಎಡ್ವರ್ಡ್ ಗೀನ್‌ನ ಬಗ್ಗೆ ಇದ್ದ ಪೇಜ್ ಅದೆಷ್ಟೋ ದಿನ ಪ್ರಪಂಚದ ಅತ್ಯಂತ ಹೆಚ್ಚು ವೀಕ್ಷಿಸಲ್ಪಟ್ಟ ವೆಬ್ ಪೇಜ್‌ಗಳಲ್ಲಿ ಒಂದಾಗಿತ್ತು. ಇದೊಂದು ಉದಾಹರಣೆ ಮಾತ್ರ. ನೆಟ್‌ಫ್ಲಿಕ್ಸ್‌ನಲ್ಲಿ ಈ ರೀತಿ ಅಮಾನುಷ ಕ್ರೌರ್ಯ ಎಸಗಿದ ಇನ್ನೂ ಸುಮಾರು ಅಪರಾಧಿಗಳ ಕ್ರೈಂ ಕಥೆಗಳಿವೆ. ಅವೆಲ್ಲವೂ ಬ್ಲಾಕ್ ಬಸ್ಟರ್‌ಗಳೇ. ಈಗಂತೂ ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್, ಝೀ, ಹಾಟ್‌ಸ್ಟಾರ್ ಹೀಗೆ ಹತ್ತಾರು ಓಟಿಟಿಗಳಿವೆ. ಅವೆಲ್ಲವುಗಳಲ್ಲಿಯೂ ಇಂಥ ಹಲವು ವೆಬ್ ಸೀರೀಸ್‌ಗಳಿವೆ. ಅವೆಲ್ಲವೂ ಮನುಷ್ಯ ಕ್ರೌರ್ಯದ ಪರಮಾವಧಿಯನ್ನು ಮುಟ್ಟಿದವರ ಅಪರಾಧದ ಕಥೆ. ಅವೆಲ್ಲವೂ ಸತ್ಯಘಟನೆ ಆಧರಿಸಿದ ಕಥೆಗಳು. ಆದರೆ ಅಸಲಿಯತ್ತು ಏನೆಂದರೆ ಈ ಓಟಿಟಿಯಲ್ಲಿ ಕಥೆಯಾಗುವ ಕಥೆಗಳಲ್ಲಿ ಕಥೆ ಮಾತ್ರ ಸತ್ಯಘಟನೆಯನ್ನಾಧರಿಸಿದವು. ನಿಜ ಕಥೆಯೇ ಅಷ್ಟು ಕ್ರೌರ್ಯದ್ದಾದರೆ ಅದನ್ನು ಕಥೆಯಾಗಿಸುವಾಗ ಅಲ್ಲಿ ತೋರಿಸುವ ಕ್ರೌರ್ಯ ಮಾತ್ರ ನೈಜತೆಗಿಂತ ನೂರು ಪಟ್ಟು ಜಾಸ್ತಿಯವು. ನಾನು ಮೇಲೆ ಹೇಳಿದ ಘಟನೆ ಸತ್ಯಕಥೆಯಾದರೆ ಈ ಕಥೆಯನ್ನಾಧರಿಸಿದ ನೆಟ್‌ಫ್ಲಿಕ್ಸ್‌ನ ಕಥೆಯ ಕ್ರೌರ್ಯದ ಮಟ್ಟವೇ ಬೇರೆಯದು, ಅತಿರಂಜನೆ. ಈ ಕಥೆಗಳಿರಬಹುದು ಅಥವಾ ಹಿಂದಿ, ಕನ್ನಡ ವಾಹಿನಿಗಳಲ್ಲಿ ಬರುವ ಇಂಥ ಕ್ರೈಂ ಸ್ಟೋರಿಗಳಿರಬಹುದು, ಅಥವಾ ಹಿಂದಿಯ ಭಕ್ಷಕ್, ಫ್ಲೆಶ್, ತಲ್ವಾರ್, ಚುಪ್- ರಿವೇಂಜ್ ಆಫ್ ಆರ್ಟಿಸ್ಟ್ ಹೀಗೆ ಯಾವುದೇ ಸತ್ಯಾಧಾರಿತ ಕಥೆಗಳಿರಬಹುದು. ಇವುಗಳಲ್ಲಿ ಹೆಚ್ಚಿನವು ಒಬ್ಬ ತೀರಾ ಸಾಮಾನ್ಯ, ಜನರೆಲ್ಲರ ಜತೆ ಸಾಮಾನ್ಯರಂತೆ ಬದುಕುವ ವ್ಯಕ್ತಿ; ಆದರೆ ಮರೆಯ ಹಿಂದೆ ಸೈಕೋಪಾತ್- ಮನೋವಿಕೃತ ಕೊಲೆಗಾರ.

ಎಲ್ಲರೂ ಅತಿರಂಜಿತ ಕ್ರೈಂ ಕಥೆಗಳನ್ನು ಇಷ್ಟಪಡುವುದಿಲ್ಲ. ಅದರಲ್ಲಿಯೂ ಓಟಿಟಿಗಳಲ್ಲಿ ಬರುವ ಮನೋವಿಕೃತ ಪಾತಕ ಕಥೆಗಳನ್ನು ನೋಡಿ ಜೀರ್ಣಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ, ಅಂಥ ಘಟನೆಗಳನ್ನು ಟಿವಿ ಪರದೆಯ ಮೇಲೆ ಕೂಡ ನೋಡಲು ಸಾಧ್ಯವಾಗುವುದಿಲ್ಲ. ಇದು ಹೆದರಿಕೆಯ ಹಿಂಜರಿಕೆಯಲ್ಲ, ಮಾನಸಿಕ ಹಿಂಸೆ. ಆದರೆ ಈ ರೀತಿಯ ಕಥೆಗಳನ್ನು ನೋಡಲು ಬಯಸುವ ದೊಡ್ಡ ವರ್ಗವೇ ಇದೆ. ಪತ್ರಿಕೆಗಳಲ್ಲಿ ಅಪರಾಧಗಳ ಸುದ್ದಿಗೆಂದೇ ಒಂದೆರಡು ಪೇಜು ಇರುತ್ತದೆ. ಕ್ರೈಂ ಸ್ಟೋರಿ ನೋಡಲಷ್ಟೇ ಟಿವಿ ಹಚ್ಚುವ, ನೋಡುತ್ತಲೇ ಊಟಮಾಡುವ ಅದೆಷ್ಟೋ ಜನರಿದ್ದಾರೆ. ಅವರೆಂದೂ ಯಾವುದೇ ಅಪರಾಧ ಎಸಗುವವರಲ್ಲ, ಆದರೆ ಎಲ್ಲರಿಗೂ ಇಂಥ ಅಪರಾಧಗಳ ಬಗ್ಗೆ ತಿಳಿಯುವ ಎಲ್ಲಿಲ್ಲದ ಕುತೂಹಲ.... ಮೇಲಿನ ಒಂದು ಪ್ಯಾರಾ ಓದಬೇಡಿ ಎಂದಮೇಲೂ ಓದಿದಿರಲ್ಲ, ಆ ಕುತೂಹಲ! ಆದರೆ ಇದೆಲ್ಲ ಕೇವಲ ಕುತೂಹಲದಷ್ಟೇ ಪ್ರಶ್ನೆಯೇ? ನಾವೇಕೆ ಹಾರರ್- ಭಯಾನಕ ಅಥವಾ ಕ್ರೈಂ ಕಥೆಗಳನ್ನು ನೋಡಲು ಬಯಸುತ್ತೇವೆ?

ಇಂಥ ಅರ್ಥವಾಗದ ಬಯಕೆಗಳನ್ನು ಈಡೇರಿಸಿಕೊಳ್ಳುವುದನ್ನು 'ಅದೇನೋ ಥ್ರಿಲ್' ಎಂದು ಆಡುಮಾತಿನಲ್ಲಿ ಹೇಳುವುದಿದೆ. 'ಥ್ರಿಲ್' ಎಂದರೆ ಅತ್ಯುತ್ಸುಕತೆ. ಈ ಅತಿಯಾದ ಕುತೂಹಲವೇಕೆ? ಕಾರಣವಿದೆ. ನಮ್ಮೆಲ್ಲರಲ್ಲೂ ವಿಷಯ ಯಾವುದೇ ಇರಲಿ, ಅದರ ಪರಮಾವಧಿ ಸಾಧ್ಯತೆಯನ್ನು ತಿಳಿದುಕೊಳ್ಳುವ ಒಂದು ಅದಮ್ಯ ಕುತೂಹಲವಿರುತ್ತದೆ. ಮೇಲೆ ಹೇಳಿದ ಕಥೆಯಲ್ಲಿ ಎಡ್ ಗೀನ್ ಇರಬಹುದು ಅಥವಾ ಯಾವುದೇ ಅಪರಾಧಿ ಕಥೆಗಳಿರಬಹುದು. ಕೇಳಿದಾಕ್ಷಣ ಅವನೇಕೆ ಈ ರೀತಿಯ ಕೃತ್ಯ ಎಸಗಿದ? ಒಬ್ಬ ತೀರಾ ಸಾಮಾನ್ಯ ನಮ್ಮಂತೆಯೇ ಹೊರ ಸಮಾಜದಲ್ಲಿ ಕಾಣಿಸಿಕೊಂಡ ವ್ಯಕ್ತಿ ಆಂತರ್ಯದಲ್ಲಿರುವ ರಾಕ್ಷಸೀಯ ಗುಣಗಳನ್ನು ಅಡಗಿಸಿಟ್ಟಿದ್ದು ಹೇಗೆ? ಇದು ಅಪಾಯವನ್ನು ಗ್ರಹಿಸುವ, ಅರ್ಥೈಸುವ ಮನುಷ್ಯಸಹಜ ಗುಣ. ನಾವು ಈ ಕಥೆ ನೋಡುವಾಗ ಕೊಲೆಗಾರನ ಉದ್ದೇಶ, ಮಾದರಿ, ರೀತಿ, ನಡವಳಿಕೆ, ಕೊಲೆಯಂಥ ಅಪರಾಧವನ್ನು ಪ್ರಚೋದಿಸಿದ್ದು ಏನು? ಇತ್ಯಾದಿ ತಿಳಿಯಬಯಸುತ್ತೇವೆ. ಹೀಗೆ ಮನುಷ್ಯ ನಡವಳಿಕೆಯ ಮಾನಸಿಕ ಪ್ರಯೋಗಾಲಯ ವನ್ನೇ ತೆರೆದು ಕೂತುಬಿಡುತ್ತೇವೆ. ವಿಪರೀತ ಸಂದರ್ಭ ಗಳಲ್ಲಿಯೂ ಕಾರಣ ಮತ್ತು ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಲು ಹಾತೊರೆಯುತ್ತೇವೆ. ಆಪತ್ತು, ಗಂಡಾಂತರ ಗಳ ಸಂಕೇತವನ್ನು ಅರಿಯಬೇಕೆನ್ನುವ ನಮ್ಮ ಈ ಬಯಕೆ ಮನುಷ್ಯನ ಮೂಲ ಗುಣ. ಮೂಲ ಬಯಕೆಯಾದದ್ದ ರಿಂದಲೇ ಭಾವನೆಗಳ ಕಲಸುಮೇಲೋಗರವಾದರೂ ಅದು ಹಿಂಸೆಯೆನಿಸುವುದಿಲ್ಲ, ರಂಜನೀಯವೆನಿಸುತ್ತದೆ. ಅಸಲಿಗೆ ನಮ್ಮ ಮನಸ್ಸು ಅಂಥದ್ದೊಂದು ಸಂದರ್ಭಕ್ಕೆ ತಯಾರಾಗುವ ಭ್ರಮೆಯಲ್ಲಿರುತ್ತದೆ.

ವ್ಯಾಯಾಮ, ಅಪಾಯ, ಮಾನಸಿಕ ಒತ್ತಡ, ಸ್ಪರ್ಧೆ ಈ ಎಲ್ಲ ಸಂದರ್ಭಗಳಲ್ಲಿ ಮೂತ್ರಕೋಶದ ಮೇಲ್ಭಾಗದಲ್ಲಿರುವ ಮೂತ್ರಜನಕಾಂಗದ ಗ್ರಂಥಿಗಳು 'ಅಡ್ರಿನಲಿನ್' ಎಂಬ ರಾಸಾಯನಿಕ ಹಾರ್ಮೋನ್ ಅನ್ನು ಬಿಡುಗಡೆ ಮಾಡುತ್ತವೆ. ಇದು ದೇಹದ ಹೃದಯ, ಶ್ವಾಸಕೋಶ, ಸ್ನಾಯುಗಳು, ಪಿತ್ತಕೋಶ, ರಕ್ತನಾಳಗಳು, ನಂತರ ಮಿದುಳು ಹೀಗೆ ದೇಹದ ಭಾಗಗಳಿಗೆಲ್ಲ ರವಾನೆಯಾಗುತ್ತದೆ. ಇದರಿಂದ ಹೃದಯ ಬಡಿತ ಹೆಚ್ಚುತ್ತದೆ, ಉಸಿರಾಟ ಜಾಸ್ತಿಯಾಗುತ್ತದೆ, ಸ್ನಾಯುಗಳು, ದೇಹ ಒಡಲು, ಪಲಾಯನಕ್ಕೆ ತಯಾರಾಗುತ್ತವೆ, ಮಿದುಳಿನ ಏಕಾಗ್ರತೆ (ಆ ಸಮಯಕ್ಕಷ್ಟೇ) ಹೆಚ್ಚಾಗುತ್ತದೆ. ಇದೆಲ್ಲವೂ ಭಯವಾದಾಗ, ಇಂಥ ಕಥೆಗಳನ್ನು ಓದಿದಾಗ, ಟಿವಿಯಲ್ಲಿ ಹೌದೇ ಹೌದು ಎಂಬಂತೆ ಚಿತ್ರಗೊಂಡು ಕಂಡಾಗ ಕೂಡ ಆಗುತ್ತದೆ. ಆ ಕಾರಣಕ್ಕೇ- ನಿತ್ಯವೂ ಜಿಮ್‌ಗೆ ಹೋಗುವವರಿಗೆ ಅಭ್ಯಾಸವಾದಂತೆ ಇಂಥ ಕಥೆಗಳನ್ನು ನೋಡುವುದು ಕೂಡ ಅಭ್ಯಾಸವಾಗುತ್ತದೆ. ಇದೊಂದು ಮಾನಸಿಕ ಜಿಮ್- ಆದರೆ ಒಳ್ಳೆಯದಲ್ಲ!

ಇಲ್ಲಿ ಭಯ ನೋಡುವ ಸಮಯದಷ್ಟೇ ಭಾವವಲ್ಲ. ಅದರಾಚೆಯ ನಮ್ಮ ಉಪಪ್ರಜ್ಞೆಯ ಜತೆಯಾಗುವ ಇನ್ನೊಂದು ಭಯವಿದೆ. ಅದು 'ಸಾಮಾಜಿಕ ಅಸ್ತಿತ್ವದ' ಭಯ. ನಮ್ಮ ಸಮಾಜದೆಡೆಗಿನ ನಂಬಿಕೆ, ನೈತಿಕತೆ ಮತ್ತು ಸಾಧ್ಯತೆಗಳನ್ನು ಪ್ರಶ್ನಿಸಿಕೊಳ್ಳುವುದು ಕೂಡ ಮನುಷ್ಯ ಸಹಜ ಗುಣದ ಅವಶ್ಯಕತೆ. ನಮ್ಮೊಳಗೆ ಸಾಮಾಜಿಕ ನ್ಯಾಯ ಮತ್ತು ನೀತಿಯ ಪ್ರಶ್ನೆ ಬಗ್ಗೆ ಪ್ರಶ್ನೆ ಹುಟ್ಟಿಸುತ್ತದೆ. ಅದೆಷ್ಟೋ ಕೊಲೆ, ಅಪರಾಧಗಳು ನಡೆಯುತ್ತಿರುತ್ತವೆ. ಆದರೆ ಕೆಲವೇ ಕೆಲವು ಘಟನೆಗಳು ಮಾತ್ರ ಹೆಚ್ಚು ವೈರಲ್ ಆಗುತ್ತವೆ, ಹೆಚ್ಚಿನ ಗಮನ ಸೆಳೆಯುತ್ತವೆ, ವಿಷಯವಿಸ್ತಾರಗೊಳ್ಳುತ್ತದೆ.

ಇವೆಲ್ಲ ವಿಷಯ ಹೀಗಿರುವಾಗ ಒಂದು ಘಟನೆಯನ್ನು- 'ಸತ್ಯಕಥೆಯನ್ನು ಆಧರಿಸಿ' ಎಂದು ಹೆಸರಿಟ್ಟು, ಸತ್ಯಕಥೆಯಿಂದ ಎರಡೇ ಸಾಲು ತೆಗೆದುಕೊಂಡು, ಬಾಕಿ ಎಲ್ಲ ಕಪೋಲಕಲ್ಪಿತ ಅತಿರಂಜನೆಯ ಅಪರಾಧವೆಂದು ತೋರಿಸಿದಲ್ಲಿ, ಅಪರಾಧಿ ರಕ್ತಸಿಕ್ತ ಕೊಲೆಮಾಡುವ ಸನ್ನಿವೇಶವನ್ನೆಲ್ಲ ಪರದೆಯ ಮೇಲೆ ಹುಟ್ಟಿಸಿದಾಗ ಅಡ್ರೆನಲಿನ್ ಜಾಸ್ತಿ ಸ್ರವಿಸುವುದಷ್ಟೇ ಅಲ್ಲವಲ್ಲ. ಅದು ನಮ್ಮ ಮೇಲೆ ಬೀರುವ ಪರಿಣಾಮಗಳು? ಹುಟ್ಟಿಸುವ ಸಾಮಾಜಿಕ ಭಯ? ಈಗೀಗಂತೂ ಓಟಿಟಿ, ಸುದ್ದಿ ವಾಹಿನಿಗಳು, ಯುಟ್ಯೂಬ್ ಚಾನಲ್‌ಗಳು, ಸಿನಿಮಾ ತಯಾರಕರು ಇವರಿಗೆಲ್ಲ ಈ ನಮ್ಮ ಕುತೂಹಲ, ಭಯ ಇವೇ ಸರಕು. ಅವರೆಲ್ಲ ಈ ಮೂಲ ಗುಣವನ್ನು Exploit- ದುರ್ಬಳಕೆ ಮಾಡಿಕೊಳ್ಳಲು ಇಳಿದಂತಿದೆ. ನಮ್ಮ ಮನಸ್ಸಿಗೆ ಇದೆಲ್ಲ ತಾಲೀಮು, ಆದರೆ ಈ ತಾಲೀಮಿನ ಅವಶ್ಯಕತೆ ಎಲ್ಲರಿಗೂ ಇದೆಯೇ? ಅಥವಾ ಅಂಥ ಅಪಾಯಕ್ಕೊಳಗಾದಾಗ ನಮ್ಮ ಮಿದುಳಿನ ತಯಾರಿ ಪ್ರಯೋಜನಕ್ಕೆ ಬಂದೀತೆ?

ಕೆಲವೊಂದು ನಿಜ ಅಪರಾಧಗಳನ್ನು ತಿಳಿದುಕೊಳ್ಳುವುದು ಕೂಡ ಒಂದು ಸಾಮಾಜಿಕ ಶಿಕ್ಷಣ. ನಿರ್ಭಯಾ ಮೊದಲಾದ ಅಪರಾಧಗಳನ್ನು ತಿಳಿದುಕೊಳ್ಳುವುದು ಮತ್ತು ಸಾಮಾಜಿಕ ಬದಲಾವಣೆ ಮಾಡಿಕೊಳ್ಳುವುದು, ಕಾನೂನು ರಚಿಸಿಕೊಳ್ಳುವುದು ಇವೆಲ್ಲವೂ ಅವಶ್ಯಕವೇ. ಆದರೆ ಅತಿರಂಜನೆಯ, ಸತ್ಯಘಟನೆ ಆಧಾರಿತ ಸುಳ್ಳು ಕಥೆಗಳನ್ನು, ಕ್ರೈಂ ಸ್ಟೋರಿಗಳನ್ನೂ ನೋಡುವುದೇ 'ಅಭ್ಯಾಸವಾದಾಗ' ಶೋಷಿತರ ಪರ ಕನಿಕರ ಹೊಂದುತ್ತಿದ್ದೇವೆಯೇ ಅಥವಾ ಅಪರಾಧಿಗಳನ್ನು ಮೆಚ್ಚುತ್ತಿದ್ದೇವೆಯೇ? ಎಂಬ ಪ್ರಶ್ನೆಯನ್ನಂತೂ ಕೇಳಿಕೊಳ್ಳುತ್ತಿರಬೇಕಾಗುತ್ತದೆ. ಎಡ್ವರ್ಡ್ ಗೀನ್ ಇರಬಹುದು ಅಥವಾ ಮುಂಬೈ ಸರಣಿ ಕೊಲೆ ಕಥೆಯಿರಬಹುದು, ಅವುಗಳಿಂದ ಕಲಿಯಬೇಕಾದ ಪಾಠ ಎಲ್ಲರಿಗೂ ಅವಶ್ಯವಿದೆಯೇ? ದುರಂತ ಕಥೆಗಳು ಎಚ್ಚರಿಕೆಗೆ, ಸಮಾಜದ ಗ್ರಹಿಕೆಗೆ ಅವಶ್ಯಕ. ಆದರೆ ಅತಿಶಯವಾಗಿಸಿದ ದುರಂತ ಕಥೆಗಳನ್ನು ನೋಡುವುದು ಅಭ್ಯಾಸವಾದಲ್ಲಿ ಅದು ಕೇವಲ ಮನೋರಂಜನೆಯಷ್ಟೇ ಆಗಿ ನಮ್ಮಲ್ಲಿ ಉಳಿಯುವುದಿಲ್ಲ. ಬದಲಿಗೆ ಅದೆಷ್ಟೋ ಭಾವತಂತುಗಳನ್ನು ಅನವಶ್ಯ ಮೀಟುತ್ತದೆ. ಜಿಮ್, ಸ್ಪರ್ಧೆಗಳಲ್ಲಿ ಭಾಗವಹಿಸಿದಾಗ ಆಗುವ ಅನುಭವ ಕುಳಿತಲ್ಲೇ ಪಡೆಯುವ ಅದೊಂದು 'ಸಸ್ತಾ ನಶೆ'.

ಮಾನಸಿಕ ಅವಶ್ಯಕತೆಯನ್ನು ದುರ್ಬಳಕೆ ಮಾಡಿ ಹಣ ಮಾಡುವ ಸೋಷಿಯಲ್ ಮೀಡಿಯಾ, ಓಟಿಟಿ, ಯುಟ್ಯೂಬ್, ಟಿವಿ ಮಾಧ್ಯಮಗಳ ಭರಾಟೆಯ ಆಧುನಿಕ ಬದುಕಿನಲ್ಲಿ ಯಾವುದೇ ಮಾನಸಿಕ ಚಟಗಳನ್ನು ಹತ್ತಿಸಿಕೊಳ್ಳದೆ ಬದುಕುವುದೇ ಸದ್ಯ ಮನುಷ್ಯ ಕುಲದೆದುರು ಇರುವ ಅತ್ಯಂತ ದೊಡ್ಡ ಸವಾಲು!!

ಇತರರನ್ನು ಶ್ರೀಮಂತರನ್ನಾಗಿಸಿದ ಭಾರತೀಯ ಉದ್ಯಮಿಗಳು!

ನಮ್ಮಲ್ಲಿನ ಎಡಪಕ್ಷಗಳು (ಸಿಪಿಐ ಮತ್ತು ಸಿಪಿಎಂ) ನಿರಂತರವಾಗಿ ದೊಡ್ಡ ಬಿಸಿನೆಸ್‌ಗಳನ್ನು, ಉದ್ದಿಮೆದಾರರನ್ನು ಟೀಕಿಸುತ್ತಿದ್ದವು. ತಮ್ಮ ವೈಯಕ್ತಿಕ ಸ್ವಾರ್ಥಲಾಲಸೆಗಾಗಿ, ಅಧಿಕಾರದ ಗದ್ದುಗೆ ಏರುವ ಸಲುವಾಗಿ, ಬೃಹತ್ ಕೈಗಾರಿಕಾ ಸಮೂಹಗಳನ್ನು ಖಳನಾಯಕರಂತೆ ಚಿತ್ರಿಸುತ್ತಿದ್ದವು. ತಮ್ಮನ್ನು ಬಡವರ, ದೀನರ, ಕಾರ್ಮಿಕರ ಪಕ್ಷವೆಂದು ಸೋಗು ಹಾಕಿಕೊಳ್ಳುತ್ತಿದ್ದವು. ವರ್ಗಸಂಘರ್ಷವೇ ಈ ಎಡಪಕ್ಷಗಳ ಬಂಡವಾಳವಾಗಿತ್ತು. ಆದರೆ ಇದರಿಂದಾಗಿ ದೇಶದ ಆರ್ಥಿಕ ಅಭಿವೃದ್ಧಿಗೆ ಉಂಟಾಗಿದ್ದ ಹಾನಿ ಮಾತ್ರ ಅಷ್ಟಿಷ್ಟಲ್ಲ.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.

ಇನ್ಫೋಸಿಸ್ ಕಂಪನಿಯ ಸ್ಥಾಪಕ ನಾರಾಯಣ ಮೂರ್ತಿಯವರು ತಮ್ಮ ಮೊಮ್ಮಗನಿಗೆ 240 ಕೋಟಿ ರುಪಾಯಿ ಮೌಲ್ಯದ ಷೇರುಗಳನ್ನು ನೀಡಿದಾಗ, ಕೆಲವರು ಟೀಕಿಸಿದ್ದರು. ದುರದೃಷ್ಟವಶಾತ್ ನಮ್ಮಲ್ಲಿ ಉದ್ಯಮಿಗಳ ಬಗೆಗಿನ ಕುಹಕಗಳು 'ಟೇಕನ್ ಫಾರ್ ಗ್ರಾಂಟೆಡ್' ಎನ್ನುವಷ್ಟು ಸಲೀಸು. ಆದರೆ ಎಂದಾದರೂ, ಇನ್ಫೋಸಿಸ್ ಎಷ್ಟು ಮಂದಿ ಉದ್ಯೋಗಿಗಳನ್ನು ಕೋಟ್ಯಧಿಪತಿಗಳನ್ನಾಗಿಸಿದೆ? ಎಷ್ಟು ಮಂದಿ ಷೇರುದಾರರನ್ನು ಕೋಟ್ಯಧಿಪತಿ, ಲಕ್ಷಾಧಿಪತಿಗಳನ್ನಾಗಿಸಿದೆ ಎಂದು ಯೋಚಿಸಬೇಡವೇ?!

ನೋಡಿ, ಮಾರುಕಟ್ಟೆ ಬಂಡವಾಳ ಮೌಲ್ಯದ ದೃಷ್ಟಿಯಿಂದ, ಅಂದರೆ ಷೇರುಪೇಟೆಯಲ್ಲಿ ಕಂಪನಿಯ ಷೇರುಗಳ ಒಟ್ಟು ಮೌಲ್ಯದ ಲೆಕ್ಕಾಚಾರದಿಂದ ನೋಡಿದರೆ, ಇನ್ಫೋಸಿಸ್ ದೇಶದ ಏಳನೇ ಅತಿ ದೊಡ್ಡ ಕಂಪನಿಯಾಗಿದೆ. ಹೀಗಿದ್ದರೂ, ಅದರ ಸ್ಥಾಪಕರಾದ ನಾರಾಯಣಮೂರ್ತಿಯವರಾಗಲಿ, ನಂದನ್ ನಿಲೇಕಣಿಯವರಾಗಲಿ ವೈಯಕ್ತಿಕವಾಗಿ ಅಪಾರ ಸಂಪತ್ತು ಹೊಂದಿರುವ ದೇಶದ ಮೊದಲ 100 ಶ್ರೀಮಂತರ ಪಟ್ಟಿಯಲ್ಲಿ ಕೆಳಗಿದ್ದಾರೆ! ಇದರ ಅರ್ಥ? ಇನ್ಫೋಸಿಸ್ ಸಂಪತ್ತಿನಲ್ಲಿ ಬಹುಪಾಲೂ ಬೇರೆಯವರಿಗೆ ಸೇರಿದೆ. ದೇಶೀಯ ಸಾಂಸ್ಥಿಕ ಹೂಡಿಕೆದಾರ ಸಂಸ್ಥೆಗಳು, ಜಾಗತಿಕ ಹೂಡಿಕೆದಾರರು, ಮ್ಯೂಚುವಲ್ ಫಂಡ್‌ಗಳು ಮತ್ತು ಲಕ್ಷಾಂತರ ಜನಸಾಮಾನ್ಯರಿಗೆ ಷೇರುಗಳ ಮೂಲಕ ಸಂಪತ್ತು ಹಂಚಿಕೆಯಾಗಿದೆ.

ಸರಳವಾಗಿ ಒಂದು ಲೆಕ್ಕಾಚಾರ. ಇನ್ಫೋಸಿಸ್‌ನ ಬಂಡವಾಳ ಮಾರುಕಟ್ಟೆ ಮೌಲ್ಯವು 6.4 ಲಕ್ಷ ಕೋಟಿ ರುಪಾಯಿ. ಅದರಲ್ಲಿ ಸ್ಥಾಪಕ ನಾರಾಯಣಮೂರ್ತಿ, ನಂದನ್ ನಿಲೇಕಣಿ, ಕ್ರಿಸ್ ಗೋಪಾಲಕೃಷ್ಣನ್, ಅಶೋಕ್ ಅರೋರಾ, ಎಸ್.ಡಿ. ಶಿಬುಲಾಲ್, ಎನ್.ಎಸ್. ರಾಘವನ್ ಮತ್ತು ಕೆ.ದಿನೇಶ್ ಅವರ ಪಾಲು 13 ಪರ್ಸೆಂಟ್ ಮಾತ್ರ. ಇದರ ಮೌಲ್ಯ ಸುಮಾರು 83,700 ಕೋಟಿ ರುಪಾಯಿಗಳು. ಆದ್ದರಿಂದ ಇನ್ಫೋಸಿಸ್‌ನ 6 ಲಕ್ಷದ 40 ಸಾವಿರ ಕೋಟಿ ರುಪಾಯಿಗಳಲ್ಲಿ ಏಳು ಮಂದಿ ಸ್ಥಾಪಕರು, 83,700 ಕೋಟಿ ರುಪಾಯಿಗಳನ್ನು ಮಾತ್ರ ಹೊಂದಿದ್ದಾರೆ. ಮಿಕ್ಕಿದ ಎಲ್ಲ ಸಂಪತ್ತೂ ಇತರರನ್ನು ಸಿರಿವಂತರನ್ನಾಗಿಸಿದೆ. ಆದರೆ ಎಲ್ಲೂ ಅವರು ಇದನ್ನೆಲ್ಲ ಹೇಳಿಕೊಂಡಿಲ್ಲ!

ಟಾಟಾ ಸಮೂಹವನ್ನೇ ತೆಗೆದುಕೊಳ್ಳಿ. ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯ 28 ಲಕ್ಷ ಕೋಟಿ ರುಪಾಯಿ. ಇದರಲ್ಲಿ 14 ಲಕ್ಷ ಕೋಟಿ ಸಂಪತ್ತು ಹೂಡಿಕೆದಾರರ ಪಾಲಾಗಿದೆ. ಅದೇ ರೀತಿ ರಿಲಯನ್ಸ್ ಇಂಡಸ್ಟ್ರೀಸ್‌ನ ಮಾರುಕಟ್ಟೆ ಮೌಲ್ಯ 23 ಲಕ್ಷ ಕೋಟಿ. ಇದರಲ್ಲಿ 12 ಲಕ್ಷ ಕೋಟಿ ರುಪಾಯಿಗಳು ಹೂಡಿಕೆದಾರರಿಗೆ ಸೇರಿವೆ. ಸುನಿಲ್ ಮಿತ್ತಲ್ ಅವರ ಭಾರ್ತಿ ಎಂಟರ್‌ಪ್ರೈಸಸ್‌ನ ಬಂಡವಾಳ ಮೌಲ್ಯ 14 ಲಕ್ಷ ಕೋಟಿ ರುಪಾಯಿಗಳಾಗಿದ್ದರೆ, ಹೂಡಿಕೆದಾರರಿಗೆ 6.8 ಲಕ್ಷ ಕೋಟಿ ಸೇರಿದೆ. ಬಜಾಜ್ ಗ್ರೂಪ್‌ನ ಮೌಲ್ಯ 14.8 ಲಕ್ಷ ಕೋಟಿ ರುಪಾಯಿಗಳಾಗಿದ್ದರೆ, ಷೇರುದಾರರ ಹಣ 6 ಲಕ್ಷ ಕೋಟಿ. ಮಹೀಂದ್ರಾ ಗ್ರೂಪ್‌ನ ಮೌಲ್ಯ 7 ಲಕ್ಷ ಕೋಟಿ ರುಪಾಯಿಗಳಾಗಿದ್ದರೆ, ಷೇರುದಾರರ ಸಂಪತ್ತು 5 ಲಕ್ಷ ಕೋಟಿಗಳಾಗಿವೆ. ಅದಾನಿ ಗ್ರೂಪ್‌ನ ಮಾರುಕಟ್ಟೆ ಮೌಲ್ಯ 14.8 ಲಕ್ಷ ಕೋಟಿಗಳಾಗಿದ್ದರೆ, ಷೇರುದಾರರ ಸಂಪತ್ತು 4.5 ಲಕ್ಷ ಕೋಟಿಯಾಗಿದೆ. ಆದಿತ್ಯ ಬಿರ್ಲಾದ ಮೌಲ್ಯ 8.8 ಲಕ್ಷ ಕೋಟಿ ರುಪಾಯಿಗಳಾಗಿದ್ದರೆ, ಷೇರುದಾರರ ಸಂಪತ್ತು 4.3 ಲಕ್ಷ ಕೋಟಿಯಾಗಿದೆ.

ಜೊಮ್ಯಾಟೊ ಮತ್ತು ಬ್ಲಿಂಕ್‌ಇಟ್‌ನ ಹೋಲ್ಡಿಂಗ್ ಕಂಪನಿಯಾದ ಎಟರ್ನಲ್ ಲಿಮಿಟೆಡ್ 3 ಲಕ್ಷ ಕೋಟಿ ರುಪಾಯಿ ಮೌಲ್ಯದ ಕಂಪನಿಯಾಗಿದೆ. ಇದರ ಸ್ಥಾಪಕ ದೀಪೇಂದರ್ ಗೋಯಲ್ ಹೊಂದಿರುವ ಪಾಲು ಶೇಕಡಾ 4ಕ್ಕಿಂತಲೂ ಕಡಿಮೆ. ಆನ್‌ಲೈನ್ ಬ್ರೋಕರೇಜ್ ಸಂಸ್ಥೆಯಾಗಿರುವ ಗ್ರೊ ಕಂಪನಿಯ ಮಾರುಕಟ್ಟೆ ಮೌಲ್ಯವು 97 ಸಾವಿರ ಕೋಟಿ ರುಪಾಯಿಗಳಾಗಿದ್ದರೆ, ಅದರ ಕಾಲು ಭಾಗಕ್ಕಿಂತಲೂ ಕಡಿಮೆ ಪಾಲು ನಾಲ್ವರು ಸ್ಥಾಪಕರದ್ದಾಗಿದೆ.

ಜಾಗತಿಕ ಟ್ರೆಂಡ್ ಗಮನಿಸಿದರೆ, ಎನ್ವಿಡಿಯಾದ ಮಾರುಕಟ್ಟೆ ಮೌಲ್ಯ 4,362 ಶತಕೋಟಿ ಡಾಲರ್‌ನಷ್ಟಿದ್ದರೆ, ಸ್ಥಾಪಕ ಜೆನ್ಸನ್ ಹ್ಯುಯಾಂಗ್ ಅವರ ಪಾಲು 164 ಶತಕೋಟಿ ಡಾಲರ್ ಮಾತ್ರ. ಅದೇ ರೀತಿ ಆಪಲ್ ಕಂಪನಿಯ ಮೌಲ್ಯ 4,115 ಶತಕೋಟಿ ಡಾಲರ್‌ನಷ್ಟಿದ್ದರೆ, ಸ್ಥಾಪಕ ಸ್ಟೀವ್ ಜಾಬ್ಸ್‌ರ ಪಾಲು ಕೇವಲ 1 ಪರ್ಸೆಂಟಿಗಿಂತಲೂ ಕಡಿಮೆ. ಟೆಸ್ಲಾದ ಮೌಲ್ಯ 1,427 ಶತಕೋಟಿ ಡಾಲರ್ ಆಗಿದ್ದರೆ, ಸ್ಥಾಪಕ ಎಲಾನ್ ಮಸ್ಕ್ ಅವರ ಪಾಲು 281 ಶತಕೋಟಿ ಡಾಲರ್ ಮಾತ್ರ. ಹಾಗಾದರೆ ಇದೇಕೆ ಹೈಲೈಟ್ ಆಗುವುದಿಲ್ಲ?!

ಸಾಮಾನ್ಯವಾಗಿ ಫೋರ್ಬ್ಸ್, ಫಾರ್ಚ್ಯೂನ್ಸ್, ಹುರುನ್ ಇಂಡಿಯಾ ನಿಯತಕಾಲಿಕೆಗಳು ಮತ್ತು ಸಂಶೋಧನಾ ಸಂಸ್ಥೆಗಳು ಭಾರತದ ಅತಿ ಶ್ರೀಮಂತ ಉದ್ಯಮಿಗಳ ಪಟ್ಟಿಯನ್ನು ಪ್ರತಿ ವರ್ಷ ಪ್ರಕಟಿಸುತ್ತವೆ. ಅದರಲ್ಲಿ ಮುಕೇಶ್ ಅಂಬಾನಿ, ಗೌತಮ್ ಅದಾನಿ, ಸಾವಿತ್ರಿ ಜಿಂದಾಲ್, ಸುನಿಲ್ ಮಿತ್ತಲ್, ರಾಧಾಕೃಷ್ಣ ಧಮಾನಿ, ದಿಲೀಪ್ ಸಾಂಘ್ವಿ, ಬಜಾಜ್ ಕುಟುಂಬ, ಸೈರಸ್ ಪೂನಾವಾಲಾ, ಕುಮಾರ ಮಂಗಲಂ ಬಿರ್ಲಾ, ಹಿಂದುಜಾ ಕುಟುಂಬ, ಲಕ್ಷ್ಮೀ ಮಿತ್ತಲ್, ಅಜೀಂ ಪ್ರೇಮ್ ಜಿ, ಉದಯ್ ಕೋಟಕ್ ಮೊದಲಾದವರು ಇರುತ್ತಾರೆ. ಇವರೆಲ್ಲರೂ ಕೋಟ್ಯಂತರ ರುಪಾಯಿ ಅಲ್ಲ, ಕೋಟ್ಯಂತರ ಡಾಲರ್ ಲೆಕ್ಕದಲ್ಲಿ ನಿವ್ವಳ ಸಂಪತ್ತು ಗಳಿಸಿರುವ ಲೆಕ್ಕವನ್ನು ಈ ನಿಯತಕಾಲಿಕೆಗಳು ಪ್ರಕಟಿಸುತ್ತವೆ. ಕೆಲವರು ಸಂಭ್ರಮದಿಂದ ಪಟ್ಟಿಯನ್ನು ಓದಿದರೆ, ಮತ್ತೆ ಕೆಲವರು ''ಅಯ್ಯೋ, ಈ ಅದೃಷ್ಟ ನಮಗಿಲ್ಲವಲ್ಲ'' ಎಂದು ಕೊರಗಬಹುದು. ಆದರೆ ಭಾರತದ ಉದ್ಯಮಿಗಳು, ಟಾಟಾ ಗ್ರೂಪ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಇತರರು ತಮ್ಮ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಿದವರ ಸಂಪತ್ತನ್ನೂ ಇದೇ ವೇಳೆ ಹೆಚ್ಚಿಸಿದ್ದಾರೆ. ಅವರ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳನ್ನು ಕೋಟ್ಯಧಿಪತಿಗಳನ್ನಾಗಿಸಿದ್ದಾರೆ, ಲಕ್ಷಾಧಿಪತಿಗಳನ್ನಾಗಿಸಿದ್ದಾರೆ. ಅವರು ಅದ್ಭುತ ಯಶಸ್ಸು ಗಳಿಸಿದ ಉದ್ಯಮಿಯಾಗಿ ಹೊರ ಹೊಮ್ಮುವ ಪ್ರಕ್ರಿಯೆಯಲ್ಲಿ ಲಕ್ಷಾಂತರ ಮಂದಿ ತಮ್ಮ ಬದುಕನ್ನೂ ಕಟ್ಟಿಕೊಂಡಿದ್ದಾರೆ. ಈ ಪರಿವರ್ತನೆಯನ್ನು ಫೋರ್ಬ್ಸ್, ಫಾರ್ಚ್ಯೂನ್, ಹುರುನ್ ಶ್ರೀಮಂತರ ಪಟ್ಟಿಯಲ್ಲಿ ವಿವರಿಸುವುದಿಲ್ಲ! ಕೇವಲ ಮುಕೇಶ್ ಅಂಬಾನಿ, ಅದಾನಿಯವರ ನಿವ್ವಳ ಸಂಪತ್ತು ಎಷ್ಟಿದೆ? ಹಾಗೂ ಅವರು ಯಾವ್ಯಾವ ಉದ್ದಿಮೆ ಸಮೂಹಗಳ ಮಾಲೀಕರಾಗಿದ್ದಾರೆ ಎಂಬುದನ್ನು ಮಾತ್ರ ತೋರಿಸುತ್ತವೆ. ಪರಿಣಾಮವಾಗಿ ಮೇಲ್ನೋಟಕ್ಕೆ ಈ ಶ್ರೀಮಂತ ಉದ್ಯಮಿಗಳ ಕೈಯಲ್ಲೇ ಸಮಸ್ತ ಸಂಪತ್ತೂ ಸಂಗ್ರಹವಾಗಿದೆ ಎಂಬ ಮಿಥ್ಯೆ ಸೃಷ್ಟಿಯಾಗುತ್ತದೆ. ಸಾಲದ್ದಕ್ಕೆ ತಥಾಕಥಿತ ಸಮಾಜವಾದಿ ರಾಜಕಾರಣಿಗಳು, ಈ ದೇಶದಲ್ಲಿ ಉದ್ಯಮಿಗಳನ್ನು ಖಳನಾಯಕರಂತೆ ಬಿಂಬಿಸಿದ್ದಾರೆ.

ಒಮ್ಮೆ ಇತಿಹಾಸದ ಪುಟಗಳನ್ನು ತೆರೆದು ನೋಡಿ. ಎಡಪಕ್ಷಗಳು (ಸಿಪಿಐ ಮತ್ತು ಸಿಪಿಎಂ) ನಿರಂತರವಾಗಿ ದೊಡ್ಡ ಬಿಸಿನೆಸ್‌ಗಳನ್ನು, ಉದ್ದಿಮೆದಾರರನ್ನು ಟೀಕಿಸುತ್ತಿದ್ದವು. ತಮ್ಮ ವೈಯಕ್ತಿಕ ಸ್ವಾರ್ಥಲಾಲಸೆಗಾಗಿ, ಅಧಿಕಾರದ ಗದ್ದುಗೆ ಏರುವ ಸಲುವಾಗಿ, ಬೃಹತ್ ಕೈಗಾರಿಕಾ ಸಮೂಹಗಳನ್ನು ಖಳನಾಯಕರಂತೆ ಚಿತ್ರಿಸುತ್ತಿದ್ದವು. ತಮ್ಮನ್ನು ಬಡವರ, ದೀನರ, ಕಾರ್ಮಿಕರ ಪಕ್ಷವೆಂದು ಸೋಗು ಹಾಕಿಕೊಳ್ಳುತ್ತಿದ್ದವು. ವರ್ಗಸಂಘರ್ಷವೇ ಈ ಎಡಪಕ್ಷಗಳ ಬಂಡವಾಳವಾಗಿತ್ತು. ಆದರೆ ಇದರಿಂದಾಗಿ ದೇಶದ ಆರ್ಥಿಕ ಅಭಿವೃದ್ಧಿಗೆ ಉಂಟಾಗಿದ್ದ ಹಾನಿ ಮಾತ್ರ ಅಷ್ಟಿಷ್ಟಲ್ಲ. ಮಾಡಿದ ಕರ್ಮ ಕಾಡದೆ ಬಿಡುವುದೇ? ಅದಕ್ಕಾಗಿಯೇ ಇವತ್ತು ದೇಶದ ರಾಜಕಾರಣದ ಭೂಪಟದಲ್ಲಿ ಎಡಪಕ್ಷಗಳು ಹೇಳ ಹೆಸರಿಲ್ಲದಂತಾಗಿವೆ. ಎಡಪಕ್ಷಗಳ ನಂತರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನದ್ದೂ ಇದರಲ್ಲಿ ಪಾಲು ಇದೆ. ಅದು ನಾನಾ ಹಂತಗಳಲ್ಲಿ ನಿರ್ದಿಷ್ಟ ಉದ್ಯಮಿಗಳನ್ನು ಟಾರ್ಗೆಟ್ ಮಾಡಿದೆ. ಆದರೆ ತೊಂಬತ್ತರ ದಶಕದ ವೇಳೆಗೆ ಖಾಸಗೀಕರಣದ ಅವಶ್ಯಕತೆಯ ಅರಿವೂ ಉಂಟಾಗಿತ್ತು. ನಂತರ ಕ್ರಮೇಣ ಕಾಲ ಬದಲಾಯಿತು.

ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕಿ ಮಮತಾ ಬ್ಯಾನರ್ಜಿ ಅವರು ರತನ್ ಟಾಟಾ ವಿರುದ್ಧ ದಂಗೆ ಎದ್ದು ಪಶ್ಚಿಮ ಬಂಗಾಳದ ಸಿಂಗೂರ್‌ನಲ್ಲಿನ ನ್ಯಾನೊ ಕಾರು ತಯಾರಿಕಾ ಘಟಕ ಸ್ಥಳಾಂತರವಾಗುವಂತೆ ಮಾಡಿದರು. ಈ ಕುರಿತ ಭಾರಿ ಪ್ರತಿಭಟನೆಗಳು ಮಮತಾ ಬ್ಯಾನರ್ಜಿಯವರಿಗೆ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಗಳಿಸಲು ನೆರವಾದವು. ಆದರೆ 20 ವರ್ಷಗಳ ಬಳಿಕ ಮತ್ತೆ ಟಾಟಾ ಗ್ರೂಪ್ ಅನ್ನು ರಾಜ್ಯಕ್ಕೆ ಬಂಡವಾಳ ಹೂಡಿಕೆ ಮಾಡುವಂತೆ ಆಹ್ವಾನಿಸಿದ್ದಾರೆ. ಕೇಳಿದರೆ, ನಮಗೆ ಟಾಟಾ ಗ್ರೂಪ್ ವಿರುದ್ಧ ಸಿಟ್ಟಿಲ್ಲ, ಅಂದಿನ ಎಡಪಕ್ಷಗಳು ರೈತರ ಅನುಮತಿ ಇಲ್ಲದೆ ಟಾಟಾ ಗ್ರೂಪಿಗೆ ಭೂಮಿ ಕೊಟ್ಟದ್ದು ತಪ್ಪು ಎನ್ನುತ್ತಾರೆ. ಒಟ್ಟಿನಲ್ಲಿ ಆಗ ತೊಂದರೆಯಾಗಿದ್ದು ರತನ್ ಟಾಟಾ ಅವರಂಥ ಮೇರು ಉದ್ಯಮಿಗೆ ಎನ್ನುವುದನ್ನು ಮರೆಯುವಂತಿಲ್ಲ.

ಅಮೆಜಾನ್ ಕಂಪನಿಯ ಜೆಫ್ ಬಿಜೋಸ್ ಕಳೆದ ವರ್ಷ ಸಂದರ್ಶನವೊಂದರಲ್ಲಿ ಹೀಗೆ ಸಲಹೆ ಕೊಟ್ಟಿದ್ದರು: ವಿಶ್ವದ ಶ್ರೀಮಂತರ ಪಟ್ಟಿಯನ್ನು ರಚಿಸುವಾಗ, ಅವರು ತಮಗಾಗಿ ಹೊಂದಿರುವ ಸಂಪತ್ತಿನ ಬದಲಿಗೆ, ಇತರರಿಗೆ ಅವರು ಎಷ್ಟು ಸಂಪತ್ತು ಸೃಷ್ಟಿಸಿದ್ದಾರೆ ಎಂಬುದನ್ನು ತಿಳಿಸಬೇಕು. ನಿಜವಲ್ಲವೇ. ಇದು ಉದ್ಯಮಿಗಳ ಕಡೆಗೆ ಸಮಾಜ ನೋಡುವ ದೃಷ್ಟಿಕೋನವನ್ನೇ ಬದಲಿಸಲಿದೆ. ಅಮೆಜಾನ್‌ನಿಂದ ಜೆಫ್ ಬಿಜೋಸ್ ವೈಯಕ್ತಿಕವಾಗಿ ನೂರಿನ್ನೂರು ಕೋಟಿ ಡಾಲರ್ ಗಳಿಸಿದ್ದಿರಬಹುದು. ಆದರೆ ಅವರ ಅಮೆಜಾನ್ ಹೂಡಿಕೆದಾರರ ಸಂಪತ್ತನ್ನು 2 ಲಕ್ಷ ಕೋಟಿ ಡಾಲರ್‌ಗೂ ಹೆಚ್ಚಿನ ಮಟ್ಟಕ್ಕೆ ಏರಿಸಿದೆ.

ಭಾರತದಲ್ಲಿ ಹಲವಾರು ದಶಕಗಳಿಂದಲೂ ಉದ್ಯಮಿಗಳನ್ನು ಖಳನಾಯಕರಂತೆ ಬಿಂಬಿಸುವ ಕೆಲಸವನ್ನು ರಾಜಕಾರಣಿಗಳು ಮಾಡಿದ್ದಾರೆ. ನೆಹರು ಅವರು ಉಕ್ಕಿನ ಕಾರ್ಖಾನೆಗಳನ್ನು 'ಆಧುನಿಕ ಭಾರತದ ದೇವಾಲಯಗಳು' ಎಂದೇ ಕರೆದಿದ್ದರು. ಆದರೆ ಸರಕಾರಿ ಸ್ವಾಮ್ಯ ಅಥವಾ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಆದ್ಯತೆ ನೀಡಿದರು. ಅವರಿಗೆ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುವ ಖಾಸಗಿ ಕೈಗಾರಿಕಾ ವಲಯಕ್ಕೆ ಮೂಲಸೌಕರ್ಯಗಳನ್ನು ಒದಗಿಸುವುದರಲ್ಲಿ ಅಷ್ಟಾಗಿ ನಂಬಿಕೆ ಇದ್ದಿರಲಿಲ್ಲ. ಇಂದಿರಾ ಗಾಂಧಿಯವರಂತೂ ಖಾಸಗಿ ವಲಯದ ಉದ್ದಿಮೆಗಳನ್ನು ಮತ್ತಷ್ಟು ದೂರವಿಟ್ಟರು. 1969ರಲ್ಲಿ 14 ಪ್ರಮುಖ ಖಾಸಗಿ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಿದರು. ವಿಮೆ, ಕಲ್ಲಿದ್ದಲು ಕ್ಷೇತ್ರವನ್ನು ರಾಷ್ಟ್ರೀಕೃತಗೊಳಿಸಿದರು. ಭಾರಿ ಉದ್ದಿಮೆಗಳು ಬೆಳೆಯದಂತೆ 1973ರಲ್ಲಿ ಮೊನೊಪೊಲಿಸ್ ಆಂಡ್ ರಿಸ್ಟ್ರಿಕ್ಟಿವ್ ಟ್ರೇಡ್ ಪ್ರಾಕ್ಟೀಸಸ್ ಕಾಯಿದೆಯನ್ನು ಜಾರಿಗೊಳಿಸಿದರು. 2009ರಲ್ಲಿ ಇದನ್ನು ಪೂರ್ಣವಾಗಿ ರದ್ದುಪಡಿಸಲಾಯಿತು. 1991ರಲ್ಲಿ ಆರ್ಥಿಕ ಉದಾರೀಕರಣದ ನಂತರ ದೇಶ ಖಾಸಗೀಕರಣಕ್ಕೂ ಕ್ರಮೇಣ ಮುಕ್ತವಾಯಿತು.

ಪ್ರಧಾನಿ ನರೇಂದ್ರ ಮೋದಿಯವರು ಎಲ್ಲ ಪ್ರಧಾನಿಗಳಿಗಿಂತಲೂ ಭಿನ್ನ. ದೇಶದ ಆರ್ಥಿಕ ಅಭಿವೃದ್ಧಿಗೆ ಉದ್ಯಮಿಗಳು ನೀಡಿರುವ ಕೊಡುಗೆಯನ್ನು ಅವರು ಬಹಿರಂಗವಾಗಿಯೇ ಗುರುತಿಸಿದರು. ಉದ್ಯಮಸ್ನೇಹಿ ನೀತಿಗಳನ್ನು ಅಳವಡಿಸಿದರು. 'ಈಸ್ ಆಫ್ ಡೂಯಿಂಗ್ ಬಿಸಿನೆಸ್' ಸರಕಾರದ ಮಹತ್ವಾಕಾಂಕ್ಷೆಯ ನೀತಿಗಳಲ್ಲೊಂದಾಗಿದೆ. ನೀವು ಯುನಿಕಾರ್ನ್‌ಗಳ ಬಗ್ಗೆ ಕೇಳಿರಬಹುದು. ಅಂದರೆ 100 ಕೋಟಿ ಡಾಲರ್‌ಗೂ ಹೆಚ್ಚು ಮೌಲ್ಯವಿರುವ ಸ್ಟಾರ್ಟ್‌ಅಪ್‌ಗಳು. ಭಾರತದಲ್ಲಿ ಇವತ್ತು ಅಂಥ 73 ಯುನಿಕಾರ್ನ್‌ಗಳು ಇವೆ! ಅಮೆರಿಕ, ಚೀನಾ ಬಿಟ್ಟರೆ ಅತಿ ಹೆಚ್ಚು ಯುನಿಕಾರ್ನ್‌ಗಳು ಈಗ ಭಾರತದಲ್ಲಿವೆ ಎಂಬುದು ವಿಶೇಷ! ಇದು ಕಾಲ ಬದಲಾಗಿರುವ ಕಥೆ.

ಭಟ್ಟರ್ ಸ್ಕಾಚ್

- **ತಿಟ್ಟೆ ಕೃಷ್ಣಮೂರ್ತಿ, ಸೋಸಲೆ**
ಭಟ್ರೇ, ರಾಜಕಾರಣಿಗಳು ಮತ್ತು ಕ್ರಿಕೆಟಿಗರು ಇಬ್ಬರೂ ಕಾಯುವುದು ಯಾವುದಕ್ಕಾಗಿ?
- **ಕ್ರಿಕೆಟಿಗರು 'ಅಂಪೈರ್' ಬೆರಳು ಎತ್ತಲಿ ಎಂದು, ರಾಜಕಾರಣಿಗಳು 'ಮತದಾರರು' ಕೈ ಎತ್ತಲಿ ಎಂದು!**

- **ರುಕ್ಮಿಣಿ(ರುಕ್ಕು), ಚಾಮರಾಜಪೇಟೆ**
ಭಟ್ರೇ, ಆರ್‌ಸಿಬಿ ಫ್ಯಾನ್ಸ್‌ಗೂ ಮತ್ತು ವಿರೋಧ ಪಕ್ಷದವರಿಗೂ ಇರುವ ಸಾಮ್ಯತೆ ಏನು?
- **ಇಬ್ಬರೂ 'ಮುಂದಿನ ಸಲ ನೋಡೋಣ' ಅಂತಾನೇ ಸಮಾಧಾನ ಮಾಡ್ಕೊಳ್ತಾರೆ!**

- **ರಾಘಣ್ಣ, ಮೈಸೂರು**
ಭಟ್ರೇ, ರಾಜಕಾರಣಿಗಳಿಗೆ ಮತ್ತು ಕ್ರಿಕೆಟ್ ಪಿಚ್‌ಗೆ ಏನು ಹೋಲಿಕೆ?
- **ಸಮಯಕ್ಕೆ ತಕ್ಕಂತೆ ಇಬ್ಬರೂ ಬಣ್ಣ (ಸ್ವಭಾವ) ಬದಲಾಯಿಸುತ್ತಾರೆ!**

- **ನಾಗೇಶ್ ಸೀನಣ್ಣ, ಶ್ರೀನಿವಾಸ ನಗರ**
ಭಟ್ರೇ, ಸ್ವಾಮೀಜಿಗಳ ಆಶೀರ್ವಾದಕ್ಕೂ, ಹೈಕಮಾಂಡ್ ಆಶೀರ್ವಾದಕ್ಕೂ ಏನು ವ್ಯತ್ಯಾಸ?
- **ಸ್ವಾಮೀಜಿ ಆಶೀರ್ವಾದ ಮಾಡಿದ್ರೆ 'ಪುಣ್ಯ' ಬರುತ್ತೆ, ಹೈಕಮಾಂಡ್ ಆಶೀರ್ವಾದ ಮಾಡಿದ್ರೆ 'ಪದವಿ' ಬರುತ್ತೆ!**

- **ಕಾಶಿ ಪ್ರಾಣೇಶ, ವಿದ್ಯಾಪೀಠ**
ಭಟ್ರೇ, ರಾಜಕಾರಣಿಗಳು ಯಾಕೆ ಜಿಮ್‌ಗೆ ಹೋಗಲ್ಲ?
- **ಅವರಿಗೆ ಪಕ್ಷದಿಂದ ಪಕ್ಷಕ್ಕೆ ಹಾರೋದೇ ದೊಡ್ಡ ಎಕ್ಸರ್ಸೈಜ್ ಅಲ್ವಾ?**

- **ಹುಲಿಕುಂಟೆ ಶ್ರೀನಿವಾಸ ಆಚಾರ್ಯ, ಬಸವನಗುಡಿ**
ಭಟ್ರೇ, ಮಳೆ ಬಂದರೆ ಕ್ರಿಕೆಟ್ ಮ್ಯಾಚ್ ರದ್ದಾಗುತ್ತೆ, ಆದ್ರೆ ರಾಜಕೀಯ?
- **ಇಲ್ಲಿ ಮಳೆ ಬಂದ್ರೆ, ರೋಡ್ ಗುಂಡಿ ಬಿದ್ದು ಅದರ ಮೇಲೆ ರಾಜಕೀಯ ಶುರುವಾಗುತ್ತೆ!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಕ್ರಿಕೆಟ್‌ನಲ್ಲಿ 'ರನ್ ಔಟ್' ಮತ್ತು ಪಾಲಿಟಿಕ್ಸ್‌ನಲ್ಲಿ 'ವಾಕ್ ಔಟ್' ಯಾಕೆ ಮಾಡ್ತಾರೆ?
- **ರನ್ ಔಟ್ ಗಮನ ಇಲ್ಲದೇ ಆಗೋದು, ವಾಕ್ ಔಟ್ ಗಮನ ಸೆಳೆಯೋಕೆ ಮಾಡೋದು!**

- **ನಿಮ್ಮಿ, ರಾಜಾಜಿನಗರ**
ಭಟ್ರೇ, ಮಠದ ಆನೆಗೂ ಮತ್ತು ಆಳುವ ಪಕ್ಷದವರಿಗೂ ಸಾಮ್ಯತೆ ಇದೆಯಾ?
- **ಇದೇ.. ಇಬ್ಬರೂ ನಡೆದಿದ್ದೇ ದಾರಿ, ತಿಂದಿದ್ದೇ ಲೆಕ್ಕ!**

- **ಹರಿ ಕಿಷನ್, ಡಾಲರ್ಸ್ ಕಾಲೋನಿ**
ಭಟ್ರೇ, ರಾಜಕಾರಣದಲ್ಲಿ 'ಪಕ್ಷಾಂತರ' ಮತ್ತು ಕ್ರಿಕೆಟ್‌ನಲ್ಲಿ 'ಸ್ವಿಚ್ ಹಿಟ್' ಹೊಡೆತ ಅಂದ್ರೆ?
- **ಹೌದು, ಎರಡರಲ್ಲೂ ಯಾವ ಕಡೆ ತಿರುಗುತ್ತಾರೆ ಅಂತ ಅವರಿಗೇ ಗೊತ್ತಿರಲ್ಲ!**

- **ಶಾಲು, ಕಾಮನಕೊಪ್ಪಲು**
ಭಟ್ರೇ, ತಾತ– ಮೊಮ್ಮಗ ಇರುವ ಮನೆಯಲ್ಲಿ ಭಿನ್ನ ಅಭಿರುಚಿಗಳು ಅಂದ್ರೆ ಏನು?
- **ತಾತನಿಗೆ 'ಜಿ ಟ್ವೆಂಟಿ'ಯಲ್ಲಿ ಆಸಕ್ತಿ, ಮೊಮ್ಮಗನಿಗೆ 'ಟಿ ಟ್ವೆಂಟಿ'ಯಲ್ಲಿ ಆಸಕ್ತಿ!**

ಐತಿಹ್ಯಗಳ ಸುರಂಗದಲ್ಲಿ ವಂಡಾರು ಕಂಬಳ ಕೊಡಿ ಹಬ್ಬ

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಕೊಡಿ ಹಬ್ಬ ಅಥವಾ ಕೋಟೇಶ್ವರ ಹಬ್ಬವು ಕರಾವಳಿಯ ಆ ಪ್ರದೇಶದಲ್ಲಿ ತುಂಬಾ ಪ್ರಸಿದ್ಧ. ನಿನ್ನೆ ತಾನೆ ಆ ಸಂಬಂಧ ರಥೋತ್ಸವ ಸಂಪನ್ನಗೊಂಡರೂ, ಹಬ್ಬದ ಆಚರಣೆಯು ಇನ್ನೂ ಕೆಲವು ದಿನ ಮುಂದುವರಿಯುತ್ತದೆ; ಹಬ್ಬದ ಹಸರಕ್ಕೆ ಜನ ಬರುವುದು ನಡೆಯುತ್ತಲೇ ಇದೆ. ಕೊಡಿ ಹಬ್ಬದ ಸುತ್ತ ಬೆಳೆದಿರುವ ಕಥೆಗಳು, ಐತಿಹ್ಯಗಳು, ನಂಬಿಕೆಗಳು, ಆಚರಣೆಗಳು ಇವೆಲ್ಲವುದರ ಕುರಿತು ಬರೆಯುತ್ತಾ ಹೋದರೆ ಒಂದು ಪುಸ್ತಕವೇ ಆದೀತು! ಬಾಲ್ಯದಲ್ಲಿ ನಾ ಕಂಡ ಕೋಟೇಶ್ವರ ಹಬ್ಬದ ನೆನಪುಗಳು, ಆಗಾಗ ಸುರುಳಿ ಸುತ್ತುತ್ತಾ, ಮನದೊಳಗೆ ಮಧುರ ಭಾವನೆಗಳನ್ನು ಮೂಡಿಸುವುದುಂಟು.

ನಮ್ಮ ಹಳ್ಳಿಯಿಂದ ಕೋಟೇಶ್ವರಕ್ಕೆ ಸುಮಾರು 20 ಕಿ.ಮೀ. ನಮ್ಮ ಮನೆಯಿದ್ದುದು ಒಂದು ಕುಗ್ರಾಮದಲ್ಲಿ. ಬಸ್ ರಸ್ತೆ ನೋಡಬೇಕೆಂದರೆ, ಕಡ್ಡಾಯವಾಗಿ 2 ಕಿ.ಮೀ. ದೂರ ಗದ್ದೆ ಬಯಲಿನ ನಡುವೆ, ಕಾಡುದಾರಿಯಲ್ಲಿ ನಡೆಯಲೇಬೇಕಿದ್ದ ಅನಿವಾರ್ಯತೆ. ಕೋಟೇಶ್ವರವು, ನನ್ನ ಬಾಲ್ಯಕಾಲದ ಸನ್ನಿವೇಶದಲ್ಲಿ, ಒಂದು ದೊಡ್ಡಪಟ್ಟಣ ಅಥವಾ ಮಹಾನಗರ! ಕರಾವಳಿಯುದ್ದಕ್ಕೂ ಸಾಗಿದ್ದ ಹೆದ್ದಾರಿಯಂಚಿನಲ್ಲಿದ್ದ ಊರು ಅದು. ಮೊದಲಿನಿಂದಲೂ ವಿದ್ಯಾಭ್ಯಾಸದ ಸೌಕರ್ಯವಿದ್ದ ಸ್ಥಳ. ಜತೆಯಲ್ಲಿ, ಕೇವಲ 3 ಕಿ.ಮೀ. ದೂರದ ಕುಂದಾಪುರದಲ್ಲಿ ಕಾಲೇಜು, ಸರಕಾರಿ ಆಸ್ಪತ್ರೆ, ಎಡ್ವರ್ಡ್ ಮೆಮೋರಿಯಲ್ ಗ್ರಂಥಾಲಯ (ಸರಕಾರದ ಸುಪರ್ದಿನಲ್ಲಿದ್ದ ಸಾರ್ವಜನಿಕ ಗ್ರಂಥಾಲಯ), ಕಡಲು, ಕಿನಾರೆ, ಶೋಲಾ ಕಾಡು, ನದಿಸಂಗಮದ ತಾಣ ಎಲ್ಲವೂ ಇದ್ದ ಊರು. ಆದ್ದರಿಂದ, ಆ ಎರಡೂ ಊರುಗಳು ಪ್ರಮುಖ ಸಾಂಸ್ಕೃತಿಕ ಮತ್ತು ವಾಣಿಜ್ಯಕ ಕೇಂದ್ರಗಳಾಗಿ ಬೆಳೆದಿದ್ದವು. ಮುಖ್ಯವಾಗಿ ಕೋಟಿಲಿಂಗೇಶ್ವರ ಅಥವಾ ಕೋಟೇಶ್ವರ ದೇವಸ್ಥಾನವಿರುವ ಊರು ಕೋಟೇಶ್ವರ. ಪ್ರತಿವರ್ಷ ಡಿಸೆಂಬರ್‌ನಲ್ಲಿ ಅಲ್ಲಿ ನಡೆಯುವ ಜಾತ್ರೆ ಬಹು ಪ್ರಸಿದ್ಧ. ಆ ಸುತ್ತಲಿನ ಯಾರದೇ ಮನೆಯಲ್ಲಿ ಮದುವೆಯಾದರೂ, ಮದುಮಕ್ಕಳು ಆ ವರ್ಷ ಖಂಡಿತವಾಗಿ ಕೋಟೇಶ್ವರ ಜಾತ್ರೆಯಲ್ಲಿ ಭಾಗವಹಿಸಬೇಕೆಂಬ ನಂಬಿಕೆ. ಕೊಡಿ ಹಬ್ಬ ಎಂಬುದು ಪ್ರತಿ ವರ್ಷದ ಒಂದು ಪ್ರಮುಖ ವಿದ್ಯಮಾನ. ಕೊಡಿ ಹಬ್ಬ ಆದ ಮೇಲೆ ಆ ಕೆಲಸ ಮಾಡುತ್ತೇನೆ ಅಥವಾ ಕೊಡಿ ಹಬ್ಬದ ಮುಂಚೆಯೇ ಮಾಡಿ ಮುಗಿಸುತ್ತೇನೆ ಎಂದು, ವಾಯಿದೆ ಹೇಳಿಕೊಳ್ಳುವಂಥ ಪ್ರಮುಖ ಹಬ್ಬ ಅದು.

ಅದರಲ್ಲೂ ಮುಖ್ಯವಾಗಿ, ಆ ವರ್ಷ ಮದುವೆಯಾದವರು, ಕೊಡಿ ಹಬ್ಬಕ್ಕೆ ಹೋಗಿ, ಜಾತ್ರೆಯನ್ನು ನೋಡಿ ಸಂತಸಪಡಬೇಕು ಮತ್ತು ಪೂಜೆ ಮಾಡಿಸಬೇಕು ಎನ್ನುತ್ತಾರೆ. ಈ ನಂಬಿಕೆ ಬಹಳ ವಿಶೇಷ ಎನಿಸುತ್ತದೆ. ಇಂಥದ್ದೇ ಒಂದು ನಂಬಿಕೆಯು, ನಮ್ಮ ಹಳ್ಳಿಯಿಂದ ಆರೆಂಟು ಕಿ.ಮೀ. ದೂರದಲ್ಲಿರುವ ವಂಡಾರು ಕಂಬಳದ ಕುರಿತೂ ಇದೆ! ನಮ್ಮ ಹಳ್ಳಿಯ ಸುತ್ತಮುತ್ತಲಿನ ಎಲ್ಲಾ ಗ್ರಾಮೀಣರೂ, ತಮ್ಮ ಮನೆಯಲ್ಲಿ ಆ ವರ್ಷ ಮದುವೆಯಾದ ದಂಪತಿಯನ್ನು ವಂಡಾರು ಕಂಬಳಕ್ಕೆ ಕಳುಹಿಸುತ್ತಾರೆ. ಅಲ್ಲಿನ ಜಾತ್ರೆ, ಹಸರವನ್ನು ನೋಡಿಕೊಂಡು ಬರಲು ಹೇಳುತ್ತಾರೆ. ಜತೆಗೆ, ಅನುಕೂಲವಿದ್ದವರು ಕಂಬಳದ ಗದ್ದೆಯಲ್ಲಿ ಕೋಣಗಳನ್ನೂ ಓಡಿಸುತ್ತಾರೆ.

ಇವೆರಡೂ ಸ್ಥಳಗಳ ಕುರಿತು ಇನ್ನೊಂದು ಐತಿಹ್ಯ ನಮ್ಮೂರಿನಲ್ಲಿದೆ. ಅದಾವ ರೀತಿ ಇದೊಂದು ನಂಬಿಕೆ ರೂಢಿಗೆ ಬಂತೋ, ಊಹಿಸಲು ಕಷ್ಟ. ಈ ಐತಿಹ್ಯದ ಹಿಂದು ಮುಂದುಗಳನ್ನು ಅರಸುತ್ತಾ ಹೊರಟರೆ, ನಾವೇ ಐತಿಹ್ಯದ ಸುರಂಗದೊಳಗೇ ಪ್ರವೇಶಿಸಬಹುದು! ಅದೇನೆಂದರೆ, ಕೋಟೇಶ್ವರ ಕೆರೆಗೂ, ವಂಡಾರು ಕಂಬಳಗದ್ದೆಗೂ, ಪುರಾತನ ಕಾಲದಲ್ಲಿ ನಿರ್ಮಿಸಲಾದ ಒಂದು ಸುರಂಗದ ಮೂಲಕ ಸಂಪರ್ಕವಿದೆ ಎಂಬ ನಂಬಿಕೆಯಿದೆ. ಈ ಎರಡನ್ನೂ ದೇವತೆಗಳು ನಿರ್ಮಿಸಿದರು, ವಂಡಾರು ಕಂಬಳಗದ್ದೆಯು, ಬಹು ಹಿಂದೆ ಕೆರೆಯಾಗಿತ್ತು ಎಂಬ ನಂಬಿಕೆಯೂ ಉಂಟು! ಕೋಟೇಶ್ವರ ದೇಗುಲದ ಸನಿಹದಲ್ಲೂ ಒಂದು ವಿಶಾಲವಾದ ಕೆರೆ ಇದೆ! ಅಲ್ಲಿನ ಕೆರೆ ಮತ್ತು ವಂಡಾರು ಕಂಬಳ ಗದ್ದೆಯ ವಿಸ್ತೀರ್ಣವೂ ಸಮಾನವಾದುದು ಎಂಬ ನಂಬಿಕೆ ಇದೆ.

ಇಂಥ ಪ್ರಸಿದ್ಧ ಕೋಟೇಶ್ವರ ಜಾತ್ರೆಗೆ ನನ್ನನ್ನು ಕರೆದುಕೊಂಡು ಹೋಗಬೇಕು ಎಂಬುದು ನಮ್ಮ ಅಮ್ಮಮ್ಮನ ಅಭಿಲಾಷೆ. ನಾನಾಗ ಐದನೆಯ ತರಗತಿಯಲ್ಲಿದ್ದೆ ಎನಿಸುತ್ತದೆ. ನಮ್ಮ ಸುತ್ತಲಿನ ಬೇರೆ ಬೇರೆ ಹಳ್ಳಿಗಳಲ್ಲಿ ನಡೆಯುವ ಜಾತ್ರೆ, ಹಬ್ಬ, ಮದುವೆ ಮೊದಲಾದವುಗಳನ್ನು ನೋಡಿ, ನನ್ನ ಸಾಮಾನ್ಯಜ್ಞಾನ ಅಭಿವೃದ್ಧಿಯಾಗಲಿ ಎಂಬ ಇಂಗಿತ ಅವರದ್ದು. ಒಂದು ಮುಂಜಾನೆ, ಚಳಿಗಾಲದ ಬೆಳಗಿನ ಹಿಮ (ಮಸುಕು) ಕರುಗುವ ಮೊದಲೇ, ಮನೆಯಿಂದ ಹೊರಟು, 2 ಕಿ.ಮೀ. ನಡೆದು, ಬಸ್ ಹತ್ತಿ, ಕೋಟೇಶ್ವರದಲ್ಲಿ ಇಳಿದೆವು.

ಆ ದಿನ, ಅಲ್ಲಿನ ರಥಬೀದಿಯಲ್ಲಿ ಜನವೋ ಜನ. ದಾರಿಯುದ್ದಕ್ಕೂ ತರಹೇವಾರಿ ಅಂಗಡಿಗಳ ಸಾಲು. ಬೆಂಡು, ಬತ್ತಾಸು, ಆಟದ ಸಾಮಾನುಗಳನ್ನು ಮಾರುವ ಅಂಗಡಿಗಳು, ಐಸ್‌ಕ್ಯಾಂಡಿ ಎಂದು ಕೂಗುವ ಸೈಕಲ್‌ವಾಲಾ, ಮಿನಿ ಸರ್ಕಸ್, ತೂಗು ತೊಟ್ಟಿಲು, ಸೈಕಲ್ ಬ್ಯಾಲೆನ್ಸ್ ಎಲ್ಲವನ್ನೂ ನೋಡುತ್ತಾ ಸಾಗಿದೆವು. ಇವೆಲ್ಲವನ್ನೂ ಉಚಿತವಾಗಿ ನೋಡಬಹುದು. ಆದರೆ 'ಐದು ಕಾಲಿನ ಹಸು' ಎಂದು ಬೋರ್ಡ್ ಹಾಕಿದ್ದ ಪುಟಾಣಿ ಟೆಂಟ್ ಒಳಗೆ ಹೋಗಲು ದುಡ್ಡು ಕೊಡಬೇಕು; ಆ ರೀತಿ ದುಡ್ಡು ಕೊಟ್ಟು ನೋಡುವ ಕೆಲವು ಐಟಂಗಳೂ ಇದ್ದವು. ತೂಗುತೊಟ್ಟಿಲಿನಲ್ಲಿ ತೇಲಿ ಬರಲು ಶುಲ್ಕವಿತ್ತು.

ರಥಬೀದಿಯುದ್ದಕ್ಕೂ ಎರಡೂ ಕಡೆ ಸಾಲಾಗಿ ಮನೆಗಳಿದ್ದವು. ಅವುಗಳಲ್ಲಿನ ಒಂದು ಮನೆಗೆ ನಮ್ಮ ಅಮ್ಮಮ್ಮನನ್ನು ಕರೆದುಕೊಂಡು ಹೋದೆವು. ಅದು ಹಂಜಾರ್ ಅವರ ಮನೆ. ನಮ್ಮೂರಿನಲ್ಲಿದ್ದ ನಮ್ಮ ಪಕ್ಕದ ಮನೆಯವರು, ಇಲ್ಲೊಂದು ಬಾಡಿಗೆ ಮನೆ ಮಾಡಿದ್ದರು. ಅಲ್ಲಿದ್ದ ಸುಶೀಲಮ್ಮ ಎಂಬುವವರು ನಮ್ಮ ಅಮ್ಮಮ್ಮನಿಗೆ ಆಪ್ತರು. ಅವರ ಬಳಿ ಕ್ಷೇಮಸಮಾಚಾರವಾಯಿತು. ಅವರ ಮನೆಯಲ್ಲಿ ಬೆಲ್ಲ, ನೀರು ಕುಡಿದು ಬಾಯಾರಿಕೆ ತಣಿಸಿಕೊಂಡು, ಜಾತ್ರೆ ನೋಡಲು ಹೊರಟೆವು. ಈ ರೀತಿ ಬೇರೆ ಊರಿನವರು ಜಾತ್ರೆಗೆ ಬಂದಾಗ, ಪರಿಚಿತರ ಮನೆಗೆ ಭೇಟಿ ನೀಡುವುದು ಸಾಮಾನ್ಯ. ಎಷ್ಟೋ ಮನೆಯವರು ಆ ದಿನ ವಿಶೇಷ ಅಡುಗೆ ಮಾಡಿ, ಬಂದವರಿಗೆಲ್ಲಾ ಬಡಿಸುತ್ತಿದ್ದರು. ಆದರೆ ನಾವು ಮಾತ್ರ ಈ ದಿನದಂದು ದೇವಸ್ಥಾನದವರು ಏರ್ಪಡಿಸಿದ್ದ ಸಾಮೂಹಿಕ ಭೋಜನಕ್ಕೆ ಹೋದೆವು.

ಕೋಟೇಶ್ವರ ರಥದ ಎತ್ತರ, ಅದಕ್ಕೆ ಸಿಕ್ಕಿಸಿದ್ದ ನೂರಾರು ಪುಟಾಣಿ ಬಾವುಟಗಳನ್ನು, ಅವುಗಳ ಬಣ್ಣವನ್ನು ಕಂಡು ನಾನು ನಿಜಕ್ಕೂ ಬೆರಗಾದೆ. ಊಟ ಮುಗಿಸಿ ರಥಬೀದಿಗೆ ಬಂದು ನೋಡಿದರೆ, ಇನ್ನಷ್ಟು ಜನ ಸೇರಿದ್ದರು! ಗೌಜುಗದ್ದಲದ ನಡುವೆ ಜಾತ್ರೆಗೆ ಕಳೆಯೇರಿತ್ತು. ನಮ್ಮ ಅಮ್ಮಮ್ಮ ನನಗೆ ಸಣ್ಣದೊಂದು ಆಟದ ಸಾಮಾನು ಕೊಡಿಸಿದರು ಎಂದು ನೆನಪು. ಆದರೆ, ನನಗೆ ಆ ಆಟದ ಸಾಮಾನಿನ ಮೇಲೆ ಇದ್ದ ಪ್ರೀತಿಗಿಂತಾ, ಅಲ್ಲಿನ ಬಸ್‌ನಿಲ್ದಾಣದ ಬಳಿಯ ಪತ್ರಿಕೆ ಮಾರುವ ಅಂಗಡಿಯಲ್ಲಿದ್ದ ಬಾಲಮಿತ್ರನ ಮೇಲೆ ಹೆಚ್ಚು ಪ್ರೀತಿ ಉಕ್ಕಿತು! ಚಂದಮಾಮ ಪತ್ರಿಕೆಯ ಪಡಿಯಚ್ಚಿನಂತೆ, ಆಗ 'ಬಾಲಮಿತ್ರ' ಪ್ರಕಟವಾಗುತ್ತಿತ್ತು. ಅದೇ ರೀತಿಯ ರೇಖಾಚಿತ್ರಗಳು, ಬಣ್ಣದ ಪುಟಗಳು, ಅದೇ ಗಾತ್ರ ಎಲ್ಲವೂ.

'ಬಾಲಮಿತ್ರ' ಪತ್ರಿಕೆ ಕೊಡಿಸಿ ಎಂದು ಅಮ್ಮಮ್ಮನಿಗೆ ದುಂಬಾಲುಬಿದ್ದೆ. 'ಆಟದ ಸಾಮಾನು ತಗಂಡಾಯ್ತಲ್ಲ! ಈ ಪುಸ್ತಕ ನಿನಗೆಂತಕೆ?' ಎಂದರು. 'ನನಗೆ ಆಟಕೆಗಿಂತಲೂ, ಪುಸ್ತಕವೇ ಹೆಚ್ಚು ಇಷ್ಟ' ಎಂದೆ. ಆ ಮಕ್ಕಳಪುಸ್ತಕದ ಬೆಲೆ ಆಗ ರು. 1.25 ಇದ್ದಿತ್ತು ಎಂದು ನೆನಪು. ನನ್ನ ಓದುವ ಆಸಕ್ತಿಯನ್ನು ಕಂಡು, ಅಮ್ಮಮ್ಮ 'ಬಾಲಮಿತ್ರ' ಕೊಡಿಸಿದರು. ಆಗಿನ ದಿನಗಳಲ್ಲಿ, ಅವರಿಗೆ ಅದು ತುಸು ದೊಡ್ಡ ಮೊತ್ತವೇ ಇರಬೇಕು. ಅಂತೂ 'ಬಾಲಮಿತ್ರ' ಪತ್ರಿಕೆಯನ್ನು ತಂದು, ಮನೆಯಲ್ಲಿಟ್ಟು ಕೊಂಡು, ಅಲ್ಲಿದ್ದ ಮಕ್ಕಳ ಕಥೆಗಳನ್ನು ಹಲವು ದಿನ ಓದಿದೆ!

ಕೋಟೇಶ್ವರದ ಕುರಿತು ಬರೆದರೆ, ಬಹಳಷ್ಟಾದೀತು ಎಂದೆನಲ್ಲ, ಅದನ್ನೇ ವಿಸ್ತರಿಸುವುದಾದರೆ, ಕೋಟೇಶ್ವರಕ್ಕೆ ಹೆಸರು ಹೇಗೆ ಬಂತು ಎಂಬ ಕುತೂಹಲಕಾರಿ ಮಾಹಿತಿಯೊಂದು ನನ್ನ ಬಳಿ ಇದೆ. ಈ ವಿಚಾರ ಹೆಚ್ಚು ಪ್ರಚಾರ ಪಡೆದಿಲ್ಲ, ನಾನು ಕೋಟೇಶ್ವರ ಜಾತ್ರೆ ನೋಡಿದ ಬಹಳ ವರ್ಷಗಳ ನಂತರ, ವಿದ್ಯಾಭ್ಯಾಸ ಮುಗಿಸಿ, ವೃತ್ತಿ ನಿಮಿತ್ತ ದೂರದೂರು ಸೇರಿ, ರಜೆಯಲ್ಲಿ ಊರಿಗೆ ಬಂದಾಗ, ವೃದ್ಧ ಮಹಿಳೆಯೊಬ್ಬಳು ವಿಶೇಷವಾದ ಒಂದು ಮಾಹಿತಿ ತಿಳಿಸಿದಳು.

ಆ ಮಹಿಳೆಯ ಭೇಟಿಯಾದದ್ದೂ ವಿಶೇಷ ಸಂದರ್ಭದಲ್ಲಿ. ನಮ್ಮೂರಿನ ಸುತ್ತಮುತ್ತಲೂ ಬಹಳ ಪ್ರಸಿದ್ಧ ಎನಿಸಿರುವ 'ವಂಡಾರು ಕಂಬಳ' ಹತ್ತಿರ ಬರುತ್ತಿದ್ದಂತೆ, ಸುತ್ತಲಿನ ಹತ್ತಾರು ಹಳ್ಳಿಗಳಲ್ಲಿ ನಾನಾ ರೀತಿಯ ಉತ್ಸಾಹ ಗರಿಗೆದರುವುದುಂಟು. ಹಲವು ಜನಪದ ಆಚರಣೆಗಳೂ ಆ ಸಮಯದಲ್ಲಿ ಪ್ರಕಟಗೊಳ್ಳುತ್ತವೆ. ಅದರಲ್ಲಿ ಒಂದು ಎಂದರೆ, ಕೋಲಾಟದ ಪದ ಹೇಳುತ್ತಾ, ಎರಡು ಉದ್ದನೆಯ ಕೋಲು ಹಿಡಿದು, ಮನೆ ಮನೆಗೆ ಸುತ್ತಾಡುವ ಮಹಿಳೆಯರು. ಬತ್ತದ ಕುಯಿಲು ಆದ ಮನೆಯವರ ಅಂಗಳದಲ್ಲಿ ನಿಂತು, ಕೋಲುಗಳನ್ನು ತಾಳಕ್ಕೆ ಸರಿಯಾಗಿ ಹೊಡೆಯುತ್ತಾ, ಪದ್ಯ ಹೇಳಿದ್ದಕ್ಕೆ ಪ್ರತಿಯಾಗಿ, ಕೆಲವು ಮುಷ್ಟಿ ಭತ್ತ ಪಡೆಯುತ್ತಿದ್ದರು, ಆ ಮಹಿಳೆಯರು. ಅಂಥ ಒಬ್ಬ ವೃದ್ಧ ಮಹಿಳೆ, ನಮ್ಮ ಮನೆಯ ಬಳಿ ತನ್ನ ಸಂಗಾತಿ ಮಹಿಳೆಯ ಜತೆ ಬಂದು, ಕೋಲಾಟ ಪದ ಹೇಳಿದ ನಂತರ, ನಮ್ಮ ಮನೆಯ ಅಂಗಳದಲ್ಲೇ ಕುಳಿತು, ಕುಡಿಯಲು ನೀರು ಕೇಳಿದಳು. ನಾನು ಅವಳನ್ನು ಕುತೂಹಲದಿಂದ ಮಾತಿಗೆಳೆದೆ. ಆಕೆ ಹೇಳಿದ ಕಥೆಯಿದು.

'ನಾವು ಅಂದರೆ ನಮ್ಮ ಹಿಂದಿನವರು ಘಟ್ಟದ ಮೇಲಿನವರು, ಗೊತ್ತಾ ಅಯ್ಯಾ' ಎಂದು ತನ್ನ ಕಥೆಯನ್ನು ಅವಳು ಆರಂಭಿಸಿದಳು. ಸ್ಥಳೀಯ ಜನಪದ ಹಾಡುಗಳನ್ನು ತನ್ನದೇ ಧಾಟಿಯಲ್ಲಿ ಹಾಡುವ ಈಕೆಯ ಮೂಲ, ನಮ್ಮ ರಾಜ್ಯದ ಬಯಲುಸೀಮೆ ಎಂದು ಆಕೆ ಹೇಳಿದಾಗ ಅಚ್ಚರಿಯಾಯ್ತು.

'ಅದು ಹೇಗೆ?' ಎಂದೆ.

'ಅಯ್ಯಾ, ನಾವು ಉಪ್ಪಾರರು. ನಮ್ಮ ಕುಲದವರು ಘಟ್ಟದ ಮೇಲಿನಿಂದ ಬಹು ಹಿಂದೆ ಬಂದವರು– ನೀವು ಘಟ್ಟದ ಮೇಲೆ ಕೆಲಸ ಮಾಡ್ತೀದಿರಲ್ಲಾ – ನೀವು ಅಲ್ಲೂ ಉಪ್ಪಾರರನ್ನು ಕಂಡಿರಬಹುದು ಅಲ್ಲವೆ?' ಎಂದು ನನ್ನನ್ನೇ ಮರು ಪ್ರಶ್ನಿಸಿದಳು. ನಾನು ವೃತ್ತಿ ನಿರ್ವಹಿಸುತ್ತಿದ್ದ ಅರಸಿಕೆರೆ, ಹೊಸದುರ್ಗ ಸುತ್ತಮುತ್ತ ಅಂಥ ಅಡ್ಡಹೆಸರು ಇದ್ದ ಸಾಕಷ್ಟು ಜನರಿದ್ದಾರೆ.

'ಹೌದು' ಎಂದೆ. ಆಕೆ ತನಗೆ ಗೊತ್ತಿದ್ದ, ತನ್ನ ಹಿರಿಯರು ಹೇಳಿದ್ದ ಕಥೆಯನ್ನು ಮುಂದುವರಿಸಿದಳು. ಆಕೆ ಹೇಳಿದ ಪ್ರಕಾರ, ನೂರಾರು ವರ್ಷಗಳ ಹಿಂದೆ, ಘಟ್ಟದ ಮೇಲೆ ಅವರಿದ್ದ ಸೀಮೆಯಲ್ಲಿ ಬಹು ದೊಡ್ಡ ಗಲಾಟೆ ಆಯ್ತಂತೆ. ಅವರ ಕುಲದವರು ಲಿಂಗವನ್ನು ಧರಿಸಿದ್ದರಿಂದ, ಅದಕ್ಕೆ ವಿರುದ್ಧವಾಗಿ ನಡೆದ ಗಲಾಟೆ ಅದು. ಅದೆಷ್ಟು ದೊಡ್ಡಗಲಾಟೆ ಎಂದರೆ, ಆ ದೊಂಬಿಯ ತೀವ್ರತೆಯನ್ನು ತಡೆಯಲಾರದೆ, ಅವರ ಕುಲದ ಒಂದಷ್ಟು ಜನ, ತಮ್ಮ ಊರನ್ನು ತೊರೆದು ಘಟ್ಟವಿಳಿದು, ಗುಳೆ ಬರಬೇಕಾಯಿತು. ತಾವು ಹೊಸದಾಗಿ ಧರಿಸಿದ್ದ ಲಿಂಗದಿಂದ ಈ ಗಲಾಟೆಯಾದ್ದರಿಂದ, ಅದನ್ನು ವಿಸರ್ಜಿಸುವುದೇ ಸರಿ ಎಂದು ಕುಲದ ಹಿರಿಯರು ನಿರ್ಧರಿಸಿದರು. ಅಂದು ಧ್ವಜೇಶ್ವರ ಎಂದು ಪ್ರಸಿದ್ಧವಾಗಿದ್ದ ಕೋಟೇಶ್ವರದ ವಿಶಾಲ ಕೆರೆಯಲ್ಲಿ ತಾವು ಧರಿಸಿದ್ದ ಲಿಂಗಗಳನ್ನು ಎಲ್ಲರೂ ವಿಸರ್ಜಿಸಿದರಂತೆ. 'ಈ ರೀತಿ ತುಂಬಾ ಜನರು ಲಿಂಗಗಳನ್ನು ವಿಸರ್ಜಿಸಿದ್ದರಿಂದ ಆ ಜಾಗಕ್ಕೆ, ಕೆರೆಗೆ ಕೋಟಿ ಲಿಂಗೇಶ್ವರ ಎಂಬ ಹೆಸರು ಬಂತು' ಎಂದಳು ಆ ವೃದ್ಧ ಮಹಿಳೆ!

ಕೋಟೇಶ್ವರ ಎಂಬ ಹೆಸರು ಬರಲು ತಮ್ಮ ಹಿರಿಯರ ತ್ಯಾಗವೂ ಮುಖ್ಯವಾಗಿತ್ತು ಎಂಬ ವಿಚಾರವನ್ನು ಆಕೆ ಹೆಮ್ಮೆಯಿಂದ ಹೇಳಿಕೊಂಡಳು! ಈ ಕಥೆಯು ಜನಪದ ನಂಬಿಕೆಯ ರೂಪದಲ್ಲಿ, ಅವರ ಕುಟುಂಬದಲ್ಲಿ ಉಳಿದುಕೊಂಡಿದೆ. ಕಲ್ಯಾಣದ ಕ್ರಾಂತಿಯಾದಾಗ, ಸಾಕಷ್ಟು ಜನರು ಊರು ತೊರೆದು ಉಳವಿ ಮುಂತಾದ ಮಲೆನಾಡಿನ ಪ್ರದೇಶಗಳಿಗೆ ವಲಸೆ ಹೋಗಿರುವ ಕಥೆ ಇತಿಹಾಸದಲ್ಲಿ ದಾಖಲಾಗಿದೆ; ಅಂಥ ಒಂದು ವಿದ್ಯಮಾನದ ನೆನಪುಗಳನ್ನೇ ಆ ವೃದ್ಧ ಮಹಿಳೆ ಹೇಳಿರಬಹುದೇ? ಇದು ಸಂಶೋಧನೆಗೆ ಸೂಕ್ತವಾದ ವಿಷಯ ಎನ್ನಬಹುದು. ಇಂದು ಕೋಟೇಶ್ವರದ ಕೆರೆಯಲ್ಲಿ ಸೂಕ್ತ ಉತ್ಖನನ ನಡೆದರೆ, ಈ ಮಹಿಳೆ ಹೇಳಿದ ವಿದ್ಯಮಾನ ಮತ್ತು ನೂರಾರು ಪುಟಾಣಿ ಲಿಂಗಗಳ ವಿಸರ್ಜನೆಯ ಕಥೆಗೆ ಪುರಾವೆ ದೊರಕೀತು!

ಅದೇ ರೀತಿ, ಇಂದಿನ ಆಧುನಿಕ ತಂತ್ರಜ್ಞಾನ ಬಳಸಿ, ವಂಡಾರು ಕಂಬಳಗದ್ದೆ ಮತ್ತು ಕೋಟೇಶ್ವರ ಕೆರೆಯ ನಡುವೆ ಪುರಾತನ ಕಾಲದಲ್ಲಿ ಸುರಂಗವೋ, ಕಾಲುವೆಯೋ ಇದ್ದಿರಬಹುದೇ ಎಂದು ಯಾರಾದರೂ ಉತ್ಸಾಹಿಗಳು ಹುಡುಕಿ ನೋಡಲಿ ಎಂಬ ಆಸೆಯೂ ನನ್ನಲ್ಲಿದೆ!

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ದೇಗುಲವನ್ನು ಹಸ್ತಾಂತರಿಸಿ

ಕೇರಳದ ಕೋಯಿಕ್ಕೋಡಿನಲ್ಲಿ ಸುದ್ದಿಸಂಸ್ಥೆಯೊಂದಕ್ಕೆ ಸಂದರ್ಶನ ನೀಡಿರುವ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಮಾಜಿ ಪ್ರಾದೇಶಿಕ ನಿರ್ದೇಶಕ ಕೆ.ಕೆ. ಮುಹಮ್ಮದ್ ಅವರು 'ಮುಸ್ಲಿಮರಿಗೆ ಮೆಕ್ಕಾ ಹಾಗೂ ಮದೀನಾ ಎಷ್ಟು ಮುಖ್ಯವೋ, ಹಿಂದೂಗಳಿಗೆ ಅಷ್ಟೇ ಮುಖ್ಯವಾದ ಶ್ರೀ ಕೃಷ್ಣನ ಜನ್ಮಸ್ಥಳ ಮಥುರಾ ಮತ್ತು ಶಿವನ ಜ್ಞಾನವಾಪಿ ದೇವಾಲಯಗಳನ್ನು, ಮುಸ್ಲಿಮರು ಸ್ವಂತ ಇಚ್ಛೆಯಿಂದ ಹಿಂದೂಗಳಿಗೆ ಹಸ್ತಾಂತರಿಸುವುದರಿಂದ ಒಳ್ಳೆಯದಾಗಲಿದೆ' ಎಂದು ಹೇಳಿರುವುದು ತುಂಬಾ ಶ್ಲಾಘನೀಯ ಸಂಗತಿ. ಅಷ್ಟೇ ಅಲ್ಲದೆ ಅವರು, 'ಮುಸ್ಲಿಮರಿಗಾಗಿ ಪ್ರತ್ಯೇಕ ದೇಶ ಸೃಷ್ಟಿಸಲು ಭಾರತವನ್ನು ವಿಭಜಿಸಿ, ಪಾಕಿಸ್ತಾನ ಭಾಗವನ್ನು ನೀಡಿದ ನಂತರವೂ ಭಾರತ ಜಾತ್ಯತೀತವಾಗಿಯೇ ಮುಂದುವರಿದಿದೆ. ಇದಕ್ಕೆ ಕಾರಣ ಹಿಂದೂಗಳು ಬಹುಸಂಖ್ಯಾತರಾಗಿರುವುದು. ಇದನ್ನು ಮುಸ್ಲಿಮರು ಪ್ರಶಂಸೆ ಮಾಡಬೇಕು' ಎಂದಿರುವುದು ಸ್ವಾಗತಾರ್ಹ. ಭಾರತವೇನಾದರೂ ಮುಸ್ಲಿಂ ಬಹುಸಂಖ್ಯಾತ ದೇಶವಾಗಿದ್ದರೆ ಅದು ಎಂದಿಗೂ ಜಾತ್ಯತೀತ ದೇಶವಾಗಿ ಇರುತ್ತಿರಲಿಲ್ಲ, ಆದ್ದರಿಂದ, ಈ ಸಂಗತಿಯನ್ನು ಮುಸ್ಲಿಮರು ಅರ್ಥಮಾಡಿಕೊಳ್ಳಬೇಕು ಎಂಬ ಅವರ ಮಾತು ಎಲ್ಲಾ ಭಾರತೀಯರೂ ಮೆಚ್ಚುವಂಥದ್ದು.

- ಬೆಸಗರಹಳ್ಳಿ ರವಿ ಪ್ರಸಾದ್ ಮೈಸೂರು

ಹೀಗೊಂದು ಪ್ರತಿಕ್ರಿಯೆ

ಓದುಗರ ಓಣಿಯಲ್ಲಿ (ಡಿ.4) ಪ್ರಕಟವಾದ ಪತ್ತಂಗಿ ಎಸ್. ಮುರಳಿ ಅವರ 'ಲೈಫ್ ಸರ್ಟಿಫಿಕೇಟ್ ಸಂಕಷ್ಟ' ಶೀರ್ಷಿಕೆಯ ಪತ್ರಕ್ಕೆ ಈ ಪ್ರತಿಕ್ರಿಯೆ:

2024–25ರಿಂದ 'ಜೀವನ ಪ್ರಮಾಣ ಪತ್ರ' ನಿಯಮದಲ್ಲಿ ಬದಲಾವಣೆ ಬಂದಿದೆ. ಇನ್ನು ಮುಂದೆ ಕೇಂದ್ರ, ಹಾಗೂ ರಾಜ್ಯ ಸರಕಾರದ ನಿವೃತ್ತರು, ಇಪಿಎಫ್ ಪಿಂಚಣಿದಾರರು, ಹಾಗೂ ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳು (ಭಾಗ್ಯಲಕ್ಷ್ಮಿ, ವಿಧವಾ ಪಿಂಚಣಿ, ವೃದ್ಧಾಪ್ಯ, ಅಂಗವಿಕಲ ಪಿಂಚಣಿ ಇತ್ಯಾದಿ) ಜೀವನ ಪ್ರಮಾಣ ಪತ್ರ ಸಲ್ಲಿಸುವುದು ನವೆಂಬರ್ ತಿಂಗಳಿಗೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಪಿಂಚಣಿದಾರರ ಜನ್ಮ ದಿನಾಂಕ ಬರುವ ತಿಂಗಳಲ್ಲಿ ಸಲ್ಲಿಸುವ ವ್ಯವಸ್ಥೆ ಜಾರಿಗೆ ಬಂದಿದೆ. ಪಿಂಚಣಿದಾರರು ಜನ್ಮ ದಿನಾಂಕ ಬರುವ ತಿಂಗಳಲ್ಲಿ ಒಮ್ಮೆ ಜೀವನ ಪ್ರಮಾಣ ಪತ್ರ ಸಲ್ಲಿಸಿದರೆ ಸಾಕು, ನವೆಂಬರ್ ತಿಂಗಳಲ್ಲಿ ಸಲ್ಲಿಸುವ ಅನಿವಾರ್ಯತೆ ಇಲ್ಲ, ಹೀಗೆ ಜೀವನ ಪ್ರಮಾಣ ಪತ್ರವನ್ನುಡಿಜಿಟಲ್ ಜೀವನ ಪ್ರಮಾಣ (ಮುಖ ಗುರುತಿನ ಮೂಲಕ) ಮೊಬೈಲ್ ಮೂಲಕವೇ ಸಲ್ಲಿಸಬಹುದು. ಅಂಚೆ ಕಚೇರಿ/ಗ್ರಾಮ ಒನ್ /ಬಾಪೂಜಿ ಸೇವಾ ಕೇಂದ್ರ/ಜನಸೇವಾ ಕೇಂದ್ರದಲ್ಲಿ ಬೆರಳಚ್ಚು ಅಥವಾ ಮುಖ ಸ್ಕ್ಯಾನ್ ಮೂಲಕ ಸಲ್ಲಿಕೆ, ನೇರವಾಗಿ ಪಿಂಚಣಿ ಪಾವತಿ ಮಾಡುವ ಕಚೇರಿ, ಬ್ಯಾಂಕ್ ಶಾಖೆಗಳಲ್ಲಿ ಸಲ್ಲಿಸಬಹುದಾಗಿದೆ. ಒಮ್ಮೆ ಜನ್ಮ ಮಾಸದೊಳಗೆ ಜೀವನ ಪ್ರಮಾಣ ಪತ್ರ ಸಲ್ಲಿಸಿದರೆ, ಪ್ರತಿ ವರ್ಷವೂ ಜನ್ಮ ಮಾಸದೊಳಗೇ ಸಲ್ಲಿಸಬೇಕು.

- ಜಿ.ನಾಗೇಂದ್ರ ಕಾವೂರು ಸಂಡೂರು

ಸ್ವಾಗತಾರ್ಹ ಬೆಳವಣಿಗೆ

ದೇಶದಲ್ಲಿ ಬೀದಿನಾಯಿಗಳ ಹಾವಳಿ ತಡೆಗಟ್ಟಲು, ರಾಜ್ಯದ ಎಲ್ಲಾ ನಗರ ಪಾಲಿಕೆಗಳು, ಪುರಸಭೆಗಳು ಮತ್ತು ಗ್ರಾಪಂ ವ್ಯಾಪ್ತಿಯಲ್ಲಿ ಅವುಗಳ ಸಂಖ್ಯೆಯನ್ನು ನಿಯಂತ್ರಿಸುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆ. ಬೀದಿನಾಯಿಗಳ ಸಂಖ್ಯೆ ಕಡಿಮೆ ಮಾಡಲು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿ 3 ದಿನಗಳ ಕಾಲ ಅವುಗಳನ್ನು ಆರೈಕೆ ಮಾಡುವಂತೆ ಹೇಳಿದೆ. ಮುಖ್ಯವಾಗಿ ಸಂತಾನಶಕ್ತಿಹರಣ ಚಿಕಿತ್ಸೆ ಫಲಕಾರಿಯಾಗದೆ ನಾಯಿಗಳ ಸಂಖ್ಯೆ ಹೆಚ್ಚುತ್ತಿದೆ ಎಂಬುದು ಸಾರ್ವಜನಿಕರ ಅಭಿಪ್ರಾಯ. ಆತಂಕಕಾರಿ ಸಂಗತಿಯೆಂದರೆ ಮೈಸೂರು ನಗರ ಒಂದರಲ್ಲೇ 2021ರ ಗಣತಿಯ ಪ್ರಕಾರ ಸುಮಾರು 5 ಸಾವಿರ ಬೀದಿನಾಯಿಗಳಿವೆ ಎಂದು ಹೇಳಲಾಗುತ್ತಿದೆ. ಇದು ಈಗ ಇನ್ನೂ ಹೆಚ್ಚಿರಬಹುದು. ಸದ್ಯಕ್ಕೆ ಬೀದಿನಾಯಿಗಳ ಉಪಟಳ ತಡೆಯಲು ನಮ್ಮ ಪಕ್ಕದ ತಮಿಳುನಾಡು, ಆಂಧ್ರ, ಕೇರಳ ರಾಜ್ಯಗಳಲ್ಲಿರುವಂತೆ 'ನಾಯಿಗಳ ಪಾರ್ಕ್' ಅನ್ನು, ಮೈಸೂರು ನಗರದಲ್ಲಿ ಸ್ಥಾಪಿಸಿದರೆ (ದನಗಳಿಗೆ ಸಜ್ಜುಗೊಳಿಸುವ ಪಿಂಜಾರ ಪೋಲ್ ಮಾದರಿಯಲ್ಲಿ), ಬೀದಿನಾಯಿಗಳ ಹಾವಳಿಯನ್ನು ಸ್ವಲ್ಪ ಮಟ್ಟಿಗಾದರೂ ತಡೆಗಟ್ಟಬಹುದು. ಈ ಬಗ್ಗೆ ಜಿಲ್ಲಾಡಳಿತ ಗಮನಹರಿಸಬೇಕು.

- ಬೂಕನಕೆರೆ ವಿಜೇಂದ್ರ ಮೈಸೂರು

ದಶಕಗಳಿಂದ ಅಮೆರಿಕದ ಆರ್ಥಿಕ ದಿವಾಳಿಯ ಬಿಲ್ ತೀರಿಸುತ್ತಿರುವ ಭಾರತ

ವಿವಿಧ ರಾಷ್ಟ್ರಗಳು ತೈಲ ಮತ್ತು ಇತರ ಪ್ರಮುಖ ಸರಕುಗಳ ಖರೀದಿಗೆ ಡಾಲರ್‌ಗಳನ್ನು ಸಂಗ್ರಹಿಸಲೇಬೇಕು. ಈ ವಿಶೇಷ ಸ್ಥಿತಿಯಿಂದಾಗಿ, ಅಮೆರಿಕ ತನ್ನ ಸಾಲವನ್ನು ನಿರ್ವಹಿಸಲು, ವ್ಯಾಪಾರ ಕೊರತೆಯನ್ನು ನಿರಂತರ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಇತರ ದೇಶಗಳು ತಮ್ಮ ವ್ಯಾಪಾರವನ್ನು ಸುಗಮಗೊಳಿಸಲು ಡಾಲರ್‌ಗಳನ್ನು ಹಿಡಿದಿಟ್ಟುಕೊಳ್ಳುವುದರಿಂದ, ಅಮೆರಿಕ ತನ್ನ ಕರೆನ್ಸಿಯ ಮೌಲ್ಯ ಕುಸಿತದ ಬಗ್ಗೆ ಹೆಚ್ಚು ಚಿಂತಿಸಬೇಕಿಲ್ಲ. ಡಾಲರ್‌ಗಳು ದೇಶದಿಂದ ಹೊರಹೋದರೂ, ಅವು ಅಂತಿಮವಾಗಿ ಮತ್ತೆ ಅಮೆರಿಕದ ಖಜಾನೆ ಬಾಂಡ್‌ಗಳ ರೂಪದಲ್ಲಿ ಹಿಂತಿರುಗುತ್ತವೆ.

ದುಡ್ಡು-ಕಾಸು
ಲೀನಾ ಕಾಮತ ಜೋಶಿ
vveditoped@gmail.com

ಅಮೆರಿಕವು ವಿಶ್ವದ ಅತಿದೊಡ್ಡ ಆರ್ಥಿಕ ಶಕ್ತಿಯಷ್ಟೇ ಅಲ್ಲ, ಅತಿದೊಡ್ಡ ಸಾಲಗಾರ ದೇಶ ಕೂಡ! ಪ್ರಸ್ತುತ, ಅಮೆರಿಕದ ರಾಷ್ಟ್ರೀಯ ಸಾಲವು '38 ಟ್ರಿಲಿಯನ್ ಡಾಲರ್', ಅಂದರೆ '34 ಲಕ್ಷ ಕೋಟಿ ರುಪಾಯಿ'. ಅಂದರೆ ಭಾರತದ ಜಿಡಿಪಿಗಿಂತ 8 ಪಟ್ಟು ಜಾಸ್ತಿ. ಸಾಮಾನ್ಯವಾಗಿ, ಇಷ್ಟು ದೊಡ್ಡ ಸಾಲವನ್ನು ಹೊಂದಿರುವ ಯಾವುದೇ ರಾಷ್ಟ್ರವು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಬೇಕು ಅಥವಾ ತನ್ನ ಕರೆನ್ಸಿಯ ಮೌಲ್ಯವನ್ನು ಸಂಪೂರ್ಣವಾಗಿ ಕಳೆದುಕೊಳ್ಳಬೇಕು. ಆದರೆ ಅಮೆರಿಕದ ವಿಷಯದಲ್ಲಿ ಹಾಗಾಗುವುದಿಲ್ಲ. ಈ ವಿಪರ್ಯಾಸಕ್ಕೆ ಕಾರಣ ಅಮೆರಿಕ ಅನುಭವಿಸುತ್ತಿರುವ ಒಂದು ವಿಶೇಷ ಸ್ಥಾನಮಾನ– ಅದನ್ನು ಅರ್ಥಶಾಸ್ತ್ರಜ್ಞರು 'ಅತಿಯಾದ ವಿಶೇಷಾಧಿಕಾರ' (Exorbitant privilege) ಎಂದು ಕರೆಯುತ್ತಾರೆ. ಪ್ರತಿ ಬಾರಿಯೂ ಅಮೆರಿಕವು ತನ್ನ ವ್ಯಾಪಾರ ಕೊರತೆ ಮತ್ತು ಬಜೆಟ್ ಕೊರತೆಯನ್ನು ತುಂಬಲು ಹಣವನ್ನು ಮುದ್ರಿಸಿದಾಗ ಅಥವಾ ಸಾಲವನ್ನು ಮಾಡಿದಾಗ, ಆ ಹೊರೆಯು ನೇರವಾಗಿ ಜಗತ್ತಿನ ಇತರ ರಾಷ್ಟ್ರಗಳ ಮೇಲೆ, ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ, ಹಣದುಬ್ಬರ, ಆರ್ಥಿಕ ಅಸ್ಥಿರತೆ ಮತ್ತು ಬಂಡವಾಳದ ಹಾರಾಟದ ರೂಪದಲ್ಲಿ ಬೀಳುತ್ತದೆ. ಅಮೆರಿಕ ತನ್ನ ಆರ್ಥಿಕ ದಿವಾಳಿಯ ಬಿಲ್ ಅನ್ನು ಜಗತ್ತಿಗೆ ಹೇಗೆ ಕಟ್ಟುತ್ತದೆ ನೋಡಿ.

ಡಾಲರ್‌ನ ಪ್ರಾಬಲ್ಯ ಮತ್ತು ಪೆಟ್ರೋಡಾಲರ್ ವ್ಯವಸ್ಥೆ: ಅಮೆರಿಕದ ಆರ್ಥಿಕತೆಯನ್ನು ಉಳಿಸುವ ಅತಿ ಮುಖ್ಯ ಅಂಶವೆಂದರೆ ಡಾಲರ್‌ನ ಸ್ಥಾನಮಾನ. ಎರಡನೇ ಮಹಾಯುದ್ಧದ ಸಮಯದಲ್ಲಿ (1944ರಲ್ಲಿ) ಜಾರಿಗೆ ಬಂದ 'ಬ್ರೆಟನ್ ವುಡ್ಸ್' ಒಪ್ಪಂದ ಮತ್ತು 1971ರಲ್ಲಿ ನಿಕ್ಸನ್ ಆಡಳಿತವು ಸೌದಿ ಅರೇಬಿಯಾದೊಂದಿಗೆ ಮಾಡಿಕೊಂಡ 'ಪೆಟ್ರೋಡಾಲರ್' ವ್ಯವಸ್ಥೆಯು, ಜಗತ್ತಿನ ಎಲ್ಲಾ ದೇಶಗಳು ತೈಲವನ್ನು ಕೇವಲ ಡಾಲರ್‌ಗಳಲ್ಲಿಯೇ ವ್ಯಾಪಾರ ಮಾಡಬೇಕು ಎಂದು ಕಡ್ಡಾಯಗೊಳಿಸಿತು. 'ಪೆಟ್ರೋಡಾಲರ್' ವ್ಯವಸ್ಥೆಯ ಮೂಲಕ, ಅಮೆರಿಕನ್ ಡಾಲರ್ 'ಜಾಗತಿಕ ಮೀಸಲು ಕರೆನ್ಸಿ' (Global reserve currency) ಮತ್ತು ಅಂತಾರಾಷ್ಟ್ರೀಯ ವ್ಯಾಪಾರದ ಪ್ರಬಲ ಕರೆನ್ಸಿಯಾಗಿದೆ. ಕಚ್ಚಾ ತೈಲದ ಎಲ್ಲಾ ವಹಿವಾಟುಗಳನ್ನು ಡಾಲರ್‌ನಲ್ಲಿಯೇ ನಡೆಸಬೇಕು ಎಂಬ ನಿಯಮವು ಡಾಲರ್‌ಗೆ ನಿರಂತರವಾಗಿ ಜಾಗತಿಕ ಬೇಡಿಕೆಯನ್ನು ಸೃಷ್ಟಿಸುತ್ತದೆ. ವಿಶ್ವದಾದ್ಯಂತ ರಾಷ್ಟ್ರಗಳು ತೈಲ ಮತ್ತು ಇತರ ಪ್ರಮುಖ ಸರಕುಗಳನ್ನು ಖರೀದಿಸಲು ಡಾಲರ್‌ಗಳನ್ನು ಸಂಗ್ರಹಿಸಲೇಬೇಕು. ಈ ವಿಶೇಷ ಸ್ಥಿತಿಯಿಂದಾಗಿ, ಅಮೆರಿಕ ತನ್ನ ಸಾಲವನ್ನು ನಿರ್ವಹಿಸಲು ಮತ್ತು ತನ್ನ ದೊಡ್ಡ ವ್ಯಾಪಾರ ಕೊರತೆಯನ್ನು ನಿರಂತರವಾಗಿ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಇತರ ದೇಶಗಳು ತಮ್ಮ ವ್ಯಾಪಾರವನ್ನು ಸುಗಮಗೊಳಿಸಲು ಡಾಲರ್‌ಗಳನ್ನು ಹಿಡಿದಿಟ್ಟುಕೊಳ್ಳುವುದರಿಂದ, ಅಮೆರಿಕವು ತನ್ನ ಕರೆನ್ಸಿಯ ಮೌಲ್ಯ ಕುಸಿತದ ಬಗ್ಗೆ ಹೆಚ್ಚು ಚಿಂತಿಸಬೇಕಾಗಿಲ್ಲ. ಡಾಲರ್‌ಗಳು ದೇಶದಿಂದ ಹೊರ ಹೋದರೂ, ಅವು ಅಂತಿಮವಾಗಿ, ಅಗತ್ಯವಾಗಿ ಮತ್ತೆ ಅಮೆರಿಕದ ಖಜಾನೆ ಬಾಂಡ್‌ಗಳ ರೂಪದಲ್ಲಿ ಹಿಂತಿರುಗುತ್ತವೆ.

ಹಣದುಬ್ಬರದ ರಫ್ತು ಬೇರೆ ದೇಶಗಳ ತಲೆಗೆ: ಅಮೆರಿಕ ತನ್ನ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು, ಬಿಕ್ಕಟ್ಟಿನಿಂದ ಹೊರಬರಲು ತನ್ನ ಕೇಂದ್ರ ಬ್ಯಾಂಕ್, ಫೆಡರಲ್ ರಿಸರ್ವ್ ಮೂಲಕ ಬೃಹತ್ ಪ್ರಮಾಣದಲ್ಲಿ ಹಣವನ್ನು ಮುದ್ರಿಸಿದಾಗ, ಈ ಹೆಚ್ಚುವರಿ ಹಣವು ಅಮೆರಿಕದಲ್ಲಿ ಹಣದುಬ್ಬರವನ್ನು ಉಂಟುಮಾಡುವ ಬದಲು ಜಾಗತಿಕವಾಗಿ ಹರಡುತ್ತದೆ. ಅಮೆರಿಕವು ತನ್ನ ಆಂತರಿಕ ಸಾಲಗಳನ್ನು ನೀಗಿಸಲು ಹಣವನ್ನು ಮುದ್ರಿಸಿದಾಗ, ಇದು ತೈಲ, ಚಿನ್ನ ಮತ್ತು ಇತರ ಪ್ರಮುಖ ಜಾಗತಿಕ ಸರಕುಗಳ ಬೆಲೆಯನ್ನು ಹೆಚ್ಚಿಸುತ್ತದೆ. ಭಾರತದಂಥ ದೇಶಗಳು ಈ ಸರಕುಗಳನ್ನು ಆಮದು ಮಾಡಿಕೊಳ್ಳಲು ಹೆಚ್ಚು ಡಾಲರ್‌ಗಳನ್ನು ಪಾವತಿಸಬೇಕಾಗುತ್ತದೆ. ಇದರ ಪರಿಣಾಮವಾಗಿ, ಆಮದು ಮಾಡಿಕೊಳ್ಳುವ ದೇಶಗಳಲ್ಲಿ ಸ್ಥಳೀಯ ಹಣದುಬ್ಬರ ಉಂಟಾಗುತ್ತದೆ. ಅಮೆರಿಕದ ದೇಶೀಯ ಆರ್ಥಿಕ ಸಮಸ್ಯೆಗಳಿಂದ ಹುಟ್ಟಿಕೊಂಡ ಹಣದುಬ್ಬರದ ಹೊರೆಯನ್ನು ಅಭಿವೃದ್ಧಿಶೀಲ ರಾಷ್ಟ್ರಗಳ ಸಾಮಾನ್ಯ ನಾಗರಿಕರು ಭರಿಸಬೇಕಾಗುತ್ತದೆ. ಈ ಮೂಲಕ ಅಮೆರಿಕ ತನ್ನ ಆರ್ಥಿಕ ಬಿಕ್ಕಟ್ಟಿನ ವೆಚ್ಚವನ್ನು ಪರಿಣಾಮಕಾರಿಯಾಗಿ ರಫ್ತು ಮಾಡುತ್ತದೆ.

ಅಮೆರಿಕನ್ನರು ಸಾಮಾನ್ಯವಾಗಿ ಕಡಿಮೆ ಉಳಿತಾಯ ಮಾಡುತ್ತಾರೆ ಮತ್ತು ಹೆಚ್ಚು ಖರ್ಚು ಮಾಡುತ್ತಾರೆ. ವಿದೇಶಿ ಸರಕುಗಳನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಾರೆ, ಇದು ಬೃಹತ್ ವ್ಯಾಪಾರ ಕೊರತೆಗೆ ಕಾರಣವಾಗುತ್ತದೆ. ಈ ಆಮದಿಗೆ ಪಾವತಿಸಲು ಬಳಸುವ ಡಾಲರ್‌ಗಳು ಅಂತಿಮವಾಗಿ ವಿದೇಶಿ ರಫ್ತುದಾರರ ಕೈಗೆ ಹೋಗುತ್ತವೆ. ಈ ರಫ್ತುದಾರ ರಾಷ್ಟ್ರಗಳು (ಉದಾಹರಣೆಗೆ, ಚೀನಾ, ಭಾರತ) ಈ ಡಾಲರ್‌ಗಳನ್ನು ತಮ್ಮ ದೇಶದೊಳಗೆ ತರುವುದರಿಂದ ಸ್ಥಳೀಯ ಕರೆನ್ಸಿಯ ಮೌಲ್ಯ ಏರಿಕೆಯಾಗಿ ತಮ್ಮ ರಫ್ತುಗಳಿಗೆ ಧಕ್ಕೆಯಾಗುವುದನ್ನು ತಡೆಯಲು ಬಯಸುತ್ತವೆ. ಆದ್ದರಿಂದ, ಭಾರತದ ಕೇಂದ್ರ ಬ್ಯಾಂಕ್‌ಗಳು ಈ ಡಾಲರ್‌ಗಳನ್ನು ಸಂಗ್ರಹಿಸಿ, ಅವುಗಳನ್ನು ಸುರಕ್ಷಿತ ಬಂಡವಾಳ ಹೂಡಿಕೆಗಾಗಿ ಅಮೆರಿಕದ ಸರಕಾರಿ ಖಜಾನೆಯ ಬಾಂಡ್‌ಗಳಲ್ಲಿ ಮರುಹೂಡಿಕೆ ಮಾಡುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅನ್ಯರಾಷ್ಟ್ರಗಳು ಅಮೆರಿಕದಿಂದ ಡಾಲರ್ ಪಡೆಯುತ್ತವೆ ಮತ್ತು ಆ ಡಾಲರ್‌ಗಳನ್ನು ಪುನಃ ಅಮೆರಿಕದ ಸಾಲವನ್ನು ಹಣಕಾಸು ಮಾಡಲು ಬಳಸುತ್ತವೆ. ಈ ವ್ಯವಸ್ಥೆಯು ಅಮೆರಿಕನ್ನರಿಗೆ ವಿದೇಶಿ ಬಂಡವಾಳದ ಬೆಂಬಲದೊಂದಿಗೆ ತಮ್ಮ ಜಾಗತಿಕ ವ್ಯಾಪಾರ ಕೊರತೆಯನ್ನು ಮತ್ತು ಅಧಿಕ ಸಾಲವನ್ನು ನಿರಂತರವಾಗಿ ಮುಂದುವರಿಸಲು ಅವಕಾಶ ನೀಡುತ್ತದೆ. ಅಂದರೆ, ಅಮೆರಿಕದ ಅಧಿಕ ಸಾಲವನ್ನು ಬೇರೆ ದೇಶಗಳ ಉಳಿತಾಯದಿಂದಲೇ ಸರಿದೂಗಿಸಲಾಗುತ್ತದೆ.

ಫೆಡರಲ್ ರಿಸರ್ವ್‌ನ ನೀತಿಗಳ ಡಾಲರ್ ಚಕ್ರವ್ಯೂಹ: ಫೆಡರಲ್ ರಿಸರ್ವ್‌ನ ಬಡ್ಡಿ ದರ ನಿರ್ಧಾರಗಳು ಕೇವಲ ಅಮೆರಿಕಕ್ಕೆ ಸೀಮಿತವಾಗಿಲ್ಲ; ಅವು ಜಾಗತಿಕ ಆರ್ಥಿಕತೆಯ ಮೇಲೆ ಸುನಾಮಿಯಂತೆ ಪರಿಣಾಮ ಬೀರುತ್ತವೆ. ಅಮೆರಿಕದ ಫೆಡರಲ್ ರಿಸರ್ವ್ ತನ್ನ ಹಣದುಬ್ಬರವನ್ನು ನಿಯಂತ್ರಿಸಲು ಬಡ್ಡಿ ದರಗಳನ್ನು ಹೆಚ್ಚಿಸಿದಾಗ, ಅದು ಭಾರತೀಯ ಆರ್ಥಿಕತೆಯ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಅಮೆರಿಕದಲ್ಲಿ ಬಡ್ಡಿ ದರ ಹೆಚ್ಚಾದಾಗ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು (FPIs) ಭಾರತದಂಥ ಉದಯೋನ್ಮುಖ ಮಾರುಕಟ್ಟೆಗಳಲ್ಲಿನ ಹೂಡಿಕೆಗಳನ್ನು ತೆಗೆದುಹಾಕಿ, ಹೆಚ್ಚು ಸುರಕ್ಷಿತ ಮತ್ತು ಹೆಚ್ಚಿನ ಆದಾಯ ನೀಡುವ ಯುಎಸ್ ಖಜಾನೆ ಬಾಂಡ್‌ಗಳಲ್ಲಿ (US treasury bonds) ಹೂಡಿಕೆ ಮಾಡಲು ಮುಂದಾಗುತ್ತಾರೆ. ಇದರಿಂದಾಗಿ, ಭಾರತದಿಂದ ಬಂಡವಾಳದ ದೊಡ್ಡ ಪ್ರಮಾಣದ ಹೊರಹರಿವು ಉಂಟಾಗುತ್ತದೆ. ಈ ಬಂಡವಾಳ ಹೊರಹರಿವು ಡಾಲರ್‌ನ ಬೇಡಿಕೆಯನ್ನು ಹೆಚ್ಚಿಸಿ, ರುಪಾಯಿಯನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ. ಆಗ ಭಾರತೀಯ ರಿಸರ್ವ್ ಬ್ಯಾಂಕ್, ರುಪಾಯಿ ಮೌಲ್ಯವನ್ನು ಸ್ಥಿರವಾಗಿಡಲು ತನ್ನ ಡಾಲರ್ ಮೀಸಲುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾಗುತ್ತದೆ. ಇದು ದೇಶದ ಅಮೂಲ್ಯ ವಿದೇಶಿ ವಿನಿಮಯ ಮೀಸಲುಗಳ ಮೇಲೆ ಒತ್ತಡ ಹೇರುತ್ತದೆ. ಷೇರು ಮಾರುಕಟ್ಟೆಗಳು ಹಾಗೂ ಆರ್ಥಿಕ ಸ್ಥಿರತೆಗೆ ಧಕ್ಕೆಯನ್ನುಂಟುಮಾಡುತ್ತದೆ. ಫೆಡ್ ದರಗಳನ್ನು ಇಳಿಸಿದಾಗ, ಬಂಡವಾಳವು ಹೆಚ್ಚು ಆದಾಯ ನೀಡುವ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹರಿಯುತ್ತದೆ (ಹೂಡಿಕೆಯ ಒಳಹರಿವು). ಆದರೆ ಈ ಹರಿವು ಅಲ್ಪಕಾಲಿಕವಾಗಿದ್ದು, ಫೆಡ್ ಮತ್ತೆ ದರ ಬದಲಾಯಿಸಿದ ತಕ್ಷಣ ಬಂಡವಾಳವು ಪುನಃ ಹೊರಹೋಗುತ್ತದೆ. ಈ ಅನಿಶ್ಚಿತ ಬಂಡವಾಳ ಹರಿವು ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಯೋಜನೆಗಳನ್ನು ಮತ್ತು ಹಣಕಾಸು ನೀತಿಗಳನ್ನು ಸ್ಥಿರವಾಗಿಡಲು ಬಿಡುವುದಿಲ್ಲ.

ಅಮೆರಿಕದ ಹಣಕಾಸಿನ ನೀತಿಯು ಜಗತ್ತಿನ ಮೇಲೆ ಪ್ರಭಾವ ಬೀರುವ ಎರಡು ಮುಖ್ಯ ಮಾರ್ಗಗಳಿವೆ. ಅವುಗಳೆಂದರೆ, ವ್ಯಾಪಾರ ಕೊರತೆ ಮತ್ತು ಹಣಕಾಸಿನ ಕೊರತೆ.

ವ್ಯಾಪಾರ ಕೊರತೆ (Trade deficit): ಅಮೆರಿಕವು ಆಮದು ಮಾಡಿಕೊಳ್ಳುವುದಕ್ಕಿಂತ ಕಡಿಮೆ ರಫ್ತು ಮಾಡುತ್ತದೆ. ಇದರರ್ಥ, ಅದು ಜಗತ್ತಿನಿಂದ ಸರಕು ಮತ್ತು ಸೇವೆಗಳನ್ನು ಪಡೆಯುತ್ತದೆ, ಆದರೆ ಅದಕ್ಕೆ ಪ್ರತಿಯಾಗಿ ಅದು ನೀಡುವ ಪ್ರಮುಖ ವಸ್ತು ಎಂದರೆ ಡಾಲರ್ ಎಂಬ ಕಾಗದದ ನೋಟು. ಈ ನೋಟುಗಳು ಅಮೆರಿಕದಿಂದ ಹೊರಹೋಗಿ, ಬೇರೆ ದೇಶಗಳ ಕೇಂದ್ರ ಬ್ಯಾಂಕುಗಳಲ್ಲಿ, ಡಾಲರ್ ಮೀಸಲುಗಳಾಗಿ ಸಂಗ್ರಹವಾಗುತ್ತವೆ. ವಾಸ್ತವವಾಗಿ, ಅಮೆರಿಕ ತನ್ನ ಬಳಕೆಯನ್ನು ಇತರ ದೇಶಗಳ ಉತ್ಪಾದನೆ ಮತ್ತು ಉಳಿತಾಯದ ಮೂಲಕ ಬೆಂಬಲಿಸುತ್ತದೆ.

ಹಣದುಬ್ಬರ ರಫ್ತು (Inflation Export): ಕೋವಿಡ್ ಸಮಯದಲ್ಲಿ ಅಮೆರಿಕದ ಫೆಡರಲ್ ಬ್ಯಾಂಕ್, 'ಪರಿಮಾಣಾತ್ಮಕ ಸಡಿಲಿಕೆ' (Quantitative Easing- QE) ಎಂಬ ನೀತಿಯ ಮೂಲಕ ಟ್ರಿಲಿಯನ್‌ಗಟ್ಟಲೆ ಡಾಲರ್‌ಗಳನ್ನು ಮುದ್ರಿಸಿ ಹರಿಬಿಟ್ಟಿತ್ತು. ಈ ಹಣವು ಅಮೆರಿಕದಲ್ಲಿ ಹಣದುಬ್ಬರವನ್ನು ಉಂಟುಮಾಡಿತು. ಅಮೆರಿಕದಲ್ಲಿ ಹಣದುಬ್ಬರ ಹೆಚ್ಚಾದಾಗ, ಅದು ಜಾಗತಿಕ ಸರಕು (Commodity) ಮತ್ತು ಇಂಧನ ಬೆಲೆಗಳನ್ನು ಹೆಚ್ಚಿಸುತ್ತದೆ. ಅಂದರೆ, ಭಾರತವು ಅದೇ ತೈಲವನ್ನು ಅಥವಾ ಚಿನ್ನವನ್ನು ಖರೀದಿಸಲು ಈಗ ಹೆಚ್ಚು ಡಾಲರ್‌ಗಳನ್ನು ಪಾವತಿಸಬೇಕಾಗುತ್ತದೆ. ಹೀಗೆ, ಅಮೆರಿಕದಲ್ಲಿನ ನೀತಿಯ ಪರಿಣಾಮದಿಂದ ಉಂಟಾದ ಹಣದುಬ್ಬರವು ಭಾರತದಂಥ ದೇಶಗಳ ಮೇಲೆ 'ಹೊರೆಯಾಗಿ' ವರ್ಗಾವಣೆಯಾಗುತ್ತದೆ. ಇದು ಅಮೆರಿಕದ ದಿವಾಳಿಯ ಹೊರೆಯನ್ನು ಇತರ ದೇಶಗಳಿಗೆ ಹಸ್ತಾಂತರಿಸುವ ಪ್ರಮುಖ ಮಾರ್ಗವಾಗಿದೆ.

ಭೌಗೋಳಿಕ ರಾಜಕೀಯದ ಅಸ್ತ್ರವಾಗಿ ಹಣಕಾಸು ವ್ಯವಸ್ಥೆ: ಅಮೆರಿಕ ತನ್ನ ಆರ್ಥಿಕ ಪ್ರಾಬಲ್ಯವನ್ನು ವ್ಯಾಪಾರದಲ್ಲಿ ಮಾತ್ರವಲ್ಲ, ಭೌಗೋಳಿಕ ರಾಜಕೀಯದಲ್ಲಿಯೂ ಅಸ್ತ್ರವಾಗಿ ಬಳಸುತ್ತದೆ. ಅಂತಾರಾಷ್ಟ್ರೀಯ ಹಣಕಾಸು ವರ್ಗಾವಣೆ ವ್ಯವಸ್ಥೆಯಾದ SWIFT ಮತ್ತು ನ್ಯೂಯಾರ್ಕ್‌ನಲ್ಲಿರುವ ಹಣಕಾಸು ಜಾಲದ ಮೇಲೆ ಅಮೆರಿಕ ಹೊಂದಿರುವ ನಿಯಂತ್ರಣದಿಂದಾಗಿ, ಅಮೆರಿಕವು ಬೇರೆ ಯಾವುದೇ ದೇಶದ ಮೇಲೆ (ಇರಾನ್, ರಷ್ಯಾ ಇತ್ಯಾದಿ) ನಿರ್ಬಂಧಗಳನ್ನು ವಿಧಿಸಿದರೆ, ಆ ದೇಶವು ಜಾಗತಿಕ ಆರ್ಥಿಕತೆಯಿಂದ ಸಂಪೂರ್ಣವಾಗಿ ಹೊರಗುಳಿಯಬೇಕಾಗುತ್ತದೆ. ಈ 'ಹಣಕಾಸು ಶಸ್ತ್ರಾಸ್ತ್ರೀಕರಣ'ದ ಭಯದಿಂದಾಗಿ, ಜಗತ್ತಿನ ಬಹುತೇಕ ರಾಷ್ಟ್ರಗಳು ಭಾರಿ ಪ್ರಮಾಣದ ಡಾಲರ್ ಮೀಸಲುಗಳನ್ನು ತಮ್ಮ ಬಳಿ ಇಟ್ಟುಕೊಳ್ಳಲು ಒತ್ತಾಯಿಸಲ್ಪಡುತ್ತವೆ. ಈ ಮೀಸಲುಗಳನ್ನು ಮತ್ತೊಮ್ಮೆ ಅಮೆರಿಕದ ಟ್ರೆಷರಿ ಬಾಂಡ್‌ಗಳಲ್ಲಿ ಹೂಡಿಕೆ ಮಾಡಲಾಗುತ್ತದೆ, ಈ ಮೂಲಕ ಅಮೆರಿಕದ ಸಾಲದ ಹೊರೆಗೆ ಪರೋಕ್ಷವಾಗಿ ಬೆಂಬಲ ನೀಡಿದಂತಾಗುತ್ತದೆ.

ಅಮೆರಿಕ ತನ್ನ ಅತಿಯಾದ ಸಾಲ ಮತ್ತು ಖರ್ಚಿನ ದಿವಾಳಿಯ ಬಿಲ್ ಅನ್ನು ಜಗತ್ತಿನ ಮೇಲೆ ವರ್ಗಾಯಿಸುವ ಈ ವ್ಯವಸ್ಥೆಯು ಒಂದು ಸಂಕೀರ್ಣವಾದ ಆರ್ಥಿಕ ಸವಾಲಾಗಿದೆ. ಡಾಲರ್‌ನ ಅನನ್ಯ ಸ್ಥಾನಮಾನವು ಅಮೆರಿಕಕ್ಕೆ ತನ್ನ ವಿತ್ತೀಯ ನಿರ್ಬಂಧಗಳನ್ನು ನಿರ್ಲಕ್ಷಿಸಿ ಬೃಹತ್ ಪ್ರಮಾಣದ ಸಾಲವನ್ನು ಕಲೆಹಾಕಲು ಅವಕಾಶ ನೀಡಿದೆ. ಆದರೆ, ಈ 'ವಿಶೇಷಾಧಿಕಾರ'ದ ಬೆಲೆಯನ್ನು ಜಾಗತಿಕವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಬಡತನ ಮತ್ತು ಹಣಕಾಸು ಅಸ್ಥಿರತೆಯ ರೂಪದಲ್ಲಿ ತೆರಲಾಗುತ್ತಿದೆ. ಈ ವ್ಯವಸ್ಥೆಯನ್ನು ಪ್ರಶ್ನಿಸುತ್ತಿರುವ ಹಲವಾರು ರಾಷ್ಟ್ರಗಳು ಪ್ರಸ್ತುತ ಡಾಲರ್‌ನ ಪ್ರಾಬಲ್ಯವನ್ನು ಕಡಿಮೆ ಮಾಡುವೆಡೆಗೆ, ಅಂದರೆ 'ಡಾಲರ್ ಮುಕ್ತೀಕರಣ'ದ (De-dollarization) ಕಡೆಗೆ ಹೆಜ್ಜೆ ಇಡುತ್ತಿವೆ. ಆದರೆ, ಪ್ರಸ್ತುತ ಪರಿಸ್ಥಿತಿಯಲ್ಲಿ, ಅಮೆರಿಕದ ಆರ್ಥಿಕತೆ ನಿಂತಿರುವ ಬೃಹತ್ ಸಾಲದ ಪರ್ವತದ ತೂಕವನ್ನು ಇನ್ನೂ ಜಗತ್ತಿನ ಇತರ ದೇಶಗಳೇ ಹೊರಬೇಕಾಗಿದೆ.

ಅಮೆರಿಕದ ಡಾಲರ್ ನೀತಿಯು ಜಾಗತಿಕ ಅರ್ಥಶಾಸ್ತ್ರದಲ್ಲಿ ಒಂದು 'ಅನುಚಿತ ಸೌಲಭ್ಯ'ವಾಗಿದೆ. ಇದು ಅಮೆರಿಕಕ್ಕೆ ತನ್ನ ಆರ್ಥಿಕ ಕೊರತೆಯನ್ನು ಜಗತ್ತಿಗೆ ವಾರ್ಷಿಕವಾಗಿ ಹಸ್ತಾಂತರಿಸಲು ಅವಕಾಶ ನೀಡುತ್ತದೆ. ಭಾರತವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದ್ದರೂ, ಡಾಲರ್‌ನ ಈ ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದಿದೆ. ಈ ಬಂಧನದಿಂದ ಹೊರಬರಲು ರೂಢಮಾದರಿಯ ಆರ್ಥಿಕ ನೀತಿಗಳಿಂದ ವಿಮುಖರಾಗಿ, ದ್ವಿಪಕ್ಷೀಯ ರುಪಾಯಿ ವ್ಯಾಪಾರ ಒಪ್ಪಂದಗಳು ಮತ್ತು ಬಂಡವಾಳ ನಿಯಂತ್ರಣವನ್ನು ಬುದ್ಧಿವಂತಿಕೆಯಿಂದ ಬಳಸಬೇಕಿದೆ. ಡಾಲರ್‌ನ ಅಧಿಪತ್ಯ ಕೊನೆಗೊಂಡಾಗ ಮಾತ್ರ, ಭಾರತದಂಥ ಉದಯೋನ್ಮುಖ ಆರ್ಥಿಕತೆಗಳು ನಿಜವಾದ ವಿತ್ತೀಯ ಸಾರ್ವಭೌಮತ್ವವನ್ನು ಪಡೆಯಲು ಸಾಧ್ಯ.

(ಲೇಖಕಿ ಬಹುರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗಿ)

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 324

ಸಮಾಚಾರ ಸಣ್ಣದಲ್ಲ

ಇಂಡಿಗೊಗೆ ಬಾಂಬ್ ಬೆದರಿಕೆ

ಹೈದರಾಬಾದ್: ಮದೀನಾದಿಂದ ತೆಲಂಗಾಣದ ಹೈದರಾಬಾದ್‌ಗೆ ಆಗಮಿಸುತ್ತಿದ್ದ ಇಂಡಿಗೊ ವಿಮಾನದಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಬೆದರಿಕೆ ಬಂದಿದ್ದರಿಂದ 180 ಪ್ರಯಾಣಿಕರು ಮತ್ತು ಆರು ಸಿಬ್ಬಂದಿಗಳಿದ್ದ ವಿಮಾನದ ಮಾರ್ಗ ಬದಲಿಸಲಾಯಿತು. ಅಹಮದಾಬಾದ್‌ನ ಸರದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂಡಿಗೊ 6ಇ58 ವಿಮಾನವನ್ನು ಗುರುವಾರ ಮಧ್ಯಾಹ್ನ 12.30ರ ವೇಳೆ ತುರ್ತಾಗಿ ಇಳಿಸಲಾಯಿತು. ನಂತರ, 'ಕೇಂದ್ರ ಕೈಗಾರಿಕಾ ಭದ್ರತಾ ಪಡೆ'(ಸಿಐಎಸ್‌ಎಫ್) ಭದ್ರತಾ ಸಿಬ್ಬಂದಿ, ಸ್ಥಳೀಯ ಪೊಲೀಸರು ಮತ್ತು ಬಾಂಬ್ ನಿಷ್ಕ್ರಿಯ ದಳ ಸಿಬ್ಬಂದಿ ವಿಮಾನವನ್ನು ಪೂರ್ಣ ಪರಿಶೀಲಿಸಿ ದರು. ಯಾವುದೇ ಸ್ಫೋಟಕ ಪತ್ತೆಯಾಗಲಿಲ್ಲ. ನಸುಕಿನ 2.10ಕ್ಕೆ ಹೊರಡಬೇಕಿದ್ದ ವಿಮಾನ ಮುಂಜಾನೆ 5.29ರಲ್ಲಿ ಮದೀನಾದ ಪ್ರಿನ್ಸ್ ಮೊಹಮ್ಮದ್ ಬಿನ್ ಅಬ್ದುಲಜೀಜ್ ವಿಮಾನ ನಿಲ್ದಾಣದಿಂದ ವಿಳಂಬವಾಗಿ ಹೊರಟಿತ್ತು. ಈ ಮಧ್ಯೆ ಬಾಂಬ್ ಬೆದರಿಕೆ ಎದುರಾಗಿ ವಿಮಾನ ಹೈದರಾಬಾದ್ ಮಧ್ಯಾಹ್ನ 12.30ಕ್ಕೆ ತಲುಪಿತು. ಬಹಳ ತಡವಾಗಿದ್ದರಿಂದ ಪ್ರಯಾಣಿಕರು ಅಸಮಾಧಾನ ಹೊರಹಾಕಿದರು.

ಮಾಜಿ ಗವರ್ನರ್ ಸ್ವರಾಜ್ ನಿಧನ

ದೆಹಲಿ: ಮಿಜೋರಾಂ ಮಾಜಿ ರಾಜ್ಯಪಾಲ ಸ್ವರಾಜ್ ಕೌಶಲ್ ಗುರುವಾರ 73ನೇ ವಯಸ್ಸಿನಲ್ಲಿ ನಿಧನರಾದರು. ಕೇಂದ್ರದ ಮಾಜಿ ಸಚಿವೆ, ಬಿಜೆಪಿ ಹಿರಿಯ ನಾಯಕಿ ದಿ.ಸುಷ್ಮಾ ಸ್ವರಾಜ್ ಅವರ ಪತಿ ಸ್ವರಾಜ್ ಕೌಶಲ್ ಹಿರಿಯ ವಕೀಲರೂ ಆಗಿದ್ದರು. ಪುತ್ರಿ, ಬಿಜೆಪಿ

ಸಂಸದೆ ಬಾನ್ಸುರಿ ಸ್ವರಾಜ್, ತಂದೆ- ತಾಯಿ ಇಬ್ಬರನ್ನೂ ಕಳೆದುಕೊಂಡಿದ್ದಾರೆ. ಕೌಶಲ್ ಅವರಿಗೆ ಗುರುವಾರ ಮಧ್ಯಾಹ್ನ ಎದೆ ನೋವು ಕಾಣಿಸಿ ಕೊಂಡಿತು. ತಕ್ಷಣವೇ ಅವರನ್ನು ದೆಹಲಿಯ 'ಏಮ್ಸ್' ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ವೈದ್ಯರು, ಕೌಶಲ್ ಮಾರ್ಗಮಧ್ಯೆಯೇ ಕೊನೆಯುಸಿರೆಳೆದಿದ್ದಾರೆ ಎಂದು ತಿಳಿಸಿದರು. ಅಂತಿಮ ದರ್ಶನದ ನಂತರ ಲೋಧಿ ರಸ್ತೆಯ ಸ್ಮಶಾನದಲ್ಲಿ ಕೌಶಲ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ಮಾಡಲಾಗುವುದು ಎಂದು ಕುಟುಂಬದ ಆಪ್ತರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ತಂದೆಯ ಹಠಾತ್ ನಿರ್ಗಮನದಿಂದ ಆಘಾತ ಕ್ಕೊಳಗಾಗಿರುವ ಪುತ್ರಿ ಬಾನ್ಸುರಿ ಸ್ವರಾಜ್, 'ಅಪ್ಪಾ, ನಿಮ್ಮ ಅಗಲಿಕೆ ಅತ್ಯಂತ ನೋವುಂಟು ಮಾಡಿದೆ. ನೀವೀಗ ಅಮ್ಮನನ್ನು ಸೇರಿಕೊಂಡಿದ್ದೀರಿ. ನಿಮ್ಮ ಮಗಳಾಗುವುದು ನನ್ನ ಜೀವನದ ಅತ್ಯಂತ ದೊಡ್ಡ ಹೆಮ್ಮೆಯಾಗಿತ್ತು. ನಿಮ್ಮ ಪರಂಪರೆ, ಮೌಲ್ಯಗಳು ಮತ್ತು ಆಶೀರ್ವಾದ ನನ್ನ ಮುಂದಿನ ಜೀವನಕ್ಕೆ ಆಧಾರವಾಗಿರುತ್ತವೆ. ತಂದೆಯ ವಾತ್ಸಲ್ಯ, ಶಿಸ್ತು, ಸರಳತೆ, ದೇಶಭಕ್ತಿ ಮತ್ತು ಅಪಾರ ತಾಳ್ಮೆ ತನ್ನ ಜೀವನದ ಬೆಳಕಾಗಿದ್ದವು. ಅವು ಶಾಶ್ವತವಾಗಿರುತ್ತವೆ' ಎಂದು 'ಎಕ್ಸ್' ಸಂದೇಶದಲ್ಲಿ ಭಾವನಾತ್ಮಕವಾಗಿ ಬರೆದಿದ್ದಾರೆ.

ಇದು ಆರೋಗ್ಯ ಸೆಸ್, ತೆರಿಗೆ ಅಲ್ಲ: ಸಚಿವೆ

ದೆಹಲಿ: ಜೀವನಾವಶ್ಯಕ ವಸ್ತುಗಳ ಮೇಲೆ ಪ್ರಸ್ತಾವಿತ 'ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್' ವಿಧಿಸಲಾಗುವುದಿಲ್ಲ. ಆದರೆ ಪಾನ್ ಮಸಾಲಾ ಘಟಕಗಳ ಉತ್ಪಾದನಾ ಸಾಮರ್ಥ್ಯದ ಮೇಲೆ ವಿಧಿಸಲಾಗುವುದು ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಲೋಕಸಭೆಗೆ ಸ್ಪಷ್ಟಪಡಿಸಿದರು. ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್-2025 ವಿಧೇಯಕದ ಮೇಲೆ ಲೋಕಸಭೆಯಲ್ಲಿ ಚರ್ಚೆಗೆ ಉತ್ತರಿಸಿದ ಸಚಿವೆ, ಸೆಸ್‌ನಿಂದ ಬರುವ ಆದಾಯವನ್ನು ನಿರ್ದಿಷ್ಟ ಆರೋಗ್ಯ ಯೋಜನೆಗಳಡಿ ರಾಜ್ಯಗಳಿಗೆ ಹಂಚಲಾಗುವುದು ಎಂದು ವಿವರಿಸಿದರು. ಇದು ತೆರಿಗೆ ಅಲ್ಲ, 'ಸೆಸ್'. ಇದನ್ನು ಜನರ ಆರೋಗ್ಯಕ್ಕೆ ಅಪಾಯ ತರುವ ವಸ್ತುಗಳ ಮೇಲೆ ವಿಧಿಸುವುದಷ್ಟೇ ವಿಧೇಯಕದ ಮುಖ್ಯ ಉದ್ದೇಶವಾಗಿದೆ. ಈ ಸೆಸ್ ವಿಧಿಸುವುದರಿಂದ ಜಿಎಸ್‌ಟಿ ಮೂಲಕ ಸಂಗ್ರಹವಾಗುವ ಮೊತ್ತದ ಯಾವುದೇ ಪರಿಣಾಮವಾಗದು. ಪ್ರಸ್ತುತ ಪಾನ್ ಮಸಾಲಾ, ತಂಬಾಕು, ಮತ್ತಿತರ ಆರೋಗ್ಯ ಹಾನಿ ಮಾಡುವ ಉತ್ಪನ್ನಗಳ ಮೇಲೆ ಶೇ.28ರಷ್ಟು ಜಿಎಸ್‌ಟಿ ಮತ್ತು ವಿವಿಧ ದರಗಳಲ್ಲಿ ಪರಿಹಾರ ಸ್ವರೂಪದ ಸೆಸ್ ವಿಧಿಸಲಾಗುತ್ತಿದೆ. ಇದರಿಂದಾಗಿ ಜಿಎಸ್‌ಟಿ ಪ್ರಮಾಣ ಶೇ. 40ಕ್ಕೆ ಏರಿಕೆ ಆಗುತ್ತದೆ ಎಂದೂ ಸಚಿವೆ ವಿವರಿಸಿದರು.

ಅಮೆರಿಕದ ಯುದ್ಧ ವಿಮಾನ ಪತನ-ಭಸ್ಮ

ಕ್ಯಾಲಿಫೋರ್ನಿಯ: ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ವಾಯುಪಡೆಯ ಯುದ್ಧ ವಿಮಾನ ಪತನವಾಗಿದೆ. ದಕ್ಷಿಣ ಕ್ಯಾಲಿಫೋರ್ನಿಯ ಮರುಭೂಮಿಯಲ್ಲಿ ಅಮೆರಿಕದ ವಾಯುಪಡೆಯ ಶಕ್ತಿಶಾಲಿ 'ಥಂಡರ್‌ಬರ್ಡ್ ಎಫ್-16ಸಿ ಫೈಟಿಂಗ್ ಫಾಲ್ಕನ್' ವಿಮಾನ ಬುಧವಾರ ತರಬೇತಿ ಹಾರಾಟದ ವೇಳೆ ಹಠಾತ್ ಪತನವಾಗಿದೆ. ಬಳಿಕ ಬೆಂಕಿ ಹೊತ್ತಿಕೊಂಡು ಪೂರ್ಣ ಭಸ್ಮವಾಗಿದೆ. ಸುದೈವವಶಾತ್ ಯುದ್ಧ ವಿಮಾನದ ಪೈಲಟ್ ಸಕಾಲದಲ್ಲಿ ವಿಮಾನದಿಂದ ಆಸನ ಸಮೇತ 'ಎಜೆಕ್ಟ್' ಆಗಿದ್ದರಿಂದ(ಹೊರಚಿಮ್ಮಿದ್ದರಿಂದ) ಜೀವಂತ ಪಾರಾಗಿದ್ದಾರೆ. ಆದರೆ, ಅವರಿಗೆ ಸುಟ್ಟಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ವಿಮಾನ ಪತನದ ಕುರಿತ ಅಮೆರಿಕದ ವಾಯುಪಡೆ ಯಾವುದೇ ವಿವರ ಬಹಿರಂಗಪಡಿಸಿಲ್ಲ. ಆದರೆ, ವಿಮಾನ ಪತನದ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ.

ಹೊಸ ಸುರಕ್ಷತಾ ನಿಯಮ ಅನುಷ್ಠಾನದ ಕಷ್ಟ, ಪೈಲಟ್-ಸಿಬ್ಬಂದಿ ಕೊರತೆ: ಸಮಸ್ಯೆಗಳ ಸುಳಿಯಲ್ಲಿ ಇಂಡಿಗೊ

ಸಿಟ್ಟಿಗೆದ್ದ ಪ್ರಯಾಣಿಕರಿಂದ ಇಂಡಿಗೋ

3 ದಿನಗಳಾದರೂ ಬಗೆಹರಿಯದ ಸಿಬ್ಬಂದಿ ಸಮಸ್ಯೆ | ಗುರುವಾರವೂ 300ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದು | ಬೆಂಗೂರಿನಿಂದಲೂ 73 ವಿಮಾನ ಹಾರಾಟ ರದ್ದು | 3 ದಿನಗಳಿಂದ ಒಟ್ಟು 750ಕ್ಕೂ ಅಧಿಕ ವಿಮಾನ ಸಂಚರಿಸಿಲ್ಲ | 48 ಗಂಟೆಗಳಲ್ಲಿ ಪರಿಸ್ಥಿತಿ ಸುಧಾರಣೆ: ಇಂಡಿಗೋ ಭರವಸೆ | ಡಿಜಿಸಿಎ ಪ್ರಕಟಿಸಿದ ಸೇವಾವಧಿ ನಿಯಮಗಳಿಂದ ಸಮಸ್ಯೆ | ಉನ್ನತ ಮಟ್ಟದ ಸಭೆ: ಅವ್ಯವಸ್ಥೆಗೆ ಕಾರಣ ಕೇಳಿದ ಡಿಜಿಸಿಎ

ದೆಹಲಿ: ದೇಶದ ವಿಮಾನಯಾನ ಕ್ಷೇತ್ರದಲ್ಲಿ ಶೇ.65ರಷ್ಟು ಮಾರುಕಟ್ಟೆ ಪಾಲು ಹೊಂದಿರುವ ಭಾರತದ ಅತಿದೊಡ್ಡ ವಿಮಾನಯಾನ ಸಂಸ್ಥೆ 'ಇಂಡಿಗೊ' ಈಗ ಸರಣಿಯೋಪಾದಿ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡು ಹೊರಬರಲಾಗದೇ, ತಕ್ಷಣಕ್ಕೆ ಪರಿಹಾರವನ್ನೂ ಕಾಣಲಾಗದೇ ಬಹಳ ಪರಿತಪಿಸುತ್ತಿದೆ. ಪರಿಣಾಮವಾಗಿ ಪ್ರಯಾಣಿಕರ ವಿಶ್ವಾಸವನ್ನೇ ಕಳೆದುಕೊಳ್ಳುತ್ತಿದೆ.

ಮೂರು ದಿನಗಳ ಹಿಂದೆ ಆರಂಭವಾದ ಸಮಸ್ಯೆಗೆ ಗುರುವಾರವೂ ಪರಿಹಾರ ಕಂಡುಕೊಳ್ಳಲಾಗದೇ ಇದ್ದುದರಿಂದ 'ಇಂಡಿಗೊ' ಪ್ರಯಾಣಿಕರ ವಿಶ್ವಾಸವನ್ನು ಕಳೆದುಕೊಂಡಿದೆ. ದೆಹಲಿ, ಮುಂಬೈ, ಬೆಂಗಳೂರು ಸೇರಿ ವಿವಿಧ ವಿಮಾನ ನಿಲ್ದಾಣಗಳಲ್ಲಿ ಇಂಡಿಗೊ ವಿಮಾನದಲ್ಲಿ ಪ್ರಯಾಣಿಸಲೆಂದೇ ಗಂಟೆ-ದಿನಗಟ್ಟಲೆ ಕಾದು ಬಸವಳಿದ ದೇಶಾದ್ಯಂತದ ಪ್ರಯಾಣಿಕರು ಆಕ್ರೋಶಭರಿತರಾಗಿದ್ದು, ಇಂಡಿಗೊ ಸಂಸ್ಥೆಗೆ, ಅದರ ನಿರ್ವಹಣೆಗಾರರಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ವಿಮಾನದಲ್ಲಿನ ತಾಂತ್ರಿಕ ದೋಷ ಹಾಗೂ ಪೈಲಟ್ ಮತ್ತು ಇತರೆ ಸಿಬ್ಬಂದಿಗಳ ದಿಢೀರ್ ಗೈರು ಮೊದಲಾದ ಸಮಸ್ಯೆಗಳಿಂದಾಗಿ ಗುರುವಾರವೂ ದೇಶಾದ್ಯಂತ 300ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದಾಗಿವೆ. ಇಂಡಿಗೊ ವಿಮಾನಗಳ ಸಂಚಾರ ಸ್ಥಗಿತ, ವಿಳಂಬ ಸಂಚಾರದಿಂದಾಗಿ ದೇಶಾದ್ಯಂತ ಸಾವಿರಾರು ಪ್ರಯಾಣಿಕರಿಗೆ ತೊಂದರೆ ಉಂಟಾಗಿದೆ. ಇಂಡಿಗೊ ವಿಮಾನಗಳಲ್ಲಿ ಟಿಕೆಟ್ ಕಾಯ್ದಿರಿಸಿದ್ದ ಸಾವಿರಾರು ಪ್ರಯಾಣಿಕರು ಭಾರೀ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ದಯಮಾಡಿ ಕ್ಷಮಿಸಿ: ತಾಂತ್ರಿಕ ದೋಷಗಳು, ಚಳಿಗಾಲದ ವೇಳಾಪಟ್ಟಿಯಲ್ಲಿನ ಹೊಂದಾಣಿಕೆ ಗೊಂದಲ, ದಕ್ಷಿಣ ಭಾರತದಲ್ಲಿನ ಪ್ರತಿಕೂಲ ಹವಾಮಾನ ಪರಿಸ್ಥಿತಿ, ವಿಮಾನ ನಿಲ್ದಾಣದಲ್ಲಿ ಸಂಚಾರ ದಟ್ಟಣೆ ಹಾಗೂ 'ಡಿಜಿಸಿಎ'ಯಿಂದ ಪೈಲಟ್ ಮತ್ತು ಸಿಬ್ಬಂದಿಗಳ ನವೀಕೃತ ರೋಸ್ಟರಿಂಗ್ ನಿಯಮ ಅನುಷ್ಠಾನದಲ್ಲಿ ಸಮಸ್ಯೆ ಆಗಿರುವುದು ಸೇರಿದಂತೆ ಹಲವು ಅನಿರೀಕ್ಷಿತ ಘಟನೆಗಳಿಂದಾಗಿ ಊಹಿಸದೇ ಇರುವಂತಹ ದೊಡ್ಡ ಮಟ್ಟದ ಸವಾಲುಗಳು ಎದುರಾಗಿವೆ. ಹಾಗಾಗಿ ವಿಮಾನಗಳ ಹಾರಾಟದಲ್ಲಿ ಸಮಸ್ಯೆಯಾಗಿದೆ. ಈ ಅನಾನುಕೂಲಕ್ಕಾಗಿ ಪ್ರಯಾಣಿಕರಲ್ಲಿ ಕ್ಷಮೆ ಯಾಚಿಸುತ್ತೇವೆ ಎಂದು ಇಂಡಿಗೊ ಪ್ರಕಟಣೆಯಲ್ಲಿ ತಿಳಿಸಿದೆ.

'2 ದಿನಗಳಿಂದ ನಮ್ಮ ವಿಮಾನಗಳ ಕಾರ್ಯಾಚರಣೆಗೆ ಅಡಚಣೆಯಾಗಿದೆ. ಅನಾನುಕೂಲಕ್ಕೆ ಪ್ರಾಮಾಣಿಕವಾಗಿ ಕ್ಷಮೆ ಯಾಚಿಸುತ್ತೇವೆ' ಎಂದು ಇಂಡಿಗೋ ವಕ್ತಾರ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಮುಂದಿನ 48 ಗಂಟೆಗಳಲ್ಲಿ ಕಾರ್ಯಾಚರಣೆ ಸಹಜವಾಗಿಸಲು ಪ್ರಯತ್ನಿಸುತ್ತಿದ್ದೇವೆ. ಆದರೆ ವಿಮಾನ ಹಾರಾಟ ರದ್ದತಿ ಸಮಸ್ಯೆ ಮುಂದುವರಿಯುವ ಸಾಧ್ಯತೆ ಇದೆ ಎಂದೂ ಹೇಳಿದ್ದಾರೆ.

ಹಲವು ಸಮಸ್ಯೆಗಳ ಕಾರಣ ಸಂಚಾರ ಆರಂಭಿಸಲಾಗದೇ ಸಾಲಾಗಿ ನಿಂತಿರುವ ಇಂಡಿಗೊ ವಿಮಾನಗಳು

ಷೇರುಮೌಲ್ಯ ಕುಸಿತ

ಈಗಿನ ಹಲವು ಸಮಸ್ಯೆಗಳಿಂದಾಗಿ ಪ್ರಯಾಣಿಕರ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವ ಇಂಡಿಗೊ ಕಂಪನಿ, ಇನ್ನೊಂದೆಡೆ, ದೇಶದ ಷೇರುಪೇಟೆಯಲ್ಲಿಯೂ ಪೆಟ್ಟು ತಿನ್ನುತ್ತಿದೆ. ಇಂಡಿಗೊ ಷೇರುಗಳ ಮೌಲ್ಯದಲ್ಲಿ ಗುರುವಾರ ಶೇ. 3.30ರಷ್ಟು ಕುಸಿತ ಕಂಡಿವೆ. ಗುರುವಾರದ ವಹಿವಾಟಿನಲ್ಲಿ ಷೇರು ಮೌಲ್ಯ 5407 ರು.ಗಳಲ್ಲಿ ವಹಿವಾಟು ನಡೆಸಿದವು.

ಶುಕ್ರವಾರವೂ ಸಂಚಾರ ಅಸಾಧ್ಯ

ದೇಶದ ವಿಮಾನ ಯಾನ ಸಂಸ್ಥೆಗಳು ಮೊದಲೇ ಪೈಲಟ್‌ಗಳ ಕೊರತೆ ಎದುರಿಸುತ್ತಿವೆ. ಅದರ ಮಧ್ಯೆ, ಇಂಡಿಗೊ ನವೆಂಬರ್‌ನಲ್ಲಿ ಪ್ರಕಟಿಸಿದ ಹೊಸದಾದ ಡ್ಯೂಟಿ ರೋಸ್ಟರ್ ನಿಯಮಗಳಿಗೆ ಪೈಲಟ್‌ಗಳು ಮತ್ತು ಸಿಬ್ಬಂದಿಗಳಿಂದ ವಿರೋಧ ವ್ಯಕ್ತವಾಗಿದೆ. ಪೈಲಟ್‌ಗಳು, ಇತರೆ ಸಿಬ್ಬಂದಿಗಳು ಹೊಸದಾದ ರೋಸ್ಟರಿಂಗ್ ನಿಯಮವನ್ನು ಪಾಲನೆ ಮಾಡದ ಕಾರಣ ಇಂಡಿಗೋ ವಿಮಾನದ ಹಾರಾಟದಲ್ಲಿ ಸಮಸ್ಯೆಯಾಗಿದೆ ಎಂದು ತಿಳಿದುಬಂದಿದೆ. ಪೈಲಟ್‌ಗಳು ಸೇರಿದಂತೆ ವಿವಿಧ ಸಿಬ್ಬಂದಿಗಳ ಕೆಲಸದ ವೇಳೆ ಮತ್ತಿತರ ನಿಯಮಗಳಿಗೆ ಸಂಬಂಧಿಸಿ ಹೊಸ ಕಾರ್ಯಸೂಚಿಯನ್ನು ನವೆಂಬರ್‌ನಲ್ಲಿ ಇಂಡಿಗೊ ಜಾರಿಗೆ ತಂದ ಬಳಿಕ ಈ ಸಮಸ್ಯೆ ಶುರುವಾಗಿದೆ. ಹೊಸ ಬಗೆಯ ಡ್ಯೂಟಿ ರೋಸ್ಟರಿಂಗ್ ಪಟ್ಟಿಗೆ ಹೊಂದಿಕೊಳ್ಳಲು ಸಿಬ್ಬಂದಿ ಸಿದ್ಧರಿಲ್ಲ ಎನ್ನಲಾಗಿದೆ. ಹೆಚ್ಚಿನವರು ರಜೆ ಹಾಕಿದ್ದರಿಂದ ಪೈಲಟ್ ಮತ್ತು ಇತರೆ ಸಿಬ್ಬಂದಿಗಳ ಸಂಖ್ಯೆಯಲ್ಲಿ ಭಾರೀ ಕೊರತೆ ಎದುರಾಗಿದೆ. ತಾಂತ್ರಿಕ ದೋಷಗಳು ಸೇರಿ 300ಕ್ಕೂ ಅಧಿಕ ಸಂಖ್ಯೆಯ ಇಂಡಿಗೊ ವಿಮಾನಗಳ ಹಾರಾಟ ಸ್ಥಗಿತಗೊಳ್ಳುವಂತೆ ಮಾಡಿದೆ. ಇಂಡಿಗೊದ ಈ ಸಮಸ್ಯೆ ಮತ್ತಷ್ಟು ಮುಂದುವರಿಯಲಿದ್ದು, ಶುಕ್ರವಾರವೂ ವಿಮಾನ ಹಾರಾಟ ರದ್ದಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ದೆಹಲಿ ವಿಮಾನ ನಿಲ್ದಾಣದಲ್ಲಿ ಗಂಟೆಗಟ್ಟಲೆ ಕಾಯುತ್ತಾ ಕುಳಿತಿದ್ದ ಸಾವಿರಾರು ಪ್ರಯಾಣಿಕರು

ಇಂಡಿಗೊಗೆ ನಾಚಿಕೆ ಆಗಬೇಕು, ಸಂಸ್ಥೆಗೆ ಬೀಗ ಹಾಕಿ: ಆಕ್ರೋಶ

'ಇಂಡಿಗೊ' ಸಂಸ್ಥೆಗೆ ನಾಚಿಕೆ ಆಗಬೇಕು ಎಂದು ಒಬ್ಬ ಪ್ರಯಾಣಿಕ 'ಎಕ್ಸ್' ಸಂದೇಶದಲ್ಲಿ ಕಿಡಿಕಾರಿದ್ದಾರೆ. 'ಸ್ಪಷ್ಟತೆ ಇಲ್ಲದೇ ಪ್ರಯಾಣಿಕರನ್ನು ಗಂಟೆಗಟ್ಟಲೆ ಕಾಯಿಸುವುದು ಅಮಾನವೀಯ' ಎಂದು ಮತ್ತೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಡಿಜಿಎಸಿಎ' ಕೂಡಾ ಇಂಡಿಗೊ ಸಂಸ್ಥೆಗೆ ನೋಟಿಸ್ ಜಾರಿ ಮಾಡಿದೆ.

ದೆಹಲಿ, ಮುಂಬೈ, ಬೆಂಗಳೂರು, ಪುಣೆ ಸೇರಿದಂತೆ ದೇಶಾದ್ಯಂತದ ವಿಮಾನ ನಿಲ್ದಾಣಗಳಿಂದ ಬುಧವಾರ ಸಂಚಾರ ಆರಂಭಿಸಬೇಕಿದ್ದ 250ಕ್ಕೂ ಹೆಚ್ಚು ವಿಮಾನಗಳು ಹಾರಾಟ ನಡೆಸಲಿಲ್ಲ. ಆಗಲೇ ಸಾವಿರಾರು ಪ್ರಯಾಣಿಕರು ಬೇಸರಗೊಂಡಿದ್ದರು. ಗುರುವಾರವೂ 300 ವಿಮಾನಗಳ ಹಾರಾಟ ರದ್ದು ಎಂಬ ಸುದ್ದಿ ಕೇಳಿ ಪ್ರಯಾಣಿಕರ ತಾಳ್ಮೆಯ ಕಟ್ಟೆ ಒಡೆದು ಆಕ್ರೋಶ ಹೊರಬಿದ್ದಿದೆ. ಸಾವಿರಾರು ಪ್ರಯಾಣಿಕರು ಇಂಡಿಗೊ ಕಂಪನಿಗೆ ಶಾಪ ಹಾಕಿದ್ದಾರೆ. 'ನಿರ್ವಹಣೆ ಮಾಡಲು ಆಗದೇ ಇದ್ದರೆ ಕಂಪನಿಗೆ ಬೀಗ ಹಾಕಿರಿ' ಎಂದು ಗುಡುಗಿದ್ದಾರೆ.

ಬೆಂಗಳೂರು, ದೆಹಲಿ, ಮುಂಬೈ ಸೇರಿದಂತೆ ದೇಶದ ವಿವಿಧೆಡೆಯ ವಿಮಾನ ನಿಲ್ದಾಣಗಳಲ್ಲಿ ಇಂಡಿಗೊ ವಿಮಾನ ಹಾರಾಟ ತಾಸುಗಟ್ಟಲೆ ವಿಳಂಬವಾದರೂ ಕಾಯುತ್ತಾ ಕುಳಿತಿದ್ದ ಪ್ರಯಾಣಿಕರು, ಹಲವು ತಾಸುಗಳ ಬಳಿಕ 'ಇಂಡಿಗೊ ವಿಮಾನಗಳ ಸಂಚಾರ ರದ್ದಾಗಿದೆ' ಎಂಬ ಪ್ರಕಟಣೆ ಹೊರಬಿದ್ದ ಬಳಿಕ ರೊಚ್ಚಿಗೆದ್ದರು. ಇಂಡಿಗೊದ ಕೌಂಟರ್‌ಗಳ ಮುಂದೆ ನೆರೆದು ಸಿಬ್ಬಂದಿಗಳ ಮೇಲೆ ಕೂಗಾಡಿದರು. ಪ್ರಯಾಣಿಕರು ಆಕ್ರೋಶ ಹೊರಹಾಕುತ್ತಿದ್ದ ದೃಶ್ಯಗಳ ವಿಡಿಯೊಗಳು ಜಾಲತಾಣದಲ್ಲಿ ವೈರಲ್ ಆಗಿವೆ. ಇಂಡಿಗೊ ವಿಮಾನಯಾನ ಸಂಸ್ಥೆ ಪ್ರಯಾಣಿಕರ ವಿಶ್ವಾಸ ಕಳೆದುಕೊಂಡು ಭಾರೀ ಸಂಕಷ್ಟಕ್ಕೀಡಾಗಿದೆ.

ಮುಂಬೈ ವಿಮಾನ ನಿಲ್ದಾಣದಲ್ಲಿ ಇಂಡಿಗೊ ಕೌಂಟರ್

ಮುಂಬೈ ವಿಮಾನ ನಿಲ್ದಾಣದಲ್ಲಿ ಇಂಡಿಗೊ ಕೌಂಟರ್ ಎದುರು ಪ್ರಯಾಣಿಕರ ಆಕ್ರೋಶ

ಮುಂದೆ ನೂರಾರು ಪ್ರಯಾಣಿಕರು ಭಾರೀ ಪ್ರತಿಭಟನೆ ನಡೆಸಿದ್ದಾರೆ. 'ಮುಂದಿನ ವಿಮಾನ ಹಾರಾಟ ಯಾವಾಗ ಎಂದು ಹೇಳಲು ಒಬ್ಬ ಉನ್ನತ ಅಧಿಕಾರಿಯೂ ಪತ್ತೆ ಇಲ್ಲ, ಕಂಪನಿ ಕಡೆಯಿಂದಲೂ ಯಾವುದೇ ಸ್ಪಷ್ಟತೆ ಇಲ್ಲ' ಎಂದು ಒಬ್ಬ ಪ್ರಯಾಣಿಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ವಿರಮಿಸಲೂ ಆಸನಗಳ ಕೊರತೆ ಎದುರಾಗಿದೆ. ನೂರಾರು ಸಂಖ್ಯೆಯ ಪ್ರಯಾಣಿಕರು ನೆಲದ ಮೇಲೇ ಕುಳಿತು ಇಂಡಿಗೊ ವಿಮಾನ ಹಾರಾಟದ ಘೋಷಣೆಗಾಗಿ ಕಾಯುತ್ತಿದ್ದಾರೆ. ಈ ದೃಶ್ಯಗಳೂ ವೈರಲ್ ಆಗಿವೆ.

ಪುಣೆಯಿಂದ ದೆಹಲಿಗೆ ಹೊರಟ ಇಂಡಿಗೊದ ಒಂದು ವಿಮಾನ ಮೂರೂವರೆಗೆ ಗಂಟೆ ವಿಳಂಬವಾಗಿ ಸಂಚಾರ ನಡೆಸಿದೆ. ಇಂಡಿಗೊ ವಿಮಾನ ಯಾತ್ರಿಕರಲ್ಲಿ ಕೆಲವರು 12 ಗಂಟೆಗೂ ಹೆಚ್ಚು ಕಾಲ ಕಾದು ಕುಳಿತು ಬಸವಳಿದಿದ್ದಾರೆ ಎಂಬ ದೂರುಗಳು ಬಂದಿವೆ.

ಸೇವಾವಧಿ, ಸುರಕ್ಷತೆ ನಿಯಮಗಳ ಬದಲಾವಣೆಯೇ ಸಮಸ್ಯೆಗೆ ಕಾರಣ

ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಹಾಗೂ ಪೈಲಟ್‌ಗಳು ಮತ್ತು ವಿಮಾನದ ಸಿಬ್ಬಂದಿಗಳು ಹಿತದೃಷ್ಟಿಯಿಂದ ವಿಮಾನಗಳ ಸಂಚಾರ ನಿಯಮಗಳಲ್ಲಿ, ಸಿಬ್ಬಂದಿಗಳ ಸೇವೆಯ ಅವಧಿ ಮತ್ತು ವಿಶ್ರಾಂತಿ ವಿಚಾರದಲ್ಲಿ ನಿಯಮಗಳಲ್ಲಿ ಮಹತ್ವದ ಬದಲಾವಣೆ ಮಾಡಿ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ ಹೊಸದಾದ ನಿಯಮಗಳ ಪಟ್ಟಿಯನ್ನು ಜನವರಿಯಲ್ಲಿ ಪ್ರಕಟಿಸಿತ್ತು. ವಿಮಾನಯಾನ ಸಂಸ್ಥೆಗಳು ಹಂತ ಹಂತವಾಗಿ ಅದನ್ನು ಜಾರಿಗೆ ತರಲು ನಿರ್ಧರಿಸಿದ್ದವು. ಈ ಹೊಸ ರೋಸ್ಟರ್ ಪಟ್ಟಿಯಿಂದ ಈಗಾಗಲೇ ಪೈಲಟ್‌ಗಳು ಮತ್ತು ಸಿಬ್ಬಂದಿಗಳ ಕೊರತೆ ಎದುರಿಸುತ್ತಿರುವ ಇಂಡಿಗೊ ಸಂಸ್ಥೆಗೆ ಸಿಬ್ಬಂದಿಗಳನ್ನು ಹೊಂದಿಸಿಕೊಳ್ಳುವುದೇ ಕಷ್ಟವಾಗಿದೆ.

ಈ ಮೊದಲು ಪೈಲಟ್, ಕ್ಯಾಬಿನ್ ಸಿಬ್ಬಂದಿ ದಿನದಲ್ಲಿ 10-13 ಗಂಟೆ ಕೆಲಸ ಮಾಡಬಹುದಿತ್ತು. ಹೊಸ ರೋಸ್ಟರಿಂಗ್ ನಿಯಮ ಪ್ರಕಾರ ದಿನದಲ್ಲಿ ಗರಿಷ್ಠ 10 ಗಂಟೆಗೆ ಮಿತಿ ವಿಧಿಸಲಾಗಿದೆ. ವಾರದಲ್ಲಿ ಕನಿಷ್ಠ 36 ಗಂಟೆ ವಿಶ್ರಾಂತಿ ನೀಡಲಾಗುತ್ತಿತ್ತು. ಈಗ ಕನಿಷ್ಠ 48 ಗಂಟೆ ವಿಶ್ರಾಂತಿ ಪಡೆಯುವುದನ್ನು 'ಡಿಜಿಸಿಎ' ಕಡ್ಡಾಯಗೊಳಿಸಿದೆ. ರಾತ್ರಿ ಪಾಳಿ ಬಳಿಕ 10 ಗಂಟೆ ವಿಶ್ರಾಂತಿ ಪಡೆಯಬಹುದಿತ್ತು. ಈಗ 12 ಗಂಟೆಗೆ ವಿಸ್ತರಿಸಲಾಗಿದೆ. ಮೊದಲು ರಾತ್ರಿ 6 ಬಾರಿ ಲ್ಯಾಂಡಿಂಗ್ ಮಾಡಲು ಅವಕಾಶವಿತ್ತು. ಈಗ 2 ಬಾರಿಗಷ್ಟೇ ಅವಕಾಶ. ಪೈಲಟ್‌ಗಳು ವಾರ್ಷಿಕ 1,000 ಗಂಟೆಗಿಂತ ಹೆಚ್ಚು ಹಾರಾಟ ನಡೆಸಬಾರದು. ವಿಮಾನಯಾನ ಸಂಸ್ಥೆ ಕೂಡಾ ಪೈಲಟ್‌ಗಳು ಮತ್ತು ಕ್ಯಾಬಿನ್ ಸಿಬ್ಬಂದಿಯಿಂದ ನಿಗದಿಗಿಂತ ಹೆಚ್ಚು ಅವಧಿ ಕೆಲಸ ಮಾಡಿಸುವಂತಿಲ್ಲ. ದೇಶದ ವಿಮಾನಯಾನ ಮಾರುಕಟ್ಟೆಯಲ್ಲಿ ಏರ್ ಇಂಡಿಯ ಶೇ.27 ಪಾಲು ಹೊಂದಿದೆ. ಆದರೆ, ಶೇ.64ರಷ್ಟು ದೊಡ್ಡ ಪಾಲು ಹೊಂದಿರುವ, ನಿತ್ಯ 2,200ಕ್ಕೂ ಹೆಚ್ಚು ದೇಶೀಯ, ಅಂತರರಾಷ್ಟ್ರೀಯ ವಿಮಾನಗಳನ್ನು ನಿರ್ವಹಿಸುವ ಹಾಗೂ ರಾತ್ರಿ ಸಮಯದಲ್ಲೇ ಹೆಚ್ಚಿನ ವಿಮಾನಗಳ ಹಾರಾಟ ನಡೆಸುವ ಇಂಡಿಗೊ ವಿಮಾನಯಾನ ಸಂಸ್ಥೆಗೆ ಈ ಹೊಸ ರೋಸ್ಟರ್ ಪದ್ಧತಿ ಸಮಸ್ಯೆ ತಂದಿಟ್ಟಿದೆ ಎನ್ನಲಾಗಿದೆ. ರಾತ್ರಿ ವಿಮಾನ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಕಠಿಣ ನಿಯಮ ಜಾರಿ ಮಾಡಿದ್ದು ಇಂಡಿಗೋಗೆ ಬಹಳ ಹೊಡೆತ ನೀಡಿದೆ.

ಮೋದಿ-ಪುಟಿನ್ ಸ್ನೇಹ 25 ವರ್ಷ ಹಳೆಯದು

ದೆಹಲಿ: ಅಮೆರಿಕ ಮತ್ತು ಯೂರೋಪ್ ದೇಶಗಳು ಆರ್ಥಿಕ ದಿಗ್ಬಂಧನ ಕ್ರಮ ಜರುಗಿಸಿದಾಗ ವಿಶ್ವದಲ್ಲಿ ಏಕಾಂಗಿ ಭಾವ ಅನುಭವಿಸುತ್ತಿದ್ದ ರಷ್ಯಾ ದೇಶ ಮತ್ತು ಅದರ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಆರ್ಥಿಕವಾಗಿ, ಭಾವನಾತ್ಮಕವಾಗಿ ಚೈತನ್ಯ ತುಂಬಿದ್ದು ಭಾರತ ಮತ್ತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ.

ಅಮೆರಿಕದ ನೇರ ಬೆದರಿಕೆ, ಪ್ರತಿಸುಂಕದ ಒತ್ತಡಗಳು ಇದ್ದರೂ ಮಣಿಯದ ಭಾರತ, ರಷ್ಯಾದಿಂದಲೇ ಕಚ್ಚಾತೈಲ ಖರೀದಿ ಮುಂದುವರಿಸಿತು. ಅಲ್ಲದೇ, ಪ್ರಧಾನಿ ಮೋದಿ ಅವರೂ ಆಗ್ಗಾಗ್ಗೆ ಪುಟಿನ್ ಅವರಿಗೆ ಕರೆ ಮಾಡಿಡಿ ಬೆಂಬಲ ಸೂಚಿಸಿದರು. ಆ ಮಟ್ಟಿಗೆ ರಷ್ಯಾ ಮತ್ತು ಭಾರತದ ಸ್ನೇಹ, ಬದ್ಧತೆಯನ್ನು ವಿಶ್ವದೆದುರು ಪ್ರದರ್ಶಿಸಿದರು.

ಚೀನಾದ ಟಿಯಾನ್‌ಜಿನ್‌ನಲ್ಲಿ 'ಎಸ್‌ಸಿಒ' ಶೃಂಗಸಭೆ ವೇಳೆಯಲ್ಲೂ ಪ್ರಧಾನಿ ಮೋದಿ ಮತ್ತು ಪುಟಿನ್ ನಡುವಿನ ಸ್ನೇಹದ ಪರಾಕಾಷ್ಠೆಯ ಪ್ರದರ್ಶನವಾಯಿತು. ಮೋದಿ ಅವರಿಗಾಗಿ 10 ನಿಮಿಷಗಳ ಕಾಲ ಕಾದು ತಮ್ಮದೇ ಕಾರಿನಲ್ಲಿ ಪುಟಿನ್ ಕರೆದೊಯ್ದಿದ್ದು, ಕಾರಿನಲ್ಲೇ 45 ನಿಮಿಷ ಕುಳಿತು ಮಾತನಾಡಿದ್ದು, ವಿಶ್ವದ ಗಮನ ಸೆಳೆದಿತ್ತು.

ಪುಟಿನ್-ಮೋದಿ ನಡುವಿನ ಈ ಸ್ನೇಹ-ಬಾಂಧವ್ಯ ಇಂದಿನದೇನಲ್ಲ. ಈ ಸ್ನೇಹ ಮೋದಿ ಅವರು 2014ರಲ್ಲಿ ಪ್ರಧಾನಿ ಹುದ್ದೆಗೇರಿದ ಬಳಿಕ ಶುರುವಾಗಿದ್ದಲ್ಲ. ಈ ಇಬ್ಬರೂ ವಿಶ್ವ ಮಟ್ಟದ ದಿಗ್ಗಜರ ಗೆಳೆತನಕ್ಕೆ 25ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಕಾಲದಿಂದಲೇ ಪುಟಿನ್ ಜತೆಗೆ ಉತ್ತಮ ಬಾಂಧವ್ಯ ಹೊಂದಿದ್ದರು. 25 ವರ್ಷಗಳ ಹಿಂದೆ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿ ಅವರ ಜತೆಗೆ ಗುಜರಾತ್ ಸಿಎಂ ಮೋದಿ ಮಾಸ್ಕೊಗೆ ಭೇಟಿ ನೀಡಿದ್ದರು. ಆಗಿನಿಂದಲೇ ಪುಟಿನ್-ಮೋದಿ ಸ್ನೇಹವಿದೆ. ಅಟಲ್, ಪುಟಿನ್, ಮೋದಿ ಜತೆಗಿದ್ದ 25 ವರ್ಷ ಹಿಂದಿನ ಫೋಟೊ ಈಗ ಮತ್ತೆ ವೈರಲ್ ಆಗಿದೆ.

ಮಾಸ್ಕೊದಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ವಿದೇಶಾಂಗ ಸಚಿವ ಜಸ್ವಂತ್ ಸಿಂಗ್, ರಷ್ಯಾ ಅಧ್ಯಕ್ಷ ಪುಟಿನ್ ಜತೆ ಗುಜರಾತ್ ಸಿಎಂ ಮೋದಿ.

ರಸ್ತೆ ಬದಿಯಿದ್ದ ಟ್ರಕ್‌ಗೆ ಕಾರು ಡಿಕ್ಕಿ: 4 ವೈದ್ಯ ವಿದ್ಯಾರ್ಥಿ ಸಾವು

ಲಖನೌ: ಉತ್ತರ ಪ್ರದೇಶ ರಾಜ್ಯದ ಅಮ್ರೋಹಾ ಜಿಲ್ಲೆಯಲ್ಲಿ ರಾಜಬ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಸ್ತೆ ಬದಿ ನಿಲುಗಡೆಯಾಗಿದ್ದ ಸರಕು ಸಾಗಣೆ ಟ್ರಕ್‌ಗೆ ಅತಿ ವೇಗವಾಗಿ ಬಂದ ಕಾರು ನೇರ ಡಿಕ್ಕಿ ಹೊಡೆದಿದ್ದರಿಂದ ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದ, ಅದರಲ್ಲಿದ್ದ ನಾಲ್ವರು ಎಂಬಿಬಿಎಸ್ ವಿದ್ಯಾರ್ಥಿಗಳು ದುರ್ಮರಣಕ್ಕೀಡಾದರು. ನಾಲ್ವರೂ ವಿದ್ಯಾರ್ಥಿಗಳು ಮೀರತ್‌ನಿಂದ ಗಾಜಿಯಾಬಾದ್‌ಗೆ ತೆರಳುತ್ತಿದ್ದರು.

ರಾಜಬ್‌ಪುರ ಠಾಣೆ ವ್ಯಾಪ್ತಿಯ ಪ್ರದೇಶದಲ್ಲಿ ಹಾದುಹೋಗಿರುವ ಫ್ಲೈಓವರ್‌ಬಳಿ ಬುಧವಾರ ರಾತ್ರಿ 10 ಗಂಟೆಯಲ್ಲಿ ಅತ್ಯಂತ ವೇಗವಾಗಿ ಸಾಗಿ ಬಂದ ಕಾರು, ಟ್ರಕ್‌ಗೆ ಡಿಕ್ಕಿ ಹೊಡೆಯಿತು. ಕಾರು ನುಗ್ಗಿ ಬಂದು ಟ್ರಕ್‌ಗೆ ಡಿಕ್ಕಿ ಹೊಡೆದಾಗ ಸ್ಥಳದಲ್ಲೇ ಇದ್ದ ಟ್ರಕ್ ಚಾಲಕ, ಅಪಘಾತದ ತೀವ್ರತೆ ಕಂಡು ಹೆದರಿ ಸ್ಥಳದಿಂದ ಪರಾರಿಯಾಗಿದ್ದಾನೆ.

ಅಪಘಾತದ ತೀವ್ರತೆಗೆ ಅಪ್ಪಚ್ಚಿಯಾಗಿದ್ದ ಕಾರಿನಿಂದ ನಾಲ್ವರೂ ವೈದ್ಯ ವಿದ್ಯಾರ್ಥಿಗಳ

ಮೃತದೇಹವನ್ನು ಹೊರತೆಗೆಯುವುದೇ ಕಷ್ಟವಾಯಿತು. ಕಬ್ಬಿಣ ಕತ್ತರಿಸುವ ವಿದ್ಯುತ್ ಗರಗಸ ತರಿಸಿ ಕಾರಿನ ಭಾಗಗಳನ್ನು ಕತ್ತರಿಸಿದ ಬಳಿಕವಷ್ಟೇ ಮೃತದೇಹಗಳನ್ನು ಕಾರಿನಿಂದ ಹೊರತೆಗೆಯಲು ಸಾಧ್ಯವಾಯಿತು.

ಈ ಸಂದರ್ಭ ಮಾರ್ಗದಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಅಪಘಾತದ ಸುದ್ದಿ ತಿಳಿದು ಸ್ಥಳಕ್ಕೆ ದಾವಿಸಿದ ಪೊಲೀಸರು, ವಾಹನ ದಟ್ಟಣೆ ತೆರವುಗೊಳಿಸಿದರು. ಅಪಘಾತ ಸ್ಥಳದ ಮಹಜರ್ ನಡೆಸಿದರು.

ರಾತ್ರಿ ರಸ್ತೆ ಬದಿ ಟ್ರಕ್ ನಿಲುಗಡೆ ಆಗಿರುವುದಕ್ಕೆ ಹಳದಿ ದೀಪವನ್ನು ಚಾಲಕ ಬೆಳಗಿಸದೇ ಇದ್ದುದು ಕೂಡಾ ಅಪಘಾತಕ್ಕೆ ಕಾರಣವಾಗಿದೆ ಎಂದು ಪೊಲೀಸರು ಅಭಿಪ್ರಾಯಪಟ್ಟಿದ್ದಾರೆ.

ದೆಹಲಿಯ ಐಟಿಸಿ ಮೌರ್ಯದಲ್ಲಿ ಪುಟಿನ್ ವಾಸ್ತವ್ಯ

ಇದೇ ಹೋಟೆಲಿನಲ್ಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡಾ ತಂಗಿದ್ದರು

ದೆಹಲಿ: ಎರಡು ದಿನ ಭಾರತ ಪ್ರವಾಸದಲ್ಲಿರುವ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ರಾಷ್ಟ್ರ ರಾಜಧಾನಿ ನಗರ ದೆಹಲಿಯಲ್ಲಿನ 'ಐಟಿಸಿ ಮೌರ್ಯ ಹೋಟೆಲ್'ನಲ್ಲಿ ತಂಗಲಿದ್ದಾರೆ. 4,700 ಚದರಡಿಗಳಷ್ಟು ವಿಸ್ತಾರವಾದ 'ಗ್ರ್ಯಾಂಡ್ ಪ್ರೆಸಿಡೆನ್ಶಿಯಲ್ ಸೂಟ್' ಪುಟಿನ್ ಅವರ ವಾಸ್ತವ್ಯಕ್ಕೆ ಸಕಲ ರೀತಿಯಲ್ಲಿಯೂ ಸಜ್ಜಾಗಿದೆ. ಬುಖಾರ ಮತ್ತು ದಮ್ ಪುಖ್ತ್ ಹೆಸರಿನ ವಿಶೇಷ ರೆಸ್ಟೊರೆಂಟ್‌ಗಳು ಇಲ್ಲಿವೆ.

ವಿದೇಶದ ಗಣ್ಯಾತಿಗಣ್ಯರಿಗೆಂದೇ ಈ ವಿಶೇಷ ಸೂಟ್ ನಿರ್ಮಾಣ ಮಾಡಲಾಗಿದೆ. ಈ ಹಿಂದೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಜೋ ಬೈಡನ್, ಬಿಲ್ ಕ್ಲಿಂಟನ್ ಸೇರಿದಂತೆ ಹಲವು ಗಣ್ಯರು ಈ ಹೋಟೆಲಿನಲ್ಲಿ ತಂಗಿದ್ದರು. ಭಾರತ ಮತ್ತು ರಷ್ಯಾದ ಭದ್ರತಾ ಸಂಸ್ಥೆಗಳ ಅಧಿಕಾರಿಗಳು ಮತ್ತು ವಿಶೇಷ ಸಿಬ್ಬಂದಿಗಳ ದೊಡ್ಡ ತಂಡವೇ ಹೋಟೆಲ್‌ಗೆ ಭಾರೀ ಭದ್ರತೆ ಕಲ್ಪಿಸಿದೆ.

ಸೂಟ್ ವೈಶಿಷ್ಟ್ಯ: ಐಟಿಸಿ ಮೌರ್ಯ ಹೋಟೆಲ್‌ನಲ್ಲಿ ವಿದೇಶದ ಅತಿಥಿ ಗಣ್ಯಾತಿಗಣ್ಯರಿಗೆಂದೇ 'ಚಂದ್ರಗುಪ್ತ ಸೂಟ್' ಮತ್ತು 'ಅಶೋಕ ಸೂಟ್'ಗಳನ್ನು ವಿಶೇಷ ರೀತಿಯಲ್ಲಿ ವಿನ್ಯಾಸ ಮಾಡಲಾಗಿದೆ. ವಿಶಾಲವಾದ ಹಜಾರ, ದೊಡ್ಡದಾದ ಕೊಠಡಿ, ಐಶಾರಾಮಿ ಸೌಲಭ್ಯಗಳು, ಅತ್ಯಾಧುನಿಕ ಸೌಕರ್ಯಗಳು, ಸಭೆ ನಡೆಸಲು ಬೋರ್ಡ್ ರೂಂ, ಖಾಸಗಿ ಜಿಮ್, ಸ್ಪಾ, ಬಾಲ್ಕನಿ, ಡೈನಿಂಗ್ ಹಾಲ್ ಎಲ್ಲವೂ ಪ್ರತ್ಯೇಕವಾಗಿರುತ್ತವೆ. ಸೂಟ್‌ಗಳಲ್ಲಿ ಒಳಾಂಗಣ ಅಲಂಕಾರಕ್ಕೆ ಬೆಳ್ಳಿಯ ಕಲಾಕೃತಿಗಳನ್ನು ಬಳಸಲಾಗಿದೆ.

ಮೌರ್ಯ ಸಾಮ್ರಾಜ್ಯದಿಂದ ಸ್ಫೂರ್ತಿ ಪಡೆದಂತೆ ಸೂಟ್‌ಗಳನ್ನು ಅಲಂಕರಿಸಲಾಗಿದೆ. ಈ ಸೂಟ್‌ನೊಳಗೇ ಅತಿಥಿಗಳ ಸ್ವಾಗತ ಸ್ಥಳ, ಶ್ರೇಷ್ಠ ದರ್ಜೆಯ ಪೀಠೋಪಕರಣಗಳಿರುವ ವಿಶಾಲವಾದ ಹಜಾರ, ದೊಡ್ಡದಾದ ಎರಡು ಕೊಠಡಿಗಳು ಮತ್ತು ಸ್ನಾನಗೃಹ ಇವೆ. ಈ ಸೂಟ್‌ಗಳನ್ನು 'ಮಿನಿ ಅರಮನೆ' ಎಂದೇ ಕರೆಯಲಾಗುತ್ತದೆ. ಈ ಸೂಟ್‌ಗಳಿಗೆ 1 ರಾತ್ರಿ-1 ಹಗಲು ತಂಗುವುದಕ್ಕೆ 7.50 ರಿಂದ 8 ಲಕ್ಷ ರು. ಬಾಡಿಗೆ ಮತ್ತು ಶುಲ್ಕ ವಿಧಿಸಲಾಗುತ್ತದೆ.

ಪಕ್ಕದ ಹೋಟೆಲ್‌ಗಳಲ್ಲೂ ಅತಿಥಿ

ಅಧ್ಯಕ್ಷ ಪುಟಿನ್ ಅವರ ಜತೆಗೆ ಆಗಮಿಸಿರುವ ರಷ್ಯಾದ ದೊಡ್ಡ ನಿಯೋಗಕ್ಕಾಗಿ ಐಟಿಸಿ ಮೌರ್ಯ ಹೋಟೆಲ್ ಪಕ್ಕದ 'ತಾಜ್ ಪ್ಯಾಲೇಸ್'ನಲ್ಲಿನ ಹಲವು ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ತಾಜ್ ಪ್ಯಾಲೇಸ್, ತಾಜ್ ಮಹಲ್, ಒಬೆರಾಯ್, ಲೀಲಾ, ಮೌರ್ಯ ಸೇರಿ ಕೇಂದ್ರ ದೆಹಲಿಯಲ್ಲಿನ ಪಂಚತಾರಾ ಹೋಟೆಲ್‌ಗಳ ಬಹುತೇಕ ಕೊಠಡಿಗಳನ್ನು ರಷ್ಯಾ ನಿಯೋಗದ ಪ್ರತಿನಿಧಿಗಳು, ಅಧಿಕಾರಿಗಳು, ಭದ್ರತಾ ಸಿಬ್ಬಂದಿಗಳಿಗಾಗಿ ಮೀಸಲಿಡಲಾಗಿದೆ.

ಡಿಸೆಂಬರ್ 2 ವಾರದ ಅಂತ್ಯದವರೆಗೂ ಮದುವೆ ಮತ್ತಿತರ ಕಾರ್ಯಕ್ರಮಗಳ ಅತಿಥಿಗಳಿಂದಾಗಿ ದೆಹಲಿಯ ಶ್ರೇಷ್ಠ ಶ್ರೇಣಿಯ ಪಂಚತಾರಾ ಹೋಟೆಲ್‌ಗಳಲ್ಲಿನ ಕೊಠಡಿಗಳೆಲ್ಲಾ ಮುಂಗಡವಾಗಿಯೇ ಕಾಯ್ದಿರಿಸಲಾಗುತ್ತದೆ.

ಪುಟಿನ್ ಜತೆ ಸಭೆ ನಡೆಸಲು ಅವಕಾಶ ನೀಡಿಲ್ಲ: ರಾಹುಲ್

ದೆಹಲಿ: ಭಾರತದಲ್ಲಿ 2 ದಿನ ಪ್ರವಾಸ ಹಮ್ಮಿಕೊಂಡಿರುವ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಜತೆ ಸಭೆ ನಡೆಸಲು ನನಗೆ ಕೇಂದ್ರ ಸರಕಾರ

ಅವಕಾಶ ನೀಡಿಲ್ಲ ಎಂದು ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಗುರುವಾರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂಸತ್ ಭವನದ ಆವರಣದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ರಾಹುಲ್, ಭಾರತಕ್ಕೆ ಭೇಟಿ ನೀಡುವ ವಿದೇಶಿ ಗಣ್ಯರ ಜತೆ ಪ್ರತಿಪಕ್ಷದ ನಾಯಕರು ಶಿಷ್ಟಾಚಾರ ಪ್ರಕಾರ ಸಭೆ ನಡೆಸುತ್ತಾರೆ. ಅಟಲ್ ಬಿಹಾರಿ ವಾಜಪೇಯಿ, ಮನಮೋಹನ್ ಸಿಂಗ್ ಅವರ ನೇತೃತ್ವದ ಸರಕಾರವಿದ್ದಾಗಲೂ ಈ ಶಿಷ್ಟಾಚಾರ ನಡೆಯುತ್ತಿತ್ತು. ಆದರೆ ಈಗದು ಪಾಲನೆ ಆಗುತ್ತಿಲ್ಲ ಎಂದು ದೂರಿದರು. ಈಗಿನ ಎನ್‌ಡಿಎ ಸರಕಾರ ನಾನು ವಿದೇಶಿ ಗಣ್ಯರನ್ನು ಭೇಟಿ ಮಾಡುವುದಕ್ಕೆ ಅವಕಾಶವನ್ನೇ ನೀಡುತ್ತಿಲ್ಲ. ಅಭದ್ರತೆ ಕಾರಣದಿಂದಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಕಚೇರಿ(ಪಿಎಂಒ) ಮತ್ತು ವಿದೇಶಾಂಗ ಸಚಿವಾಲಯ ಈ ಶಿಷ್ಟಾಚಾರವನ್ನೇ ಪಾಲಿಸುತ್ತಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಪುಟಿನ್ ಅವರು ಎರಡು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಗುರುವಾರ ಸಂಜೆ ದೆಹಲಿಗೆ ಆಗಮಿಸಿದ್ದಾರೆ.

2007ರ ಜ.25ರಂದು ರಷ್ಯಾ ಅಧ್ಯಕ್ಷ ಪುಟಿನ್, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯನ್ನು ದೆಹಲಿಯಲ್ಲಿ ಭೇಟಿಯಾಗಿದ್ದ ಸಂದರ್ಭದ ಚಿತ್ರ.

ಸಮಾಚಾರ ಸಣ್ಣದಲ್ಲ

ಡಿ.6ರಿಂದ ಕದ್ರಿಯಲ್ಲಿ ಬೃಹತ್ ವೈನ್ ಮೇಳ

ಮಂಗಳೂರು: ಕದ್ರಿ ಪಾರ್ಕ್‌ನಲ್ಲಿ ಈ ಬಾರಿ ಮತ್ತೊಮ್ಮೆ ವೈನ್ ಪ್ರಿಯರಿಗೆ ಹಬ್ಬವೇ ಸರಿ. ಕಳೆದ ಹಲವು ವರ್ಷಗಳಿಂದ ಆಯೋಜನೆಗೊಂಡು ಅಭೂತಪೂರ್ವ ಜನಮೆಚ್ಚುಗೆ ಗಳಿಸಿರುವ ಬೃಹತ್ ವೈನ್ ಮೇಳವು ಗ್ರಾಹಕರ ಬೇಡಿಕೆಯ ಹಿನ್ನೆಲೆಯಲ್ಲಿ ಡಿ. 6 ಮತ್ತು 7ರಂದು ನಡೆಯಲಿದೆ. ರತ್ನಾಸ್ ವೈನ್ ಗೇಟ್, ಕರ್ನಾಟಕ ದ್ರಾಕ್ಷಿ ಮತ್ತು ವೈನ್ ಬೋರ್ಡ್ (ಸರ್ಕಾರಿ ಸಂಸ್ಥೆ) ಹಾಗೂ ತೋಟಗಾರಿಕಾ ಇಲಾಖೆಗಳ ಸಹಯೋಗದಲ್ಲಿ ಬೆಳಗ್ಗೆ 10.30ರಿಂದ ರಾತ್ರಿ 9.30 ಗಂಟೆಯವರೆಗೆ ನಿರಂತರ ಕಾರ್ಯಕ್ರಮಗಳೊಂದಿಗೆ ರುಚಿ - ರಂಜನೆ - ರಿಯಾಯಿತಿ ಮುಂತಾದ ಅತ್ಯಾಕರ್ಷಕ ಕೊಡುಗೆಗಳೊಂದಿಗೆ ಮೇಳ ಸಜ್ಜಾಗಿದೆ. ಈ ಮೇಳದಲ್ಲಿ ದ್ರಾಕ್ಷಾ ರಸದ ಆರೋಗ್ಯಕಾರಿ ಉಪಯೋಗಗಳು, ಸವಿಯುವ ಕ್ರಮ, ದಾಸ್ತಾನು ಮಾಹಿತಿಗಳೊಂದಿಗೆ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ನೂರಾರು ಬ್ರಾಂಡ್‌ಗಳ ವೈನ್ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಹಣ ಹೂಡಿಕೆ ನೆಪದಲ್ಲಿ 12 ಲಕ್ಷ ರೂ. ವಂಚನೆ

ಉಡುಪಿ: ಹಣ ಹೂಡಿಕೆ ಹೆಸರಲ್ಲಿ ದುಬೈಯಲ್ಲಿ ಉದ್ಯೋಗದಲ್ಲಿದ್ದ ಕಾರ್ಕಳ ಮೂಲದ ವ್ಯಕ್ತಿಯೊಬ್ಬರಿಗೆ 12 ಲಕ್ಷ ರೂ. ವಂಚನೆ ಎಸಗಿರುವ ಬಗ್ಗೆ ಉಡುಪಿ ಸೆನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೆರ್ಮುಂಡೆ ಬೀಜಪಾಡಿಯ ಲಿಯೋ ಜೆರೋಮ್ ಮೆಂಡೋನ್ಸಾ ಅವರು 15 ವರ್ಷಗಳಿಂದ ದುಬೈಯಲ್ಲಿ ಉದ್ಯೋಗ ಮಾಡಿಕೊಂಡಿದ್ದು, ಕಾರ್ಕಳ ಕಣಜಾರು ಹಾಗೂ ನಿಟ್ಟೆ ದೂಪದಕಟ್ಟೆಯ ಬ್ಯಾಂಕ್‌ಗಳಲ್ಲಿ ಬ್ಯಾಂಕ್ ಖಾತೆ ಹೊಂದಿರುತ್ತಾರೆ. ನ. 12ರಂದು ಲಿಯೋ ಅವರು ದುಬೈಯಲ್ಲಿ ಇರುವಾಗ ಟೆಲಿಗ್ರಾಂ ಖಾತೆಯಲ್ಲಿ ಅಪರಿಚಿತರು ಸಂಪರ್ಕಿಸಿ ಹಣ ಹೂಡಿಕೆ ಮಾಡುವಂತೆ ಪ್ರೇರೇಪಿಸಿರುತ್ತಾರೆ. ಅದರಂತೆ ಲಿಯೋ ಹಣ ಹೂಡಿಕೆ ಮಾಡಿದ್ದು, ಅದರಂತೆ ಅದಕ್ಕೆ ಪ್ರತಿಯಾಗಿ ಲಾಭಾಂಶ ನೀಡುತ್ತಿದ್ದರು. ಅದೇ ರೀತಿ ವಿವಿಧ ಟಾಸ್ಕ್ ಗಳನ್ನು ನೀಡಿ, ವೆಬ್ ವಿಳಾಸ ನೀಡಿ ಅದರಲ್ಲಿ ಯೂಸರ್ ನೇಮ್ ಮತ್ತು ಐಡಿ ಹಾಕುವಂತೆ ತಿಳಿಸಿದರು. ಅದರಂತೆ ಮಾಡಿದ ಲಿಯೊ, ನ. 15ರಿಂದ 17ರವರೆಗೆ ಹಂತ ಹಂತವಾಗಿ ಒಟ್ಟು 12,25,000 ರೂ. ಹೂಡಿಕೆ ಮಾಡಿದ್ದರು. ಬಳಿಕ ಸೈಬರ್‌ವಂಚಕರು ಲಿಯೊ ಅವರಿಗೆ ಹೂಡಿಕೆ ಮಾಡಿದ ಹಣವನ್ನಾಗಲೀ ಅದರ ಲಾಭಾಂಶವನ್ನಾಗಲಿ ನೀಡದೆ ವಂಚನೆ ಮಾಡಿರುತ್ತಾರೆ.

ಬೀದಿನಾಯಿ ಹಾವಳಿ ತಡೆಗೆ ಕ್ರಮವಹಿಸಿ

ಉಡುಪಿ: ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶವನ್ನು ಅನುಷ್ಠಾನಗೊಳಿಸುವ ಬಗ್ಗೆ ನಗರಸಭಾ ವ್ಯಾಪ್ತಿಯಲ್ಲಿನ ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು (ಖಾಸಗಿ ಮತ್ತು ಸರ್ಕಾರಿ), ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳ ಮುಖ್ಯಸ್ಥರು ಅವರ ಹಾಗೂ ಇನ್ನಿತರ ಸರ್ಕಾರಿ ಸಂಸ್ಥೆಗಳ ಆವರಣದಲ್ಲಿ ವಾಸವಿರುವ ಬೀದಿನಾಯಿಗಳ ಸಂಖ್ಯೆಯ ಮಾಹಿತಿಯನ್ನು ನಗರಸಭಾ ಕಚೇರಿಗೆ ತುರ್ತಾಗಿ ನೀಡುವಂತೆ ನಗರ ಸಭೆ ಪೌರಾಯುಕ್ತರು ತಿಳಿಸಿದ್ದಾರೆ. ಬೀದಿನಾಯಿಗಳ ನಿಯಂತ್ರಣ ಮಾಡಲು ಮತ್ತು ಸಂಸ್ಥೆಯ ಆವರಣದ ಸ್ವಚ್ಛತೆಯನ್ನು ಕಾಪಾಡಲು ಆಯಾ ಸಂಸ್ಥೆಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಸದ್ರಿಯವರ ಮಾಹಿತಿಯನ್ನು ನಗರಸಭಾ ಕಚೇರಿಗೆ ನೀಡಬೇಕು. ಬೀದಿ ನಾಯಿಗಳನ್ನು ದತ್ತು ಪಡೆಯಲು ಇಚ್ಛಿಸುವ ವ್ಯಕ್ತಿ/ಸಂಸ್ಥೆಗಳಿಗೆ ದತ್ತು ನೀಡಲು ಕ್ರಮವಹಿಸಲಾಗುವುದು ಎಂದು ತಿಳಿಸಿದ್ದಾರೆ.

ಉಡುಪಿಗೆ ಡಿಸಿಎಂ ಪವನ್ ಕಲ್ಯಾಣ್ 7ಕ್ಕೆ

ಉಡುಪಿ: ಪರ್ಯಾಯ ಪುತ್ತಿಗೆ ಮಠದ ವತಿಯಿಂದ ನಡೆಯುತ್ತಿರುವ ಬೃಹತ್ ಗೀತೋತ್ಸವ ಡಿ. 7ರಂದು



ಸಮಾಪನಗೊಳ್ಳಲಿದ್ದು, ಅಂದು ಆಂಧ್ರ ಪ್ರದೇಶದ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಪಾಲ್ಗೊಳ್ಳುವರು ಎಂದು ಪರ್ಯಾಯ ಪುತ್ತಿಗೆ ಮಠದ ದಿವಾನ ನಾಗರಾಜ ಆಚಾರ್ಯ ಮತ್ತು ಕಾವ್ಯದರ್ಶಿ ಪ್ರಸನ್ನ ಆಚಾರ್ಯ ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಎಂ.ಬಿ. ಪಾಟೀಲ್ } ಸಚಿವ

ಕೇಂದ್ರ ಸರಕಾರದ ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವಾಲಯ ಏಪ್ರಿಲ್ ತಿಂಗಳಲ್ಲಿ ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳ ತಯಾರಿಕೆ ಯೋಜನೆಯನ್ನು ಘೋಷಿಸಿದೆ. ಇದಕ್ಕೆ ಸಮಾನಾಂತರವಾಗಿ ರಾಜ್ಯ ಸರಕಾರ ಕೂಡ ಒಂದು ಯೋಜನೆಯನ್ನು ರೂಪಿಸಲು ಚಿಂತಿಸುತ್ತಿದ್ದು, ಇದರ ಕಾರ್ಯಸಾಧ್ಯತೆಯ ಕುರಿತು ಅಧ್ಯಯನ ಮಾಡುತ್ತಿದೆ.

ಕೊಲ್ಲೂರಿನ ಒಳ ಚರಂಡಿ ವೈಫಲ್ಯ ಪ್ರಕರಣ | ಚೆನ್ನೈ ಹಸಿರುಪೀಠ ಆದೇಶ

ಉಡುಪಿ ಡಿಸಿ ವಿಚಾರಣೆಗೆ ಹಾಜರಾಗಲಿ

ಉಡುಪಿ: ಕೊಲ್ಲೂರಿನ ಸಮಗ್ರ ಒಳಚರಂಡಿ ಯೋಜನೆ ವೈಫಲ್ಯ ಪ್ರಶ್ನಿಸಿ ಸಲ್ಲಿಸಲಾಗಿರುವ ಸಾರ್ವಜನಿಕ ದೂರು ಅರ್ಜಿ ವಿಚಾರಣೆ ನಡೆಸಿರುವ ಚೆನ್ನೈ ಹಸಿರುಪೀಠ ಉಡುಪಿ ಜಿಲ್ಲಾಧಿಕಾರಿ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮುಖ್ಯಸ್ಥರನ್ನು ವಿಚಾರಣೆಗೆ ಹಾಜರಾಗುವಂತೆ ಆದೇಶಿಸಿದೆ. ಹಸಿರು ಪೀಠದ ಜುಡಿಷಿಯಲ್ ಮೆಂಬರ್ ಜಸ್ಟೀಸ್ ಪುಷ್ಪಾ ಸತ್ಯನಾರಾಯಣ್ ಹಾಗೂ ಎಕ್ಸ್‌ಪರ್ಟ್ ಮೆಂಬರ್‌ಡಾ. ಪ್ರಶಾಂತ್ ಗಾರ್ಗವ್ ಆದೇಶ ಹೊರಡಿಸಿದ್ದಾರೆ. ಹರೀಶ್ ತೋಳಾರ್‌ಅವರು ಕೊಲ್ಲೂರು ಸಮಗ್ರ ಒಳಚರಂಡಿ ಯೋಜನೆಯ ವೈಫಲ್ಯ ಪ್ರಶ್ನಿಸಿ ಹಸಿರು ಪೀಠದಲ್ಲಿ ದೂರು ಹೂಡಿದ್ದರು.

ಕೊಲ್ಲೂರು ಸಮಗ್ರ ಒಳಚರಂಡಿ ಯೋಜನೆ ಕುರಿತಂತೆ 2025 ನ. 25ರಂದು ಸಲ್ಲಿಸಲಾಗಿರುವ ವರದಿ ಸಮಗ್ರವಾಗಿಲ್ಲ. ಆದೇಶದ ಎರಡು ವರ್ಷಗಳ ನಂತರ ವರದಿ ಸಲ್ಲಿಸಲಾಗಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಒಳಚರಂಡಿ ಸಂಸ್ಕರಣಾ ಘಟಕದ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಕೆಲವು ನಿರ್ದೇಶನಗಳನ್ನು ನೀಡಲಾಗಿದೆ ಎಂದು ವರದಿ ಹೇಳುತ್ತಿದೆ. ತ್ಯಾಜ್ಯ ನೀರು ಸಂಸ್ಕರಣಾ ಘಟಕದ ವೈಜ್ಞಾನಿಕ ಕಾರ್ಯಾಚರಣೆಗಾಗಿ ವಿವರವಾದ, ಸಮಯಕ್ಕೆ ಅನುಗುಣವಾಗಿ ಪ್ರಸ್ತಾವನೆ ಸಲ್ಲಿಸುವಂತೆ ಕೆಯುಡಬ್ ಲ್ಯೂಎಸ್ಡಿಬಿಗೆ ಉಪ ಆಯುಕ್ತರು ಸೂಚಿಸಿದ್ದಾರೆ.

ಆದಾಗ್ಯೂ ಜಿಲ್ಲಾಧಿಕಾರಿ ಕಂದಾಯ ವಿಭಾಗದ ಮುಖ್ಯಸ್ಥರಾಗಿದ್ದು, ಉತ್ಪಾದಿತ ತ್ಯಾಜ್ಯದ ಪ್ರಮಾಣ, ಅಸ್ತಿತ್ವದಲ್ಲಿರುವ ಯುಜಿಡಿ ಸಾಮರ್ಥ್ಯ, ಸಾಮರ್ಥ್ಯವನ್ನು ಎಷ್ಟರ ಮಟ್ಟಿಗೆ ಹೆಚ್ಚಿಸಬೇಕು, ಅಂದಾಜು ವೆಚ್ಚ ಮತ್ತು ಅಂತಹ ಸುಧಾರಣೆಗಳಿಗೆ ಸಮಯಾವಧಿ ಇವುಗಳ ಬಗ್ಗೆ ಯಾವುದೇ ವಿವರ ಒದಗಿಸಿಲ್ಲ. ತ್ಯಾಜ್ಯನೀರಿನ ಉತ್ಪಾದನೆಯನ್ನು ನಿಭಾಯಿಸಲು ಮಾಡಲಾದ ವ್ಯವಸ್ಥೆಗಳನ್ನು ವರದಿಯಲ್ಲಿ ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿಲ್ಲ.

ಪ್ರತಿವಾದಿ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ 2015ರಲ್ಲಿ 19.97 ಕೋಟಿ ರೂ. ವೆಚ್ಚದಲ್ಲಿ ಯುಜಿಡಿ ನಿರ್ಮಿಸಿದೆ. 2020ರ ಜೂ.19ರಂದು ಕಾಮಗಾರಿ ಪೂರ್ಣಗೊಂಡಿದೆ. 2020ರ ಜು.1ರಂದು ಕೆಯುಡಬ್ಲ್ಯುಎಸ್ಡಿಬಿಗೆ ಹಸ್ತಾಂತರಿಸಿದೆ ಎಂಬ ವರದಿ ಸಲ್ಲಿಸಿದೆ. ಅಲ್ಲದೆ ದೇವಾಲಯ ಅಥವಾ ಅದರ ಸಂಬಂಧಿತ ಕಟ್ಟಡಗಳಿಂದ ಯಾವುದೇ ತ್ಯಾಜ್ಯ ನೀರು ನದಿಗೆ ಬಿಡುತ್ತಿಲ್ಲ ಎಂದು ಪ್ರತಿಪಾದಿಸಿದೆ.

ವಿಡಿಯೊ ಕಾನ್ಫರೆನ್ಸ್ ನಲ್ಲಿ ಹಾಜರಾಗಲು ಸೂಚನೆ

ಮೂಲ ಅರ್ಜಿ ಎರಡು ವರ್ಷಗಳಿಗೂ ಹೆಚ್ಚು ಕಾಲ ನಮ್ಮ ಮುಂದೆ ಬಾಕಿ ಇದ್ದರೂ, ಯಾವುದೇ ಅಧಿಕಾರಿಗಳು ಈ ಕುರಿತು ಆಸಕ್ತಿ ತೋರಿಸಿಲ್ಲ. ಆದ್ದರಿಂದ, ಪ್ರಸ್ತಾವಿತ ಕ್ರಮ ಮತ್ತು ಈಗಾಗಲೇ ತೆಗೆದುಕೊಂಡ ಕ್ರಮಗಳ ವಿವರವಾದ ವರದಿ ಸಲ್ಲಿಸುವಂತೆ ಕೆಯುಡಬ್ಲೂಎಸ್ಡಿಬಿ ಅಧ್ಯಕ್ಷರು ಮತ್ತು ಉಡುಪಿ ಜಿಲ್ಲಾಧಿಕಾರಿಗಳಿಗೆ ಸೂಚಿಸುತ್ತೇವೆ. ಜತೆಗೆ ಸಮಯಸೂಚಿ ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಿದೆ. ಅಧಿಕಾರಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಬೇಕು ಎಂದು ಹಸಿರು ಪೀಠ ತಿಳಿಸಿದೆ.

ವಿದ್ಯಾರ್ಥಿಗಳಿಗೆ ಸಂಸ್ಕಾರದ ಶಿಕ್ಷಣ

ಸುಳ್ಯದ ಶ್ರೀ ಶಾರದಾ ಪ್ರೌಢಶಾಲೆ ಮತ್ತು ಶ್ರೀ ಶಾರದಾ ಪದವಿ ಪೂರ್ವ ಕಾಲೇಜಿನಲ್ಲಿ ವಾರ್ಷಿಕೋತ್ಸವ ಸಮಾರಂಭವನ್ನು ಡಾ.ಪ್ರಭಾತ್ ಬಲ್ನಾಡ್ ಉದ್ಘಾಟಿಸಿದರು.

ಸುಳ್ಯ: ಪುಸ್ತಕದಲ್ಲಿನ ಶಿಕ್ಷಣದ ಜತೆಗೆ ಮನೆಯಲ್ಲಿ ಪೋಷಕರು, ಶಾಲೆಯಲ್ಲಿ ಗುರುಗಳು ನೀಡುವ ಸಂಸ್ಕಾರದ ಶಿಕ್ಷಣ ಇಂದಿನ ಯುವ ಜನಾಂಗಕ್ಕೆ ಪೂರಕವಾಗಬೇಕು. ಇಂತಹ ಶಿಕ್ಷಣದಿಂದ ಮಾತ್ರ ಸಾಧನೆಯ ಗುರಿ ತಲುಪಲು ಸಾಧ್ಯ ಎಂದು ಮೂಡಬಿದಿರೆ ಜೈನ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಪ್ರಭಾತ್ ಬಲ್ನಾಡ್ ಹೇಳಿದರು.

ಸುಳ್ಯದ ಶ್ರೀ ಶಾರದಾ ಪ್ರೌಢಶಾಲೆ ಮತ್ತು ಶ್ರೀ ಶಾರದಾ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ನಡೆದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ದಕ್ಷಿಣ ಕನ್ನಡ ಗೌಡ ವಿದ್ಯಾ ಸಂಘದ ಅಧ್ಯಕ್ಷ ಧನಂಜಯ ಅಡ್ಪಂಗಾಯ ಅಧ್ಯಕ್ಷತೆ ವಹಿಸಿದ್ದರು. ದ.ಕ. ಗೌಡ ವಿದ್ಯಾಸಂಘದ ಪ್ರಧಾನ ಕಾರ್ಯದರ್ಶಿ ಡಾ.ರೇವತಿ ನಂದನ್, ಕೋಶಾಧಿಕಾರಿ ಮಾಧವ ಗೌಡ ಬೆಳ್ಳಾರೆ, ನಿರ್ದೇಶಕ ಜಯರಾಮ ಚಿಲ್ತಡ್ಕ, ವಿದ್ಯಾರ್ಥಿ ನಾಯಕರಾದ ಜೊಯಸ್ಟನ್ ಕ್ರಾಸ್ತ, ಷೇಕ್ ಮಹಮ್ಮದ್ ಫಾಯಿಝ್, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಆಶಿಕಾ ಕೇಶವ್, ಪ.ಪೂ. ವಿಭಾಗದ ಶಿಕ್ಷಕ - ರಕ್ಷಕ ಸಂಘದ ಅಧ್ಯಕ್ಷೆ ರೇಖಾ, ಪ್ರೌಢಶಾಲಾ ವಿಭಾಗದ ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ಮಹೇಶ್ ವೇದಿಕೆಯಲ್ಲಿ ಇದ್ದರು. ಶೈಕ್ಷಣಿಕ ಸಾಧಕರನ್ನು ಗೌರವಿಸಲಾಯಿತು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ದಯಾಮಣಿ ಕೆ, ಪ್ರೌಢಶಾಲಾ ಮುಖ್ಯೋಪಾಧ್ಯಾಯಿನಿ ಭಾರತಿ ಪಿ. ವಾರ್ಷಿಕ ವರದಿ ಮಂಡಿಸಿದರು. ಉಪನ್ಯಾಸಕಿ ಸ್ವರ್ಣಕಲಾ ಇ.ಎಸ್. ಸ್ವಾಗತಿಸಿದರು. ಉಪನ್ಯಾಸಕ ಪ್ರಸನ್ನ ಎನ್.ಎಚ್. ಅತಿಥಿಗಳನ್ನು ಪರಿಚಯಿಸಿದರು. ಶಿಕ್ಷಕಿ ಅರ್ಪಣ ವಂದಿಸಿದರು.

ನೂತನ ಧ್ವಜಸ್ತಂಭಕ್ಕೆ ಭವ್ಯ ಸ್ವಾಗತ

ಧರ್ಮಸ್ಥಳದಲ್ಲಿ ನೂತನ ಶಿಲಾಮಯ ಧ್ವಜಸ್ತಂಭಕ್ಕೆ ಭವ್ಯ ಮೆರವಣಿಗೆಯಲ್ಲಿ ಸ್ವಾಗತ ನೀಡಲಾಯಿತು.

ಉಜಿರೆ: ಪಜಿರಡ್ಕದಲ್ಲಿ ಶ್ರೀ ಸದಾಶಿವೇಶ್ವರ ದೇವಸ್ಥಾನದಲ್ಲಿ ಇಂದು (ಶುಕ್ರವಾರ) ಪ್ರತಿಷ್ಠಾಪನೆಗೊಳ್ಳಲಿರುವ ನೂತನ ಶಿಲಾಮಯ ಧ್ವಜಸ್ತಂಭ ಗುರುವಾರ ಸಂಜೆ ಧರ್ಮಸ್ಥಳಕ್ಕೆ ಆಗಮಿಸಿದಾಗ ಭವ್ಯ ಮೆರವಣಿಗೆಯಲ್ಲಿ ಸ್ವಾಗತಿಸಿ, ಅಣ್ಣಪ್ಪಸ್ವಾಮಿ ಬೆಟ್ಟದ ಬಳಿ ತರಲಾಯಿತು.

ಮುಖ್ಯ ಪ್ರವೇಶದ್ವಾರದ ಬಳಿ ದೇವಸ್ಥಾನದ ಪಾರುಪತ್ಯಗಾರರಾದ ಲಕ್ಷ್ಮೀನಾರಾಯಣ ರಾವ್, ಹೆಗ್ಗಡೆಯವರ ಆಪ್ತಕಾರ್ಯದರ್ಶಿ ಎ.ವಿ. ಶೆಟ್ಟಿ, ಲೆಕ್ಕಪತ್ರವಿಭಾಗದ ಮುಖ್ಯಸ್ಥ ಪುರಂದರ ಭಟ್, ಜಮಾ ಉಗ್ರಾಣದ ನಿವೃತ್ತ ಮುತ್ಸದ್ದಿ ಭುಜಬಲಿ ಧರ್ಮಸ್ಥಳ, ದೇವಳ ನೌಕರರು ಸ್ವಾಗತ ಕೋರಿದರು. ಶಾಸಕ ಹರೀಶ್ ಪೂಂಜ ಮತ್ತು ರಕ್ಷಿತ್ ಶಿವರಾಂ ಉಪಸ್ಥಿತರಿದ್ದರು. ಅಣ್ಣಪ್ಪಸ್ವಾಮಿ ಬೆಟ್ಟದ ಬಳಿ, ದೇವಸ್ಥಾನದ ಪ್ರಧಾನ ಅರ್ಚಕರುಗಳು ವಿಶೇಷ ಪ್ರಾರ್ಥನೆ ಮಾಡಿ, ಫಲಪುಷ್ಪ ಹಾಗೂ ಹಾರವನ್ನು ಸಮರ್ಪಿಸಿದರು.

ಶ್ರೀ ಮಂಜುನಾಥ ಸ್ವಾಮಿ, ಧರ್ಮದೇವತೆಗಳು ಹಾಗೂ ಅಣ್ಣಪ್ಪಸ್ವಾಮಿ ಸನ್ನಿಧಿಯಲ್ಲಿ ವಿಶೇಷ ಪ್ರಾರ್ಥನೆ ಮಾಡಿ ಶಿಲಾಮಯ ಧ್ವಜಸ್ತಂಭದ ಪ್ರತಿಷ್ಠಾಪನಾ ಕಾರ್ಯ ಯಶಸ್ವಿಯಾಗಲಿ ಎಂದು ಶ್ರೀಕ್ಷೇತ್ರ ಅತಿಶಯ ಕ್ಷೇತ್ರವಾಗಿ ಬೆಳೆಯಲಿ ಎಂದು ಪ್ರಾರ್ಥನೆ ಸಲ್ಲಿಸಿದರು. ನಂತರ ಶಿಲಾಮಯ ಧ್ವಜಸ್ತಂಭ ಪಜಿರಡ್ಕ ದೇವಸ್ಥಾನದ ಕಡೆಗೆ ಯಾನ ಮುಂದುವರಿಸಿತು.

ತಪ್ಪಿದ ಡಿಜಿಟಲ್ ವಂಚನೆ

ಮಂಗಳೂರು: ನಕಲಿ ಸಿಐಡಿ ಆಫೀಸರ್‌ಗಳೆಂದು ಹೇಳಿ ವಿರುದ್ಧ ದಂಪತಿಯನ್ನು ಡಿಜಿಟಲ್ ಅರೆಸ್ಟ್ ಮಾಡಿ ಕೋಟಿ ರು. ಪಡೆಯುವ ಕೊನೆಯ ಹಂತದಲ್ಲಿ ಬ್ಯಾಂಕ್ ಮ್ಯಾನೇಜರ್ ತಪ್ಪಿಸಿದ್ದಾರೆ

ಮುಲ್ಕಿ ಪೊಲೀಸ್ ಠಾಣಾ ಸರಹದ್ದಿನ ದಾಮಸಕಟ್ಟೆ ನಿವಾಸಿಗಳಾದ ಬೆನ್‌ಡ್ಡಿಕ್ ಪೆರ್ನಾಂಡಿಸ್ (84) ಹಾಗೂ ಲಿಲ್ಲಿ ಸಿಸಿಲಿಯ ಫೆರ್ನಾಂಡಿಸ್ (71) ಅಪರಿಚಿತರು ಉತ್ತರ ಪ್ರದೇಶದ ಸಿ.ಐ.ಡಿ ಪೊಲೀಸ್ ಎಂಬ ಸೊಗಿನಲ್ಲಿ ಮೊಬೈಲ್ ಫೋನ್ ವಾಟ್ಸ್ ಅಪ್ ಮೂಲಕ ಸಂಪರ್ಕಿಸಿ, ಅವರುಗಳು 6 ಕೋಟಿ ಮೋಸ ಮಾಡಿದಾಗಿ ಅವರ ವಿರುದ್ಧ ವಂಚನೆ ಪ್ರಕರಣ ದಾಖಲಾಗಿರುವುದಾಗಿ ನಂಬಿಸಿ, ಸೈಬರ್‌ಕಳ್ಳರು ಡಿಜಿಟಲ್ ಅರೆಸ್ಟ್‌ಗೆ ಒಳಪಡಿಸಿದ್ದರು.

ತಮ್ಮ ಖಾತೆಯಲ್ಲಿರುವ ಹಣವನ್ನು ತನಿಖೆಗಾಗಿ ವರ್ಗಾಹಿಸಬೇಕೆಂದು ನಕಲಿ ಅಧಿಕಾರಿಗಳು ಸೂಚಿಸಿದಾಗ ವೃದ್ಧರ ದಂಪತಿಗಳು ಕಿನ್ನಿಗೋಳಿಯ ಕೆನರಾ ಬ್ಯಾಂಕಿನಲ್ಲಿದ್ದ ಅವರ ಬಾಬ್ತು ಖಾತೆಯಿಂದ ಸುಮಾರು 84 ಲಕ್ಷ ರೂಪಾಯಿ ಹಣವನ್ನು ಸೈಬರ್‌ಕಳ್ಳರು ಸೂಚಿಸಿದ ಬ್ಯಾಂಕ್ ಖಾತೆಗೆ ರವಾನಿಸಲು ತಮ್ಮ ಕಿನ್ನಿಗೋಳಿ ಬ್ಯಾಂಕಿಗೆ ತೆರಳಿದರು.

ಈ ಸಂದರ್ಭ ಕಿನ್ನಿಗೋಳಿಯ ಕೆನರಾ ಬ್ಯಾಂಕಿನ ಮ್ಯಾನೇಜರ್ ರಾಯಸ್ಟನ್ ಅವರು ದೊಡ್ಡ ಮೊತ್ತದ ಹಣವನ್ನು ಯಾಕೆ ವರ್ಗಾವಣೆ ಮಾಡುತ್ತಿರುವ ಬಗ್ಗೆ ವಿಚಾರಿಸಿದರು.

ವೃದ್ಧದಂಪತಿಗಳು ಸರಿಯಾದ ಉತ್ತರ ನೀಡದ ಕಾರಣ ಸಂಶಯಗೊಂಡು, ಸೈಬರ್‌ವಂಚಕರು ಒದಗಿಸಿದಂತಹ ಖಾತೆಗೆ ಹಣವನ್ನು ವರ್ಗಾವಣೆ ಮಾಡದೇ, ಬ್ಯಾಂಕ್ ಮ್ಯಾನೇಜರ್ ಕಿನ್ನಿಗೋಳಿ ಪರಿಸರದ ಬೀಟ್ ಸಿಬ್ಬಂದಿ ಯಶವಂತ ಕುಮಾರ ಹಾಗೂ ಠಾಣಾ ಗುಪ್ತವಾರ್ತೆ ಸಿಬ್ಬಂದಿ ಕಿಶೋರ ರವರಿಗೆ ದೂರವಾಣಿ ಕರೆ ಮಾಡಿ ಮಾಹಿತಿ ನೀಡಿದರು.

ಕೂಡಲೇ ಕಾರ್ಯಪ್ರವೃತ್ತರಾದ ಮುಲ್ಕಿ ಪೊಲೀಸರು ವೃದ್ಧ ದಂಪತಿಗಳ ಮನೆಗೆ ತೆರಳಿ ಅವರ ಮೊಬೈಲ್ ಪರಿಶೀಲಿಸಿದ್ದು ಈ ಸಮಯ ಅವರು ಡಿಜಿಟಲ್ ಅರೆಸ್ಟ್‌ಗೆ ಒಳಗಾಗಿರುವುದು ಕಂಡುಬಂತು. ಕೂಡಲೇ ಪೊಲೀಸ್ ಸಿಬ್ಬಂದಿ ಬ್ಯಾಂಕ್ ಮ್ಯಾನೇಜರಗೆ ಕರೆ ಮಾಡಿ ವಿಚಾರ ತಿಳಿಸಿ ಹಣ ವರ್ಗಾವಣೆ ಮಾಡದಂತೆ ಸೂಚಿಸಿದರು.

ವೃದ್ಧ ದಂಪತಿಗಳಿಗೆ ತಿಳುವಳಿಕೆ ನೀಡಿದ ಮೆನೇಜರ್,ಅವರ ಜೀವನದ ಬಹುಮೂಲ್ಯ ಆದಾಯವನ್ನು ಉಳಿಸಿದರು. ಇದರ ಬಗ್ಗೆ ಮುಲ್ಕಿ ಪೊಲೀಸ್ ಠಾಣೆಯವರು ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮುಂಬಯಿ ವಿಮಾನ ವಿಳಂಬ

ಮಂಗಳೂರು: ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಲವೊಂದು ಏರ್ಲೈನ್ಸ್‌ಗಳು ಪದೇ ಪದೇ ತಾಂತ್ರಿಕ ಕಾರಣವನ್ನು ನೀಡಿ ಪ್ರಯಾಣವನ್ನು ವಿಳಂಬ ಮಾಡುವುದು, ಮುಂದೂಡುವುದು, ರದ್ದು ಮಾಡುವುದು ಮುಂದುವರಿದಿದೆ.

ಇಂಡಿಗೋ ವಿಮಾನ ಮಂಗಳೂರಿನಿಂದ ಮುಂಬಯಿಗೆ ಮಂಗಳವಾರ ರಾತ್ರಿ 9.40ಕ್ಕೆ ತೆರಳಬೇಕಿತ್ತು. ಈ ವಿಮಾನದಲ್ಲಿ ಒಟ್ಟು 175 ಮಂದಿ ಪ್ರಯಾಣಿಸುವವರಿದ್ದರು. ಆದರೆ ಈ ವಿಮಾನ ತಾಂತ್ರಿಕ ಕಾರಣದಿಂದ 10.55ಕ್ಕೆ ಹೊರಡಲಿದೆ ಎಂದು ಏರ್ಲೈನ್ಸ್ ಸಿಬ್ಬಂದಿ ಸೂಚನೆ ನೀಡಿದ್ದಾರೆ.

ಆದರೂ ಮರುನಿಗದಿ ಸಮಯ ಆಗಮಿಸಿದರೂ ವಿಮಾನ ಮಾತ್ರ ಹೊರಡಲೇ ಇಲ್ಲ. ಇದಾದ ಬಳಿಕ ಪದೇ ಪದೇ 11.15, 11.45, 12.00, 1.15, 2.00ಗಂಟೆ ಸೇರಿದಂತೆ ಸಮಯ ಬದಲಾವಣೆ ಸಂದೇಶ ಹಾಕಿದರು. ವಿಮಾನ ವಿಳಂಬ, ಸಿಬ್ಬಂದಿ ಬೇಜವಾಬ್ದಾರಿಯಿಂದ ಬೇಸತ್ತ ಪ್ರಯಾಣಿಕರು ಏರ್ಲೈನ್ಸ್ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದು, ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು. ಇದಾದ ಬಳಿಕ ಬದಲಿ ವಿಮಾನಕ್ಕಾಗಿ ವ್ಯವಸ್ಥೆ ಮಾಡಲಾಯಿತು. ಮಂಗಳವಾರ ವಿಮಾನ 9.45ಕ್ಕೆ ಹೊರಡುವುದಾದರೂ ಪ್ರಯಾಣಿಕರು ಒಂದು ಗಂಟೆ ಮುಂಚಿತವಾಗಿ 8.45ಕ್ಕೆ ವಿಮಾನ ನಿಲ್ದಾಣ ತಲುಪಿದ್ದಾರೆ.

ಬುಧವಾರ 1.45ಕ್ಕೆ ವಿಮಾನ ಮಂಗಳೂರಿನಿಂದ ಮುಂಬಯಿಗೆ ಹೊರಟಿದ್ದು, ಮುಂಬಯಿ ವಿಮಾನ ನಿಲ್ದಾಣದಲ್ಲೂ ತಾಂತ್ರಿಕ ಸಮಸ್ಯೆಯಿಂದ ಪ್ರಯಾಣಿಕರು ಚೆಕ್‌ಔಟ್ ಆಗಿ ಮನೆ ತಲುಪುವಾಗ ರಾತ್ರಿ 7.45 ಆಗಿತ್ತು. ಇದರಿಂದ ಪ್ರಯಾಣಿಕರು 2 ಗಂಟೆ ಪ್ರಯಾಣಕ್ಕೆ 24 ಗಂಟೆ ಕಾಯಬೇಕಾಯಿತು. ಮಂಗಳೂರು ವಿಮಾನ ನಿಲ್ದಾಣದಲ್ಲಿ ತಾಂತ್ರಿಕ ಸಮಸ್ಯೆ ಸೇರಿದಂತೆ ಇನ್ನಿತರ ಕಾರಣದಿಂದ ದೇಶ-ವಿದೇಶಕ್ಕೆ ತೆರಳುವ ವಿಮಾನ ವಿಳಂಬವಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಲೇ ಇದೆ. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಹಿರಿಯ ಅಧಿಕಾರಿಗಳ ಜತೆ ಮಾತುಕತೆ ನಡೆಸುತ್ತೇನೆ. ಈ ಬಗ್ಗೆ ಅಧಿಕಾರಿಗಳ ಜತೆ ಮಾತನಾಡಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ ಎಂದಿದ್ದಾರೆ ಸಂಸದ ಕ್ಯಾ.ಬ್ರಿಜೇಶ್ ಚೌಟ.

ತೋಟಗಾರಿಕೆ ಸಹಾಯಧನ ರೈತರಿಂದ ಅರ್ಜಿ ಆಹ್ವಾನ

ಉಡುಪಿ: ತೋಟಗಾರಿಕೆ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳ್ಳಲಿರುವ ವಿವಿಧ ಯೋಜನೆಗಳ ಪ್ರಯೋಜನ ಪಡೆದುಕೊಳ್ಳುವ ನಿಟ್ಟಿನಲ್ಲಿ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೈಬ್ರಿಡ್ ತರಕಾರಿ ಪ್ರದೇಶ ವಿಸ್ತರಣೆ ಕೈಗೊಂಡ ರೈತರಿಗೆ ಶೇ. 50 ರ ಸಹಾಯಧನ, ಕೃಷಿ ಯಾಂತ್ರೀಕರಣ ಉಪ ಅಭಿಯಾನ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ಯಾಂತ್ರೀಕರಣ ಕಾರ್ಯಕ್ರಮದಡಿ ಅನುಮೋದಿತ ವಿವಿಧ ಯಂತ್ರೋಪಕರಣಗಳಿಗೆ ಶೇ. 40/50 ರ ಸಹಾಯಧನ, ನೀರಿನ ಸಮರ್ಪಕ ಬಳಕೆಗಾಗಿ ಹನಿ ನೀರಾವರಿ/ತುಂತುರು ನೀರಾವರಿ ಅಳವಡಿಕೆಗೆ ಶೇ. 90 ರಷ್ಟು ಸಹಾಯಧನ ಲಭ್ಯವಿದ್ದು, ಸಹಾಯಧನ ಪಡೆಯಲು ಅರ್ಜಿ ಸಲ್ಲಿಸಿ ಕಾರ್ಯಾದೇಶ ಪಡೆದು ಇಲಾಖೆಯಿಂದ ಅನುಮೋದಿತ ಡೀಲರ್‌ಗಳ ಮೂಲಕ ರೈತರು ಹನಿ ನೀರಾವರಿ ಅಳವಡಿಸಿಕೊಂಡು ಸಹಾಯಧನ ಪಡೆಯಬಹುದಾಗಿದೆ.

ತಾಳೆಬೆಳೆ ಯೋಜನೆಯಡಿ ಹೊಸದಾಗಿ ತಾಳೆ ಬೆಳೆ ಪ್ರದೇಶ ವಿಸ್ತರಣೆಗೆ ಉಚಿತ ವಿತರಣೆಯೊಂದಿಗೆ 4 ವರ್ಷಗಳ ಕಾಲ ನಿರ್ವಹಣಾ ವೆಚ್ಚ ಪಾವತಿ ಹಾಗೂ ತಾಳೆ ಬೆಳೆ ಬೆಳೆಯುವ ರೈತರಿಗೆ ಬೋರ್‌ವೆಲ್ ಬಾವಿ ನಿರ್ಮಿಸಿಕೊಳ್ಳಲು, ವಿದ್ಯುತ್/ಡೀಸೆಲ್ ಪಂಪ್ ಮತ್ತು ಯಂತ್ರೋಪಕರಣ ಖರೀದಿಗೆ ಸಹಾಯಧನ ಹಾಗೂ ಉದ್ಯೋಗ ಖಾತ್ರಿ ಯೋಜನೆಯಡಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಗೆ ಅವಕಾಶವಿರುತ್ತದೆ. ಈ ಎಲ್ಲಾ ಯೋಜನೆಗಳ ಪ್ರಯೋಜನೆ ಪಡೆಯಲು ಆಸಕ್ತ ರೈತರು ಪ್ರಥಮ ಹಂತದಲ್ಲಿ ನೋಂದಣಿ ಅರ್ಜಿಯೊಂದಿಗೆ ಬೆಳೆ ನಮೂದಿಸಿರುವ ಇತ್ತೀಚಿನ ಪಹಣಿ ಪತ್ರ ಮತ್ತು ಅಗತ್ಯ ಪ್ರಮಾಣ ಪತ್ರಗಳೊಂದಿಗೆ ಇಲಾಖೆಯಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ. ಜೇಷ್ಠತೆಯ ಆಧಾರದಲ್ಲಿ ಸಹಾಯಧನಕ್ಕೆ ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕ್ಷೇತ್ರದ ಅಧಿಕಾರಿಗಳನ್ನು ಹಾಗೂ ತೋಟಗಾರಿಕೆ ಇಲಾಖೆ, ಉಡುಪಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯಸಭಾ ಸದಸ್ಯರಾದ ಡಿ. ವೀರೇಂದ್ರ ಹೆಗ್ಗಡೆಯವರು ದೆಹಲಿಯ ಸಂಸತ್ ಭವನದಲ್ಲಿ ಭಾರತದ ಗೌರವಾನ್ವಿತ ಉಪರಾಷ್ಟ್ರಪತಿಗಳೂ ರಾಜ್ಯಸಭೆಯ ಅಧ್ಯಕ್ಷರೂ ಆದ ಸಿ. ಪಿ. ರಾಧಾಕೃಷ್ಣನ್ ಅವರನ್ನು ಭೇಟಿಯಾಗಿ ಸೌಹಾರ್ದ ಮಾತುಕತೆ ನಡೆಸಿ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಆಹ್ವಾನಿಸಿದರು.

ನಾಯಕರ ಕನಸು ನನಸಾಗಿಸೋಣ

ನಿವೃತ್ತ ಯೋಧ ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿ ನಗರದ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ನೌಕಾಪಡೆ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಂಗಳೂರು: ಉತ್ತಮ ಪ್ರಜೆಯಾದರೆ ಮಾತ್ರ ದೇಶ ಉತ್ತಮವಾಗುತ್ತದೆ. ರಾಷ್ಟ್ರದ ನಾಯಕರ ಕನಸುಗಳನ್ನು ನನಸಾಗಿಸುವುದು ಪ್ರತಿ ನಾಗರಿಕನ ಜವಾಬ್ದಾರಿ ಎಂದು ನಿವೃತ್ತ ಯೋಧ ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿ ಹೇಳಿದರು.

ನಗರದ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ 81ನೇ ಭಾರತೀಯ ನೌಕಾಪಡೆ ದಿನದ ಅಂಗವಾಗಿ ಎನ್ಸಿಸಿ (ನೌಕಾಪಡೆ) ವತಿಯಿಂದ ಆಯೋಜಿಸಲಾಗಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದ ಭದ್ರತೆ ಪ್ರಮುಖವಾಗಿ ಮೂರು ವಿಭಾಗಗಳ ಕೈಯಲ್ಲಿದೆ. ನೌಕಾಪಡೆಯು ವಿಶ್ವದ 2ನೇ ಹಳೆಯ ಪಡೆಯಾಗಿದೆ.ಭಾರತದ ನೌಕಾಪಡೆ ವಿಶ್ವದ ಪ್ರಮುಖ ನೌಕಾಪಡೆಗಳಲ್ಲಿ ಒಂದಾಗಿದೆ. ಗುರಿ ಹಾಗೂ ಉದ್ದೇಶದೊಂದಿಗೆ ಮುನ್ನಡೆಯುವ ಕಾರ್ಯ ಮಾಡಬೇಕಿದೆ. ಗುರಿಯಿಲ್ಲದ ಜೀವನ ಗಾಳಿಯಲ್ಲಿ ಹೊಡೆದ ಬಾಣದಂತಾಗುತ್ತದೆ. ಶಿಸ್ತು,

ಸಮಯ ನಿರ್ವಹಣೆ, ಸಂವಹನ ಕೌಶಲ್ಯ, ನಾಯಕತ್ವದ ಗುಣಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ಸಲಹೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಗಣಪತಿ ಗೌಡ ಎಸ್., ಪ್ರತಿಯೊಬ್ಬರೂ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುವ ಮೂಲಕ ಗುರಿಯನ್ನು ಬೆನ್ನಟ್ಟಲು ಮುಂದಾಗಬೇಕು ಎಂದರು.

ಕಾರಾಗೃಹದಲ್ಲಿ ಸಹ ಕೈದಿಗಳ ಮೇಲೆ ಹಲ್ಲೆ

ಮಂಗಳೂರು: ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯೊಬ್ಬ ಸಹ ಕೈದಿಗಳಿಗೆ ಹಲ್ಲೆ ನಡೆಸಿರುವ ಬಗ್ಗೆ ಮತ್ತು ಅಧಿಕಾರಿ, ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ಬಗ್ಗೆ ಹಾಗೂ ಇತರ ಕೆಲವು ಕೈದಿಗಳು ಜೈಲಿನ ಅಧಿಕಾರಿ, ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ಬಗ್ಗೆ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ನ.29ರಂದು ವಿಚಾರಣಾಧೀನ ಖೈದಿ ಮುಹಮ್ಮದ್ ಆಸಿಫ್ ಎಂಬಾತ ಕಾರಾಗೃಹದ ಅಧೀಕ್ಷಕ ಶರಣಬಸಪ್ಪರ ಕಚೇರಿಯ ಮುಂದೆ ಏರುಧ್ವನಿಯಲ್ಲಿ ಕೂಗಾಡಿಕೊಂಡಿದ್ದಲ್ಲದೆ 'ಎ' ವಿಭಾಗದ ಎಲ್ಲಾ ಕೈದಿಗಳು ಹೊರಗೆ ಬರುವಂತೆ ಪ್ರೇರೇಪಿಸಿದ್ದ ಎಂದು ಆರೋಪಿಸಲಾಗಿದೆ. ಅದಕ್ಕೂ ಮೊದಲು ಅಡುಗೆ ಮನೆಯಲ್ಲಿ ಕೆಲಸ ಮಾಡುವ ಮೂವರು ಸಹ ಕೈದಿಗಳ ಮೇಲೆ ಹಲ್ಲೆ ನಡೆಸಿದ್ದ ಎನ್ನಲಾಗಿದೆ. ಈ ಬಗ್ಗೆ ಅಧೀಕ್ಷಕರು ಮತ್ತು ಸಿಬ್ಬಂದಿಯ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ್ದ ಎಂದು ಪ್ರಕರಣ ದಾಖಲಾಗಿದೆ. ಡಿ.2ರಂದು ಮುಹಮ್ಮದ್ ಆಸಿಫ್, ಮೊಯ್ದಿನ್ ಫರಾಝ್, ಇಬ್ರಾಹೀಂ ಖಲೀಲ್, ನಿಸಾರ್‌ಹುಸೈನ್ ಮತ್ತು ಮುಹಮ್ಮದ್ ಅಫೀಝ್ ಎಂಬ ಕೈದಿಗಳು ಕರ್ತವ್ಯ ನಿರತ ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ಬೈದು ಕರ್ತವ್ಯಕ್ಕೆ ಅಡ್ಡಿಪಡಿಸಿ ಬೆದರಿಕೆ ಹಾಕಿದ್ದಾರೆಂದು ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿಗಳಲ್ಲಿ ಕನ್ನಡದ ಪ್ರೇಮ ಮೂಡಿಸಿ

ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ ಉಡುಪಿ ಜಿಲ್ಲಾ ಪ್ರೌಢಶಾಲಾ ಕನ್ನಡ ಭಾಷಾ ಶಿಕ್ಷಕರ ಸಂಘ ದಿಂದ ಸಾಧಕ ಶಿಕ್ಷಕರ ಅಭಿನಂದನಾ ಕಾರ್ಯಕ್ರಮ ನಡೆಯಿತು.

ಉಡುಪಿ: ಕನ್ನಡ ಭಾಷೆ, ಕನ್ನಡ ಪ್ರೀತಿ, ಕನ್ನಡ ನುಡಿಯ ಪ್ರೇಮವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ಕಾರ್ಯವಾಗಬೇಕು. ಕನ್ನಡ ತರಗತಿಯೆಂದರೆ ಬರೀ ಪಾಠದ ಬೋಧನೆಯಲ್ಲ, ಅಲ್ಲಿ ಭಾಷಾ ಪ್ರಭುತ್ವ ಮತ್ತು ಸಾಹಿತ್ಯದ ಒಲವು ಬೆಳೆಯಬೇಕು. ಯುವ ಬರಹಗಾರರು ಸೃಜಿಸಬೇಕು ಎಂದು ನಾರಾಯಣ ಗುರು ಅಭಿವೃದ್ಧಿ ನಿಗಮ್ ಅಧ್ಯಕ್ಷ ಮಂಜುನಾಥ ಪೂಜಾರಿ ಮುದ್ರಾಡಿ ಹೇಳಿದರು.

ಅವರು ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ ಜರುಗಿದ ಉಡುಪಿ ಜಿಲ್ಲಾ ಪ್ರೌಢಶಾಲಾ ಕನ್ನಡ ಭಾಷಾ ಶಿಕ್ಷಕರ ಸಂಘ ಆಯೋಜಿಸಿದ ಸಾಧಕ ಶಿಕ್ಷಕರ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆಳ್ವಾಸ್ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕಿ ಸುಲತಾ ಹೆಗ್ಡೆ, ಕನ್ನಡ ಭಾಷೆಯನ್ನು ಬೆಳೆಸುವುದೆಂದರೆ ಭಾಷೆಯ ಗೌರವವನ್ನು ಹೆಚ್ಚಿಸುವುದು. ಒಳ್ಳೆಯ ಸಾಹಿತ್ಯ ಕೃತಿಗಳನ್ನು ಓದುವಂತೆ ಮತ್ತು ಬರೆಯುವಂತೆ ನಾವೆಲ್ಲರೂ ಪ್ರೋತ್ಸಾಹಿಸುವುದು ಎಂದರು.

ಉದ್ಯೋಗಕ್ಕೆ ಮಾತ್ರ ಕಲಿತರೆ ಉದ್ಯೋಗ ಸಿಗಬಹುದು. ಆದರೆ, ಮನಸ್ಸು ಆಹ್ಲಾದತೆಯಿಂದ ಕೂಡಿರಲು ಸಂಗೀತ, ಸಾಹಿತ್ಯ, ಲಲಿತ ಕಲೆಗಳಲ್ಲಿ ಒಲವಿರಬೇಕು. ಇವೆಲ್ಲವುಗಳ ಆಸಕ್ತಿಗೆ ಕನ್ನಡ ಪ್ರೀತಿ ಇರಬೇಕು ಎಂದು ಕೆ.ಬಿ. ಕೀರ್ತನ್ ಕುಮಾರ್ ಹೇಳಿದರು.

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿರಸಿ ಡಯಟ್ ಉಪನ್ಯಾಸಕ ನಾರಾಯಣ ಪರಮೇಶ್ವರ ಭಾಗ್ವತ್ ಅವರಿಗೆ ಸಂಘವು 'ಕನ್ನಡ ಜ್ಞಾನ ನೇಸರ' ಎಂಬ ಬಿರುದು ನೀಡಿ ಗೌರವಿಸಲಾಯಿತು. ಜಿಲ್ಲಾ ಮತ್ತು ರಾಜ್ಯ ಮಟ್ಟದ ಪ್ರಶಸ್ತಿ ವಿಜೇತ ಶಿಕ್ಷಕರನ್ನು ಅಭಿನಂದಿಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಗಿರಿಜಮ್ಮ, ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯ ಸಹ ಸಂಸ್ಥಾಪಕ ಅಶ್ವತ್ಥ್ ಎಸ್. ಎಲ್., ತಾಲೂಕು ಸಾಹಿ ಶಿಕಕರ ಸಂಘದ ಅಧ್ಯಕ್ಷ ಆನಂದ ಮಾಳ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷ ಪಿ. ವಿ. ಆನಂದ ಸಾಲಿಗ್ರಾಮ ಅಧ್ಯಕ್ಷತೆ ವಹಿಸಿದ್ದರು. ವಿಜಯ ಹೆಗಡೆ ಪ್ರಾರ್ಥಿಸಿದರು ಸಂಘದ ಜಿಲ್ಲಾ ಗೌರವಾಧ್ಯಕ್ಷ ಪ್ರಭಾಕರ ಶೆಟ್ಟಿ ಕೊಂಡಳ್ಳಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಂಘದ ತಾಲೂಕು ಘಟಕದ ಅಧ್ಯಕ್ಷ ಗಣೇಶ್ ಜಾಲೂರು ಸ್ವಾಗತಿಸಿ, ದೇವದಾಸ್ ಕೆರೆಮನೆ ನಿರೂಪಿಸಿದರು. ರಾಜೀವ್ ಶೇಡಿಮನೆ ವಂದಿಸಿದರು.

ಸಮಾರಂಭದಲ್ಲಿ ವಲಯವಾರು ಅಧ್ಯಕ್ಷರಾದ ರಮೇಶ್ ಕುಲಾಲ್, ಮಾಲತಿ, ಶಕುಂತಲಾ, ಮಹೇಶ್, ಸುಭೀಕ್ಷಾ ಸಹಕರಿಸಿದರು. ಬೈಂದೂರು, ಕುಂದಾಪುರ, ಬ್ರಹ್ಮಾವರ, ಕಾಪು, ಉಡುಪಿ, ಕಾರ್ಕಳ ವಲಯದ ಪ್ರೌಢ ಶಾಲಾ ಕನ್ನಡ ಭಾಷಾ ಶಿಕ್ಷಕರು ಭಾಗವಹಿಸಿದ್ದರು.

ಸಮಾಚಾರ ಸಣ್ಣದಲ್ಲ

ಕೇರಳ ಕಾಂಗ್ರೆಸ್ ಶಾಸಕ ರಾಹುಲ್ ಉಚ್ಚಾಟನೆ

ತಿರುವನಂತಪುರಂ: ಲೈಂಗಿಕ ಕಿರುಕುಳ ಆರೋಪ ಎದುರಿಸುತ್ತಿರುವ ಕೇರಳದ ಕಾಂಗ್ರೆಸ್ ಶಾಸಕ ರಾಹುಲ್ ಮಮ್ಕೂಟತಿಲ್‌ರನ್ನು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಕಡೆಗೂ ಉಚ್ಚಾಟಿಸಿದೆ. ಪಾಲಕ್ಕಾಡ್ ಶಾಸಕರ ವಿರುದ್ಧ ಹೆಚ್ಚುತ್ತಿರುವ ದೂರುಗಳು ಮತ್ತು ಬಾಕಿ ಇರುವ ಪ್ರಕರಣಗಳ ಹಿನ್ನೆಲೆಯಲ್ಲಿ ಎಐಸಿಸಿ ಅನುಮೋದನೆಯೊಂದಿಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ರಾಹುಲ್‌ರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ವಜಾಗೊಳಿಸಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಸನ್ನಿ ಜೋಸೆಫ್ ಹೇಳಿದ್ದಾರೆ. ತಿರುವನಂತಪುರಂ ಪ್ರಧಾನ ಸೆಷನ್ಸ್ ನ್ಯಾಯಾಲಯ ಮಮ್ಕೂಟತಿಲ್‌ರ ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಳಿಸಿದ ಬಳಿಕ ಪಕ್ಷ ಉಚ್ಚಾಟನೆ ಕ್ರಮ ಕೈಗೊಳ್ಳಲಾಗಿದೆ. ಕಾಂಗ್ರೆಸ್ ಶಾಸಕ ರಾಹುಲ್ ಬಂಧನಕ್ಕೆ ಮುಂಚಿತವಾಗಿಯೇ ತಡೆ ನೀಡಲು ನ್ಯಾಯಾಲಯ ನಿರಾಕರಿಸಿದೆ. ರಾಹುಲ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಸನ್ನಿ ಜೋಸೆಫ್ ಮತ್ತು ಯುಡಿಎಫ್ ಸಂಚಾಲಕ ಅಡೂರ್ ಪ್ರಕಾಶ್ ಒತ್ತಾಯಿಸಿದ್ದರು.

ಆ್ಯಸಿಡ್: ವಿಚಾರಣೆ ವಿಳಂಬಕ್ಕೆ ಕಿಡಿನುಡಿ

ದೆಹಲಿ: 2009ರಲ್ಲಿ ದೆಹಲಿಯಲ್ಲಿ ನಡೆದಿದ್ದ ಆ್ಯಸಿಡ್ ದಾಳಿ ಪ್ರಕರಣದ ವಿಚಾರಣೆಯಲ್ಲಿ 16 ವರ್ಷಗಳಷ್ಟು ಕಾಲ ವಿಳಂಬವಾಗಿರುವುದು 'ಬಹಳ ನಾಚಿಕೆಗೇಡಿನ ಸಂಗತಿ' ಎಂದು ಸುಪ್ರೀಂ ಕೋರ್ಟ್ ಗುರುವಾರ ಕಿಡಿಕಾರಿದೆ. ದೆಹಲಿಯ ರೋಹಿಣಿ ವಿಚಾರಣಾ ನ್ಯಾಯಾಲಯದಲ್ಲಿ 2009ರ ಆ್ಯಸಿಡ್ ದಾಳಿ ಪ್ರಕರಣದ ವಿಚಾರಣೆ ಇನ್ನೂ ಬಾಕಿ ಇವೆ ಎಂದು ಆ್ಯಸಿಡ್ ದಾಳಿ ಸಂತ್ರಸ್ತೆಯ ವಕೀಲರು ಪೀಠಕ್ಕೆ ತಿಳಿಸಿದಾಗ, ರಾಷ್ಟ್ರದ ರಾಜಧಾನಿಯಲ್ಲಿಯೇ ಇಂತಹ ಪರಿಸ್ಥಿತಿ ಇದ್ದರೆ ಹೇಗೆ? ಉಳಿದೆಡೆ ಹೇಗೆ, ಯಾರು ನಿಭಾಯಿಸುತ್ತಾರೆ? ಕ್ರಿಮಿನಲ್ ವಿಚಾರಣೆಯಲ್ಲಿನ ಈ ವಿಳಂಬ ನ್ಯಾಯದಾನ ವ್ಯವಸ್ಥೆಯ ಕುರಿತ ದೊಡ್ಡ ಅಣಕ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾ. ಜೋಯ್‌ಮಲ್ಯ ಬಾಗ್ಚಿ ನೇತೃತ್ವದ ದ್ವಿಸದಸ್ಯ ಪೀಠ ಟೀಕಿಸಿದೆ.

ನಂತರ ದ್ವಿಸದಸ್ಯ ಪೀಠವ, ದೇಶಾದ್ಯಂತದ ನ್ಯಾಯಾಲಗಳಲ್ಲಿ ವಿಚಾರಣೆ ಬಾಕಿ ಆಗಿರುವ ಎಲ್ಲಾ ಆ್ಯಸಿಡ್ ದಾಳಿ ಪ್ರಕರಣಗಳು ಮತ್ತು ವಿಚಾರಣೆಯ ಹಂತದ ಕುರಿತು ವಿವರ ವರದಿ ಸಲ್ಲಿಸುವಂತೆ ಎಲ್ಲಾ ಹೈಕೋರ್ಟ್‌ಗಳಿಗೆ ಆದೇಶಿಸಿತು. ಪ್ರಕರಣದ ವಿಚಾರಣೆಯನ್ನು ಮುಂದಿನ ವಾರಕ್ಕೆ ಪಟ್ಟಿ ಮಾಡಿತು.

ಕರ್ನಾಟಕದಲ್ಲಿ 2,781 ಕೋಟಿ ರು. ಸಂಗ್ರಹ

ದೆಹಲಿ: ಕರ್ನಾಟಕದ ರಾಷ್ಟ್ರೀಯ ಹೆದ್ದಾರಿಗಳಲ್ಲಿ 66 ಟೋಲ್ ಪ್ಲಾಜಾಗಳ ಮೂಲಕ 2025-26ನೇ ಸಾಲಿನಲ್ಲಿ ಇಲ್ಲಿಯವರೆಗೆ ₹2,781 ಕೋಟಿ ಶುಲ್ಕ ಸಂಗ್ರಹಿಸಲಾಗಿದೆ ಎಂದು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಸಂಸದರಾದ ಜಿ.ಕುಮಾರ ನಾಯಕ ಹಾಗೂ ದೀಪೆಂದರ್ ಸಿಂಗ್ ಹೂಡಾ ಪ್ರಶ್ನೆಗಳಿಗೆ ಉತ್ತರ ನೀಡಿರುವ ಸಚಿವರು, 10 ವರ್ಷಗಳಲ್ಲಿ ಸಂಗ್ರಹಿಸಿದ ರಸ್ತೆ ಶುಲ್ಕದ ವಿವರಗಳನ್ನು ನೀಡಿದ್ದಾರೆ. 2014-15ರಲ್ಲಿ ₹1,213 ಕೋಟಿ ಸಂಗ್ರಹವಾಗಿದ್ದರೆ, 2024-25ರಲ್ಲಿ ₹4,320 ಕೋಟಿ ಸಂಗ್ರಹಿಸಲಾಗಿದೆ. ಟೋಲ್ ಶುಲ್ಕ ಸಂಗ್ರಹ ಪ್ರಮಾಣ ದಶಕದಲ್ಲೇ ಮೂರು ಪಟ್ಟು ಹೆಚ್ಚಾಗಿದೆ.

ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಪ್ರಶ್ನೆಗೆ ಕೇಂದ್ರ ಕೃಷಿ, ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಉತ್ತರ

ಹೆಚ್ಚಿನ ಹವಾಮಾನ: ಅಪಾಯದಲ್ಲಿವೆ ರಾಜ್ಯದ 3 ಜಿಲ್ಲೆ



ದೆಹಲಿ: ಗದಗ, ಹಾವೇರಿ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಅತಿ ಹೆಚ್ಚಿನ ಹವಾಮಾನ-ಅಪಾಯದ ವರ್ಗದಲ್ಲಿ ಇರಿಸಲಾಗಿದೆ, ಇದು ರಾಜ್ಯದ ಮಳೆಯಾಶ್ರಿತ ಕೃಷಿ ಪ್ರದೇಶಗಳು ಹವಾಮಾನ ಬದಲಾವಣೆಗೆ ಹೆಚ್ಚುತ್ತಿರುವ ದುರ್ಬಲತೆಗೆ ಸಾಕ್ಷಿಯಾಗಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ದಾವಣಗೆರೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಭಾರತೀಯ ಕೃಷಿ ಸಂಶೋಧನಾ ಮಂಡಳಿ ಹವಾಮಾನ ಸ್ಥಿತಿಸ್ಥಾಪಕ ಕೃಷಿಯಲ್ಲಿ ರಾಷ್ಟ್ರೀಯ ಆವಿಷ್ಕಾರಗಳು) ಯೋಜನೆಯಡಿಯಲ್ಲಿ ಈ ಮೌಲ್ಯಮಾಪನವನ್ನು ನಡೆಸಲಾಗಿದೆ. ಹವಾಮಾನ ಬದಲಾವಣೆಯ ಅಂತರ ಸರಕಾರಿ ಸಮಿತಿ ಪ್ರೋಟೋಕಾಲ್‌ಗಳನ್ನು ಅನುಸರಿಸಿ ದೇಶಾದ್ಯಂತ 651 ಪ್ರಧಾನವಾಗಿ ಕೃಷಿ ಜಿಲ್ಲೆಗಳಿಗೆ ಜಿಲ್ಲಾಮಟ್ಟದ ಅಪಾಯ ಮತ್ತು ದುರ್ಬಲತೆಯ ವಿಶ್ಲೇಷಣೆಯನ್ನು ಈ ಅಧ್ಯಯನವು ಒಳಗೊಂಡಿತ್ತು. ದೇಶಾದ್ಯಂತ ಮೌಲ್ಯಮಾಪನ ಮಾಡಲಾದ 651 ಜಿಲ್ಲೆಗಳಲ್ಲಿ 310 ಜಿಲ್ಲೆಗಳನ್ನು ಹವಾಮಾನ ಬದಲಾವಣೆಯ ಪರಿಣಾಮಗಳಿಗೆ ಗುರಿಯಾಗಿಸುವವು ಎಂದು ಗುರುತಿಸಲಾಗಿದೆ. ಇವುಗಳಲ್ಲಿ 109 ಜಿಲ್ಲೆಗಳನ್ನು 'ಅತಿ ಹೆಚ್ಚಿನ' ಹವಾಮಾನ ಅಪಾಯವನ್ನು ಎದುರಿಸುತ್ತಿರುವ ಜಿಲ್ಲೆಗಳಾಗಿ ವರ್ಗೀಕರಿಸಲಾಗಿದೆ. ಇದರಲ್ಲಿ ಕರ್ನಾಟಕದ ಗದಗ, ಹಾವೇರಿ ಮತ್ತು ಚಿತ್ರದುರ್ಗ ಸೇರಿವೆ ಎಂದರು. ಈ ವರ್ಗೀಕರಣವು ಈ ಜಿಲ್ಲೆಗಳು ಬರ ಪರಿಸ್ಥಿತಿಗಳಿಗೆ, ಏರಿಳಿತದ ಮಾನ್ಸೂನ್ ಮಾದರಿಗಳು ಮತ್ತು ಹೆಚ್ಚುತ್ತಿರುವ ಶಾಖದ ಒತ್ತಡಕ್ಕೆ ಒಡ್ಡಿಕೊಳ್ಳುವುದರ ಬಗ್ಗೆ ತಿಳಿಸುತ್ತದೆ. ಇದರಿಂದ ಬೆಳೆ ಉತ್ಪಾದಕತೆ ಮತ್ತು ರೈತರ ಜೀವನೋಪಾಯಕ್ಕೆ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಕೃಷಿಯ ಮೇಲಿನ ಹವಾಮಾನ ಬದಲಾವಣೆಯ ಪರಿಣಾಮವನ್ನು ಪರಿಹರಿಸಲು, 2014 ರಿಂದ 2024 ರವರೆಗೆ ಕಳೆದ 10 ವರ್ಷಗಳಲ್ಲಿ ಐಸಿಎಆರ್ 2,900 ಬೆಳೆ ಪ್ರಭೇದಗಳನ್ನು ಬಿಡುಗಡೆ ಮಾಡಿದೆ ಎಂದು ಸಚಿವರು ತಿಳಿಸಿದ್ದಾರೆ.

> ರಾಷ್ಟ್ರೀಯ ಮೌಲ್ಯಮಾಪನವನ್ನು ಆಧರಿಸಿದ ವರ್ಗೀಕರಣ ಮಾಡಲಾಗಿದೆ. ಅನಿಯಮಿತ ಮಳೆ, ದೀರ್ಘಕಾಲದ ಶುಷ್ಕ ಹವಾಮಾನ ಮತ್ತು ಹೆಚ್ಚುತ್ತಿರುವ ತಾಪಮಾನದಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಸೂಚಿಸುತ್ತದೆ, ಇದರಿಂದ ಉತ್ತರ ಮತ್ತು ಮಧ್ಯ ಕರ್ನಾಟಕದಾದ್ಯಂತ ಕೃಷಿ ಚಟುವಟಿಕೆಗಳಿಗೆ ಅಡ್ಡಿಪಡಿಸುತ್ತಿದೆ.
> -**ಶಿವರಾಜ್ ಸಿಂಗ್ ಚೌಹಾಣ್**, ಕೇಂದ್ರ ಸಚಿವ

ಹವಾಮಾನ-ನಿರೋಧಕ ಮತ್ತು ಬರ ಮತ್ತು ಪ್ರವಾಹ, ಸಹಿಷ್ಣು ಪ್ರಭೇದಗಳಾದ ಅಕ್ಕಿ, ಗೋಧಿ, ಸೋಯಾಬೀನ್, ಸಾಸಿವೆ, ಕಡಲೆ, ಜೋಳ, ಕಡಲೆ ಮತ್ತು ರಾಗಿಗಳನ್ನು ಹಲವಾರು ಹಳ್ಳಿಗಳಲ್ಲಿ ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಪ್ರದರ್ಶಿಸಲಾಗುತ್ತಿದೆ. ಎನ್ಐಸಿಆರ್‌ಎ ಅಡಿಯಲ್ಲಿ ತಾಂತ್ರಿಕ ಸಹಾಯವನ್ನು 151 ದುರ್ಬಲ ಜಿಲ್ಲೆಗಳಿಗೆ ವಿಸ್ತರಿಸಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಲ್ಲಿ ಹವಾಮಾನ-ನಿರೋಧಕ ಅಭ್ಯಾಸಗಳ ಅಳವಡಿಕೆಯನ್ನು ಉತ್ತೇಜಿಸಲು ಹೆಚ್ಚುವರಿ ಜಿಲ್ಲೆಗಳನ್ನು ಯೋಜಿಸಲಾಗಿದೆ ಎಂದು ಚೌಹಾಣ್ ಹೇಳಿದರು. ಸುಗಮ ಕಾರ್ಯನಿರ್ವಹಣೆ ಮತ್ತು ಅಗತ್ಯ ಆಧಾರಿತ ತಂತ್ರಜ್ಞಾನದ ನುಗ್ಗುವಿಕೆಯನ್ನು ಖಚಿತ ಪಡಿಸಿಕೊಳ್ಳಲು ಗ್ರಾಮ ಹವಾಮಾನ ಅಪಾಯ ನಿರ್ವಹಣಾ ಸಮಿತಿಗಳು, ಬೀಜ ಬ್ಯಾಂಕುಗಳು ಮತ್ತು ಮೇವು ಬ್ಯಾಂಕುಗಳಂತಹ ಗ್ರಾಮ ಮಟ್ಟದ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಕೃಷಿ ವಿಜ್ಞಾನ ಕೇಂದ್ರಗಳ ಅಡಿಯಲ್ಲಿ ಸ್ಥಾಪಿಸಲಾದ ಕಸ್ಟಮ್ ನೇಮಕಾತಿ ಕೇಂದ್ರಗಳು ಸುಧಾರಿತ ಯಂತ್ರೋಪಕರಣಗಳಿಗೆ ಪ್ರವೇಶವನ್ನು ಒದಗಿಸುವ ಮೂಲಕ ರೈತರಿಗೆ ಸಕಾಲಿಕ ಕೃಷಿ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಸಹಾಯ ಮಾಡುತ್ತಿವೆ ಎಂದು ಚೌಹಾಣ್ ಹೇಳಿದರು.

ಹೊಸ್ತಿಲ ಹುಣ್ಣಿಮೆ ಹಿನ್ನೆಲೆ ಭಕ್ತರ ಸಂಖ್ಯೆ ಹೆಚ್ಚಳ | ಕೊರೆವ ಚಳಿಯಲ್ಲಿ ಸ್ನಾನ ಮಾಡಿದ ಭಕ್ತ ಗಣ

ಹುಲಿಗೆಮ್ಮ ದೇಗುಲದಲ್ಲಿ ಭಕ್ತರ ದಂಡು

ಕೊಪ್ಪಳ: ತಾಲೂಕಿನ ಪೌರಾಣಿಕ ಪ್ರಸಿದ್ಧ ಹುಲಗಿ ಗ್ರಾಮದ ಹುಲಿಗೆಮ್ಮ ದೇವಿ ದೇವಸ್ಥಾನಕ್ಕೆ ಲಕ್ಷಾಂತರು ಭಕ್ತರು ಭೇಟಿ ನೀಡಿ, ದೇವಿ ದರ್ಶನ ಪಡೆದರು. ಹೊಸ್ತಿಲ ಹುಣ್ಣಿಮೆ ಹಿನ್ನೆಲೆ ಲಕ್ಷಾಂತರ ಭಕ್ತರು ಹುಲಿಗೆ ಕಡೆ ಹರಿದು ಬಂದಿದ್ದು, ತಿಂಗಳಿನಿಂದ ತಿಂಗಳಿಗೆ ಭಕ್ತರ ಸಂಖ್ಯೆ ಏರಿಕೆ ಆಗುತ್ತಿದೆ. ಹುಬ್ಬಳ್ಳಿ, ಗದಗ, ಬಳ್ಳಾರಿ ಹಾಗೂ ಹೊಸಪೇಟೆ ಮಾರ್ಗದಿಂದ ರೈಲುಗಳು ಬಂದಾಗ ದೇವಸ್ಥಾನದ ಆವರಣದಲ್ಲಿ ಭಕ್ತರ ಸಂಖ್ಯೆ ಏರಿಕೆ ಆಗಿದ್ದು ಕಂಡು ಬಂತು.

ಸಾಮಾನ್ಯವಾಗಿ ಪ್ರತಿ ತಿಂಗಳ ಹುಣ್ಣಿಮೆ ಹಾಗೂ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಹುಲಿಗಿಯ ಹುಲಿಗೆಮ್ಮ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ಅದರಂತೆ ಗುರುವಾರ ಹುಣ್ಣಿಮೆ ಇದ್ದಿದ್ದರಿಂದ ಲಕ್ಷಾಂತರು ಭಕ್ತರು ಬಂದು, ಕೊರೆಯುವ ಚಳಿಯಲ್ಲೇ ನದಿ ಸ್ನಾನ ಮಾಡಿ, ಸರತಿಯಲ್ಲಿ ನಿಂತಿ ದೇವಿ

ದರ್ಶನ ಪಡೆದಿದ್ದು ಕಂಡು ಬಂತು. ಕರ್ನಾಟಕ ವಿವಿಧ ಜಿಲ್ಲೆ ಸೇರಿ ಆಂಧ್ರ ಹಾಗೂ ಮಹಾರಾಷ್ಟ್ರದಿಂದ ಹೆಚ್ಚಿನ ಸಂಖ್ಯೆ ಭಕ್ತರು ಬಂದಿದ್ದು ಕಂಡು ಬಂತು. ಇನ್ನು ಶಕ್ತಿ ಯೋಜನೆ ಎಫೆಕ್ಟ್ ನಿಂದ ರಾಜ್ಯದ ನಾನಾ ಭಾಗದಿಂದ ಹುಲಿಗೆಮ್ಮ ದೇವಸ್ಥಾನಕ್ಕೆ ಬರುವ ಭಕ್ತರ ಸಂಖ್ಯೆ ತಿಂಗಳಿನಿಂದ ತಿಂಗಳಿಗೆ ಹೆಚ್ಚುತ್ತಿದ್ದು, ಹೊಸ್ತಿಲ ಹುಣ್ಣಿಮೆಗೆ ಭಾರಿ ಪ್ರಮಾಣದಲ್ಲಿ ಭಕ್ತರು ಬಂದಿದ್ದು ಕಂಡು ಬಂತು.

ಇನ್ನು ಹನುಮಮಾಲೆ ವಿಸರ್ಜನೆಗೆ ಗಂಗಾವತಿ ತಾಲೂಕು ಅಂಜನಾದ್ರಿ ಬೆಟ್ಟಕ್ಕೆ ಬಂದಿದ್ದ ಭಕ್ತರ ಪೈಕಿ ಸಾಕಷ್ಟು ಜನ ಹುಲಿಗೆಮ್ಮ ದೇವಿ ದರ್ಶನ ಪಡೆದರು. ಗುರುವಾರ ಹುಣ್ಣಿಮೆ ಹಿನ್ನೆಲೆ ಸಾವಿರಾರು ಮಾಲೆ ವಿಸರ್ಜಿಸಿದ್ದ ಭಕ್ತರು ಹುಲಗಿ ಗ್ರಾಮದಲ್ಲೇ ಉಳಿದುಕೊಂಡು ಬೆಳ್ಳಂಬೆಳಗ್ಗೆಯೇ ಎದ್ದು ದೇವಿ ದರ್ಶನ ಪಡೆದರು. ಕೊರೆಯುವ ಚಳಿ ಲೆಕ್ಕಿಸದೆ ಸಾವಿರಾರು ಭಕ್ತರು ಬುಧವಾರ ರಾತ್ರಿಯೇ ಹುಲಿಗೆಮ್ಮದೇವಿ ದೇವಸ್ಥಾನದಲ್ಲಿ ಉಳಿದುಕೊಂಡು ಬೆಳ್ಳಂಬೆಳಗ್ಗೆಯೇ ದರ್ಶನ ಪಡೆದರು. ಇನ್ನು ಹುಣ್ಣಿಗೆ ಮರು ದಿನವೇ ಶುಕ್ರವಾರ ಆಗಿದ್ದರಿಂದ ಭಕ್ತರು ಗುರುವಾರ ಸಂಜೆ ವರೆಗೆ ಕಿಕ್ಕಿರಿದು ತುಂಬಿದ್ದರು. ಸಾವಿರಾರು ಭಕ್ತರು ಹುಲಿಗಿ ಸನ್ನಿಧಿಯಲ್ಲಿಯೇ ಉಳಿದಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

ಸುಗಮ ಸಂಚಾರಕ್ಕೆ ಭಕ್ತರು ಖುಷ್

ಸೀಗಿ ಹುಣ್ಣಿಮೆಯಂದು ನೂಕು ನುಗ್ಗಲು ಆಗಿದ್ದರಿಂದ ಎಚ್ಚೆತ್ತ ಜಿಲ್ಲಾಡಳಿತ ಹುಲಿಗಿಯಲ್ಲಿ ತೆರವು ಕಾರ್ಯಾಚರಣೆ ಮಾಡಿತ್ತು. ತೆರವು ಕಾರ್ಯಾಚರಣೆ ನಡೆಸಿ, ರಸ್ತೆಗೆ ಮೇಲೆ ವ್ಯಾಪಾರ ಮಾಡುವುದಕ್ಕೆ ಪೊಲೀಸರು ಕಡಿವಾಣ ಹಾಕಿದ್ದರು. ಇದರಿಂದ ಭಕ್ತರ ಓಡಾಟಕ್ಕೆ ಸುಲಭವಾಗಿದೆ. ದೇವಸ್ಥಾನದ ಮುಖ್ಯದ್ವಾರದಲ್ಲಿ ಕಬ್ಬಿಣದ ಬ್ಯಾರಿಕೇಡ್ ಅಳವಡಿಸಿ ಸಾರ್ವಜನಿಕರ ಹಾಗೂ ಗಣ್ಯ ವ್ಯಕ್ತಿಗಳ ದರ್ಶನಕ್ಕೆ ಪ್ರತ್ಯೇಕ ಪಥ ಮಾಡಲಾಗಿದೆ. ಇದರಿಂದ ಸಾರ್ವಜನಿಕರಿಗೆ ದರ್ಶನದ ಭಾಗ್ಯ ಸುಲಭವಾಗಿ ಲಭಿಸುತ್ತಿದೆ.

ಹೆಚ್ಚಿದ ಪೊಲೀಸ್ ಭದ್ರತೆ

ಪ್ರತಿ ತಿಂಗಳು ಹುಲಿಗಿಗೆ ಬರುಬ ಭಕ್ತರ ಸಂಖ್ಯೆ ಹೆಚ್ಚುತ್ತಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಭದ್ರತೆಗೆ ಹೆಚ್ಚು ಸಿಬ್ಬಂದಿ ನಿಯೋಜನೆ ಮಾಡಿದ್ದಾರೆ. ಹುಣ್ಣಿಮೆ ಹಿನ್ನೆಲೆ ಹುಲಗಿಯಲ್ಲಿ 125 ಪೊಲೀಸ್ ಸಿಬ್ಬಂದಿ, 25 ಜನ ಅಧಿಕಾರಿಗಳು, ಎರಡು ಕೆಎಸ್‌ಆರ್‌ಪಿ, ತುಕಡಿ, 5 ಡಿಆರ್ ವ್ಯಾನ್ ಹಾಗೂ ಬಳ್ಳಾರಿಯಿಂದ 100 ಜನ ಹೋಂ ಗಾರ್ಡ್‌ಗಳನ್ನು ಕರ್ತವ್ಯಕ್ಕೆ ನಿಯೋಜಿಸಿದ್ದಾರೆ. ಆಯಕಟ್ಟಿನ ಸ್ಥಳದಲ್ಲಿ ಬ್ಯಾರಿಕೇಡ್ ಅಳವಡಿಸಿ ದೇವಸ್ಥಾನದ ಎದುರಿನ ಜಾಗದಲ್ಲಿ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದೆ. ಕೊಪ್ಪಳ ಗ್ರಾಮೀಣ ಠಾಣೆಯ ಸಿಪಿಐ ಡಿ.ಸುರೇಶ ಸ್ಥಳದಲ್ಲಿಯೇ ಇದ್ದು ಭದ್ರತೆ ನೋಡಿಕೊಂಡರು.

ರುಪಾಯಿ ಮೌಲ್ಯ ಕುಸಿತದಿಂದ ನಿಜವಾದ ಆರ್ಥಿಕ ಸ್ಥಿತಿ ದರ್ಶನ

ದೆಹಲಿ: ಅಮೆರಿಕದ ಡಾಲರ್ ಎದುರು ರುಪಾಯಿ ಮೌಲ್ಯವು ದಾಖಲೆ ಮಟ್ಟಕ್ಕೆ ಕುಸಿದಿರುವುದು ದೇಶದ ನಿಜವಾದ ಆರ್ಥಿಕ ಪರಿಸ್ಥಿತಿಯನ್ನು ತೋರಿಸುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಈ ಸಂಬಂಧ ಕೇಂದ್ರ ಸರಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಅವರು, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರುಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಬುಧವಾರ ₹90.15ಕ್ಕೆ ಕುಸಿದಿತ್ತು. ಗುರುವಾರದ ಆರಂಭಿಕ ವಹಿವಾಟಿನಲ್ಲೂ ಅಮೆರಿಕದ ಡಾಲರ್ ಎದುರು ರುಪಾಮಿ ಮೌಲ್ಯ ಮತ್ತಷ್ಟು 28 ಪೈಸೆ ಕುಸಿತ ಕಂಡು ಸಾರ್ವಕಾಲಿಕ ಕನಿಷ್ಠ ಮೊತ್ತವಾದ ₹90.43ಕ್ಕೆ ತಲುಪಿದೆ. ಈ ಹಿಂದೆ ರುಪಾಯಿ ಮೌಲ್ಯ ಕುಸಿತ ಕಂಡಿದ್ದಾಗ ಸ್ವತಃ ಮೋದಿ ಅವರೇ ಸರಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಈಗ ರುಪಾಯಿ ಮೌಲ್ಯ ದಾಖಲೆ ಕುಸಿತ ಕಂಡಿದೆ. ಇದು ದೇಶದ ನಿಜವಾದ ಆರ್ಥಿಕ ಸ್ಥಿತಿಯನ್ನು ತೋರಿಸುತ್ತದೆ. ಒಂದು ವೇಳೆ ಮೋದಿ ಸರಕಾರದ ನೀತಿಗಳು ಸರಿಯಾಗಿದ್ದರೆ ರುಪಾಯಿ ಇಷ್ಟೊಂದು ಕುಸಿಯುತ್ತಿರಲಿಲ್ಲ ಎಂದು ಹೇಳಿದರು.

> **2014ರಲ್ಲಿ ರುಪಾಯಿ ಮೌಲ್ಯ ಕುಸಿಯುತ್ತಿದೆ. ನೀವು ಇದಕ್ಕೆ ಉತ್ತರಿಸಲೇಬೇಕು ಎಂದು ಸರಕಾರವನ್ನು ಮೋದಿ ಪ್ರಶ್ನಿಸಿದ್ದರು. ನಾವು ಈಗ ಅದೇ ಪ್ರಶ್ನೆಯನ್ನು ಪ್ರಧಾನಿ ಅವರನ್ನು ಕೇಳುತ್ತಿದ್ದೇವೆ. ದೇಶವು ಅಭಿವೃದ್ಧಿ ಸಾಧಿಸು ತ್ತಿದ್ದು, ಆರ್ಥಿಕ ಸ್ಥಿತಿ ಉತ್ತಮವಾಗಿಯೇ ಇದೆ ಎಂದು ಸರಕಾರವು ಹೇಳಿಕೊಳ್ಳುತ್ತಿದೆ. ಆದರೆ ರುಪಾಯಿ ಮೌಲ್ಯ ಕುಸಿದಾಗ ದೇಶದ ನಿಜವಾದ ಆರ್ಥಿಕ ಸ್ಥಿತಿ ಬಯಲಾಗುತ್ತಿದೆ.**
> -**ಮಲ್ಲಿಕಾರ್ಜುನ ಖರ್ಗೆ** ಎಐಸಿಸಿ ಅಧ್ಯಕ್ಷ

ಪ್ರತಿ ಡಾಲರ್‌ಗೆ 90 ರುಪಾಯಿ ಈಗ ಅವರ ಉತ್ತರ ಏನು?

ದೆಹಲಿ: ಡಾಲರ್ ಎದುರು ರುಪಾಯಿ ₹90ಕ್ಕೆ ಕುಸಿದ ಬೆನ್ನಲ್ಲೇ ಬಿಜೆಪಿ ವಿರುದ್ಧ ಹರಿ ಹಾಯ್ದಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಡಾ.ಮನಮೋಹನ ಸಿಂಗ್ ಅವರ ಕಾಲದಲ್ಲಿ ಅಬ್ಬರಿಸುತ್ತಿದ್ದವರು ಈಗೇನು ಹೇಳುತ್ತಾರೆ? ಎಂದಿದ್ದಾರೆ. ಈ ಕುರಿತು ಸಂಸತ್ ಭವನ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲ ವರ್ಷಗಳ ಹಿಂದೆ ಡಾ.ಮನಮೋಹನ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಡಾಲರ್ ಎದುರು ರುಪಾಯಿ ಕುಸಿದಿತ್ತು. ಆಗ ಇದೇ ಜನ ಏನಂದಿದ್ದರು? ಅವರ ಉತ್ತರ ಈಗ ಏನು? ರುಪಾಯಿ ಬೆಲೆ ಏಕೆ ಕುಸಿಯುತ್ತಿದೆ ಎಂದು ಆಡಳಿತದಲ್ಲಿರುವ ಬಿಜೆಪಿಯವರನ್ನು ಕೇಳಿ. ನನ್ನನ್ನೇನು ಕೇಳುತ್ತೀರಿ? ಎಂದಿದ್ದಾರೆ.

ಹಣಕಾಸು ನೀತಿ ಸಮಿತಿ ನಿರ್ಧಾರಕ್ಕೂ ಮೊದಲೇ ಕೇಂದ್ರೀಯ ಬ್ಯಾಂಕ್ ಮಧ್ಯ ಪ್ರವೇಶಕ್ಕೆ ಒಲವು ತೋರದ ಕಾರಣ ವಿದೇಶಿ ವಿನಿಮಯ ವ್ಯಾಪಾರಿಗಳಿಂದ, ಆಮದುದಾರ ರಿಂದ ಡಾಲರ್‌ಗೆ ಬೇಡಿಕೆ ಹೆಚ್ಚಳವಾಗಿದೆ. ಇದರಿಂದ ಸ್ಥಳೀಯ ಕರೆನ್ಸಿ ಮೇಲೆ ಒತ್ತಡ ಹೆಚ್ಚಾಗಿದೆ. ಗುರುವಾರವೂ ರುಪಾಯಿ ಮೌಲ್ಯ ಮತ್ತೆ 28 ಪೈಸೆ ಕುಸಿದಿದೆ. ಆ ಮೂಲಕ ಸರ್ವಕಾಲಿಕ ಕುಸಿತ ₹90.43 ದಾಖಲಿಸಿದೆ.

ಶೂನ್ಯವೇಳೆಯಲ್ಲಿ ಬಿಜೆಪಿ ಸಂಸದ ಅರುಣ್ ಗೋವಿಲ್ ಆಗ್ರಹ

ಮಸೀದಿ-ಮದರಸಾಗಳಲ್ಲಿ ಸಿಸಿಟಿವಿ ಅಳವಡಿಸಿ

ದೆಹಲಿ: ಸಾರ್ವಜನಿಕ ಸ್ಥಳಗಳಲ್ಲಿ ಭದ್ರತೆಯನ್ನು ಹೆಚ್ಚಿಸಲು ಮಸೀದಿಗಳು ಮತ್ತು ಮದರಸಾಗಳಲ್ಲಿ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂದು ಬಿಜೆಪಿ ಸಂಸದ ಅರುಣ್ ಗೋವಿಲ್ ಗುರುವಾರ ಆಗ್ರಹಿಸಿದ್ದಾರೆ.

ಲೋಕಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, ಈ ಬೇಡಿಕೆಯು ಯಾವುದೇ ಧರ್ಮದ ವಿರುದ್ಧವಲ್ಲ ಬದಲಾಗಿ ರಾಷ್ಟ್ರೀಯ ಭದ್ರತೆ ಮತ್ತು ಅಮೂಲ್ಯ ಜೀವವನ್ನು ರಕ್ಷಿಸುವ ಉದ್ದೇಶ ಹೊಂದಿದೆ. ದೇವಾಲಯ, ಚರ್ಚ್, ಶಾಲಾ ಮತ್ತು ಕಾಲೇಜುಗಳಲ್ಲಿ ಅಳವಡಿಸಿದಂತೆ ಮಸೀದಿಗಳಲ್ಲಿಯೂ ಸಿಸಿ ಟಿವಿ ಅಳವಳಡಿಸಬೇಕು. ಆ ಮೂಲಕ ಮದರಸಾಗಳು ಮತ್ತು ಮಸೀದಿಗಳಿಗೆ ಭೇಟಿ ನೀಡುವ ಜನರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ಮುಖ್ಯ.

ಇಸ್ಲಾಂ ಧರ್ಮದ ಪವಿತ್ರ ಸ್ಥಳವಾದ ಮೆಕ್ಕಾದಲ್ಲಿಯೂ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಈ ನಿಟ್ಟಿನಲ್ಲಿ ಸರಕಾರ ಏಕರೂಪದ ರಾಷ್ಟ್ರೀಯ ಭದ್ರತಾ ನೀತಿಯನ್ನು ರೂಪಿಸಬೇಕು ಎಂದು ಒತ್ತಾಯಿಸಿದರು.

ಟಾಟಾ ಸಂಸ್ಥೆ ಜೊತೆ ಓಪನ್ ಎಐ ಮೈತ್ರಿ

ಓಪನ್‌ಎಐ ಮತ್ತು ಟಿಸಿಎಸ್ ನಡುವೆ ಭಾರತದಲ್ಲಿ ತಂತ್ರಜ್ಞಾನ ಮೈತ್ರಿ ಚರ್ಚೆಗಳು ಅಂತಿಮ ಹಂತ ತಲುಪಿವೆ. ಇದರಿಂದ ಓಪನ್ ಎಐಯ ಸ್ಟಾರ್ ಗೇಟ್ ಇಂಡಿಯಾ ಯೋಜನೆಗೆ ಅಧಿಕೃತ ಆರಂಭ ಸಿಗುವ ನಿರೀಕ್ಷೆ ಇದೆ. ಟಾಟಾ ಸಮೂಹದ ಕಂಪನಿಯೊಂದಿಗಿನ ಈ ತಂತ್ರಜ್ಞಾನ ಮೈತ್ರಿ ಓಪನ್ ಎಐನ ಸ್ಟಾರ್‌ಗೇಟ್ ಇಂಡಿಯಾ ಅಧ್ಯಾಯಕ್ಕೆ ನಾಂದಿ ಹಾಡುವ ನಿರೀಕ್ಷೆಯಿದೆ.

ವಿಶ್ವದಲ್ಲೇ ಅತಿ ಹೆಚ್ಚು ಮೌಲ್ಯ ಹೊಂದಿರುವ ಕೃತಕ ಬುದ್ಧಿಮತ್ತೆ ಕಂಪನಿಯಾದ ಓಪನ್‌ಎಐ, ಭಾರತದ ಅತಿದೊಡ್ಡ ಸಾಫ್ಟ್‌ವೇರ್ ಸೇವಾ ರಫ್ತು ಸಂಸ್ಥೆ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕೈಜೋಡಿಸಲು ಮುಂದಾಗಿವೆ. ಭಾರತದಲ್ಲಿ ಎಐ ಕಂಪ್ಯೂಟ್ ಮೂಲಸೌಕರ್ಯ ನಿರ್ಮಾಣ ಹಾಗು ಎಂಟರ್‌ಪ್ರೈಸ್‌ಗಳಿಗಾಗಿ ಏಜೆಂಟಿಕ್ ಎಐ ಪರಿಹಾರಗಳನ್ನು ಕಂಡುಕೊಳ್ಳಲು ಉನ್ನತ ಹಂತದ ಮಾತುಕತೆಯಲ್ಲಿ ಎರಡೂ ಕಂಪನಿಗಳೂ ತೊಡಗಿವೆ.

ಟಾಟಾ ಸಮೂಹದ ಕಂಪನಿಯೊಂದಿಗಿನ ಈ ತಂತ್ರಜ್ಞಾನ ಮೈತ್ರಿ ಓಪನ್‌ಎಐನ ಸ್ಟಾರ್ ಗೇಟ್ ಇಂಡಿಯಾ ಅಧ್ಯಾಯಕ್ಕೆ ನಾಂದಿ ಹಾಡುವ ನಿರೀಕ್ಷೆಯಿದೆ ಮತ್ತು ಟಿಸಿಎಸ್ ಅನ್ನು ವಿಶ್ವದ ಅತೀ ದೊಡ್ಡ ಎಐಆಧಾರಿತ ಸೇವಾ ಕಂಪನಿಯನ್ನಾಗಿ ಮಾಡುವ ಮಹತ್ವಾಕಾಂಕ್ಷೆಗೆ ವೇಗ ನೀಡಲಿದೆ.

ಸಾನ್ ಫ್ರಾನ್ಸಿಸ್ಕೊದಲ್ಲಿ ಕೇಂದ್ರ ಕಚೇರಿ ಹೊಂದಿರುವ ಸುಮಾರು 1 ಟ್ರಿಲಿಯನ್ ಡಾಲರ್ ಮೌಲ್ಯದ ಓಪನ್ ಎಐ, ಟಿಸಿಎಸ್‌ನ ಹೊಸ ಡೇಟಾ ಸೆಂಟರ್ ವಿಭಾಗ ಹೈಪರ್ ವಾಲ್ಟ್‌ನಿಂದ ಕನಿಷ್ಠ 500 ಮೆಗಾವಾಟ್ ಡೇಟಾ ಸೆಂಟರ್ ಸಾಮರ್ಥ್ಯವನ್ನು ಲೀಸ್‌ಗೆ ಪಡೆಯುವ ಬಗ್ಗೆ ಚರ್ಚಿಸುತ್ತಿದ್ದು, ಭಾರತದಲ್ಲೇ ತನ್ನ ಜಿಪಿಟಿ ಆಧಾರಿತ ಮಾದರಿಗಳನ್ನು ತರಬೇತುಗೊಳಿಸಲು ಈ ಸಾಮರ್ಥ್ಯವನ್ನು ಬಳಸಿಕೊಳ್ಳಲು ಉದ್ದೇಶಿಸಿದೆ.

ಟಿಪಿಜಿ ಜೊತೆಗೆ 51:49 ಅನುಪಾತದ ಮೈತ್ರಿಯಲ್ಲಿ ಗಿಗಾವಾಟ್ ಮಟ್ಟದ ಎಐರೆಡಿ ಡೇಟಾ ಸೆಂಟರ್‌ಗಳನ್ನು ನಿರ್ಮಿಸಲು ಟಿಸಿಎಸ್ ತೀರ್ಮಾನಿಸಿದೆ. ಇದರಲ್ಲಿ ಟಿಪಿಜಿ ಒಟ್ಟಾರೆ 18,000 ಕೋಟಿ ರು.ವರೆಗೆ ಹೂಡಿಕೆ ಘೋಷಿಸಿದ್ದು, ಇದಕ್ಕಾಗಿ ಹೈಪರ್‌ವಾಲ್ಟ್ ಎಂಬ ಕಂಪನಿ ಸ್ಥಾಪಿಸಲಾಗುತ್ತಿದೆ. ಈ ಡೇಟಾ ಸೆಂಟರ್‌ನಲ್ಲಿ ಇತರೆ ಹೈಪರ್‌ಸ್ಕೇಲರ್‌ಗಳು, ಕಾರ್ಪೊರೇಟ್ ಸಂಸ್ಥೆಗಳು, ಸಾವರಿನ್ ಕ್ಲೌಡ್ ಆಪರೇಟರ್‌ಗಳು, ಟಾಟಾ ಗುಂಪಿನ ಕಂಪನಿಗಳು ಹಾಗು ಸರಕಾರಿ ಸಂಸ್ಥೆಗಳಿಗೂ ಸ್ಥಳಾವಕಾಶ ಕಲ್ಪಿಸಲಾಗುತ್ತದೆ.

ಭಾರತದಲ್ಲಿ ಚಾಟ್‌ಜಿಪಿಟಿ ಬಳಕೆದಾರರ ಸಂಖ್ಯೆಯು ಅಮೆರಿಕದ ನಂತರ ಎರಡನೇ ಅತಿ ದೊಡ್ಡದಾಗಿದೆ. ಈ ಹಿನ್ನೆಲೆಯಲ್ಲಿ

ಸಿಬ್ಬಂದಿಗಳಿಗೆ ತರಬೇತಿ

ಭಾರತದ ಅತೀ ದೊಡ್ಡ ಐಟಿ ಸರ್ವಿಸ್ ಸಂಸ್ಥೆಯಾದ ಟಾಟಾ ಕನ್ಸಲ್ಟೆನ್ಸಿ ಸರ್ವಿಸ್‌ನಲ್ಲಿ 5 ಲಕ್ಷಕ್ಕೂ ಹೆಚ್ಚು ಮಂದಿ ಉದ್ಯೋಗಿಗಳಿದ್ದಾರೆ. ಹೆಚ್ಚಿನವರು ಸಾಫ್ಟ್‌ವೇರ್ ಎಂಜಿನಿಯರುಗಳಾಗಿದ್ದಾರೆ. ಇವರ ಪೈಕಿ ಕಳೆದ 9 ತಿಂಗಳಲ್ಲಿ ಸುಮಾರು ಒಂದೂವರೆ ಲಕ್ಷ ಉದ್ಯೋಗಿ ಗಳಿಗೆ ಜನರೇಟಿವ್ ಎಐ ಟೆಕ್ನಾಲಜಿಯ ತರಬೇತಿ ನೀಡಲಾಗಿದೆ ಮುಂಬರುವ ಒಂದೆರಡು ವರ್ಷದೊಳಗೆ ಎಲ್ಲರಿಗೂ ತರಬೇತಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.



ಹಿಂದಿನ ಹಂತದಲ್ಲಿ ಸರಕಾರದೊಂದಿಗೆ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನೊಂದಿಗೆ ನಡೆದ ಸ್ಟಾರ್‌ಗೇಟ್ ಇಂಡಿಯಾ ಹೂಡಿಕೆ ಮಾತುಕತೆಗಳು ಷರತ್ತುಗಳ ಕಾರಣದಿಂದ ಫಲಪ್ರದವಾಗಿರಲಿಲ್ಲ. ಇದೀಗ ಟಿಸಿಎಸ್ ಹಿರಿಯ ನಿರ್ವಾಹಕ ತಂಡ ಅಮೆರಿಕದಲ್ಲೇ ಪಾಲುದಾರಿಕೆ ಚೌಕಟ್ಟು ಹಾಗೂ ವಾಣಿಜ್ಯ ಷರತ್ತುಗಳನ್ನು ಅಂತಿಮಗೊಳಿಸಲು ಚರ್ಚೆ ನಡೆಸುತ್ತಿದೆ. ಈ ಬಗ್ಗೆ ವರ್ಷದ ಕೊನೆಯೊಳಗೆ ಅಧಿಕೃತ ಘೋಷಣೆ ಹೊರಬೀಳುವ ನಿರೀಕ್ಷೆ ಇದೆ.

ವಿವಿಧ ವಿಷಯಗಳನ್ನು ಪ್ರಸ್ತಾಪಿಸಿದ ತೇಜಸ್ವಿ ಸೂರ್ಯ, ಬಿವೈಆರ್, ಮಂಜುನಾಥ್

ಲೋಕಸಭೆಯಲ್ಲಿ ರಾಜ್ಯ ಬಿಜೆಪಿ ಸಂಸದರ ದನಿ

ದೆಹಲಿ: ಸಂಸ್ಕರಿಸಿದ ಆಹಾರಗಳ ಸೇವನೆಯಿಂದಾಗುವ ಅಪಾಯಗಳು, ರೈತರ ಸಮಸ್ಯೆಗಳು ಹಾಗೂ ರಿಂಗ್ ರಸ್ತೆಗೆ ಭೂಮಿ ನೀಡಿದ ರೈತರ ಸಮಸ್ಯೆಗಳ ಬಗ್ಗೆ ಗುರುವಾರ ಲೋಕಸಭೆಯ ಶೂನ್ಯ ವೇಳೆಯಲ್ಲಿ ರಾಜ್ಯ ಬಿಜೆಪಿ ಸಂಸದರು ದನಿ ಎತ್ತಿದರು. ಸಂಸದರಾದ ತೇಜಸ್ವಿ ಸೂರ್ಯ, ಬಿ.ವೈ. ರಾಘವೇಂದ್ರ ಮತ್ತು ಡಾ.ಸಿ.ಎನ್. ಮಂಜುನಾಥ್, ಡಾ.ಕೆ.ಸುಧಾಕರ್ ಅವರು ವಿವಿಧ ವಿಷಯಗಳ ಕುರಿತು ಮಾತನಾಡಿ, ಸರಕಾರದ ಗಮನ ಸೆಳೆದರು. ಮಕ್ಕಳ ಆರೋಗ್ಯ, ರೈತರ ಪರಿಸ್ಥಿತಿ ಮತ್ತು ಅಭಿವೃದ್ಧಿ ಯೋಜನೆಗಳ ಪರಿಹಾರದಂತಹ ಮಹತ್ವದ ಸಮಸ್ಯೆಗಳನ್ನು ಅವರು ಪ್ರಸ್ತಾಪಿಸಿದರು.

ಸಂಸ್ಕರಿಸಿದ ಆಹಾರ ಉತ್ಪನ್ನಗಳಿಂದ ಅಪಾಯ: ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಸಂಸ್ಕರಿಸಿದ ಆಹಾರ ಉತ್ಪನ್ನಗಳಿಂದಾಗುವ ಅಪಾಯಗಳ ಬಗ್ಗೆ ಮಾತನಾಡಿ, ಇದರಿಂದ ಮಕ್ಕಳಲ್ಲಿ ಒಬೆಸಿಟಿ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ನೂಡಲ್ಸ್, ಕೂಲ್ ಡ್ರಿಂಕ್ಸ್ ಸೇರಿದಂತೆ ಹತ್ತಾರು ಉತ್ಪನ್ನ ಗಳನ್ನು ಮಕ್ಕಳು ಹೆಚ್ಚು ಸೇವಿಸುತ್ತಿರುವುದು ಆರೋಗ್ಯಕ್ಕೆ ಹಾನಿಕಾರಕವಾಗಿದೆ. ಸಂಸ್ಕರಿಸಿದ ಆಹಾರ ಉತ್ಪನ್ನಗಳಿಗೆ ಸರಿಯಾದ ವ್ಯಾಖ್ಯಾನ ಮಾಡಬೇಕು ಮತ್ತು ಪ್ಯಾಕೇಜಿಂಗ್ ಮೇಲೆ ಅದನ್ನು ಸ್ಪಷ್ಟವಾಗಿ ನಮೋದಿಸಬೇಕು ಎಂದು ಆಗ್ರಹಿಸಿದರು. ಮಕ್ಕಳಿಗೆ ಇಂತಹ ಉತ್ಪನ್ನಗಳ ಸೇವನೆ ನಿರ್ಬಂಧಿಸುವ ನಿಟ್ಟಿನಲ್ಲಿ ಸರ್ಕಾರ ಜಾಹೀರಾತು ಪ್ರಕಟಿಸಬೇಕು ಎಂದು ಮನವಿ ಮಾಡಿದರು.

ರೈತರಿಗೆ ಪರಿಹಾರ ನೀಡುವಂತೆ ಆಗ್ರಹ

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ.ಸಿ.ಎನ್. ಮಂಜುನಾಥ್ ಅವರು ಸ್ಯಾಟಲೈಟ್ ರಿಂಗ್ ರೋಡ್ ಯೋಜನೆಯ ಕುರಿತು ಮಾತನಾಡಿದರು. 2021ರಲ್ಲಿ ಯೋಜನೆಗಾಗಿ 2,200 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ. ಆದರೂ, ರೈತರಿಗೆ ಈವರೆಗೂ ಪರಿಹಾರ ನೀಡಿಲ್ಲ ಎಂದು ಆಕ್ಷೇಪಿಸಿದರು. ತಾನು ಪ್ರಧಾನಿ ಕಚೇರಿ (ಪಿಎಂಒ) ಮತ್ತು ಕೇಂದ್ರ ಸರಕಾರಕ್ಕೆ ಮನವಿ ಮಾಡುತ್ತೇನೆ, ರೈತರಿಗೆ ಕೂಡಲೇ ಪರಿಹಾರ ಬಿಡುಗಡೆ ಮಾಡಬೇಕು. ಸರಕಾರ ಅವರ ನೆರವಿಗೆ ಬರಬೇಕು ಎಂದು ಆಗ್ರಹಿಸಿದರು.

ರೈತರ ಸಮಸ್ಯೆಗಳ ಬಗ್ಗೆ ಗಮನ ಸೆಳೆದ ಬಿ.ವೈ.ರಾಘವೇಂದ್ರ: ಶಿವಮೊಗ್ಗ ಕ್ಷೇತ್ರದ ಸಂಸದ ಬಿ.ವೈ.ರಾಘವೇಂದ್ರ ಅವರು ಮಲೆನಾಡು ರೈತರ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು. ಅಡಿಕೆ ಬೆಳೆಗಾರರು ಹಳದಿ ರೋಗದಿಂದ ಬಳಲುತ್ತಿದ್ದು, ಅತಿ ಹೆಚ್ಚು ಮಳೆಯಿಂದಾಗಿ ಹಾನಿಗೊಳಗಾಗಿದ್ದಾರೆ ಎಂದು ಹೇಳಿದರು. ಹವಾಮಾನ ಆಧರಿತ ವಿಮೆ ನಿಯಮಗಳಲ್ಲಿ ಬದಲಾವಣೆಯ ಅಗತ್ಯವಿದೆ ಎಂದು ಒತ್ತಾಯಿಸಿದ ಅವರು, ಹಲವು ಹವಾಮಾನ ಕೇಂದ್ರಗಳು ಸರಿಯಾಗಿ ಕಾರ್ಯನಿರ್ವಹಿಸದಿರುವುದರಿಂದ ಮಳೆಯ ಪ್ರಮಾಣ ಸರಿಯಾಗಿ ದಾಖಲಾಗುತ್ತಿಲ್ಲ. ಇದರಿಂದಾಗಿ ರೈತರಿಗೆ ಪರಿಹಾರ ಸಿಗದಿರುವುದನ್ನು ಸುಧಾರಿಸಲು ವಿಮೆ ನಿಯಮಗಳನ್ನ ಬದಲಿಸಬೇಕು ಮತ್ತು ಅಡಿಕೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ನೀಡಬೇಕು ಎಂದು ಸರಕಾರಕ್ಕೆ ಮನವಿ ಮಾಡಿದರು.

ಅಂಗನವಾಡಿ ನೌಕರರ ಗೌರವಧನ ಹೆಚ್ಚಿಸಿ: ಅಂಗನವಾಡಿ ನೌಕರರು ಹಾಗೂ ಬಿಸಿಯೂಟ ಸಿಬ್ಬಂದಿಯ ಗೌರವಧನ ಹೆಚ್ಚಳ ಮತ್ತು ಸಾಮಾಜಿಕ ಭದ್ರತೆಯ ಬಗ್ಗೆ ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್ ಅವರು ಕೇಂದ್ರ ಸರಕಾರದ ಗಮನ ಸೆಳೆದರು. ಲೋಕಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, ಅಂಗನ ವಾಡಿ ನೌಕರರು ಹಾಗೂ ಬಿಸಿ ಯೂಟ ಸಿಬ್ಬಂದಿಯಲ್ಲಿ ಬಹುತೇಕ ಬಡ ಕುಟುಂಬದ ಮಹಿಳೆಯರೇ ಆಗಿದ್ದಾರೆ. ಶಾಲಾ ಮಕ್ಕಳಿಗೆ ಬಿಸಿಯೂಟ ಪೂರೈಕೆ, ಅಪೌಷ್ಟಿಕತೆ ನಿವಾರಣೆ, ಗರ್ಭಿಣಿಯರು ಹಾಗೂ ತಾಯಂದಿರಿಗೆ ಸರ್ಕಾರಿ ಯೋಜನೆ ಗಳ ನೆರವು ಸೇರಿದಂತೆ ಹಲವಾರು ವಿಧದಲ್ಲಿ ಇವರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಮಹಿಳೆಯರು ಅತಿ ಕಡಿಮೆ ಗೌರವಧನ ಪಡೆಯುತ್ತಿದ್ದು, ಆರ್ಥಿಕವಾಗಿ ತೀರಾ ದುರ್ಬಲರಾಗಿದ್ದಾರೆ. ಸೌಲಭ್ಯಕ್ಕಾಗಿ ಹೋರಾಟ ಮಾಡುತ್ತಿರುವ ಮಹಿಳೆಯರ ಅಹವಾಲುಗಳನ್ನು ಕೇಂದ್ರ ಸರ್ಕಾರ ಆಲಿಸಬೇಕು ಎಂದು ಮನವಿ ಮಾಡಿದರು. ಬೆಲೆ ಏರಿಕೆ ಗಮನದಲ್ಲಿರಿಸಿಕೊಂಡು ಗೌರವಧನದ ಪರಿಷ್ಕರಣೆ ಮಾಡಬೇಕು. ಪಿಂಚಣಿ, ವಿಮೆ ಸೇರಿದಂತೆ ಸಾಮಾಜಿಕ ಭದ್ರತೆ ಕಲ್ಪಿಸಬೇಕು. ಕಾರ್ಯಕರ್ತೆಯರ ಕೆಲಸವನ್ನು ಅಗತ್ಯ ಸೇವೆಗಳು ಎಂದು ಅಧಿಕೃತವಾಗಿ ಗುರುತಿಸಬೇಕು. ದೇಶದಾದ್ಯಂತ ಕಾರ್ಯಕರ್ತೆಯರಿಗೆ ಏಕರೂಪದ ಸೌಲಭ್ಯಗಳನ್ನು ನೀಡಲು ರಾಜ್ಯ ಸರಕಾರಗಳೊಂದಿಗೆ ಮಾತುಕತೆ ನಡೆಸಬೇಕು ಎಂದು ಅವರು ಒತ್ತಾಯಿಸಿದರು. ದೇಶದ ಅಪೌಷ್ಟಿಕತೆ ನಿವಾರಣೆ ಕಾರ್ಯಕ್ರಮಕ್ಕಾಗಿ ಮತ್ತು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಅಂಗನವಾಡಿ ನೌಕರರಿಗೆ ಹಾಗೂ ಬಿಸಿಯೂಟ ಸಿಬ್ಬಂದಿಗೆ ಸೂಕ್ತವಾದ ಗೌರವ ನೀಡುವುದು ಅವಶ್ಯಕ. ನಮ್ಮ ಮಕ್ಕಳು ಹಾಗೂ ತಾಯಂದಿರ ಆರೋಗ್ಯ ಕಾಪಾಡುವ ಈ ಸಿಬ್ಬಂದಿಗೆ ಭದ್ರತೆ, ಘನತೆ ಹಾಗೂ ಗೌರವ ನೀಡುವುದು ಅಗತ್ಯ ಎಂದು ಅವರು ಒತ್ತಿ ಹೇಳಿದರು.



ಕರಾವಳಿಯ ಕ್ಷೇತ್ರವನ್ನು ಪ್ರತಿನಿಧಿಸುವ ದಿನಕರ ಶೆಟ್ಟಿಯವರು, ಅಲ್ಲಿನ ಜನರ ಹಿತಕ್ಕಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜನಸಾಮಾನ್ಯರ ಜತೆ ಆಪ್ತವಾಗಿ ಬೆರೆಯುವುದು ಇವರ ಸಜ್ಜನಿಕೆ. ವಿವಿಧ ರೀತಿಯ ಅಭಿವೃದ್ಧಿಯ ಜತೆಯಲ್ಲಿ ಪ್ರವಾಸೋದ್ಯಮಕ್ಕೆ ಒತ್ತು ಮತ್ತು ಪರಿಸರ ಕಾಳಜಿ ಇವರ ಆದ್ಯತೆ.

ಅಭಿವೃದ್ಧಿ ಹರಿಕಾರ ಸಜ್ಜನ ದಿನಕರ ಶೆಟ್ಟಿ

ಕರಾವಳಿ ಜನರ ಮನ ಗೆದ್ದಿರುವ ಶಾಸಕ

ಪ್ರವಾಸೋದ್ಯಮಕ್ಕೆ ಒತ್ತು

ಪ್ರವಾಸೋದ್ಯಮ ಕ್ಷೇತ್ರದ ಬೆಳವಣಿಗೆ ಬಗೆಗೆ ಶೆಟ್ಟರಿಗೆ ಒಳ್ಳೆಯ ಒಳನೋಟಗಳಿವೆ. 'ಇಡೀ ಉತ್ತರ ಕನ್ನಡ ಜಿಲ್ಲೆ ಸಹಜವಾದ ಪ್ರಾಕೃತಿಕ ಚೆಲುವು ಹಾಗೂ ತಾಣಗಳಿಂದ ಸಮೃದ್ಧವಾಗಿದೆ. ಹೆಚ್ಚಿನ ಹೂಡಿಕೆಯ ಅಗತ್ಯವಿಲ್ಲದೇ ಇಲ್ಲಿನ ಪ್ರವಾಸೋದ್ಯಮವನ್ನು ಉತ್ತೇಜಿಸಬಹುದು' ಎನ್ನುತ್ತಾರೆ. ಇವರು ಪ್ರಸ್ತಾವಿಸುವ ಯೋಜನೆಗಳಲ್ಲಿ ಆಕರ್ಷಕವಾದ ಒಂದು ಯೋಜನೆ ಎಂದರೆ ಕಾರವಾರದಿಂದ ಮಂಗಳೂರಿಗೆ ಬೋಟ್ ಪ್ರವಾಸ. ಇದು ಪ್ರವಾಸಿಗರಿಗೂ ಜತೆಗೆ ಆರೋಗ್ಯ ತುರ್ತುಪರಿಸ್ಥಿತಿ ಸಂದರ್ಭದಲ್ಲಿಯೂ ನೆರವಾಗುವಂತಿದೆ ಎನ್ನುತ್ತಾರೆ.

ಉತ್ತರ ಕನ್ನಡ ಜಿಲ್ಲೆ ಪ್ರಜ್ಞಾವಂತರ ನಾಡು. ಈ ಜಿಲ್ಲೆಯ ಕುಮಟಾ-ಹೊನ್ನಾವರ ವಿಧಾನಸಭೆ ಕ್ಷೇತ್ರವು ಧಾರ್ಮಿಕ ಪ್ರವಾಸೋದ್ಯಮ ಹಾಗೂ ಕಡಲತೀರ ಪ್ರವಾಸೋದ್ಯಮದಿಂದ ಪ್ರಖ್ಯಾತವಾಗಿದೆ. ಈ ಪ್ರಮುಖ ಕ್ಷೇತ್ರದ ಶಾಸಕರಾಗಿರುವ ದಿನಕರ ಕೇಶವ ಶೆಟ್ಟಿ ಇವರು, ಈ ಕ್ಷೇತ್ರವನ್ನು ಮೂರನೇ ಬಾರಿ ಪ್ರತಿನಿಧಿಸುತ್ತಿದ್ದಾರೆ.

ದಿನಕರ ಶೆಟ್ಟಿ ಅವರು ಕುಮಟಾ-ಹೊನ್ನಾವರ ವಿಧಾನಸಭೆ ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿ ಕಾರ್ಯಗಳ ಮೂಲಕ ನಾಡಿನ ಮುಂಚೂಣಿಯಲ್ಲಿ ನಿಲ್ಲಿಸುವ ಕನಸು ಹೊಂದಿರುವ ರಾಜಕೀಯ ನಾಯಕ ಹಾಗೂ ಮುತ್ಸದ್ದಿ.

ಕುಮಟಾದಲ್ಲಿ ಎದ್ದು ನಿಂತಿರುವ ಭವ್ಯ ಮಿನಿ ವಿಧಾನಸೌಧವನ್ನು ನೋಡಿದರೆ ಇವರ ಕರ್ತೃತ್ವಶಕ್ತಿಯ ಪರಿಚಯವಾಗುತ್ತದೆ. ಕರ್ನಾಟಕದ ಬೆರಳೆಣಿಕೆಯ ಭವ್ಯ ಆಡಳಿತ ಸೌಧಗಳಲ್ಲಿ ಇದು ಕೂಡ ಒಂದು. ಇದಕ್ಕಾಗಿ ಅನುದಾನ ತಂದವರು, ಅಡಿಗಲ್ಲು ಹಾಕಿದವರು ಹಾಗೂ ಕೆಲಸ ಪೂರ್ಣವಾಗುವಂತೆ ನೋಡಿಕೊಂಡು ಉದ್ಘಾಟನೆ ಮಾಡಿಸಿಕೊಂಡವರು ಇವರು.

ದಿನಕರ ಶೆಟ್ಟಿಯವರು ಮೊದಲ ಬಾರಿ ಜೆಡಿಎಸ್ ಪಕ್ಷದಿಂದ ಶಾಸಕರಾಗಿದ್ದರು. ಆ ಬಳಿಕ ಎರಡು ಬಾರಿ ಬಿಜೆಪಿಯಿಂದ ಶಾಸಕರಾಗಿ ಆಯ್ಕೆಯಾದರು. ಸಾಕಷ್ಟು ಅನುದಾನವನ್ನು ತಂದು, ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಾಗಿ ಕ್ಷೇತ್ರದ ಜನತೆ ಅವರನ್ನು ಮತ್ತೆ ಮತ್ತೆ ಆರಿಸಿ ತರುತ್ತಿದ್ದಾರೆ.

ದಿನಕರ ಕೇಶವ ಶೆಟ್ಟಿ ಜನಿಸಿದ್ದು 1957ನೇ ಇಸವಿಯ ಜುಲೈ 21ರಂದು. ಕುಮಟಾ ಇವರ ಹುಟ್ಟೂರು. ಇವರ ತಂದೆ ಕೇಶವ ವೆಂಕಟರಮಣ ಶೆಟ್ಟಿಯವರು ಪ್ರಖ್ಯಾತ ಗುತ್ತಿಗೆದಾರರು. ಶಾಲೆ ಹಾಗೂ ಕಾಲೇಜಿನಲ್ಲೇ ನಾಯಕತ್ವ ಗುಣವನ್ನು ತೋರಿಸಿದ್ದ ದಿನಕರ ಶೆಟ್ಟಿಯವರು ವಿದ್ಯಾರ್ಥಿ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದರು.

ಜನರ ಮನಗೆದ್ದಿರುವ ಶಾಸಕ

ಕ್ಷೇತ್ರದ ಜನತೆಯನ್ನು ಮಾತನಾಡಿಸಿದರೆ, 'ಪ್ರಾಮಾಣಿಕತೆಗೆ ಇನ್ನೊಂದು ಹೆಸರು ದಿನಕರ ಶೆಟ್ಟರು' ಎನ್ನುತ್ತಾರೆ. ಇವರು ತಳಮಟ್ಟದಿಂದ ಮೇಲೆ ಬಂದವರು. ಮರದ ಕಾರ್ಖಾನೆ ನಡೆಸುತ್ತಿದ್ದ ಇವರು ರಿಕ್ಷಾ ಚಾಲಕ ಸಂಘಟನೆಯ ಅಧ್ಯಕ್ಷರಾಗಿ, ಹಂತ ಹಂತವಾಗಿ ಮೇಲೆ ಬಂದರು. ಜನತಾ ದಳದಿಂದ ಎರಡು ಬಾರಿ ಶಾಸಕ ಸ್ಥಾನಕ್ಕೆ ಸ್ಪರ್ಧಿಸಿ ಸೋತರು, ಅದರಿಂದ ಪಾಠ ಕಲಿತರು. ಬಳಿಕ ಅದೇ ಪಕ್ಷದಿಂದ ಸ್ಪರ್ಧಿಸಿ ಗೆದ್ದರು. ರಾಜಕೀಯದಲ್ಲಿ ಸಕ್ರಿಯರಾಗಿದ್ದರೂ, ನಿಯತ್ತಿನಿಂದ ಬದುಕು ಸಾಗಿಸಿ, ಜನರನ್ನು ಪ್ರೀತಿಸಿ ಕ್ಷೇತ್ರವನ್ನು ಕಟ್ಟಿದರು ಎನ್ನುತ್ತಾರೆ ಇವರನ್ನು ಬಲ್ಲವರು.

ದಿನಕರ ಶೆಟ್ಟರು ಮೊದಲ ಬಾರಿಗೆ 2008ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ನಿಂತು, ಎದುರಾಳಿಯನ್ನು 20 ಮತಗಳಿಂದ ಸೋಲಿಸಿದರು. ಆಗ ಇವರ ಪ್ರತಿಸ್ಪರ್ಧಿ ಕೋರ್ಟ್‌ಗೆ ಹೋಗಿದ್ದು, ಶೆಟ್ಟರ ಗೆಲುವನ್ನು ಕೋರ್ಟ್ ಅಂತಿಮವಾಗಿ ಎತ್ತಿ ಹಿಡಿಯಿತು. ಈ ಶಾಸಕತ್ವದ ಅವಧಿಯಲ್ಲಿ ತಮ್ಮ ಯುವ ನಾಯಕತ್ವದ ಛಾಪನ್ನು ಕ್ಷೇತ್ರದಲ್ಲಿ ಒತ್ತಿದರು. ಆದರೆ 2013ರಲ್ಲಿ 420 ಮತಗಳಿಂದ ಕಾಂಗ್ರೆಸ್‌ನ ಶಾರದಾ ಶೆಟ್ಟಿ ಎದುರು ಶೆಟ್ಟರು ಸೋತರು.

ಮುಂದೆ ಬಿಜೆಪಿ ಸೇರಿದರು. 2018ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಶಾರದಾ ಮೋಹನ್ ಶೆಟ್ಟಿ ಅವರನ್ನು ಸೋಲಿಸಿ ತಾವು ಈ ಹಿಂದೆ ಗೆದ್ದಿದ್ದ ಸ್ಥಾನವನ್ನು ಇವರು ಯಶಸ್ವಿಯಾಗಿ ಉಳಿಸಿಕೊಂಡರು. ಈ ಸಂದರ್ಭದಲ್ಲಿ ಇವರದೇ ಪಕ್ಷದ ಸರಕಾರ ಅಧಿಕಾರಕ್ಕೆ ಬಂತು. ಈ ಅವಧಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಿಕೊಂಡರು. ಆಗ ಕರ್ನಾಟಕ ವಿಧಾನಸಭೆಯಲ್ಲಿ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕುರಿತ ಶಾಸಕಾಂಗ ಸಮಿತಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು.

ಮತ್ತೊಮ್ಮೆ ಜನನಾಯಕ

2023ರ ಚುನಾವಣೆಯಲ್ಲಿ ದಿನಕರ ಶೆಟ್ಟಿ ಅವರು ಜೆಡಿಎಸ್‌ನ ಸೂರಜ್ ನಾಯ್ಕ ಸೋನಿ ವಿರುದ್ಧ 673 ಮತಗಳ ಅಂತರದಿಂದ ಗೆದ್ದಿದ್ದರೂ, ಫಲಿತಾಂಶ ಘೋಷಣೆಯಲ್ಲಿ ಆದ ವಿಳಂಬವನ್ನು ಅಕ್ರಮವೆಂದು ಆರೋಪಿಸಿ ಸೋನಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಶೆಟ್ಟರ ಗೆಲುವನ್ನು ಕರ್ನಾಟಕ ಹೈಕೋರ್ಟ್ ಎತ್ತಿಹಿಡಿಯಿತು.

'ಕ್ಷೇತ್ರದ ಜನರು ಸದಾ ನನ್ನೊಂದಿಗಿದ್ದಾರೆ. ನ್ಯಾಯಾಲಯವೇ ಸತ್ಯವನ್ನು ಹೊರಹಾಕಿದೆ. ಸತ್ಯ ಗೆದ್ದಿದೆ. ನನ್ನ ಮೇಲೆ ಜನರು ತೋರಿಸಿರುವ ವಿಶ್ವಾಸಕ್ಕೆ ನಾನು ಸದಾ ಋಣಿ' ಎಂದು ಶೆಟ್ಟರು ಹೇಳಿದ್ದು, ಅದರಂತೆಯೇ ನಡೆದುಕೊಂಡಿದ್ದಾರೆ.

ಶರಾವತಿಯಿಂದ ಕುಡಿಯುವ ನೀರು

ದಿನಕರ ಶೆಟ್ಟರ ಸಜ್ಜನಿಕೆ ಹಾಗೂ ನೆನಪಿನ ಶಕ್ತಿ ಕೂಡ ಜನಪ್ರಿಯವಾದುದು. ತಮ್ಮ ಕ್ಷೇತ್ರದ ಸುಮಾರು ಇಪ್ಪತ್ತು ಸಾವಿರ ಜನರ ಹೆಸರು ಅವರ ನಾಲಿಗೆ ತುದಿಯಲ್ಲಿದೆ, ಎದುರಾದವರನ್ನು ಹೆಸರು ಹಿಡಿದು ಮಾತನಾಡಿಸುತ್ತಾರೆ. ತಮಗೆ ವೋಟ್ ಹಾಕಿದರೋ ಇಲ್ಲವೋ ಎಂದು ಭಾವಿಸದೆ, ಮನೆಗೆ ಹೋದವರನ್ನು ಮಾತನಾಡಿಸಿ ಸಿಹಿ ಕೊಟ್ಟು ಕಳಿಸುತ್ತಾರೆ ಎನ್ನುತ್ತಾರೆ ಜನರು. ಹೊನ್ನಾವರಕ್ಕೆ ಇವರು ಒದಗಿಸಿದ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಬಹಳಷ್ಟು ಮೆಚ್ಚುಗೆಯ ಮಾತುಗಳಿವೆ. ಅಘನಾಶಿನಿಯಿಂದ ನೀರು ತರಿಸುವಲ್ಲಿ ಹತ್ತು ವರ್ಷಗಳು ಸಂದಿದ್ದವು. ದಿನಕರ ಶೆಟ್ಟಿಯವರು ನಾಲ್ಕೇ ವರ್ಷಗಳಲ್ಲಿ 130 ಕೋಟಿ ರು. ವೆಚ್ಚದಲ್ಲಿ ಶರಾವತಿಯಿಂದ ಹೊನ್ನಾವರ ಮತ್ತು ಹನ್ನೆರಡು ಗ್ರಾಮ ಪಂಚಾಯತಿಗಳಿಗೆ ನೀರು ತರಿಸಿದ್ದಾರೆ.

ಅಭಿವೃದ್ಧಿ ಪರ್ವ

6 ಕೋಟಿ ರು. ವೆಚ್ಚದಲ್ಲಿ ಹೊನ್ನಾವರ ಸರಕಾರಿ ಕಾಲೇಜಿಗೆ ಕಟ್ಟಡ ಮಾಡಿಸಿ, ಪಿಯು ಕಾಲೇಜು, ಡಿಗ್ರಿ ಕಾಲೇಜುಗಳಿಗೆ ಅನುದಾನ ತರಿಸಿದ್ದಾರೆ. ಹಳ್ಳಿ ಹಳ್ಳಿಗಳಿಗೆ ರಸ್ತೆ ಮಾಡಿಸಿದ್ದಾರೆ. ಖಾಸಗಿ ಸಂಸ್ಥೆಗಳಿಂದ ಸಿಎಸ್‌ಆರ್ ನಿಧಿ ತಂದು ಟ್ರಾಮಾ ಸೆಂಟರ್ ಆರಂಭಿಸಿದ್ದು, ಸದ್ಯದಲ್ಲೇ ಉದ್ಘಾಟನೆಯಾಗಲಿದೆ. ಬಡಾಳದಲ್ಲಿ ಮುರಿದುಹೋದ ಸೇತುವೆಯನ್ನು ಆರು ತಿಂಗಳಲ್ಲಿ ಸರಿಪಡಿಸಿಕೊಟ್ಟಿದ್ದಾರೆ. ಹೆಗಡೆ- ಮಿರ್ಜಾನ್ ಸೇತುವೆಗಾಗಿ ನಬಾರ್ಡ್‌ನಿಂದ 18 ಕೋಟಿ ದೊರಕಿದ್ದು, ಕಾಮಗಾರಿ ಈಗ ಕೊನೆಯ ಹಂತದಲ್ಲಿದೆ. ಸಮುದ್ರ ತೀರದಲ್ಲಿ ಸಾಮಾನ್ಯವಾಗಿರುವ ಸಮಸ್ಯೆಯಾದ ಉಪ್ಪು ನೀರು ಜಮೀನಿಗೆ ನುಗ್ಗುವ ಸಮಸ್ಯೆಯ ನಿವಾರಣೆಗಾಗಿ 300 ಕೋಟಿ ರು. ವೆಚ್ಚದಲ್ಲಿ ಖಾರ್ ಲ್ಯಾಂಡ್ ಯೋಜನೆಯನ್ನು ಜಾರಿಗೆ ತರಲಾಗಿದೆ.

ಕೋವಿಡ್ ಕಾಲದಲ್ಲಿ ಸಹಾಯ

ಅಧಿಕಾರಿಗಳಿಂದ ಹೇಗೆ ಕೆಲಸ ಮಾಡಿಸಬೇಕು ಎನ್ನುವುದು ದಿನಕರ ಶೆಟ್ಟರಿಗೆ ಗೊತ್ತಿದೆ. ಮೂರು ಬಾರಿ ಗೆದ್ದು ಬಂದು ಶಾಸಕರಾಗಿ ಅನುಭವ ಗಳಿಸಿಕೊಂಡಿರುವ ಇವರ ಹಿನ್ನೆಲೆಯಲ್ಲಿ ಜನರ ಒಡನಾಟದ ಅನುಭವವಿದೆ. ಇವರ ಕುಟುಂಬದವರು ಗುತ್ತಿಗೆದಾರರು; ಇವರ ಚಿಕ್ಕಪ್ಪ ಪ್ರಭಾವಿ ಗುತ್ತಿಗೆದಾರರಾಗಿದ್ದರು. ತಹಶೀಲ್ದಾರರ ಕಚೇರಿ ಮಿನಿ ವಿಧಾನಸೌಧಕ್ಕೆ ಶಿಫ್ಟ್ ಆಗಿ ಹಿಂದಿನ ಕಟ್ಟಡ ಖಾಲಿಬಿದ್ದಾಗ, ಅದನ್ನು ಪಾಳು ಬೀಳಲು ಬಿಡದೆ ಇನ್ನೊಂದು ಸರಕಾರಿ ಕಚೇರಿಯನ್ನು ಅಲ್ಲಿಗೆ ಶಿಫ್ಟ್ ಮಾಡಿಸಿದರು.

ಅಂದರೆ ಸರಕಾರಿ ಸ್ವತ್ತುಗಳಿಂದ ಜನತೆಗೆ ಪೂರ್ಣ ಪ್ರಯೋಜನ ಆಗುವಂತೆ ನೋಡಿಕೊಳ್ಳುತ್ತಾರೆ. ಕೋವಿಡ್ ಕಾಲದಲ್ಲಿ ಅನೇಕರಿಗೆ ಕೆಲಸ ಇಲ್ಲದೆ ಹೋದಾಗ, ತಳಮಳದ ಕಾಲದಲ್ಲಿ ಎಲ್ಲರ ಜತೆಗೆ ಭರವಸೆಯಾಗಿ ನಿಂತರು.

ಕುಮಟಾದಲ್ಲಿರುವ ಪಿಯು ಕಾಲೇಜ್ ಇಡೀ ಜಿಲ್ಲೆಗೇ ದೊಡ್ಡದು. 1800 ವಿದ್ಯಾರ್ಥಿಗಳಿದ್ದಾರೆ. ಇದಕ್ಕೆ ಸರಿಯಾದ ಕಟ್ಟಡ ಇರಲಿಲ್ಲ. ದಿನಕರ ಶೆಟ್ಟರು 2010ರಲ್ಲಿ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಅರಣ್ಯ ಇಲಾಖೆಯಿಂದ ಜಾಗ ಪಡೆದುಕೊಂಡು ಇಂದು ಅದಕ್ಕೆ ಬೇಕಾದ ಕಟ್ಟಡ, ಮೂಲಸೌಕರ್ಯ ಎಲ್ಲವನ್ನೂ ಮಾಡಿಸಿದ್ದಾರೆ. ಡಿಗ್ರಿ ಕಾಲೇಜು, ಮೂರೂರಿನಲ್ಲಿ ಆಸ್ಪತ್ರೆ ಮಾಡಿಸಿಕೊಟ್ಟಿದ್ದಾರೆ. ನಲವತ್ತು-ಐವತ್ತು ವರ್ಷಗಳಿಂದ ಜಮೀನು ಹಕ್ಕುಪತ್ರ ದೊರೆಯದೆ ಇರುವ ಬಡವರು, ಸಣ್ಣ ಹಿಡುವಳಿದಾರರ ಪರ ದನಿ ಎತ್ತಲೂ ಇವರು ಸಿದ್ಧರಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯೊಂದರ ಅಗತ್ಯವಿದೆ. ಈ ಆಸ್ಪತ್ರೆ ಕುಮಟಾದಲ್ಲಿಯೇ ಆಗಲಿ ಎಂಬುದು

ಶೆಟ್ಟರ ನಿಲುವು. ಯಾಕೆಂದರೆ ಕುಮಟಾ ಜಿಲ್ಲೆಯ ಮಧ್ಯಭಾಗದಲ್ಲಿದೆ. ಉಡುಪಿ-ಮಂಗಳೂರು ಹತ್ತಿರದಲ್ಲಿವೆ. ಕುಮಟಾದಲ್ಲಿ ರೈಲ್ವೆ ಸ್ಟೇಷನ್ ಬಸ್ಸು ನಿಲ್ದಾಣ ಸಮೀಪ ಇದೆ. ಶಿರಸಿ-ಸಿದ್ದಾಪುರ-ಕಾರವಾರದಿಂದಲೂ ಮಧ್ಯಭಾಗದಲ್ಲಿದೆ ಎಂಬುದು ಇವರ ಅಭಿಪ್ರಾಯ. ಅದಕ್ಕಾಗಿ ಜಾಗವನ್ನೂ ಗುರುತಿಸಿ ಇಟ್ಟಿದ್ದಾರೆ. ಆಸ್ಪತ್ರೆಗಾಗಿ ಪ್ರಯತ್ನ ಮುಂದುವರಿದಿದೆ.

ಪರಿಸರ ಕಾಳಜಿ

ಈಗಿನ ಸರಕಾರ ಜಾರಿಗೆ ತರಲು ಹೊರಟಿರುವ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಕ್ಷೇತ್ರದಲ್ಲಿ ವ್ಯಾಪಕ ಪ್ರತಿರೋಧ ವ್ಯಕ್ತವಾಗಿದೆ. ತಮ್ಮ ಜಿಲ್ಲೆಯ ಪರಿಸರಕ್ಕೆ ಹಾನಿ ಎಸಗಲಿರುವ ಈ ಯೋಜನೆಯ ಬಗ್ಗೆ ದಿನಕರ ಶೆಟ್ಟರು ಮೊದಲ ಬಾರಿಗೆ ಸದನದಲ್ಲಿ ಧ್ವನಿ ಎತ್ತಿದರು. ಉತ್ತರ ಕನ್ನಡ ಜಿಲ್ಲೆಯು ಸೀಬರ್ಡ್, ಬೇಡ್ತಿ ಮುಂತಾದ ಯೋಜನೆಗಳಿಗಾಗಿ ಸಾಕಷ್ಟು ತ್ಯಾಗ ಮಾಡಿದೆ. ಹಲವು ಯೋಜನೆಗಳಿಂದಾಗಿ ಜಿಲ್ಲೆಯ ಪರಿಸರ ಈಗಾಗಲೇ ಹಾನಿಗೀಡಾಗಿದೆ. ಇಲ್ಲಿನ ರೈತರು, ಕೃಷಿಕರು ಬೆಲೆ ತೆತ್ತಿದ್ದಾರೆ. ಈ ಬಗ್ಗೆ ವೈಜ್ಞಾನಿಕವಾಗಿ ಮಾತನಾಡುತ್ತಿರುವ ತಜ್ಞರು, ಪರಿಸರ ತಜ್ಞರ ಮಾತುಗಳನ್ನು ಆಲಿಸುವಂತೆ ಆಗ್ರಹಿಸಿದ್ದಾರೆ. ಮಾತ್ರವಲ್ಲದೆ, ರೈತರ ಹೋರಾಟಕ್ಕೂ ಬೆಂಬಲ ಸೂಚಿಸಿದ್ದಾರೆ. ಪರಿಸರ ವಿರೋಧಿಯಾಗಿರುವ ಪಂಪ್ಡ್ ಸ್ಟೋರೇಜ್ ಯೋಜನೆಯ ವಿರುದ್ಧದ ಜನಸಾಮಾನ್ಯರ ಹೋರಾಟಕ್ಕೆ, ತಮ್ಮ ವರ್ಚಸ್ಸಿನಿಂದ ಬಲ ತುಂಬಿದ್ದಾರೆ.

ಈ ಎಲ್ಲದರ ಜತೆಗೆ ಇವರು ಶಾಂತಿ-ಸಹಬಾಳ್ವೆ-ಸಾಮರಸ್ಯಕ್ಕೂ ಹೆಚ್ಚಿನ ಆದ್ಯತೆ ಕೊಟ್ಟಿದ್ದಾರೆ. ಇವರ ಕ್ಷೇತ್ರದಲ್ಲಿ ಯಾವುದೇ ಗೂಂಡಾಗಿರಿಗೆ ಸ್ಥಾನವಿಲ್ಲ. ಎಲ್ಲಾ ಸಮೂಹದ ಜನತೆ ಸಹಬಾಳ್ವೆ ಮಾಡುವುದು, ಶಾಂತಿ ಕಾಪಾಡಿಕೊಳ್ಳುವುದು ಮುಖ್ಯ ಎನ್ನುತ್ತಾರೆ ದಿನಕರ ಶೆಟ್ಟರು.

• **ವಿದ್ಯಾಶಂಕರ ಶರ್ಮ** ಬೆಂಗಳೂರು

ಸುಮ್ಮನಿರುವುದರಲ್ಲಿ ಸುಖವಿದೆ

ಮೌನೇನ ಕಲಹಂ ನಾಸ್ತಿ...

ಕ್ರಿಯೆ ಮತ್ತು ಪ್ರತಿಕ್ರಿಯೆ ಬಲು ಸ್ವಾಭಾವಿಕ ವರ್ತನೆಗಳು. ಜಗತ್ತಿನ ಆಗುಹೋಗುಗಳಲ್ಲಿ ಇದು ದಿನನಿತ್ಯದ ಪರಿಪಾಠ. ಮಾನವನ ಸಂವಹನದಲ್ಲಿ ಪ್ರವಾಹೋಪಾದಿಯಲ್ಲಿ ಭಾವನೆಗಳ ಹರಿವು ಇರುತ್ತದೆ. ಇದು ಉಬ್ಬರ ಇಳಿತಗಳನ್ನು ಹೊಂದುತ್ತ ಸಾಗುತ್ತಿರುತ್ತದೆ. ಪ್ರತಿದಿನದ ಸೂರ್ಯನ ಬೆಳಕಿನಷ್ಟೇ ನಿಯತವಾದ ಸಂಗತಿಯೆಂದರೆ ಮಾತುಗಳು. ಒಂದು ಅರ್ಥದಲ್ಲಿ ನಾವು ಅಂದುಕೊಂಡಿರುವ ಜಗದ ವ್ಯವಹಾರಗಳಿಗೆ ಮಾತೇ ಮೂಲ. ಸಂಭಾಷಣೆ, ಸಂದೇಶ ರವಾನೆ, ಚರ್ಚೆ, ಜ್ಞಾನದ ವಿತರಣೆ ಹೀಗೆ ಹಲವು ರೂಪಗಳಲ್ಲಿ ಭಾವನೆಗಳು ಹರಿದಾಡುತ್ತಿರುತ್ತವೆ. ಇಂಥ ನಿರಂತರ ಹರಿವಿನಲ್ಲಿ ಸುಳಿಗಳು ಸಹಜ. ಅವು ಅಸಮಾಧಾನದ, ಆರೋಪದ, ತಪ್ಪು ಗ್ರಹಿಕೆಯ ಕೂಪಗಳಾಗಿರಬಹುದು. ಇಂಥ ತಡೆಗಳಿಗೆ ಪ್ರತಿಕ್ರಿಯೆ ನೀಡಲೇಬೇಕೆಂಬುದು ಬಹುಮತದ ಅನಿಸಿಕೆಯಾಗಿದೆ. ಅದು ನಿರೀಕ್ಷಿತ ನಡೆಯಾದ್ದರಿಂದ ನಾವು ನಮಗೆದುರಾದ ಭಾವನೆಗಳ ತೊಡಕನ್ನು ಉತ್ತರದ ಮೂಲಕವೇ ಪರಿಹರಿಸಿಕೊಳ್ಳಬೇಕು ಎಂದು ಅಂದುಕೊಳ್ಳುತ್ತೇವೆ.

ನಮ್ಮ ಯೋಚನೆಗಳಿಗೆ ಧಕ್ಕೆಯಾದರೆ, ಘಾಸಿಯಾದರೆ ಅದಕ್ಕೆ ಕಾರಣರಾದವರನ್ನು ನಾವು ದೂಷಿಸುತ್ತೇವೆ, ಅವರ ಜತೆ ಸಂಘರ್ಷಕ್ಕೆ ಮುಂದಾಗುತ್ತೇವೆ. ಇದು ನಮಗೆ ಬಹು ಅಯಾಚಿತವಾಗಿ ಹೊಳೆಯುವ ಸಮಾಧಾನದ ದಾರಿ. ವಿಪರ್ಯಾಸವೆಂದರೆ, ನಾವು ಸಮಾಧಾನಕ್ಕೆ ಬಳಸುವ ಮಾರ್ಗಗಳು ಬಹಳ ಸಲ ನಮ್ಮನ್ನು ದಿಕ್ಕು ತಪ್ಪಿ ಅಲೆಯುವಂತೆ ಮಾಡುತ್ತವೆ. ಮನದ ಅಶಾಂತಿಗೆ ನಾವೇ ಕಾರಣರಾಗಿಬಿಡುತ್ತೇವೆ. ವಿಜ್ಞಾನದಲ್ಲಿ ಹೇಳಿರುವ ಚಲನೆಯ ಮೂರನೇ ನಿಯಮವು ಭಾವನಾಯುದ್ಧಕ್ಕೂ ಒಪ್ಪುತ್ತದೆ ಎಂಬ ನಮ್ಮ ತಿಳಿವಳಿಕೆಯಿಂದ ನಾವು ಎಲ್ಲ ಸನ್ನಿವೇಶಗಳಲ್ಲೂ ಉತ್ತರ ನೀಡಲೇಬೇಕೆಂಬ ಹಟಕ್ಕೆ ಬಿದ್ದುಬಿಡುತ್ತೇವೆ.

ಇದಕ್ಕೆ ಬದಲಾಗಿ ನಾವೇಕೆ ಪ್ರತಿಕ್ರಿಯೆಯ ನಿರಾಕರಣದ ಸಂಭಾವ್ಯತೆಯನ್ನು ಯೋಚಿಸುವುದಿಲ್ಲ? ಇಂದು ಮಾನವ ಸಂಬಂಧಗಳು ಬಲು ಸಂಕೀರ್ಣಗೊಂಡಿವೆ. ಮಿತಿಮೀರಿದ ತಾಂತ್ರಿಕತೆಯ ಉಪಯೋಗದಿಂದ ನಾವು ಸಂವೇದನೆಯಿಂದ ದೂರ ಸರಿಯುತ್ತಿದ್ದೇವೆ. ಇಂಥ ಸವಾಲಿನ ಪರಿಸ್ಥಿತಿಯಲ್ಲಿ, ಕ್ರಿಯೆಗೆ ಪ್ರತಿಕ್ರಿಯೆ ನೀಡಲೇಬೇಕೆಂಬ ತುಡಿತದಿಂದ ತುಸು ಭಿನ್ನವಾಗಿ ಸುಮ್ಮನೆ ಇದ್ದು ನಮ್ಮ ಶಾಂತಿಯನ್ನು ಕಾಪಾಡಿಕೊಳ್ಳಬಾರದೇಕೆ? ಮನದ ಹಲವು ಗಂಟುಗಳು ನಮ್ಮ ಪ್ರತಿಕ್ರಿಯೆಗಳಿಂದಲೇ ದೊಡ್ಡದಾಗುತ್ತವೆ. ಮಾತಿಗೊಂದು ಮಾತು ಎಂಬಂತೆ ಬೆಳೆದು ಅದು ಅಸಹನೀಯ ಎಂಬಂಥ ವಾತಾವರಣವನ್ನು ಸೃಷ್ಟಿಸಬಹುದು. 'ಮಾತು ತನ್ನ ವೈರಿ, ಮೌನ ಪರರ ವೈರಿ' ಎಂಬಂತೆ, ಮೌನವನ್ನೇ ನಮ್ಮ ಉತ್ತರವಾಗಿ ಬಳಸಿದರೆ ಅದು ನಮ್ಮ ಬಹು ದೊಡ್ಡ ಅಸ್ತ್ರವಾಗುವುದನ್ನು ನಾವು ಅನುಭವದಿಂದ ಅರಿಯಬಹುದು. ನಮ್ಮ ಸುಮ್ಮನಿರುವಿಕೆಯಿಂದ ಕದಡಿದ ಸಂಬಂಧಗಳು, ಹದಗೆಟ್ಟ ವ್ಯವಹಾರಗಳು, ಅಸ್ತವ್ಯಸ್ತವಾದ ಕಾರ್ಯಗಳು ಸರಿದಾರಿ ಹಿಡಿಯುವ ಸಾಧ್ಯತೆಗಳಿರುತ್ತವೆ. ಅದರಲ್ಲಿ ನಮಗೆ ನಂಬಿಕೆ ಇರಬೇಕಷ್ಟೇ.

ನಮಗೆ ನಮ್ಮೊಳಗಿನ ಪ್ರಶಾಂತತೆಯು ಬಹುಮುಖ್ಯ ಎನಿಸಿದಾಗ, ಅದನ್ನು ನಮಗೆ ನಾವೇ ನೀಡಿಕೊಳ್ಳಬಹುದು ಎಂಬುದು ಸತ್ಯವಾದ ಮಾತು ಎಂದು ನಮಗೆ ವೇದ್ಯವಾಗುತ್ತದೆ. ನಮ್ಮ ಮನದ ಕೊಳ ತಿಳಿಯಾಗಿರಲು ಅದನ್ನು ನಾವೇ ಸ್ವಚ್ಛ ಮಾಡಬೇಕೇ ಹೊರತು, ಬೇರೆಯವರಿಂದ ಅದನ್ನು ನಿರೀಕ್ಷಿಸುವಂತಿಲ್ಲ, ಅದು ತಪ್ಪು ಎಂಬುದು ನಾವು ಅಂತರ್ಮುಖಿಯಾಗಿ ತಪಿಸಿದಾಗ ಹೊಳೆಯುವುದು ನಿಶ್ಚಿತ. ಬೇರೆಯವರ ಕ್ರಿಯೆಗೆ ನಮ್ಮ ಮೌನದ ಉತ್ತರ ನಮ್ಮ ಮಿತ್ರ, ಅದು ನಮ್ಮನ್ನು ಪ್ರಚೋದಿಸುವವರಿಗೆ ವೈರಿಯಾಗುತ್ತದೆ. ಅಂದರೆ, ನಾವು ಪ್ರತಿಕ್ರಿಯೆ ನೀಡುವ ಹಪಾಹಪಿಗೆ ಮುಂದಾಗದೆ ಸುಮ್ಮನಿದ್ದರೆ ಅದು ನಮ್ಮ ಎದುರಾಳಿಗಳನ್ನು ತಬ್ಬಿಬ್ಬು ಮಾಡುತ್ತದೆ, ಏಕೆಂದರೆ ಅವರು ನಮ್ಮಿಂದ ಉತ್ತರವನ್ನೇ ಕಾಯುತ್ತಿರುತ್ತಾರೆ. ನಮ್ಮ ಅನಪೇಕ್ಷಿತ ಮೌನ ಅವರನ್ನು ಕಟ್ಟಿಹಾಕಿಬಿಡುತ್ತದೆ. ಇದರಿಂದ ಆಗುವ ಪ್ರಯೋಜನಗಳೆಂದರೆ, ಮುಂದುವರಿಯಬಹುದಾಗಿದ್ದ ಜಗ್ಗಾಟ ನಿಲ್ಲುವುದು, ಅದು ಶಾಶ್ವತ ಪರಿಹಾರವನ್ನೂ ಪಡೆಯಬಹುದು. ಈ ರೀತಿಯಿಂದ ಯೋಚಿಸಿ ನಾವು ಸುಮ್ಮನಿರುವುದರಿಂದ ಸುಖವನ್ನು ಹೊಂದಬಹುದು ಎಂಬುದನ್ನು ಅರಿಯೋಣ...

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3	■	4		
	■		■	5			■	■
6	7		■		■	8		9
■		■	10		11	■	■	
12				■	13		14	
	■	■	15	16		■		■
17		18	■		■	19		20
■	■	21			■		■	
22			■		■	23		

ಎಡದಿಂದ ಬಲಕ್ಕೆ

1. ಶ್ರೇಷ್ಠವಾದ ಅಥವಾ ಎತ್ತರವಾದ ಎಂದರ್ಥ (3)
4. ಪ್ರತ್ಯೇಕವಾದ ಗುಂಪು (3)
5. ಅಗಸನಿಗೆ ಮತ್ತೊಂದು ಹೆಸರು (3)
6. ಪುರಾತನವಾದುದು ಅಥವಾ ಹಳೆಯ ಕಥೆಯಿದು (3)
8. ನೀರು ತುಂಬಿರುವ ಮೋಡ (3)
10. ಬೆಡಗು, ಬಿನ್ನಾಣಕ್ಕೆ ಮತ್ತೊಂದು ಹೆಸರು (3)
12. ಅಂತ್ಯ ಅಥವಾ ಕೊನೆ (4)
13. ಕಾರ್ಮಿಕರು ನಡೆಸುವ ಕೆಲಸ (4)
15. ಸರಿಯಾಗಿ ನೋಡಿ, ಇದು ರಾಡಿ (3)
17. ಹೆಸರುವಾಸಿಯಾದ ಎಂದರ್ಥ (3)
19. ಬಲಿಷ್ಠವಾದ ಗಂಡಾನೆ (3)
21. ಪಂಚ ಪಾಂಡವರಲ್ಲಿ ಒಬ್ಬಾತ (3)
22. ನಮ್ರತೆಗೆ ಮತ್ತೊಂದು ಹೆಸರು (3)
23. ತಿರುಗುತ್ತಾ ಬಂದಿರುವ ಭಿಕ್ಷುಕ (3)

ಮೇಲಿಂದ ಕೆಳಕ್ಕೆ

1. ಉಡುಪಿಗೆ ಹೋದಾಗ ತೆಗೆದುಕೊಂಡಿದ್ದು ಬಟ್ಟೆ, ವಸ್ತ್ರ (3)
2. ಗಣದ ನಡುವೆ ಸಿಲುಕಿದೆ ಸಮೂಹ (3)
3. ಕಾರಣ ಹುಡುಕಿದ ಗುಮಾಸ್ತ (4)
4. ಕೆಸರಿನಲ್ಲಿ ಹುಟ್ಟುವ ತಾವರೆಗೆ ಮತ್ತೊಂದು ಹೆಸರು (3)
7. ಹಿಂದಿನ ಪ್ರಧಾನಿಯೊಬ್ಬರನ್ನು ನೆನಪಿಸುವ ಹೂವು (3)
9. ದೊಡ್ಡದಾದ ಉರಿ (3)
10. ಓಬವ್ವ ಇದರಿಂದಲೇ ಶತ್ರುಗಳ ಚೆಂಡಾಡಿದಳು (3)
11. ಕಾರು ತೆಗೆದುಕೊಳ್ಳುವಾಗ ಉಂಟಾದ ತಕರಾರು ಅಥವಾ ಅಪವಾದ (3)
12. ಅಡಗಿ ಕೂರಲು ಸೂಕ್ತವಾಗಿದೆ ಕಾಡು (3)
14. ಹೆಚ್ಚು ತಿಳಿವಳಿಕೆಯಿಲ್ಲದವನು, ಹೆಡ್ಡ (3)
16. ಅನುಕೂಲತೆ ಅಥವಾ ಸೌಕರ್ಯ (4)
18. ವಿನಯವಾಗಿಯೇ ಮಾತನಾಡಿದ ಮಗ (3)
19. ಅತಿಯಾಗಿಲ್ಲ, ಒಪ್ಪಿಗೆಯಷ್ಟೇ (3)
20. ಎಣಿಸುವ ಎಂದರ್ಥ (3)

ಸರಿಯುತ್ತರಗಳು

ವಾಸ್ತು ಪುರುಷನ ಮಹತ್ವ

ಬ್ರಹ್ಮನು ವಿಶ್ವವನ್ನು ಸೃಷ್ಟಿಸಿದಾಗ ಮತ್ತು ಕೆಲವು ಜೀವಿಗಳನ್ನು ರಚಿಸಲು ಪ್ರಯೋಗ ಮಾಡುತ್ತಿದ್ದಾಗ ಒಬ್ಬ ಉತ್ಕೃಷ್ಟ ಮನುಷ್ಯನನ್ನು ಸೃಷ್ಟಿಸಿದನು. ವಿಚಿತ್ರವೆನ್ನುವಂತೆ ಅವನು ಅಗಾಧವಾದ ಶಕ್ತಿಯನ್ನು ಹೊಂದಿದ್ದನು, ಅಂಕೆಯೇ ಇಲ್ಲದಂತೆ ಬೆಳೆಯಲು ಪ್ರಾರಂಭಿಸಿದನು. ಸಮಯ ಕಳೆದಂತೆ, ಗಾತ್ರದೊಂದಿಗೆ ಅವನ ಹಸಿವು ಕೂಡ ಹೆಚ್ಚಾಯಿತು. ಅವನು ತನ್ನ ದಾರಿಗೆ ಬಂದ ಎಲ್ಲವನ್ನೂ ಮತ್ತು ಎಲ್ಲರನ್ನೂ ತಿನ್ನಲು ಪ್ರಾರಂಭಿಸಿದನು. ಸ್ವಲ್ಪ ಸಮಯದಲ್ಲೇ, ಅವನ ನೆರಳು ಭೂಮಿಯ ಮೇಲೆ ಶಾಶ್ವತ ಗ್ರಹಣವನ್ನು ಉಂಟುಮಾಡಿತು. ಇದರಿಂದ ದೇವಾನುದೇವತೆಗಳೆಲ್ಲ ಆತಂಕಕ್ಕೊಳಗಾದರು. ಅವರು ತಕ್ಷಣ ಬ್ರಹ್ಮನ ಬಳಿಗೆ ಧಾವಿಸಿ, ಆ ಮನುಷ್ಯನನ್ನು ನಿಯಂತ್ರಿಸಲು ಬೇಡಿಕೊಂಡರು.

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಇಷ್ಟು ಹೊತ್ತಿಗೆ ಬ್ರಹ್ಮ ದೇವರಿಗೆ ತನ್ನ ತಪ್ಪಿನ ಅರಿವಾಗಿತ್ತು. ಆದರೆ ಆ ಮನುಷ್ಯನೀಗ ಬ್ರಹ್ಮನಿಗಿಂತ ಶಕ್ತಿಶಾಲಿಯಾಗಿ ಬೆಳೆದಿದ್ದನು. ಆಗ ಬ್ರಹ್ಮನು ಅಷ್ಟ ದಿಕ್ಪಾಲಕರನ್ನು ಸಹಾಯಕ್ಕಾಗಿ ಕರೆದನು. ಅವನ ಕೋರಿಕೆಯನ್ನು ಕೇಳಿ ರಕ್ಷಣೆಗಾಗಿ ಬಂದ ಅವರು ಆ ವ್ಯಕ್ತಿಯನ್ನು ಹಿಡಿದು ಸೋಲಿಸಿದರು. ಅವರು ಆ ವ್ಯಕ್ತಿಯನ್ನು ನೆಲಕ್ಕೆ ಒತ್ತಿ ಅವನ ತಲೆಯನ್ನು ಈಶಾನ್ಯ ದಿಕ್ಕಿನಲ್ಲಿ ಮತ್ತು ಕಾಲುಗಳನ್ನು ನೈಋತ್ಯ ದಿಕ್ಕಿನಲ್ಲಿ ಇರಿಸಿದರು. ಬ್ರಹ್ಮದೇವ ಅವನ ನಾಭಿಯ ಸ್ಥಳದಲ್ಲಿ ಕುಳಿತು ಅವನನ್ನು ಭೂಮಿಗೆ ಒತ್ತಿ ಹಿಡಿದನು. ಆಗ ಆ ಮನುಷ್ಯ ನೋವಿನಿಂದ ನರಳುತ್ತಾ ಬ್ರಹ್ಮದೇವನನ್ನು, ''ನೀನೇ ನನ್ನನ್ನು ಸೃಷ್ಟಿಸಿ ಈಗ ನೀನೇ ನನ್ನನ್ನು ಹಿಂಸಿಸುತ್ತಿದ್ದೀಯ. ಇದು ನ್ಯಾಯವೇ?'' ಎಂದು ಕೇಳುತ್ತಾನೆ.

ಆಗ ಬ್ರಹ್ಮದೇವ ಅರೆ ನಿಮಿಷ ಯೋಚಿಸಿ ಉತ್ತರಿಸುತ್ತಾನೆ- ''ಇದು ನಿನ್ನ ತಪ್ಪಲ್ಲ ಎಂದು ನನಗೆ ತಿಳಿದಿದೆ, ಆದರೆ ನೀನು ಎಲ್ಲರಿಗೂ ಕಂಟಕವಾಗಿದ್ದಿ. ಆದ್ದರಿಂದ ನಾನೀಗ ನಿನ್ನನ್ನು ನಿಗ್ರಹಿಸಲೇಬೇಕಾಗಿದೆ. ನಾನೇ ಸೃಷ್ಟಿಸಿದ್ದನ್ನು ನಾಶಮಾಡಲು ನಾನು ಬಯಸುವುದಿಲ್ಲ, ಆದ್ದರಿಂದ ನೀನು ಶಾಶ್ವತವಾಗಿ ಹೀಗೆಯೇ ಭೂಮಿಗೆ ಅಂಟಿಕೊಂಡು ಇರಬೇಕು''.

ಆ ವ್ಯಕ್ತಿ ಕೇಳಿದ, ''ಆದರೆ ಇದೆಲ್ಲದರಿಂದ ನನಗೇನು ಪ್ರಯೋಜನ?''

ಆಗ ಬ್ರಹ್ಮ, ''ನಾನು ನಿನ್ನನ್ನು ಅಮರನನ್ನಾಗಿ ಮಾಡುತ್ತೇನೆ ಮತ್ತು ಭೂಮಿಯ ಮೇಲೆ ಯಾವುದೇ ರೀತಿಯ ಕಟ್ಟಡವನ್ನು ನಿರ್ಮಿಸುವ ಎಲ್ಲಾ ಜನರು ನಿನ್ನನ್ನು ಪೂಜಿಸುತ್ತಾರೆ. ಈ ಜನರು ನಿನ್ನನ್ನು ಪೂಜಿಸದಿದ್ದರೆ ಮತ್ತು ನಿನ್ನನ್ನು ಸಂತೋಷವಾಗಿರಿಸದಿದ್ದರೆ ನೀನು ಅವರನ್ನು ಆಹುತಿ ತೆಗೆದುಕೊಳ್ಳಬಹುದು, ತೊಂದರೆಗೆ ಈಡುಮಾಡಬಹುದು. ನೀನು ಇಡೀ ಭೂಮಿಯಲ್ಲಿ ಹರಡಿಕೊಂಡಿರುವೆ. ಇಂದಿನಿಂದ ನೀನು 'ವಾಸ್ತು ಪುರುಷ' ಎಂದು ಕರೆಯಲ್ಪಡುತ್ತೀಯ'' ಎಂದು ವರವನ್ನು ನೀಡಿದನು.

ಈ ಒಪ್ಪಂದಕ್ಕೆ, ವಾಸ್ತು ಪುರುಷ ಒಪ್ಪಿಕೊಂಡು ಶಾಶ್ವತವಾಗಿ ಭೂಮಿಯ ಬೇರ್ಪಡಿಸಲಾಗದ ಭಾಗವಾದನು. ಬ್ರಹ್ಮನು ಅವನಿಗೆ ಭೂಮಿಯ ಮೇಲೆ ಹೋಗಿ ಪ್ರತಿಯೊಂದು ಸ್ಥಳ/ಮನೆಯಲ್ಲಿ ವಾಸಿಸಲು ಆದೇಶಿಸಿದನು ಮತ್ತು ಪ್ರತಿಯೊಬ್ಬ ನಿವಾಸಿಗೂ ಆರೋಗ್ಯ, ಸಂಪತ್ತು ಮತ್ತು ಸಮೃದ್ಧಿಯನ್ನು ಆಶೀರ್ವದಿಸಬೇಕೆಂದು ಆದೇಶಿಸಿದನು. ಆದ್ದರಿಂದಲೇ ಒಂದು ಜಾಗ ಅಥವಾ ಭೂಮಿಯ ವಾಸ್ತುಪುರುಷನನ್ನು ಆಹಾರವಿಲ್ಲದೆ, ಪೂಜೆ-ಪರಿಹಾರಗಳಿಲ್ಲದೆ ಬಿಟ್ಟುಬಿಟ್ಟರೆ, ಆ ಜಾಗದ ಮಾಲೀಕರಿಗೆ ಕೇಡು ತರುವಷ್ಟು ಕೋಪಗೊಳ್ಳುತ್ತಾನೆ ಎಂದು ನಂಬಲಾಗಿದೆ. ಒಂದು ಜಾಗವನ್ನು ಖರೀದಿಸುವ ಕ್ಷಣದಿಂದಲೇ, ವಾಸ್ತುಪುರುಷನು ತೃಪ್ತಿಯಾಗುವಂತೆ ವಿಶೇಷ ಆಚರಣೆಗಳು ಮತ್ತು ಪೂಜೆ-ಪರಿಹಾರಗಳನ್ನು ಮಾಡುವುದು ಅಗತ್ಯ ಎನ್ನಲಾಗುತ್ತದೆ.

ಹಾಗೆಯೇ, ಆ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡುವಾಗ, ವಾಸ್ತುಪುರುಷನ ದೇಹದ ಸೂಕ್ಷ್ಮ ಭಾಗಗಳಿಗೆ ನೋವುಂಟಾಗದಂತೆ, ಅವನನ್ನು ಬದಲಾಯಿಸದಂತೆ ವಿಶೇಷ ಕಾಳಜಿ ವಹಿಸಬೇಕೆಂದು ಶಾಸ್ತ್ರ ಹೇಳುತ್ತದೆ. ಇಲ್ಲದಿದ್ದರೆ ಅದರಿಂದ ಜಾಗದ ಅಥವಾ ಕಟ್ಟಡದ ಮಾಲೀಕರಿಗೆ ಅನರ್ಥ ಸಂಭವಿಸುತ್ತದೆ ಎಂದು ನಂಬಲಾಗಿದೆ.

ವಿಶ್ವಕರ್ಮರನ್ನು ವಾಸ್ತುಶಾಸ್ತ್ರದ ಜನಕನಾಗಿ ಪರಿಗಣಿಸಲಾಗುತ್ತದೆ. ಅವರ ಗ್ರಂಥವಾದ 'ವಿಶ್ವಕರ್ಮ ಪ್ರಕಾಶ'ದಲ್ಲಿ, ವಾಸ್ತುಪುರುಷನ ಉದ್ಭವವನ್ನು ವಿವರವಾಗಿ ವರ್ಣಿಸಲಾಗಿದೆ. ನಮ್ಮಲ್ಲಿ ಅನೇಕರು ವಾಸ್ತು ಪ್ರಕಾರ ಗೃಹ, ಕಟ್ಟಡಗಳನ್ನು ಕಟ್ಟಿ ಅಭಿವೃದ್ಧಿ ಹೊಂದುವುದನ್ನು ಕಾಣುತ್ತೇವೆ. ಮತ್ತೆ ಕೆಲವರಿಗೆ ತೊಂದರೆಗಳು ಉಂಟಾದಾಗ ಆ ಕಟ್ಟಡದ ವಾಸ್ತು ಬದಲಾಯಿಸಿ ಸಮಾಧಾನಕರ ಫಲಿತಾಂಶಗಳನ್ನು ಪಡೆಯುವುದನ್ನು ಗಮನಿಸಿರುತ್ತೇವೆ. ಇದರ ಹಿಂದಿರುವ ಅನೇಕ ಸೂಕ್ಷ್ಮಗಳನ್ನ ಸರಿಯಾದ ರೀತಿಯಲ್ಲಿ ತಿಳಿದುಕೊಂಡಾಗ ಬಹುಶಃ ನಮಗೂ ನಾವು ವಾಸ ಮಾಡುವ ಮನೆಗಳು ನೆಮ್ಮದಿಯ ನೆಲೆಯಾಗಿ ಪರಿಣಮಿಸಬಹುದು.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಮೋಹಿತ್ ಶರ್ಮಾ ವಿದಾಯ

ದೆಹಲಿ: ಭಾರತೀಯ ಕ್ರಿಕೆಟ್‌ನ ವೇಗದ ಬೌಲರ್ ಮೋಹಿತ್ ಶರ್ಮಾ ಅವರು ಎಲ್ಲಾ ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. 37ರ ಪ್ರಾಯದ ಅವರು ಈ ವರ್ಷ ನಡೆದಿದ್ದ ಐಪಿಎಲ್ ಟೂರ್ನಿಯಲ್ಲಿ ಡೆಲ್ಲಿ

ಕ್ಯಾಪಿಟಲ್ಸ್ ಪರ ಆಡಿದ್ದರು. ಭಾರತ ತಂಡದ ಪರ 2015ರಿಂದ 2023ರ ಅವಧಿಯಲ್ಲಿ 26 ಏಕದಿನ ಪಂದ್ಯಗಳು ಹಾಗೂ 8 ಟಿ20 ಪಂದ್ಯಗಳನ್ನು ಆಡಿದ್ದರು. 'ತುಂಬು ಹೃದಯದಿಂದ ನಾನು ಎಲ್ಲಾ ಸ್ವರೂಪದ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸುತ್ತಿದ್ದೇನೆ' ಎಂದು ತಮ್ಮ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಅವರು ಪೋಸ್ಟ್ ಹಾಕಿದ್ದಾರೆ. 'ಹರಿಯಾಣ ತಂಡವನ್ನು ಪ್ರತಿನಿಧಿಸುವುದರಿಂದ ಭಾರತ ತಂಡದ ಜೆರ್ಸಿ ಧರಿಸುವಿಕೆ ಹಾಗೂ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡುವವರೆಗೆ ಈ ಪ್ರಯಾಣವು ಒಂದು ಆಶೀರ್ವಾದವಾಗಿತ್ತು' ಎಂದು ಬರೆದಿದ್ದಾರೆ. 2022ರ ಐಪಿಎಲ್ ಟೂರ್ನಿಯಿಂದ ಹೊರಗುಳಿದ ಮೋಹಿತ್ ಶರ್ಮಾ ಅವರನ್ನು 2023ರಲ್ಲಿ ಗುಜರಾತ್ ಟೈಟನ್ಸ್ ತಂಡವು ಖರೀದಿಸಿತ್ತು. ಅವರು ಅವರು ಡೆತ್ ಓವರ್‌ಗಳಲ್ಲಿ ತಮ್ಮ ಬೌಲಿಂಗ್ ಮೂಲಕ ಗಮನ ಸೆಳೆದಿದ್ದರು. 37ನೇ ವಯಸ್ಸಿನ ಅವರು ಆ ಆವೃತ್ತಿಯಲ್ಲಿ 27 ವಿಕೆಟ್‌ಗಳನ್ನು ಕಬಳಿಸಿದ್ದರು, ಆದರೆ ಒಂದೇ ಒಂದು ವಿಕೆಟ್‌ನಿಂದಾಗಿ ಆ ಸಲ ಪರ್ಪಲ್ ಕ್ಯಾಪ್ ವಂಚಿತರಾಗಿದ್ದರು. ಆದರೂ ಅವರು ಮುಂದಿನ ಆವೃತ್ತಿಯಲ್ಲಿ ಗುಜರಾತ್ ಟೈಟನ್ಸ್ ಪರ 12 ಪಂದ್ಯಗಳಲ್ಲಿ 13 ವಿಕೆಟ್‌ಗಳನ್ನು ಕಬಳಿಸಿದ್ದರು.

ಲಂಡನ್ ಚೆಸ್:ಅಗ್ರಸ್ಥಾನ ಹಂಚಿಕೊಂಡ ಪ್ರಜ್ಞಾನಂದ

ಲಂಡನ್: ಭಾರತದ ಗ್ರಾಂಡ್‌ಮಾಸ್ಟರ್ ಪ್ರಜ್ಞಾನಂದ. ಆರ್ ಅವರು ಕೊನೆಯ ಸುತ್ತಿನಲ್ಲಿ ಇಸ್ರೇಲ್‌ನ ಇಲ್ಯಾ ಸ್ಮಿರಿನ್ ಜೊತೆ ಡ್ರಾ ಮಾಡಿಕೊಂಡರು. ಇಬ್ಬರು ಆಟಗಾರರು 9 ಸುತ್ತುಗಳಿಂದ ತಲಾ ಏಳು ಪಾಯಿಂಟ್ಸ್ ಗಳಿಸಿದರು, ಹೀಗಾಗಿ ಅವರು ಅಗ್ರಸ್ಥಾನ ಹಂಚಿಕೊಳ್ಳಬೇಕಾಯಿತು. ಬುಧವಾರ ಸಂಜೆ ನಡೆದ ಅಂತಿಮ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಪ್ರಜ್ಞಾನಂದ 18 ನಡೆಗಳಲ್ಲಿ 2024ರ ಚಾಂಪಿಯನ್ ಸ್ಮಿರಿನ್ ಜೊತೆ ಡ್ರಾ ಮಾಡಿಕೊಂಡರು. ಎರಡನೇ ಬೋರ್ಡ್‌ನಲ್ಲಿ ಸರ್ಬಿಯಾದ ವೆಲಿಮಿರ್ ಇವಿಕ್ ಅವರು ಫ್ರಾನ್ಸ್‌ನ ಮ್ಯಾಥ ಕಾರ್ನೆಟೆ ಅವರನ್ನು ಸೋಲಿಸಿದರು. ಇಂಗ್ಲೆಂಡ್‌ನ ಅಮೀತ್ ಅವರು ಸ್ವದೇಶದ ಡೇನಿಯಲ್ ಎಚ್ ಫೆರ್ನಾಂಡಿಸ್ ಅವರನ್ನು ಮಣಿಸಿದರು. ಈ ಟೂರ್ನಿಯ ನಿಯಮಗಳ ಪ್ರಕಾರ ಆಟಗಾರರು ಸಮಾನ ಪಾಯಿಂಟ್ಸ್ ಗಳಿಸಿದರೆ ಸ್ಥಾನ ನಿರ್ಧಾರಕ್ಕಾಗಿ ಟೈಬ್ರೇಕರ್ ಆಡುವ ಸಂಪ್ರದಾಯಲಿಲ್ಲ, ಬದಲಾಗಿ ಅಗ್ರಸ್ಥಾನ ಹಂಚಿಕೊಂಡು ಬಹುಮಾನ ಹಂಚಿಕೊಳ್ಳಲಾಗುತ್ತದೆ. ಮೊದಲ ಮೂರು ಸ್ಥಾನ ಪಡೆಯುವ ಆಟಗಾರರಿಗೆ ಕ್ರಮವಾಗಿ 12 ಲಕ್ಷ, 6 ಲಕ್ಷ ಮತ್ತು 3.60 ಲಕ್ಷ ನಿಗದಿಪಡಿಸಲಾಗಿತ್ತು.

ದೆಹಲಿಯ ಬದೋನಿ ಆಲ್‌ರೌಂಡ್ ಪ್ರದರ್ಶನ, ಪ್ರಿಯಾಂಶ್ ಭರ್ಜರಿ ಬ್ಯಾಟಿಂಗ್ | ಪಡಿಕ್ಕಲ್, ಸ್ಮರಣ್ ಆಟ ವ್ಯರ್ಥ

ಮುಷ್ತಾಕ್ ಆಲಿ ಟ್ರೋಫಿ: ಕರ್ನಾಟಕಕ್ಕೆ ಸೋಲು

ಅಹಮದಾಬಾದ್: ಭರವಸೆಯ ಆಟಗಾರ ದೇವದತ್ ಪಡಿಕ್ಕಲ್ ಹಾಗೂ ಆರ್. ಸ್ಮರಣ್ ಅವರು ಬಾರಿಸಿದ ಅರ್ಧಶತಕದ ಹೊರತಾಗಿಯೂ ಕರ್ನಾಟಕ ತಂಡವು ಗುರುವಾರ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 45 ರನ್‌ಗಳಿಂದ ದೆಹಲಿ ವಿರುದ್ಧ ಸೋಲು ಕಂಡಿದೆ. ಈ ಗೆಲುವಿನ ಮೂಲಕ ದೆಹಲಿ ತಂಡವು ಡಿ-ಗುಂಪಿನ ಪಂದ್ಯದಲ್ಲಿ 3ನೇ ಗೆಲುವನ್ನು ದಾಖಲಿಸಿದ್ದು, ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಬಡ್ತಿ ಪಡೆದಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ತಂಡದ ಆರಂಭ ಕಳಪೆಯಾಗಿತ್ತು. ಆರಂಭಿಕ ಆಟಗಾರ ಯಶ್ ಧುಲ್ (7) ರನ್ ಕಲೆ ಹಾಕುವಲ್ಲಿ ವಿಫಲರಾದರು. ಆದರೆ ಮತ್ತೋರ್ವ ಆರಂಭಿಕ ಆಟಗಾರ ಪ್ರಿಯಾಂಶ್ ಆರ್ಯ ಹಾಗೂ ಆಯುಷ್ ಬದೋನಿ ಜೋಡಿ ಭರ್ಜರಿ ಜತೆಯಾಟ ಪ್ರದರ್ಶಿಸಿತು. ಈ ಜೋಡಿ ಸುಮಾರು 10 ಓವರ್ ಬ್ಯಾಟಿಂಗ್ ನಡೆಸಿ ದೆಹಲಿ ಪರವಾಗಿ ಉತ್ತಮ ಮೊತ್ತವನ್ನು ಕಲೆ ಹಾಕಿತು. 2 ಬೌಂಡರಿ, 6 ಸಿಕ್ಸರ್ ಬಾರಿಸಿದ್ದ ಪ್ರಿಯಾಂಶ್ ಆರ್ಯ 62 ರನ್ ಬಾರಿಸಿ ಔಟ್ ಆದರು.

ಆಯುಷ್ ಬದೋನಿ ಇತರ ಬ್ಯಾಟರ್‌ಗಳ ಜತೆ ಸೇರಿ ಉತ್ತಮ ಬ್ಯಾಟಿಂಗ್ ನಡೆಸಿ ದೆಹಲಿ ತಂಡದ ಮೊತ್ತವನ್ನು ಹಿಗ್ಗಿಸಿದರು. 35 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಸಹಾಯದಿಂದ 53 ರನ್ ಬಾರಿಸಿ ಔಟ್ ಆದರು. ದೆಹಲಿ ತಂಡದ ನಾಯಕ ನಿತೀಶ್ ರಾಣಾ 28 ಎಸೆತಗಳಲ್ಲಿ ಅಜೇಯ

46 ರನ್ ಬಾರಿಸಿದರೆ, ತೇಜಸ್ವಿ 3 ಬೌಂಡರಿ, 5 ಸಿಕ್ಸರ್ ಸಹಾಯದಿಂದ ಅರ್ಧಶತಕ ಸಿಡಿಸಿದರು. ಅಂತಿಮವಾಗಿ

ದೆಹಲಿ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 232 ರನ್ ಕಲೆ ಹಾಕಿತು.

ದೇವದತ್, ಸ್ಮರಣ್ ಅರ್ಧಶತಕ: ಸವಾಲಿನ ಮೊತ್ತವನ್ನು ಹಿಂಬಾಲಿಸಿದ ಕರ್ನಾಟಕದ ಆರಂಭ ಕಳಪೆಯಾಗಿತ್ತು. ಬಿಆರ್ ಶರತ್ (6), ಮಯಾಂಕ್ ಅಗರ್ವಾಲ್ (9), ಕರುಣ್ ನಾಯರ್ (2) ದೊಡ್ಡ ಮೊತ್ತ ಕಲೆ ಹಾಕುವಲ್ಲಿ ವಿಫಲರಾದರು. ಒಂದು ಹಂತದಲ್ಲಿ ಕರ್ನಾಟಕ 48 ರನ್‌ಗೆ 3 ವಿಕೆಟ್ ಕಳೆದುಕೊಂಡಿತ್ತು. ಆದರೆ ದೇವದತ್ತ ಪಡಿಕ್ಕಲ್ 8 ಬೌಂಡರಿ, 2 ಸಿಕ್ಸರ್ ಸಹಾಯದಿಂದ 62 ರನ್ ಬಾರಿಸಿ ಒಂದು ಹಂತದಲ್ಲಿ ಕರ್ನಾಟಕ ತಂಡಕ್ಕೆ ಆಧಾರಸ್ತಂಭವಾದರು. ನಾಲ್ಕನೇ ವಿಕೆಟ್‌ಗೆ ಪಡಿಕ್ಕಲ್ ಹಾಗೂ ಆರ್.ಸ್ಮರಣ್ ಜೋಡಿ ಉತ್ತಮ ಜತೆಯಾಟದ ಕಾಣಿಕೆ ನೀಡಿತು. ಸ್ಮರಣ್ 38 ಎಸೆತಗಳಲ್ಲಿ 72 ರನ್ ಬಾರಿಸಿದರು. ಉಳಿದ ಬ್ಯಾಟರ್‌ಗಳು ರನ್ ಕಲೆ ಹಾಕುವಲ್ಲಿ ವಿಫಲರಾದರು, ಆ ಕಾರಣಕ್ಕಾಗಿ ಅಂತಿಮವಾಗಿ ಕರ್ನಾಟಕ 19.3 ಓವರ್‌ಗಳಲ್ಲಿ 187 ರನ್ ಗಳಿಸಿ ಆಲ್ ಔಟ್ ಆಯಿತು.

2ನೇ ಟೆಸ್ಟ್ | ಆಸೀಸ್ ವಿರುದ್ಧ ಜೋ ರೂಟ್ ಅಜೇಯ ಶತಕ

ಮೊದಲ ದಿನದ ಅಂತ್ಯಕ್ಕೆ ಸುಸ್ಥಿತಿಯಲ್ಲಿ ಇಂಗ್ಲೆಂಡ್

ಬ್ರಿಸ್ಬೇನ್: ಆಸ್ಟ್ರೇಲಿಯಾ ವಿರುದ್ಧ ಆ್ಯಷಸ್ ಟೆಸ್ಟ್ ಸರಣಿಯ ಎರಡನೇ ಪಂದ್ಯದಲ್ಲಿ ಇಂಗ್ಲೆಂಡ್ ಮಾಜಿ ನಾಯಕ ಜೋ ರೂಟ್ ಅವರ ಶತಕದ ನೆರವಿನಿಂದ ಮೊದಲ ದಿನದಾಟದ ಅಂತ್ಯಕ್ಕೆ ಇಂಗ್ಲೆಂಡ್ 9 ವಿಕೆಟ್ ನಷ್ಟಕ್ಕೆ 325 ರನ್ ಗಳಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆರಿಸಿಕೊಂಡ ಇಂಗ್ಲೆಂಡ್ ತಂಡಕ್ಕೆ ಮಿಚೆಲ್ ಸ್ಟಾರ್ಕ್, ಬೆನ್ ಡಕೆಟ್ ಹಾಗೂ ಓಲಿ ಪೋಪ್ ಅವರನ್ನು ಔಟ್ ಮಾಡುವ ಮೂಲಕ ಆಸ್ಟ್ರೇಲಿಯಾ ಆರಂಭಿಕ ಆಘಾತ ನೀಡಿತು. ಬಳಿಕ ಮೂರನೇ ವಿಕೆಟ್‌ಗೆ ಜತೆಯಾಗಿದ್ದ ಜೋ ರೂಟ್ ಹಾಗೂ ಝ್ಯಾಕ್ ಕ್ರಾವ್ಲಿ (76) ಇಬ್ಬರೂ ಸೇರಿ 117 ರನ್‌ಗಳ ಜತೆಯಾಟವನ್ನು ಆಡಿ ಆರಂಭಿಕ ಆಘಾತಕ್ಕೆ ಒಳಗಾಗಿದ್ದ ಇಂಗ್ಲೆಂಡ್ ತಂಡವನ್ನು ಮೇಲೆತ್ತಿದರು.

ಆಸ್ಟ್ರೇಲಿಯಾ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಜೋ ರೂಟ್ ಮೊದಲನೇ ದಿನದಾಟದ ಅಂತ್ಯಕ್ಕೆ 202 ಎಸೆತಗಳಲ್ಲಿ ಒಂದು ಸಿಕ್ಸರ್ ಹಾಗೂ 15 ಬೌಂಡರಿಗಳೊಂದಿಗೆ ಅಜೇಯ 135 ರನ್‌ಗಳನ್ನು ಕಲೆ ಹಾಕಿದರು. ಒಂದು ತುದಿಯಲ್ಲಿ ನಿರಂತರವಾಗಿ ವಿಕೆಟ್‌ಗಳು ಉರುಳುತ್ತಿದ್ದರೂ ಮತ್ತೊಂದು ತುದಿಯಲ್ಲಿ

ಅವರು ರನ್ ಮಳೆ ಸುರಿಸಿದರು, ಆ ಮೂಲಕ ಆಸ್ಟ್ರೇಲಿಯಾ ನೆಲದಲ್ಲಿ 1000 ಟೆಸ್ಟ್ ರನ್‌ಗಳನ್ನು ಕೂಡ ಪೂರ್ಣಗೊಳಿಸಿದರು. ಕಾಂಗರೂ ನಾಡಿನಲ್ಲಿ ಆಡಿದ 30 ಇನ್ನಿಂಗ್ಸ್‌ಗಳಿಂದ ಒಂದು ಶತಕ ಹಾಗೂ 9 ಅರ್ಧಶತಕಗಳನ್ನು ಅವರು ಬಾರಿಸಿದ್ದಾರೆ.

ಇತಿಹಾಸ ಬರೆದ ಜೋ ರೂಟ್: ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಜೋ ರೂಟ್ ಅವರ ಪಾಲಿಗೆ ಇದು 22ನೇ ಶತಕವಾಗಿದೆ. ಆ ಮೂಲಕ ಟೂರ್ನಿಯಲ್ಲಿ ಅತೀ ಹೆಚ್ಚು ಶತಕಗಳನ್ನು ಬಾರಿಸಿದ ವಿಶ್ವದ ಮೊದಲ ಬ್ಯಾಟ್ಸ್‌ಮನ್ ಎಂಬ ದಾಖಲೆ ಜೋ ರೂಟ್ ಅವರ ಹೆಸರಿನಲ್ಲಿದೆ. 13 ಶತಕಗಳನ್ನು ಬಾರಿಸುವ ಮೂಲಕ ಆಸ್ಟ್ರೇಲಿಯಾ ಹಿರಿಯ ಬ್ಯಾಟ್ಸ್‌ಮನ್ ಸ್ಟೀವನ್ ಸ್ಮಿತ್ ಅವರು ಇದೀಗ ಎರಡನೇ ಸ್ಥಾನದಲ್ಲಿದ್ದಾರೆ.

ಮುಷ್ತಾಕ್ ಆಲಿ ಟ್ರೋಫಿ | ಮುಖಾಮುಖಿಯಾದ ವೈಭವ್ ಸೂರ್ಯವಂಶಿ-ಅರ್ಜುನ್ ತೆಂಡೂಲ್ಕರ್

ಬಿಹಾರ ವಿರುದ್ಧ ಗೆದ್ದ ಗೋವಾ

ಕೋಲ್ಕತ್ತಾ: ಗುರುವಾರ ನಡೆದ ಮುಷ್ತಾಕ್ ಆಲಿ ಟ್ರೋಫಿ ಪಂದ್ಯವೊಂದರಲ್ಲಿ ಬಿಹಾರ ಮತ್ತು ಗೋವಾ ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ 14 ವರ್ಷದ ವೈಭವ್ ಸೂರ್ಯವಂಶಿಗೆ ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್ ತೆಂಡೂಲ್ಕರ್ ಎದುರಾಗಿದ್ದರು. ಹೀಗಾಗಿ ಅಭಿಮಾನಿಗಳು ಈ ಪಂದ್ಯದ ಮೇಲೆ ಸಾಕಷ್ಟು ನಿರೀಕ್ಷೆಗಳನ್ನಿಟ್ಟಿದ್ದರು. ನಿರೀಕ್ಷೆಯಂತೆಯೇ ಪಂದ್ಯದಲ್ಲಿ ಅರ್ಜುನ್ ತೆಂಡೂಲ್ಕರ್ ಎದುರು ವೈಭವ್ ಸೂರ್ಯವಂಶಿ ಅಬ್ಬರಿಸಿದರಾದರೂ, ಅವರ ತಂಡಕ್ಕೆ ಗೆಲುವು ತಂದುಕೊಡಲು ಸಾಧ್ಯವಾಗಲಿಲ್ಲ. ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬಿಹಾರ 180 ರನ್ ಕಲೆಹಾಕಿತು. ಆ ಗುರಿ ಬೆನ್ನಟ್ಟಿದ ಗೋವಾ ಕೊನೆಯ ಓವರ್‌ನಲ್ಲಿ ಜಯದ ನಗೆ ಬೀರಿತು.

ವೈಭವ್-ಅರ್ಜುನ್ ಮುಖಾಮುಖಿ: ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬಿಹಾರ ಪರ ವೈಭವ್ ಆರಂಭಿಕರಾಗಿ ಕಣಕ್ಕಿಳಿದಿದ್ದರು. ಅವರು ತಮ್ಮ ಇನ್ನಿಂಗ್ಸ್‌ನಲ್ಲಿ ಅರ್ಜುನ್ ತೆಂಡೂಲ್ಕರ್ ಅವರ 10 ಎಸೆತಗಳನ್ನು ಎದುರಿಸಿ 15 ರನ್ ಬಾರಿಸಿದರು. ಸೂರ್ಯವಂಶಿ, ಅರ್ಜುನ್ ತೆಂಡೂಲ್ಕರ್ ವಿರುದ್ಧ ಮೂರು ಬೌಂಡರಿ ಬಾರಿಸಿದರು.

46 ರನ್ ಬಾರಿಸಿದ ವೈಭವ್: ಗೋವಾ ವಿರುದ್ಧ ವೈಭವ್ ಸೂರ್ಯವಂಶಿ 25

ಎಸೆತಗಳಲ್ಲಿ 4 ಸಿಕ್ಸರ್ ಮತ್ತು 4 ಬೌಂಡರಿಗಳ ಸಹಾಯದಿಂದ 46 ರನ್ ಗಳಿಸಿದರು. ಈ ಸಲದ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ವೈಭವ್ ಸೂರ್ಯವಂಶಿ ಇದುವರೆಗೆ ಒಟ್ಟು 186 ಬಾರಿಸಿದ್ದು, ಇದರಲ್ಲಿ 14 ಸಿಕ್ಸರ್‌ಗಳು ಸೇರಿವೆ. ವೈಭವ್ ಸೂರ್ಯವಂಶಿ ಅವರ ಚುರುಕಾದ ಇನ್ನಿಂಗ್ಸ್‌ನಿಂದಾಗಿ ಪವರ್‌ಪ್ಲೇನಲ್ಲಿ ಬಿಹಾರ 59 ರನ್ ಗಳಿಸಿತು. ಪವರ್‌ಪ್ಲೇಯ ಕೊನೆಯ ಓವರ್‌ನಲ್ಲಿ ವೈಭವ್ ಅವರ ವಿಕೆಟ್ ಪತನವಾಯಿತು.

ಬಿಹಾರ ವಿರುದ್ಧ ಗೆದ್ದ ಗೋವಾ: ಬೌಲಿಂಗ್‌ನಲ್ಲಿ 4 ಓವರ್ ಬೌಲ್ ಮಾಡಿ 32 ರನ್‌ಗಳನ್ನು ನೀಡಿ 2 ವಿಕೆಟ್ ಉರುಳಿಸಿದ ಅರ್ಜುನ್ ತೆಂಡೂಲ್ಕರ್ ಬ್ಯಾಟಿಂಗ್‌ನಲ್ಲಿ ಮತ್ತೊಮ್ಮೆ ವೈಫಲ್ಯ ಅನುಭವಿಸಿದರು. ಅರ್ಜುನ್ 5 ರನ್ ಬಾರಿಸಿ ಔಟಾದರು. ತಂಡದ ಪರ ಕಶ್ಯಪ್ ಬಖಾಲೆ ಹಾಗೂ ನಾಯಕ ಸುಯಶ್ ಪ್ರಭುದೇಸಾಯಿ ಅರ್ಧಶತಕ ಬಾರಿಸಿ ತಂಡವನ್ನು ಗೆಲುವಿನ ದಡ ತಲುಪಿಸಿದರು.

ಡಿಸೆಂಬರ್ ಏಳರಂದು ಚುನಾವಣೆ | ಅಧ್ಯಕ್ಷಸ್ಥಾನದ ಸ್ಪರ್ಧಿಯಾಗಿರುವುದಕ್ಕೆ ಹೆಮ್ಮೆ ಇದೆ: ಶಾಂತಕುಮಾರ್

ರಾಜ್ಯ ಕ್ರಿಕೆಟ್ ಅಭಿವೃದ್ಧಿಗಾಗಿ ನನ್ನ ಸ್ಪರ್ಧೆ

ಶಿವಮೊಗ್ಗ: ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನ (ಕೆಎಸ್‌ಸಿಎ) ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಿರುವುದಕ್ಕೆ ನನಗೆ ಹೆಮ್ಮೆ ಇದೆ ಎಂದು ಪತ್ರಿಕೋದ್ಯಮಿ ಕೆ.ಎನ್ ಶಾಂತಕುಮಾರ್ ತಿಳಿಸಿದ್ದಾರೆ.

ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಾಂತಕುಮಾರ್, ಕೆಎಸ್‌ಸಿಎ ದೊಡ್ಡ ಸಂಸ್ಥೆ, ಅದಕ್ಕೆ ದೀರ್ಘವಾದ, ವೈಭವಯುತ ಇತಿಹಾಸ ಇದೆ. ಕಳೆದ 9 ದಶಕಗಳಲ್ಲಿ ಸಾಕಷ್ಟು ದಿಗ್ಗಜರು ಸೇವೆ ಸಲ್ಲಿಸಿದ್ದಾರೆ. ಕ್ರೀಡಾಪಟುಗಳಿಗೆ ಮೂಲ ಭೂತ ಸೌಕರ್ಯ, ತರಬೇತಿ ನೀಡುವ ಎಲ್ಲಾ ಪ್ರಯತ್ನ ಮಾಡಲಾಗುತ್ತದೆ. ನಮ್ಮ ತಂಡದಲ್ಲಿ ಹಲವು ಕ್ರೀಡಾಪಟುಗಳಿದ್ದಾರೆ. ಕಳೆದ ಎರಡು ದಶಕಗಳಿಂದ ನಾನು ಕೂಡ ಕ್ರೀಡೆಗೆ ನನ್ನದೇ ಆದ ಕೊಡುಗೆಯನ್ನು ನೀಡಿದ್ದೇನೆ. ನಾನು 200 ರು. ಚಂದಾ ಪಾವತಿಸಿಲ್ಲ, ಅದು ನನ್ನ ತಪ್ಪು, ನನಗೆ ನೋಟಿಸ್ ಬಂದಿರಲಿಲ್ಲ. ಅಲ್ಲಿ ಅಸೋಸಿಯೇಷನ್‌ನ ಲೋಪ ಕೂಡ ಇದೆ. ಈಗ ಕೋರ್ಟ್ ಅದರ ತೀರ್ಪು ನೀಡಿದೆ. ನಾವು ಕ್ರಿಕೆಟ್ ಅನ್ನು ಅಭಿವೃದ್ಧಿಪಡಿಸಲು ಹೊರಟಿದ್ದೇವೆ. ನಮ್ಮದು ಉತ್ತಮ ಅನುಭವ ಹೊಂದಿರುವ ತಂಡವಾಗಿದೆ ಎಂದು ಹೇಳಿದರು.

ತಮ್ಮ ತಂಡ ನಿಚ್ಚಳ ವಿಜಯ ಸಾಧಿಸಲಿದೆ ಎಂದು ಕೆಎಸ್ಸಿಎ ಹಾಲಿ ಅಧ್ಯಕ್ಷ ಬ್ರಿಜೇಶ್

ಪಟೇಲ್ ಇದೇ ವೇಳೆ ವಿಶ್ವಾಸ ವ್ಯಕ್ತಪಡಿಸಿದರು. ತಮ್ಮ ಆಡಳಿತಾವಧಿಯಲ್ಲಿ ಏನೂ ಅಭಿವೃದ್ಧಿ ಕೆಲಸಗಳಾಗಿಲ್ಲ ಎಂಬ ತಮ್ಮ ವಿರೋಧಿಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ತಮ್ಮ ಆಡಳಿತಾವಧಿಯಲ್ಲಿ ಕೆಪಿಎಲ್, ಮಹಾರಾಜ ಕಪ್, ರಣಜಿ ಟ್ರೋಫಿ, ವಿಜಯ ಹಜಾರೆ ಕಪ್, ಮಹಿಳಾ ಕ್ರಿಕೆಟ್ ಪಂದ್ಯಾವಳಿ ಮೊದಲಾದವುಗಳನ್ನು ಗೆದ್ದು ತಮ್ಮ ಅವಧಿಯ ಆಡಳಿತದ ವೈಖರಿಯನ್ನು ಪ್ರದರ್ಶಿಸಿದ್ದೇವೆ ಎಂದು ತಿರುಗೇಟು ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಯರಾಂ, ರಘುರಾಂ ಭಟ್, ಬಿ.ಕೆ. ರವಿ, ತಿಲಕ್ ನಾಯ್ಡು, ಸಂಜಯ್ ಪೌಲ್, ಕುಶಾಲ್ ಪಾಟೀಲ್, ಡಿ.ಆರ್.ನಾಗರಾಜ್, ಐಡಿಯಲ್ ಗೋಪಿ, ಶಿವಪ್ಪ ಮೊದಲಾದವರಿದ್ದರು.

ಮುಷ್ತಾಕ್ ಆಲಿ ಕ್ರಿಕೆಟ್ | ಕೇವಲ 73 ರನ್‌ಗಳಿಗೆ ಆಲೌಟ್ ಆದ ಗುಜರಾತ್

ಕೇವಲ 40 ಎಸೆತಗಳಲ್ಲಿ ಪಂದ್ಯ ಗೆದ್ದ ಬರೋಡಾ

ಹೈದರಾಬಾದ್: ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿಯಲ್ಲಿ ಬರೋಡಾ ತಂಡದ ಪರ ಆಡುತ್ತಿರುವ ಹಾರ್ದಿಕ್ ಪಾಂಡ್ಯ ತಂಡದ ಪರ ಉತ್ತಮ ಪ್ರದರ್ಶನ ತೋರಿದ್ದಾರೆ. ಇಲ್ಲಿನ ಜಿಮ್ಖಾನಾ ಮೈದಾನದಲ್ಲಿ ಗುರುವಾರ ಗುಜರಾತ್ ವಿರುದ್ಧದ ಪಂದ್ಯದಲ್ಲಿ ಅದ್ಭುತ ಬೌಲಿಂಗ್ ಪ್ರದರ್ಶನ ನೀಡಿದರು. ಬರೋಡಾ ತಂಡ ಗುಜರಾತ್ ತಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿತು.

ಗುಜರಾತ್ ವಿರುದ್ಧ ಹಾರ್ದಿಕ್ ಪಾಂಡ್ಯ ಅದ್ಭುತ ಬೌಲಿಂಗ್ ಮಾಡಿ ನಾಲ್ಕು ಓವರ್‌ಗಳಲ್ಲಿ ಕೇವಲ 16 ರನ್‌ಗಳನ್ನು ನೀಡಿ ಒಂದು ವಿಕೆಟ್ ಪಡೆದರು. ಉರ್ವಿಲ್ ಪಟೇಲ್ ಅವರನ್ನು ಪಾಂಡ್ಯ ಔಟ್ ಮಾಡಿದರು. ಗುಜರಾತ್ 14.1 ಓವರ್‌ಗಳಲ್ಲಿ ಕೇವಲ 73 ರನ್‌ಗಳಿಗೆ ಆಲೌಟ್ ಆಯಿತು. ಬರೋಡಾ ಪರ ರಾಮ್ ಲಿಂಬಾನಿ ಕೇವಲ ಐದು ರನ್‌ಗಳಿಗೆ ಮೂರು ವಿಕೆಟ್ ಪಡೆದರು.

ಬರೋಡಾ ತಂಡವು ಗುಜರಾತ್‌ನ ಗುರಿಯನ್ನು ಕೇವಲ 40 ಎಸೆತಗಳಲ್ಲಿ ಬೆನ್ನಟ್ಟಿತು. ಶಾಶ್ವತ್ ರಾವತ್ 19 ಎಸೆತಗಳಲ್ಲಿ ಅಜೇಯ 30 ರನ್ ಗಳಿಸಿದರೆ, ವಿಷ್ಣು ಸೋಲಂಕಿ 27 ರನ್ ಗಳಿಸಿದರು. ಹಾರ್ದಿಕ್ ಪಾಂಡ್ಯ 10 ರನ್ ಗಳಿಸಿ ರವಿ ಬಿಷ್ಣೋಯ್ ಬೌಲಿಂಗ್‌ನಲ್ಲಿ ಔಟಾದರು. ಬರೋಡಾ ತಂಡವು 6.4 ಓವರ್‌ಗಳಲ್ಲಿ ಪಂದ್ಯವನ್ನು ಮುಗಿಸಿತು.

ಕಿರುತೆರೆಯಲಿ ರಥಸಪ್ತಮಿ

ರಂಗಭೂಮಿ ಹಿನ್ನಲೆಯ ನಟ, ನಿರ್ದೇಶಕ ಪೂರ್ಣಚಂದ್ರ, ತೇಜಸ್ವಿ ಈಗ ಕಿರುತೆರೆಗೂ ಎಂಟ್ರಿಕೊಟ್ಟಿದ್ದಾರೆ. ರಥಸಪ್ತಮಿ ಧಾರಾವಾಹಿ ನಿರ್ದೇಶನ ಮಾಡುತ್ತಿದ್ದಾರೆ. ಕೌಟುಂಬಿಕ ಕಥೆಯ ಧಾರಾವಾಹಿ ಇದಾಗಿದೆ. ನಿಸ್ವಾರ್ಥ ಹಾಗೂ ಉದಾರ ಮನೋಭಾವದ, ಮಧ್ಯಮ ವರ್ಗದ ಹುಡುಗಿ ಸಪ್ತಮಿ ಅಪ್ಪನ ಮುದ್ದಿನ ಮಗಳು. ಇವಳ ದಾನಗುಣ ಮಲತಾಯಿಗೆ ಇಷ್ಟವಾಗುವುದಿಲ್ಲ. ಈಕೆಗೆ ಶ್ರೀಮಂತ್ ಅನ್ನುವ ಒಬ್ಬ ಜಿಪುಣನ ಜತೆ ಮದುವೆ ನಿಶ್ಚಯವಾಗುತ್ತದೆ. ಶ್ರೀಮಂತ್‌ಗೆ ಚಿಕ್ಕಪ್ಪನಿಂದ ಮೋಸವಾಗಿದ್ದರಿಂದ ಯಾರನ್ನೂ ನಂಬದೆ ಪೈಸೆ ಪೈಸೆಗೂ ಲೆಕ್ಕ ಇಡುವಂಥವನು. ಮನೆಯಲ್ಲಿ ಈತನನ್ನು ಕಂಜೂಸ್ ಕುಮಾರ ಅಂತ ಕರೆಯುತ್ತಿರುತ್ತಾರೆ. ಈತನ ಸರಕಾರಿ ಸಂಬಳದಿಂದ ಕುಟುಂಬದ ಐದು ಜನರ ಬದುಕು ನಡೆಯಬೇಕಿರುತ್ತದೆ. ಎರಡೂ ಪರಿವಾರ ಹೇಳೋ ಸುಳ್ಳುಗಳಿಂದ ಸಪ್ತಮಿ ಮತ್ತು ಶ್ರೀಮಂತ್ ಪ್ರೀತಿಸುವಂತಾಗಿ ಮದುವೆ ಕೂಡ ಆಗುತ್ತಾರೆ. ತನ್ನ ಕುಟುಂಬವೇ ಸರ್ವಸ್ವ ಅಂತ ನಂಬಿರುವ ಸಪ್ತಮಿಗೆ ಆ ಕುಟುಂಬವನ್ನು ಭೂಮಿಗೆ ಭಾರ ಎನ್ನುವ ರೀತಿ ನೋಡುವ ಶ್ರೀಮಂತನ ಜತೆ ಬದುಕುವ ಅನಿವಾರ್ಯತೆ ಈ ವ್ಯತ್ಯಾಸ, ವೈಶಿಷ್ಟ್ಯ,ಸಂಘರ್ಷಗಳ ನಡುವೆ ಇಬ್ಬರ ಬದುಕು ಹೇಗೆ ಸಾಗುತ್ತದೆ ಎನ್ನುವುದೇ ಧಾರಾವಾಹಿಯ ಕಥೆ.

ನಾಯಕನಾಗಿ ಜೀವನ್ ನಟಿಸಿದ್ದು, ಮೌಲ್ಯಾ ಗೌಡ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ನಾಗೇಶ್ ಮಯ್ಯ, ಸುನಿಲ್, ವಂದನಾ, ಭೂಮಿಕಾ, ಪುಷ್ಪಾ ಬೆಳವಾಡಿ, ಪ್ರಮೀಳಾ, ಸುಮೋಕ್ಷ, ಮಧುಸೂದನ್, ನೀನಾಸಂ ಪ್ರದೀಪ್, ಚಂದನಾ, ಅಥರ್ವ ಮುಂತಾದವರು ತಾರಾಗಣದಲ್ಲಿದ್ದಾರೆ. ಛಾಯಾಗ್ರಹಣ ಕೃಷ್ಣ, ಸಂಕಲನ ವಿಶಾಲ್ ವಿನಾಯಕ್ ಅವರದಾಗಿದೆ. ಇತ್ತೀಚೆಗೆ ಎಲ್ಲರನ್ನು ಅಗಲಿದ ಹಿರಿಯ ನಟ ಉಮೇಶ್ ಅವರು ಅಭಿನಯಿಸಿದ ಕೊನೆಯ ಧಾರಾವಾಹಿ ಇದಾಗಿದೆ. ಸ್ಟೋರಿ ಬ್ರೀವ್ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಹ್ಯಾರಿಸ್ ಈ ಧಾರಾವಾಹಿಯನ್ನು ನಿರ್ಮಾಣ ಮಾಡಿದ್ದಾರೆ. ರಥಸಪ್ತಮಿ ಸೋಮವಾರದಿಂದ ಶನಿವಾರದ ಉದಯ ಟಿವಿಯಲ್ಲಿ ಪ್ರಸಾರವಾಗಲಿದೆ.



ಲ್ಯಾಂಡ್ ಲಾರ್ಡ್‌ನ ರೂಲರ್

ಕಾಟೇರ ಕಥೆಗಾರ ಜಡೇಶ್ ಕುಮಾರ್ ಹಂಪಿ ಸಾರಥ್ಯದಲ್ಲಿ ಮೂಡಿಬರುತ್ತಿರುವ ಲ್ಯಾಂಡ್‌ಲಾರ್ಡ್ ಆರಂಭದಿಂದಲೂ ಸಖತ್ ಸದ್ದು ಮಾಡುತ್ತಿದೆ. ಟೀಸರ್‌ನಲ್ಲಿ ಭರ್ಜರಿ ಕುತೂಹಲ ಹೆಚ್ಚಿಸಿರುವ ಲ್ಯಾಂಡ್ ಲಾರ್ಡ್‌ನ ಎಲ್ಲಾ ಪಾತ್ರಗಳು ಪ್ರಧಾನವಾಗಿವೆ, ಪವರ್ ಫುಲ್ ಆಗಿ ಮೂಡಿಬಂದಿವೆ. ದುನಿಯಾ ವಿಜಯ್ ರಾಚಪ್ಪನ ಪಾತ್ರದಲ್ಲಿ ಖದರ್ ತೋರಿದರೆ, ರಚಿತಾ ರಾಮ್ ನಿಂಗಮ್ಮವಾಗಿ ವಿಭಿನ್ನ ಪಾತ್ರದಲ್ಲಿ ಮಿಂಚಿದ್ದಾರೆ. ಹಿಂದೆಂದು ಕಾಣದ ಲುಕ್‌ನಲ್ಲಿ ರಚ್ಚು ಕಂಗೊಳಿಸಿದ್ದಾರೆ. ಇನ್ನೂ ವಿಶೇಷ ಎಂದರೆ ದುನಿಯಾ ವಿಜಯ್ ಪುತ್ರಿ ರಿತನ್ಯಾ, ಸಿನಿಮಾದಲ್ಲಿ ವಿಜಯ್ ಪುತ್ರಿಯಾಗಿ ಅಭಿನಯಿಸಿದ್ದಾರೆ. ಹೀಗೆ ಲ್ಯಾಂಡ್‌ಲಾರ್ಡ್‌ನ ಎಲ್ಲಾ ಪಾತ್ರಗಳು ಪವರ್‌ಫುಲ್ ಆಗಿವೆ. ಈಗ ಮತ್ತೊಂದು ಪಾತ್ರವನ್ನು ಪರಿಚಯಿಸಲು ಚಿತ್ರತಂಡ ಸಿದ್ಧವಾಗಿದೆ. ಲ್ಯಾಂಡ್‌ಲಾರ್ಡ್‌ನ ರೂಲರ್ ಪಾತ್ರ ಇದಾಗಿದ್ದು, ಇದೇ 8ರಂದು ಈ ಪಾತ್ರ ರಿವಿಲ್ ಆಗಲಿದೆ. ರೂಲರ್ ಪಾತ್ರ ಕೂಡ ಪ್ರಮುಖವಾಗಿದ್ದು, ಬಡಜನರ ಶೋಷಿಸುವ ಖದರ್ ಖಳನ ಪಾತ್ರ ಇದಾಗಿದೆ. ಹಾಗಾಗಿ ರೂಲರ್ ಆಗಿ ಯಾರು ನಟಿಸಿರಬಹುದು ಎಂಬ ಕ್ಯೂರಿಯಾಸಿಟಿ ಎಲ್ಲರಲ್ಲಿಯೂ ಇದೆ. ಅದಕ್ಕೆ ಇನ್ನೊಂದಷ್ಟು ದಿನ ಕಾಯಲೇಬೇಕು.

ಚಿತ್ರದಲ್ಲಿ ರಾಜ್.ಬಿ.ಶೆಟ್ಟಿ ಕೂಡ ಅಭಿನಯಿಸಿದ್ದಾರೆ. ಹಾಗಾದರೆ ರೂಲರ್ ಆಗಿ ರಾಜ್ ಕಾಣಿಸಿಕೊಂಡಿದ್ದಾರಾ, ಈ ಪಾತ್ರದಲ್ಲಿ ರಾಜ್ ಶೆಟ್ಟಿ ಹೇಗೆ ಕಂಗೊಳಿಸಬಹುದು ಎಂದು ನೋಡಲು ಸಿನಿಪ್ರಿಯರು ಕಾಯುತ್ತಿದ್ದಾರೆ. ಈ ಹಿಂದಿನ ಬಹುತೇಕ ಸಿನಿಮಾಗಳಲ್ಲಿ ಕಾಮಿಡಿ ಮೂಲಕವೇ ಕಮಾಲ್ ಮಾಡಿರುವ ರಾಜ್, ಗರುಡ ಗಮನ ವೃಷಭ ವಾಹನ ಸಿನಿಮಾದಲ್ಲಿ ಡಾನ್ ಆಗಿ ಮಿಂಚಿದ್ದರು. ಈಗ ಈ ಚಿತ್ರದಲ್ಲಿ ನೆಗೆಟಿವ್ ರೋಲ್‌ನಲ್ಲಿ ಅವರ ಗೆಟಪ್ ಹೇಗಿರಬಹುದು ಎಂಬ ಕಾತರತೆ ಎಲ್ಲರಲ್ಲಿಯೂ ಇದೆ. ರೂಲರ್ ಯಾರು, ಅವರ ಗೆಟಪ್ ಹೇಗಿರಲಿದೆ ಎಂಬುದು ತಿಳಿಯಲು ಒಂದಷ್ಟು ದಿನ ಕಾಯಲೇಬೇಕು. ಈಗಾಗಲೇ ಶೂಟಿಂಗ್ ಮುಗಿಸಿ, ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಬ್ಯುಸಿಯಾಗಿರುವ ಲ್ಯಾಂಡ್‌ಲಾರ್ಡ್ ಜನವರಿ 23ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ಸದ್ದು ಮಾಡುತ್ತಿದೆ ಪದ್ಮಗಂಧಿ

ಹಿರಿಯ ನಟ ಸುಚೇಂದ್ರ ಪ್ರಸಾದ್ ಚಿತ್ರಕಥೆ ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ಪದ್ಮಗಂಧಿ ಚಿತ್ರ ಕನ್ನಡ, ಸಂಸ್ಕೃತ ಮತ್ತು ಹಿಂದಿ ಭಾಷೆಯಲ್ಲಿ ಸಿದ್ಧವಾಗಿದೆ. ಈಗಾಗಲೇ ಈ ಚಿತ್ರದ ಟ್ರೇಲರ್, ಹಾಡುಗಳು ಬಿಡುಗಡೆಯಾಗಿದ್ದು ಪ್ರೇಕ್ಷಕರಿಂದ ಮೆಚ್ಚುಗೆ ಪಡೆದಿವೆ. ಮಾಜಿ ಎಂಎಲ್‌ಸಿ, ಎಸ್.ಆರ್.ಲೀಲಾ ಪದ್ಮಗಂಧಿಯ ಕಥೆ ಬರೆಯುವ ಜತೆಗೆ ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ.

ಮಹಾಪದ್ಮ, ಪರಿಪೂರ್ಣ ಚಂದ್ರಶೇಖರ್, ಡಾ.ಆರ್.ಗಣೇಶ್, ಡಾ.ಗೌರಿ ಸುಬ್ರಹ್ಮಣ್ಯ, ಡಾ.ಪ್ರೇಮಾ, ಡಾ.ಹೇಮಂತ್ ಕುಮಾರ್, ಆಚಾರ್ಯ ಮೃತ್ಯುಂಜಯ ಶಾಸ್ತ್ರಿ, ಜಿ.ಎಲ್.ಭಟ್, ಪ್ರಸನ್ನವೈದ್ಯ, ಡಾ.ದೀಪಕ್ ಪರಮಶಿವನ್ ಮುಂತಾದವರು ತಾರಾಗಣದಲ್ಲಿದ್ದಾರೆ. ಡಾ.ದೀಪಕ್ ಪರಮಶಿವನ್ ಸಂಗೀತ, ಮನುಯಪ್ಪಾರ್, ನಾಗರಾಜ್ ಅದ್ವಾನಿ, ಗಿರಿಧರ್ ದಿವಾನ್ ಛಾಯಾಗ್ರಹಣ, ಎನ್.ನಾಗೇಶ್ ನಾರಾಯಣಪ್ಪ ಸಂಕಲನ ಈ ಚಿತ್ರಕ್ಕಿದೆ. ಇದೇ ತಿಂಗಳು ಪದ್ಮಗಂಧಿ ರಾಜ್ಯಾದ್ಯಂತ ತೆರೆಗೆ ಬರಲಿದೆ.

ಗಿಲ್ಲಿಯ ಸೂಪರ್ ಹಿಟ್ ಟೀಸರ್

ಕಾಮಿಡಿ ಶೋಗಳ ಮೂಲಕ ಕಾಮನಗೆದ್ದು ಈಗ ಬಿಗ್‌ಬಾಸ್ ಮನೆಯಲ್ಲಿ ಬೀಡುಬಿಟ್ಟಿರುವ ಗಿಲ್ಲಿ ನಟ, ಸದ್ದಿಲ್ಲದೆ ಸಿನಿಮಾದಲ್ಲಿಯೂ ಸದ್ದು ಮಾಡಲು ಸಿದ್ಧವಾಗಿದ್ದಾರೆ. ಹೌದು ಗಿಲ್ಲಿ ಸೂಪರ್ ಹಿಟ್ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಶೂಟಿಂಗ್ ಮುಗಿಸಿರುವ ಸೂಪರ್ ಹಿಟ್ ತೆರೆಗೆ ಬರಲು ರೆಡಿಯಾಗಿದೆ. ಲವ್ ಸ್ಟೋರಿಯ ಜತೆಗೆ

ಕಾಮಿಡಿಯೂ ಬೆರೆತಿದ್ದು, ಗಿಲ್ಲಿ ಜತೆಗೆ ಗೌರವ್ ಶೆಟ್ಟಿ, ಪ್ರಮೋದ್ ಶೆಟ್ಟಿ, ಸಾಧು ಕೋಕಿಲ, ಟೆನ್ನಿಸ್ ಕೃಷ್ಣ ಕಾಮಿಡಿ ಕಮಾಲ್ ಮಾಡಿದ್ದಾರೆ. ಶ್ವೇತಾ, ನಾಗೇಂದ್ರ ಪ್ರಸಾದ್, ಡ್ರ್ಯಾಗನ್ ಮಂಜು, ನಾಗವರ್ಧನ್, ಕರಿಸುಬ್ಬು, ಸೋಮಶೇಖರ್, ವಂಶಿ, ಮಂಜಣ್ಣ, ಬಿ.ಎನ್.ಮಂಗಳಾ, ಅಶ್ವಿನಿ ರಾವ್, ಸ್ವಪ್ನಾ ಶೆಟ್ಟಿಗಾರ್, ಮಂಗಳೂರು ಮೀನನಾಥ ಮುಂತಾದವರು ತಾರಾಗಣದಲ್ಲಿದ್ದಾರೆ. ಸಿನಿಮಾ ಬಿಡುಗಡೆಗೂ ಮೊದಲೇ ಚಿತ್ರ ಶೀರ್ಷಿಕೆಯಲ್ಲಿಯೇ ಸೂಪರ್ ಹಿಟ್ ಆಗಿದೆ. ಚಿತ್ರ ಸಾಹಿತಿ ನಾಗೇಂದ್ರ ಪ್ರಸಾದ್ ಅವರ ಸಹೋದರ ವಿಜಯಾನಂದ್ ಹಾಸ್ಯವನ್ನೇ ಪ್ರಧಾನವಾಗಿಟ್ಟುಕೊಂಡು ಈ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಸಿನಿಮಾವೊಂದು ಬಿಡುಗಡೆಯಾದ ನಂತರ ಸೂಪರ್ ಹಿಟ್ ಆಗೋದು ವಾಡಿಕೆ. ಆದರೆ, ಈ ಸಿನಿಮಾದ

ಶೀರ್ಷಿಕೆಯೇ ಸೂಪರ್ ಹಿಟ್, ಆಗಿದೆ. ಜತೆಗೆ ರನ್ನಿಂಗ್ ಸಕ್ಸಸ್‌ಫುಲಿ ಎಂಬ ಅಡಿಬರಹವೂ ಇದೆ. ಸು ಫ್ರಮ್ ಸೋ ಬಳಿಕ ಬರುತ್ತಿರುವ ಸೂಪರ್ ಹಿಟ್ ಕಾಮಿಡಿ ಚಿತ್ರ ಇದಾಗಿದೆ ಎಂದು ನಿರ್ದೇಶಕ ವಿಜಯಾನಂದ ಹೇಳಿದರು.

ಇಡೀ ಸಿನಿಮಾ ಆರಂಭದಿಂದ ಕೊನೆಯವರೆಗೂ ಪ್ರತಿ ಹತ್ತು ನಿಮಿಷಕ್ಕೊಮ್ಮೆ ಹೊಸ ತಿರುವು ಪಡೆದುಕೊಳ್ಳುತ್ತಾ, ಪ್ರೇಕ್ಷಕರನ್ನು ಬೆರಗಾಗಿಸುತ್ತದೆ. ಇದು ಕನ್ನಡ ಚಿತ್ರರಂಗದಲ್ಲಿಯೇ ಮೊದಲ ಬಾರಿಗೆ ಥ್ರಿಲ್ಲರ್ ಕಾಮಿಡಿ ಜಾನರಿನಲ್ಲಿ ಸಿದ್ಧವಾಗಿರುವ ಸಿನಿಮಾ ಎಂದು ಗೌರವ್ ಶೆಟ್ಟಿ ಹೇಳಿದರು. ವಿಜಯಲಕ್ಷ್ಮಿ ಎಂಟರ್‌ಪ್ರೈಸಸ್ ಬ್ಯಾನರಿನಲ್ಲಿ ಜಿ. ಉಮೇಶ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಆರ್.ಡಿ.ನಾಗಾರ್ಜುನ ಛಾಯಾಗ್ರಹಣ, ಶ್ರೀಕಾಂತ್ ಸಂಕಲನ, ??ವಿ.ನಾಗೇಂದ್ರ ಪ್ರಸಾದ್ ಚಿತ್ರದ ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಸಂಗೀತ ಸಂಯೋಜಿಸಿದ್ದಾರೆ. ಚಿತ್ರೀಕರಣ ಮುಗಿಸಿರುವ ಸೂಪರ್ ಹಿಟ್ ಜನವರಿಯಲ್ಲಿ ತೆರೆಗೆ ಬರುವ ನಿರೀಕ್ಷೆ ಇದೆ.